
ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೧, ಸಂಚಿಕೆ : ೦೨

ಜುಲೈ-ಡಿಸೆಂಬರ್ ೨೦೧೬



ಮಾಸ್ತಿ-೧೨೫

ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ ಬಿ.ಎಂ.ಶ್ರೀ ಕಲಾಭವನ (ರಿ.) ೩ನೇ ಮುಖ್ಯ ರಸ್ತೆ,
ನರಸಿಂಹರಾಜ ಕಾಲೋನಿ ಬೆಂಗಳೂರು ೫೬೦೦೧೯

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪದಾಧಿಕಾರಿಗಳು

ಪ್ರೊ॥ ಎಂ. ಎಚ್. ಕೃಷ್ಣಯ್ಯ
ಗೌ॥ ಅಧ್ಯಕ್ಷರು

ಡಾ॥ ಪಿ. ವಿ. ನಾರಾಯಣ
ಅಧ್ಯಕ್ಷರು

ಪ್ರೊ॥ ಜಿ. ಅಬ್ದುಲ್ ಬಷೀರ್
ಶ್ರೀ ಬಿ. ಆರ್. ರವೀಂದ್ರನಾಥ್
ಗೌ॥ ಕಾರ್ಯದರ್ಶಿಗಳು

ಶ್ರೀ ಎಂ.ಎಸ್. ರಾಮಪ್ರಸಾದ್
ಕೋಶಾಧಿಕಾರಿಗಳು

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೩೦, ಸಂಚಿಕೆ : ೦೨

ಜುಲೈ-ಡಿಸೆಂಬರ್ ೨೦೧೬

ಸಂಪಾದಕ

ಡಾ. ಎಚ್.ಎನ್. ಮುರಳೀಧರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ. ಕಲಾಭವನ (ರಿ)

೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು-೫೬೦೦೧೯.

ದೂರವಾಣಿ : ೨೬೬೧೫೮೭೭, ೨೬೬೭೬೭೭೩

ಇ-ಅಂಚೆ : bmsritrust@gmail.com bmsrilochana@gmail.com

KARNATAKA LOCHANA
Half yearly Research Journal
Edited by Dr. H.N. Muralidhara and
Published by B.M.Sri. Smaraka Prathistana
M.V.Si. P.G Research Centre
B.M.Sri. Kalabhavan(R), 3rd Main Road
Narasimharaja Colony, Bangalore 560 019.
Ph.No. 080-26615877, 26676773
e-mail
bmsritrust@gmail.com
bmsrilochana@gmail.com

July-Decmber 2016 (Vol. 30, No. 2)

Pages: x + 150

Subscription Details :

Annual : Rs. 100/-

Life : Rs. 1500/-

ಚಂದಾ ವಿವರ:
ವಾರ್ಷಿಕ : ರೂ. ೧೦೦/-
ಆಜೀವ : ರೂ. ೧೫೦೦/-

Published with Financial Assistancie from the Central Institute of Indian Languages (Department of Higher Education, Ministry of Human Resource Development, Government of India)- Manasagangotri, Mysuru-570006 sanctioned vide letter No. 53-4(1)2014-15/KAN/LM/GRNT dated 5th December 2016 under the Little Magazine scheme of Grant-in-Aid.

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೭೨

ಸಂಪಾದಕರ ನುಡಿ...

ಕರ್ನಾಟಕ ಲೋಚನದ ಪ್ರಸ್ತುತ ಸಂಚಿಕೆಯನ್ನು ತಮ್ಮ ಕೈಗಿಡಲು ಸಂತೋಷವೆನಿಸುತ್ತದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರರ ೧೨೫ನೆಯ ಜನ್ಮದಿನದ ನೆನಪಿಗೆ ಈ ಸಂಚಿಕೆ ಸಮರ್ಪಿತವಾಗಿದೆ. ಈ ಸಂಚಿಕೆಗೆ ತಮ್ಮ ನೆನಪುಗಳನ್ನು ಬರೆದುಕೊಟ್ಟ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೂ ತಮ್ಮ ಲೇಖನವೊಂದನ್ನು ಬಳಸಿಕೊಳ್ಳಲು ಸಹಕರಿಸಿದ ಡಾ. ಕೃಷ್ಣ ಪರಮೇಶ್ವರ ಭಟ್ಟ ಅವರಿಗೂ ಧನ್ಯವಾದಗಳು.

ಪತ್ರಿಕೆಯ ಬಗೆಗೆ ಸಹೃದಯರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ಲೇಖನಗಳೂ ಬರುತ್ತಿವೆ. ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಪತ್ರಿಕೆಯನ್ನು ಹಲವು ಆಯಾಮಗಳಲ್ಲಿ ಬೆಳೆಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಇದಕ್ಕೆ ಎಲ್ಲರ ಸಹಕಾರವನ್ನು ಕೋರುತ್ತೇವೆ.

ಎಂದಿನಂತೆ ಪತ್ರಿಕೆಯನ್ನು ಹೊರತರುವಲ್ಲಿ ಉತ್ತೇಜನ-ಬೆಂಬಲಗಳನ್ನು ನೀಡಿದ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರಿಗೂ, ಕರಡು ತಿದ್ದಿ ವಿಶ್ವಾಸದಿಂದ ಸಹಕರಿಸಿದ ಡಾ. ನಳಿನಿ ವೆಂಕಟೇಶ್ ಅವರಿಗೂ, ಪ್ರತಿಷ್ಠಾನದ ಕಛೇರಿಯ ಸಿಬ್ಬಂದಿಗೂ, ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದವರಿಗೂ ಹೃತ್ಪೂರ್ವಕ ಧನ್ಯವಾದಗಳು ಸಲ್ಲುತ್ತವೆ.

-ಎಚ್.ಎಸ್. ಮುರಳೀಧರ

ಲೇಖಕರಿಗೆ ಸೂಚನೆಗಳು...

೧. ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ ವಿಮರ್ಶೆಗಳ ಅಪ್ರಕಟಿತ ಬರಹಗಳನ್ನು 'ಕರ್ನಾಟಕ ಲೋಚನ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಸ್ವೀಕರಿಸಲಾಗುವುದು.

೨. ಲೇಖನಗಳು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿದವಾಗಿರಬೇಕು ಅಥವಾ ಸ್ಫುಟವಾದ ಕೈಬರಹದಲ್ಲಿರಬೇಕು.

೩. ಲೇಖನಗಳು ಒಪ್ಪಿತವಾದ ಮಾದರಿಯಲ್ಲಿ ಸೂಕ್ತ ಉಲ್ಲೇಖಗಳು ಮತ್ತು ಟಿಪ್ಪಣಿಗಳಿಂದ ಕೂಡಿರಬೇಕು.

೪. ಚಿತ್ರಗಳು, ನಕ್ಷೆಗಳು ಮೊದಲಾದುವನ್ನು ಸ್ಕ್ಯಾನ್ ಮಾಡಿದ ತಂತ್ರಾಂಶದಲ್ಲಿ ನೀಡಬೇಕು.

೫. ಲೇಖಕರು ತಮ್ಮ ವಿಳಾಸ, ದೂರವಾಣಿ ಸಂಖ್ಯೆ ಮತ್ತು ವಿ-ಅಂಚೆಗಳನ್ನು ತಪ್ಪದೆ ನೀಡಬೇಕು.

೬ ಅಸ್ವೀಕೃತ ಬರಹಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಈ ಬಗೆಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

೭ ಲೇಖನಗಳನ್ನು ಪ್ರತಿಷ್ಠಾನದ ಅಂಚೆವಿಳಾಸಕ್ಕೆ ಅಥವಾ bmsrilochana@gmail.com ಈ ವಿ-ಅಂಚೆಗೆ ಕಳುಹಿಸಬಹುದು.

೮. ಪ್ರಕಟವಾದ ಬರಹಗಳಿಗೆ ಪ್ರತಿಷ್ಠಾನವು ಸಾಂಕೇತಿಕ ಗೌರವ ಸಂಭಾವನೆಯನ್ನು ನೀಡುತ್ತದೆ.

೯. ಲೇಖನದಲ್ಲಿನ ಅಭಿಪ್ರಾಯಗಳು ಲೇಖಕರದೇ ಆಗಿದ್ದು ಪ್ರತಿಷ್ಠಾನದ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ.

ಈ ಸಂಚಿಕೆಯಲ್ಲಿ...

ನಾನು ಕಂಡ ಮಾಸ್ತಿ

◆

ಪ್ರೊ. ಜಿ. ಅಶ್ವತ್ಥನಾರಾಯಣ

ಮಾಸ್ತಿ ಕನ್ನಡ ಆಸ್ತಿ ಎಂಬ ಮಾತಿಗೆ ಅನೇಕ ಅರ್ಥಗಳಿವೆ. ಕನ್ನಡದಲ್ಲಿ ಸಣ್ಣಕತೆಯ ಕೊರತೆ ತುಂಬಿ ಅದಕ್ಕೆ ಒಂದು ವಿಶಿಷ್ಟ ಸ್ಥಾನ ದೊರಕಿಸಿ ಸಣ್ಣಕತೆಯ ಜನಕರೆಂಬ ಪ್ರಶಸ್ತಿಗೆ ಪಾತ್ರರಾದವರು. ಮಾಸ್ತಿ ಅನೇಕರ ಜೀವನದಲ್ಲಿ ಆಪತ್ಕಾಲದ ಮಿತ್ರರಾಗಿ ಉಪಕಾರಿ ಮಾಡಿ ಅವರ ಬಾಳಿನಲ್ಲಿ ಚಿರನೆನಪಿನ ಆಸ್ತಿ ಆದವರು. ಮಾಸ್ತಿ ಅನೇಕ ಯುವಜನರ ಬಾಳಿಗೆ ಬೆಳಕಾಗಿ ಆಸ್ತಿ ಆದವರು....ಹೀಗೆ ನಾಡಿನ ಆಸ್ತಿ (ಕನ್ನಡಕ್ಕೆ ಹೋರಾಡಿ) ಸಾಹಿತ್ಯದ ಆಸ್ತಿ (ಸಾಹಿತ್ಯ ಸಾಧನೆಗಳಿಂದ) ಜನರ ಆಸ್ತಿ (ಅನೇಕರ ಮೇಲೆ ಪ್ರಭಾವ ಬೀರಿದ್ದರಿಂದಲೂ) ಆಪತ್ಕಾಲಕ್ಕೆ ನೆರವಾದ್ದರಿಂದಲೂ ಅವರು ಮರೆಯಲಾಗದ ಆಸ್ತಿ ಆಗಿದ್ದಾರೆ.

ಮಾಸ್ತಿ ನನ್ನ ಪಾಲಿಗೆ ಅಮೂಲ್ಯ ನೆನಪುಗಳ ಆಸ್ತಿ ಆಗಿದ್ದಾರೆ. ತಕ್ಷಣಕ್ಕೆ ನೆನಪಾದ ಕೆಲವು ನೆನಪು–ಅನುಭವಗಳು ಹೀಗಿವೆ :

ಚಿಗುರುವ ಗಿಡಗಳನ್ನು ಬೆಳೆಸಬೇಕು

೧೯೫೦–೫೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಎಂ.ಆರ್. ಶ್ರೀನಿವಾಸಮೂರ್ತಿ ಅವರು. ಆಗ ನಾನು ಹೈಸ್ಕೂಲ್ ವಿದ್ಯಾರ್ಥಿ ನನಗೆ ಬಂದ ೫ ರೂ. ಸ್ಕಾಲರ್‌ಷಿಪ್ ಹಣವನ್ನು ಪರಿಷತ್ತಿನ ಸದಸ್ಯನಾಗಬೇಕೆಂದು ಹೋದಾಗ ಅಲ್ಲಿಯ ಕಾರ್ಯದರ್ಶಿಗಳು ಪರಿಷತ್ತು ಹುಡುಗರಿಗಲ್ಲ. ನೀವು ಸದಸ್ಯರಾಗಲು ಸಾಧ್ಯವಿಲ್ಲ ಎಂದರು. ಆಗ ಅಲ್ಲೇ ಇದ್ದ ಮಾಸ್ತಿ ಅವರು ಯಾಕೆ ಹಾಗೆ ಹೇಳ್ತೀರಿ. ಹುಡುಗ ಆಸೆಯಿಂದ ಬಂದಿದ್ದಾನೆ. ಯಾರದೇ ಸಾಹಿತ್ಯಾಸಕ್ತಿಯನ್ನು ಪರಿಷತ್ತು ಪ್ರೋತ್ಸಾಹಿಸಬೇಡ. ಅವನನ್ನು ಸದಸ್ಯನನ್ನಾಗಿ ಮಾಡಿಕೊಳ್ಳಿ. ಚಿಗುರುವ ಗಿಡಗಳನ್ನು ಬೆಳೆಸಬೇಕು: ಮುದಿಮರಗಳು ಬಹು ಕಾಲ ಇರುವುದಿಲ್ಲ ಎಂದರು. ಅವರ ಮಾತಿನಿಂದ ನಾನು ಪರಿಷತ್ತಿನ ಸದಸ್ಯನಾದೆ.

ದೇಹ ಹೇಳಿದಂತೆ ಕೇಳಬೇಕು ನಾನು

ಮಹಾರಾಣಿ ಕಲಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿದ್ದೆ. ಆಗ ಕರ್ನಾಟಕ ಸಂಘದ ಉದ್ಘಾಟನೆಗೆ ಮಾಸ್ತಿ ಅವರನ್ನು ಕರೆಯಲು ಸಂಘದ ವಿದ್ಯಾರ್ಥಿನಿಯರನ್ನು ಕಳಿಸಿದ್ದೆ. ಅವು ಮಧ್ಯಾಹ್ನ ವಿಶ್ರಾಂತಿಯಲ್ಲಿದ್ದರು. ವಿದ್ಯಾರ್ಥಿನಿಯರು ಬಂದ ಕೂಡಲೆ ಪ್ರೀತಿಯಿಂದ ಮಾತಾಡಿದರು. ನೀನು ಯಾರ ಮಗಳು? ನಿನ್ನ ತಂದೆ ಏನು ಮಾಡುತ್ತಿದ್ದಾರೆ? ನಿಮ್ಮೂರು ಯಾವುದು ಯಾವ ಕ್ಲಾಸಿನಲ್ಲಿ ಓದುತ್ತಿದ್ದೀಯೊ? ಇವೇ ಮೊದಲಾಗಿ ಪ್ರತಿಯೊಬ್ಬರನ್ನೂ ವಿಚಾರಿಸುತ್ತಾ ಹೋ ಹೋ 'ನಿಮ್ಮ ತಂದೆಯವರ ದೊಡ್ಡಪ್ಪ ನನ್ನ ಸ್ನೇಹಿತರು', ನಿಮ್ಮೂರಿಗೆ ಬಂದಿದ್ದೆ ನಿಮ್ಮ ತಾತನ ಮನೆಯಲ್ಲಿ ಇಳಿದುಕೊಂಡಿದ್ದೆ ಅವರು ದೊಡ್ಡ ವಿದ್ವಾಂಸರು. ಅಯ್ಯೋ ಪಾಪ ನಿಮ್ಮ ತಾಯಿ ತೀರಿಕೊಂಡರೇ ಅವರ ಅಣ್ಣ ನಾನು ಮೈಸೂರಲ್ಲಿದ್ದಾಗ ಭೇಟಿಯಾಗಿದ್ದೆ ಒಳ್ಳೇ ಹುಡುಗ. ಹೀಗೆ ಒಬ್ಬೊಬ್ಬರ ಬಗ್ಗೆ ಆತ್ಮೀಯವಾಗಿ ಮಾತಾಡುತ್ತಾ ಸುಮಾರು ೧/೨ ಗಂಟೆ ಆದ ಮೇಲೆ ಕ್ಷಮಿಸಿ ಈಗ ನಾನು ಕಾರ್ಯಕ್ರಮಕ್ಕೆ ಬರಲಾಗುವುದಿಲ್ಲ ಎಂದರು. ಸಾರ್. ಒಂದೈದು ನಿಮಿಷ ಕಾರಲ್ಲಿ ಬಂದು ಹೋಗಿ ದೀಪ ಹಚ್ಚಿ ಉದ್ಘಾಟನೆ ಮಾಡಿ ಹೋಗಿ ಸಾರ್ ಎಂದು ವಿದ್ಯಾರ್ಥಿನಿಯರು ಗೋಗರೆದರು. ಆಗ ಮಾಸ್ತಿ ಹೇಳಿದರು. ಅಮ್ಮಾ ನೀವು ಹೇಳುತ್ತಿರುವುದು ಸರಿ. ಆದರೆ ನನಗೆ ಆ ಸಮಯ ನನ್ನ ವಿಶ್ರಾಂತಿ ಕಾಲ ಬರಲು ಆಗುವುದಿಲ್ಲ. ನಿಮಗೆ ಈಗ ತಿಳಿಯೋಲ್ಲ ನೀವೆಲ್ಲಾ ಯುವತಿಯರು ಕಲ್ಲನ್ನು ತಿಂದು ಜೀರ್ಣಿಸಿಕೊಳ್ಳುವ ಕಾಲ. ನಮ್ಮಂಥ ವಯಸ್ಸಾದವರಿಗೆ ಅನ್ನ ತಿಂದರೇನೇ ಜೀರ್ಣವಾಗುವುದು ಕಷ್ಟ. ಅದಕ್ಕಿಂತ ಹೆಚ್ಚಾಗಿ ನೋಡಿ ೫೦ ಆದ ಮೇಲೆ ದೇಹ ಹೇಳಿದ ಹಾಗೆ ಕೇಳಬೇಕು ಅದಕ್ಕೆ ಮುಂಚೆ ನಾವು ಹೇಳಿದ ಹಾಗೆ ದೇಹ ಕೇಳುತ್ತೆ ಈ ಮಾತು ನಿಮಗೆ ಅರ್ಥವಾಗುವುದಿಲ್ಲ. ನಿಮ್ಮ ತಾಯಿ ತಂದೆಯರಿಗೆ, ಅಜ್ಜ ಅಜ್ಜಿಯರಿಗೆ ತಿಳಿಯುತ್ತೆ ಎಂದರು. ಹುಡುಗಿಯರಲ್ಲಿ ಒಬ್ಬಳು ಸಪ್ಪೆಮುಖ ಮಾಡಿಕೊಂಡಾಗ ಮಾಸ್ತಿ ಹೇಳಿದರು. ಈ ವಯಸ್ಸು ಅರಳಿದ ಹೂವಿನ ಕಾಲ. ಹೂ ಅರಳುವ ಕಾಲದಲ್ಲಿ ಬಾಡಬಾರದು ಮಗೂ ಎಂದು ಮಗಳನ್ನು ಮಾತಾಡಿಸುವಂತೆ ನಗುತ್ತಾ ಮಾತಾಡಿದರು. ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಿಂತಿರುಗಿದರು.

ನೀನೇ ಪುಣ್ಯವಂತೆ ಎಂದರು ಕಂಬಾರರು

ಹಿಂತಿರುಗಿ ಬಂದ ವಿದ್ಯಾರ್ಥಿಗಳು ನನ್ನ ಬಳಿ ಬಂದು 'ಸಾರ್' ಕರೆದೆವು ಏನು ಹೇಳಿದರೂ ಬರಲಿಲ್ಲ ಎಂದು ವಿದ್ಯಾರ್ಥಿನಿ ಕಾರ್ಯದರ್ಶಿನಿ ಹೇಳಿದಳು. ಆಗ ನಾನು ಅವರು ಬರುವುದಿಲ್ಲ ಮಧ್ಯಾಹ್ನ ಅವರ ವಿಶ್ರಾಂತಿ ಕಾಲ ಆದರೂ ನಿಮ್ಮನ್ನು ಕರೆಯಲು ಬೇಕಂತಲೇ ಕಳಿಸದೆ ಅಂದೆ ಏನ್ಸಾರ್ ತಿಳಿದೂ ತಿಳಿದೂ ಅವರು ಬರುವುದಿಲ್ಲ ಅಂತ ಗೊತ್ತಿದ್ದು ಏಕೆ ಕರೆಯಲು ಕಳಿಸಿದಿರಿ? ಅಂದಳು.

ಅದಕ್ಕೆ ನಾನು ಹೇಳಿದೆ: ಮಾಸ್ತಿ ಅಂಥವರನ್ನು ನೋಡುವುದು ಮಾತಾಡುವುದು ಯುವಕ-ಯುವತಿಯರಿಗೆ ಜೀವನದಲ್ಲೇ ಅಮೃತ ಕ್ಷಣಗಳ ಅನುಭವವಾಗುತ್ತದೆ.

ಅದಕ್ಕಾಗಿ ಕಳಿಸಿದೆ ಎಂದೆ. ಆಗ ಒಬ್ಬ ಹುಡುಗಿ ಹೌದು ಸಾರ್. ಅವರು ನನ್ನ ಜತೆ ಮಾತಾಡಿದಾಗ ಕೆಲವು ವರ್ಷಗಳ ಹಿಂದೆ ತೀರಿಕೊಂಡ ನಂತಾತ ನೆನಪಾದರು ಎಂದಳು. ಇನ್ನೊಬ್ಬ ವಿದ್ಯಾರ್ಥಿನಿ. ನನ್ನ ತಂದೆಯನ್ನು ಮತ್ತೊಮ್ಮೆ ನೋಡಿದಂತಾಯಿತು ಎಂದಳು. ಇನ್ನೊಬ್ಬಳು ಇದುವರೆಗೆ ನನ್ನನ್ನು ನಮ್ಮ ಮನೆಯಲ್ಲಿ ಯಾರೂ ಇಷ್ಟು ಪ್ರೀತಿಯಿಂದ ಮಾತಾಡಿಸಿಲ್ಲ ಸಾರ್ ಎಂದಳು.

ಈ ಘಟನೆ ಆದ ೩ ವರ್ಷಗಳ ನಂತರ ಒಬ್ಬ ವಿದ್ಯಾರ್ಥಿನಿ ಕನ್ನಡ ಎಂಎಗೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೇರಿದಳು. ಮಾಸ್ತಿ ಕೃತಿಗಳು ವಿಶೇಷ ಪಠ್ಯವಾಗಿತ್ತು. ಚಂದ್ರಶೇಖರ ಕಂಬಾರರು ಅವುಗಳನ್ನು ಪಾಠ ಮಾಡುವವರಿದ್ದರು. ಅವರು ಮೊದಲನೇ ತರಗತಿಯಲ್ಲಿ "ವಿದ್ಯಾರ್ಥಿಗಳೇ ನಿಮ್ಮಲ್ಲಿ ಯಾರಾದರೂ ಮಾಸ್ತಿ ಅವರನ್ನು ನೋಡಿದ್ದೀರಾ? ಅವರ ಮಾತನ್ನು ಕೇಳಿದ್ದೀರಾ? ಅವರ ಪುಸ್ತಕಗಳನ್ನು ಓದಿದ್ದೀರಾ?" ಎಂದು ಕೇಳಿದರು.

ನೋಡಿದ್ದೇವೆ ಸಾರ್ ಎಂದರು ಎಲ್ಲಿ ಎಂದರೆ ಚಿತ್ರದಲ್ಲಿ ಎಂದರು. ಮಾತು ಕೇಳಿಲ್ಲ ಪುಸ್ತಕ ಓದಿಲ್ಲ ಎಂದರು.

ಆಗ ಒಬ್ಬ ವಿದ್ಯಾರ್ಥಿನಿ "ಸಾರ್ ನಾನು ನೋಡಿದ್ದೇನೆ. ಮಾತಾಡಿಸಿದ್ದೇನೆ ಅವರ ಸಣ್ಣಕತೆಗಳನ್ನು ಓದಿದ್ದೇನೆ. ಅವರ ಭಾಷಣ ಕೇಳಿದ್ದೇನೆ" ಎಂದರು. ಎಲ್ಲಿ ಹೇಗೆ ಎಂದು ಕೇಳಿದಾಗ, ಮೇಲೆ ವಿವರಿಸಿದ ಘಟನೆ ಹೇಳಿ ಕ್ಲಾಸಿನಲ್ಲಿ ಮಾಸ್ತಿ ಅವರ ಕಥೆ ಹೇಳಿದ ನನ್ನ ಹೆಸರನ್ನು ಹೇಳಿದಳು.

ಕೂಡಲೇ ಕಂಬಾರರು ನಿಮ್ಮ ಮೇಷ್ಟ್ರು ನನ್ನ ಸ್ನೇಹಿತರು, ಶಹಬ್ಬಾಷ್ ನೀನೇ ಪುಣ್ಯವಂತೆ ನಿನಗೊಬ್ಬಳಿಗಾದರೂ ಆ ಭಾಗ್ಯವಿದೆಯಲ್ಲಾ ಸಂತೋಷ. ವಿದ್ಯಾರ್ಥಿಗಳೇ ಈಗಲಾದರೂ ಮಾಸ್ತಿಯವರನ್ನು ಒಮ್ಮೆ ನೋಡಿ ಮಾತಾಡಿಸಿ ಜನ್ಮ ಸಾರ್ಥಕ ಮಾಡಿಕೊಳ್ಳಿ ಮಾಸ್ತಿಯನ್ನು ಕಂಡರೆ ಕಲಿಯುವುದನ್ನು ಯಾವ ಪುಸ್ತಕ ಪಾಠ-ಕ್ಲಾಸು ಪಾಠಗಳಿಂದಲೂ ಕಲಿಯಲು ಸಾಧ್ಯವಿಲ್ಲ ಎಂದರು.

ಅದೇ ದಿನ ಸಂಜೆ ಆ ವಿದ್ಯಾರ್ಥಿನಿ ನಮ್ಮ ಮನೆಗೆ ಬಂದು ಸಾರ್ ನಿಮ್ಮಿಂದ ಈವತ್ತು ಕ್ಲಾಸಲ್ಲಿ ಹಿರೋಯಿನ್ ಆಗಿಬಿಟ್ಟೆ ಎಂದು ನಡೆದ ಸಂಗತಿ ಹೇಳಿದಳು. ಕಂಬಾರರು ನನ್ನ ಮಿತ್ರರು. ಅವರಿಗೆ ಮಾಸ್ತಿ ಅವರನ್ನು ಕಂಡರೆ ತುಂಬಾ ಅಭಿಮಾನ ಆಸಕ್ತಿ ಎಂದೆ. ಆ ವಿದ್ಯಾರ್ಥಿನಿ ಇಂದು ಬೆಂಗಳೂರಿನ ಬಿ.ಎಂ.ಎಸ್. ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಶೀಲಾ ಮಳೀಮಠ. ಯುವಜನರ ಮೇಲೆ ಮಾಸ್ತಿ ಪ್ರಭಾವಕ್ಕೆ ಇದೊಂದು ನಿದರ್ಶನ ಅಷ್ಟೆ.

ಪರಿಷತ್ತಿಗೆ ದುಡಿದರೆ ಸಾಲದು, ತ್ಯಾಗ ಮಾಡಬೇಕು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಂಪನಾ ಅವರ ಕಾಲದಲ್ಲಿ ೧೯೭೮ರಲ್ಲಿ ಕಾರ್ಯದರ್ಶಿ ಆಗಿದ್ದೆ. ಆಗ ನಡೆದ ಪ್ರಸಂಗ. ಪರಿಷತ್ತನ್ನು ನಡೆಸಿದ ಅಧ್ಯಕ್ಷರಲ್ಲಿ

ಆದರ್ಶಪ್ರಾಯ ಅಧ್ಯಕ್ಷರಲ್ಲಿ ಮಾಸ್ತಿ ಒಬ್ಬರು. ಅವರು ಪರಿಷತ್ತಿಗೆ ದುಡಿದವರಷ್ಟೇ ಅಲ್ಲ, ತ್ಯಾಗ ಮಾಡಿದವರಲ್ಲಿ ಒಬ್ಬರು. ಯಾವುದೇ ಸಂಸ್ಥೆಯಲ್ಲಿ ಒಬ್ಬ ವ್ಯಕ್ತಿ ಸೇವೆ ಸಲ್ಲಿಸುವಾಗ ಸಂಸ್ಥೆಯ ಒಂದು ಬಿಡಿಕಾಸನ್ನೂ ಯಾವುದೇ ಕಾರಣಕ್ಕೆ ಮುಟ್ಟಬಾರದು. ತನಗಾಗಿ ಬಳಸಬಾರದು ಎಂಬ ತತ್ತ್ವವನ್ನು ಕಟ್ಟುನಿಟ್ಟಾಗಿ ಪಾಲಿಸಿದ ಅಧ್ಯಕ್ಷರಲ್ಲಿ ಮಾಸ್ತಿಯವರೂ ಒಬ್ಬರು.

ಪರಿಷತ್ತಿನ ನಿಯಮಾನುಸಾರ ಹಲವು ಸೌಲಭ್ಯಗಳನ್ನು ಬಳಸಿಕೊಳ್ಳಲು ಪರಿಷತ್ತಿನ ಅಧ್ಯಕ್ಷರಿಗೆ, ಅಧಿಕಾರಿಗಳಿಗೆ ನ್ಯಾಯಸಮ್ಮತ ಅವಕಾಶಗಳಿರುತ್ತವೆ. ಅದನ್ನು ಬಹು ಮಂದಿ ಪರಿಷತ್ತಿನ ಅಧ್ಯಕ್ಷರು ರಾಜಾರೋಷವಾಗಿ ಬಳಸಿದ್ದಾರೆ. ಅದರಲ್ಲಿ ತಪ್ಪೇನಿಲ್ಲವಾದರೂ ಅದು ಆದರ್ಶ ಮಾರ್ಗವಲ್ಲ. ಮಾಸ್ತಿಯವರದು ಆದರ್ಶಸೇವೆ ಪರಿಷತ್ತಿಗೆ ಮಾಡಿದ್ದು.

ಪರಿಷತ್ತು ಹಿರಿಯರ ಮಾರ್ಗದರ್ಶನಕ್ಕಾಗಿ ಹಿಂದೆ ಹಿರಿಯ ಸಾಹಿತಿಗಳನ್ನು ಸಮಿತಿ ಸಭೆಗಳಿಗೆ ಕರೆಯಲಾಗುತ್ತಿತ್ತು. ಸಮಿತಿಗಳ ಸಭೆಯಲ್ಲಿ ಭಾಗವಹಿಸಿದವರಿಗೆಲ್ಲ ಪ್ರಯಾಣಭತ್ಯೆ ನೀಡುವುದು ಸಂಪ್ರದಾಯ. ಹಾಗಾಗಿ ಮಾಸ್ತಿ ಸಮಿತಿ ಸಭೆಯೊಂದರಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು. ಆಗ ಪರಿಷತ್ತಿನ ನಿಯಮಾವಳಿಯಂತೆ ಪ್ರಯಾಣದ ವೆಚ್ಚವಾಗಿ ನಗರದಲ್ಲಿರುವವರಿಗೆ ಆಟೋಚಾರ್ಜ್ ನೀಡಲಾಗುತ್ತಿತ್ತು. ಆ ಪ್ರಕಾರ ಸಭೆ ಮುಗಿದ ಮೇಲೆ ಮಾಸ್ತಿ ಅವರಿಗೆ ಕೊಡಲು ಹೊರಟಾಗ ಹುಚ್ಚು ಹುಡುಗ ನೀನು ಎಂದು ಹೇಳಿ ನಕ್ಕು ಹೇಳಿದರು. ಈ ಸಂಸ್ಥೆಯಿಂದ ನಮ್ಮಂಥವರು ಸಂಸ್ಥೆಯನ್ನು ಕಟ್ಟಿದವರು ಸಂಸ್ಥೆಗೆ ಸೇವೆ ಸಲ್ಲಿಸುವವರು ನಮ್ಮ ಕೈಲಾದಷ್ಟು ಧನಸಹಾಯವನ್ನು ಸಂಸ್ಥೆಗೆ ಮಾಡಬೇಕು ಅಷ್ಟೆ. ಪರಿಷತ್ತಿನಿಂದ ಯಾವ ರೂಪದಲ್ಲಿ ಆಗಲಿ ಯಾವ ಕಾರಣಕ್ಕಾಗಲಿ ಹಣ ಪಡೆಯಬಾರದು ತಿಳಿಯಿತೇ? ಎಂದರು. ಆಗ ನಾನು ಹೇಳಿದೆ. "ಸಾರ್ ನೀವು ಹೇಳಿದ ಮಾತು ಒಪ್ಪಬೇಕಾದ್ದೇ. ಆದರೆ ಇನ್ನೊಂದು ಮಾತು ನೀವು ಗಮನಿಸಬೇಕು. ಪರಿಷತ್ತು ನಿಯಮಾನುಸಾರ ನಡೆಯುವ ಸಂಸ್ಥೆ. ನೀವೂ ಅಧ್ಯಕ್ಷರಾಗಿ ನಿಯಮಾನುಸಾರ ಪರಿಷತ್ತನ್ನು ನಡೆಸಿದ್ದೀರಿ. ಸಭೆಗೆ ಬಂದವರಿಗೆ ಪ್ರಯಾಣ ವೆಚ್ಚ ಕೊಡಬೇಕಾದದ್ದು ಪರಿಷತ್ತಿನ ನಿಯಮ ಆದ್ದರಿಂದ ನೀವು ತೆಗೆದುಕೊಳ್ಳಬೇಕು. ಈ ಅತ್ಯಲ್ಪ ಹಣ ನಿಮಗೆ ಬೇಕಿದೆ ಎಂದು ನಾನು ತಿಳಿದಿಲ್ಲ ಆದರೆ ಪರಿಷತ್ತನ್ನು ಕಟ್ಟಿ ಬೆಳೆಸಿದ ನೀವು ಸಂಸ್ಥೆಯ ನಿಯಮವನ್ನು ಪರಿಪಾಲಿಸುವುದು ಬೇಡವೇ?....ಇತ್ಯಾದಿಯಾಗಿ ವಾದ ಮಾಡಿದೆ. ಆಗ ಅವರು ಹೇಳಿದರು: ನಿಯಮಕ್ಕಿಂತ ಆದರ್ಶ, ನಿಯತ್ತು ವ್ಯಕ್ತಿಗೆ ಮುಖ್ಯ. ಆದ್ದರಿಂದ ನೀವೇನೇ ಹೇಳಿದರೂ ತೆಗೆದುಕೊಳ್ಳುವುದಿಲ್ಲ ಎಂದರು. ಆಗ ನಾನು ಹೇಳಿದೆ: ಸಾರ್ ಹಾಗಾದರೆ ನೀವೊಂದು ಕೆಲಸ ಮಾಡಿ ಈ ವೋಚರಿಗೆ ಸಹಿ ಹಾಕಿ ಆ ಹಣಕ್ಕೆ ಒಂದು ಪುಸ್ತಕ ಕೊಂಡು ಪರಿಷತ್ತಿನ ಪುಸ್ತಕ ಭಂಡಾರಕ್ಕೆ ನಿಮ್ಮ ಹೆಸರಲ್ಲಿ ಸೇರಿಸುತ್ತೇನೆ. ಪರಿಷತ್ತಿನ ಪುಸ್ತಕ ಭಂಡಾರ ಬೆಳೆಯುವುದಕ್ಕೆ ನಿಮ್ಮ ವಿರೋಧವಿಲ್ಲವಲ್ಲ; ಮತ್ತೆ ನೀವೇನೂ ಹಣ ಪಡೆದಂತೆ

ಆಗಲಿಲ್ಲ ಎಂದೆ. ಜಾಣ ನೀನು ಎಂದು ನಕ್ಕು ವೋಚರಿಗೆ ಸಹಿ ಹಾಕಿದರು ಹಣ ಮುಟ್ಟಲಿಲ್ಲ. ಆ ಹಣದ ಮೊತ್ತ ಎಷ್ಟು ಗೊತ್ತೆ ೨೫ ರೂ.

ಮಾಸ್ತಿ ಅವರದು ಅಮೃತಹಸ್ತ

ಮಾಸ್ತಿ ಅವರೊಡನೆ ಕಾಸರಗೋಡಿನಲ್ಲಿ ನಡೆದ ಕೈಯೂರ ಕಿಞ್ಞಣ್ಣ ರೈ ಏರ್ಪಡಿಸಿದ್ದ ಯುವಜನ ಸಮ್ಮೇಳನಕ್ಕೆ ಹೋಗಿದ್ದೆ. ಧರ್ಮಸ್ಥಳದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ಮಾಸ್ತಿ ಅವರನ್ನು ಜಿ.ಪಿ. ರಾಜರತ್ನಂ ಮೊದಲಾದ ಇತರ ಸಾಹಿತಿಗಳನ್ನು ಕಿಞ್ಞಣ್ಣ ರೈ ಸಮ್ಮೇಳನಕ್ಕೆ ಕಾಸರಗೋಡಿಗೆ ಆಹ್ವಾನಿಸಿದ್ದರು. ಜಿ.ಪಿ. ರಾಜರತ್ನಂ ಕಾರ್ಯನಿಮಿತ್ತ ಬರದೆ ಹಿಂದಿನ ದಿನವೇ ಬೆಂಗಳೂರಿಗೆ ಹೋದರು ಅವರ ಬದಲು ಭಾಗವಹಿಸಲು ನನಗೆ ಹೇಳಿದರು. ನೋಡಿ ಯುವಜನ ಸಮ್ಮೇಳನಕ್ಕೆ ಕರೆದಿದ್ದಾರೆ. ನೀವು ಯುವಕರು ಹೋಗಬೇಕು. ನಾನು ಹಿರಿಯ ಪುಟ್ಟಮಕ್ಕಳನ್ನು ವಿಚಾರಿಸಬೇಕು ಗೊತ್ತಲ್ಲಾ ಎಂದರು. ಗೊತ್ತು ಸಾರ್ ಎಂದೆ. ಮಾರನೇ ದಿನ ಅವರು ಬೆಂಗಳೂರಿನಲ್ಲಿ ಗಾಂಧೀ ಸಾಹಿತ್ಯ ಸಂಘದಲ್ಲಿ ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಎಷ್ಟಾದರೂ ಮಕ್ಕಳ ಸಾಹಿತಿ ರಾಜರತ್ನಂ ಅವರು.

ಕಾಸರಗೋಡಿನ ಸಮ್ಮೇಳನಕ್ಕೆ ಮಾಸ್ತಿ ಮತ್ತು ಇತರರೊಂದಿಗೆ ಧರ್ಮಸ್ಥಳ ಸಮ್ಮೇಳನ ಮುಗಿಸಿ ನಾವು ಹೊರಟೆವು. ಮಾಸ್ತಿ ಅಧ್ಯಕ್ಷ ಭಾಷಣ ಮಾಡುತ್ತಾ ಹಿಂದೆ ತಾವು ಬಂದಾಗ ಕರ್ನಾಟಕ ಏಕೀಕರಣಕ್ಕೆ ದುಡಿದ ದೇಶಭಕ್ತರಾದ ಸ್ಥಳದ ನಾಯಕರಾಗಿದ್ದ ಭಂಡಾರಿ ಅಂತ ಕಾಣುತ್ತೆ (ಹೆಸರು ಸರಿಯಾಗಿ ನನಗೆ ನೆನಪಿಲ್ಲ) ಅವರನ್ನು ನೆನಪಿಸಿಕೊಂಡರು. ಅವರ ಮನೇಲಿ ತಿಂದ ಪತ್ರೊಡೆ ಸವಿ ಈಗಲೂ ನನ್ನ ನಾಲಿಗೆ ಮೇಲೆ ಇದೆ ಎಂದು ಅವರ ಆತಿಥ್ಯವನ್ನು ಹೊಗಳಿದರು. ಆ ಸಭೆಯಲ್ಲಿ ಅವರ ಕುಟುಂಬದವರು ಬಂದಿದ್ದರು ಅವರು ಕೂಡಲೆ ರೈ ಅವರನ್ನು ಭೇಟಿ ಮಾಡಿ ಈ ಅತಿಥಿಗಳನ್ನೆಲ್ಲ ದಯವಿಟ್ಟು ನಮ್ಮ ಮನೆಗೆ ಊಟಕ್ಕೆ ಕಳಿಸಿ ಎಂದು ಕೇಳಿಕೊಂಡರು.

ಅನಂತರ ಸಭೆ ಮುಗಿದ ಮೇಲೆ ನಾವೆಲ್ಲ ಹಾಮಾನಾ, ಶಂಕರನಾರಾಯಣ, ವೆಂಕಟರಾಮಪ್ಪ, ಮಾಸ್ತಿ, ಡಿ. ಲಿಂಗಯ್ಯ ಇನ್ನು ಹಲವರು ಅವರ ಮನೆ ಊಟಕ್ಕೆ ಹೊರಟೆವು.

ಹಳೆಯ ದೊಡ್ಡಮನೆ. ಹಾಲಿನಲ್ಲಿ ಟೇಬಲ್ಲುಗಳ ಮೇಲೆ ಊಟ ಬಡಿಸಿದ್ದರು. ಮಾಸ್ತಿ ಅವರು ಭಂಡಾರಿ ಅವರ ಮಗನ ಯೋಗಕ್ಷೇಮ ಕೇಳಿದಾಗ ಮನೆಯವರ ಮುಖ ಚಿಕ್ಕದಾಯಿತು ಯಾಕೆ ಏನಾಯಿತು ಎಂದು ಮಾಸ್ತಿ ಕೇಳಿದರು. ಅವರಿಗೆ ಅನಾರೋಗ್ಯ ಒಳಗೆ ಕೋಣೆಯಲ್ಲಿ ಮಲಗಿದ್ದಾರೆ ಎಂದರು. ಕೂಡಲೇ ಊಟ ಪ್ರಾರಂಭಿಸಬೇಕಾದ ಮಾಸ್ತಿ ಎದ್ದು ಎಲ್ಲಿ ಎಲ್ಲಿದ್ದಾರೆ ಅವರು ಅಂತ ಕೇಳಿ ಆ ಕೋಣೆಗೆ ಬಂದರು. ನಾವು ಅವರ ಹಿಂದೆ ಬಂದೆವು. ಮಾಸ್ತಿ ಅವರನ್ನು ನೋಡಿ. ಏನಪ್ಪಾ ಮಲಗಿದ್ದೀಯಾ ಏನಾಗಿದೆಯಪ್ಪಾ ಎಂದು ಪ್ರೀತಿ, ವಾತ್ಸಲ್ಯದಿಂದ ಮಾತಾಡುತ್ತಾ ಮೈತಡವಿ

ಮಾತಾಡಿಸಿದಳು ಅರೆ ಎಚ್ಚರದಲ್ಲಿ ಆ ವ್ಯಕ್ತಿ ಹ್ಞಾ ಹ್ಞಾ ಎಂದು ತಡವರಿಸುತ್ತಾ ನೀವು ಮಾಸ್ತಿ ಅವರು ಅಂತ ಹೇಳುತ್ತಾ ಕೈ ಮುಗಿಯಲು ಯತ್ನಿಸಿದರು ಬೇಡಿ ಬೇಡಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳಿ. ಆರೋಗ್ಯವಂತರಾಗುತ್ತೀರಿ ಚಿಂತಿಸಬೇಡಿ ದೇವರಿದ್ದಾನೆ ಎಂದು ಸಾಂತ್ವನ ಹೇಳಿದರು. ಆಗ ಮನೆಯವರ ಮುಖದಲ್ಲೆಲ್ಲಾ ಸಂತೋಷ ಉಕ್ಕಿ ಚಿಮ್ಮಿ ಹರಿದಿತ್ತು. ಏಕೆ ಗೊತ್ತೆ? ಹಲವು ದಿನಗಳಿಂದ ಎಚ್ಚರವಿಲ್ಲದೆ ಮಲಗಿದ್ದರು. ಮಾಸ್ತಿಯವರ ಪ್ರೀತಿಯ ಮಾತು ವಾತ್ಸಲ್ಯದ ಸ್ಪರ್ಶದ ಅಮೃತಹಸ್ತದ ಅನುಭವ ಅವರನ್ನು ಎಚ್ಚರಗೊಳಿಸಿತ್ತು. ಇದು ನಾನು ಕಣ್ಣಾರೆ ಕಂಡ ನೋಟ.

ನನ್ನ ಜತೆ ಮಾತಾಡಲು ಸಂಕೋಚವೇಕೆ?

ಮಾಸ್ತಿ ಅವರನ್ನು ಅದೆಷ್ಟು ಸಲ ಭೇಟಿ ಆಗಿದ್ದೇನೋ ನೆನಪಿಲ್ಲ. ಕೆಲವೊಮ್ಮೆ ಬೆಳಿಗ್ಗೆ ೧೦-೧೧ರ ಸುಮಾರಿನಲ್ಲಿ ವಾಕಿಂಗ್ ಹೊರಟಾಗ ಗವಿಪುರದ ಮನೆಯಿಂದ ಹೊರಟು ರಾಮಕೃಷ್ಣಾಶ್ರಮದ ಮುಂದೆ ಬಂದು ಗೇಟಿನಲ್ಲಿ ನಿಂತು ಕೈಮುಗಿದು, ಮರಾಠ ಹಾಸ್ಟೆಲಿನ ಪಕ್ಕದಿಂದ ಶಂಕರಮಠದ ರಸ್ತೆಯಲ್ಲಿ ಸಾಗಿ ಗಾಂಧಿ ಬಜಾರ್ ರಸ್ತೆಯಿಂದ ಮನೆಗೆ ಸಾಗುತ್ತಿದ್ದರು. ಆಗ ಭೇಟಿಯಾದಾಗಲೆಲ್ಲ ಅವರ ಜತೆ ಉದ್ದಕ್ಕೂ ಮಾತಾಡಿಸುತ್ತಾ ಸಾಗುತ್ತಾ ಹತ್ತಾರು ವಿಷಯಗಳನ್ನು ಪ್ರಶಾಂತದನಿಯಲ್ಲಿ ಕೇಳಿದ್ದೀನಿ ಒಮ್ಮೆ ಹೀಗೆ ವಾಕಿಂಗ್‌ನಲ್ಲಿ ಮಾತಾಡಿದಾಗ, "ಪತ್ರಿಕೆಯೊಂದರಲ್ಲಿ ಅವರ ಬಗ್ಗೆ ಟೀಕೆಯೊಂದು ಬಂದಿತ್ತು. ಅದನ್ನು ಬೆಳಿಗ್ಗೆ ಓದಿದ್ದರು. ನಾನು ಆ ಬಗ್ಗೆ ಕೇಳಿದಾಗ ಆ ನನ್ನ ಮಿತ್ರರು ಬರೆಯಬೇಕಿರಲಿಲ್ಲ ನನ್ನ ಬಂದು ಕೇಳಿದ್ದರೆ ನಾನೇ ಉತ್ತರ ಹೇಳುತ್ತಿದ್ದೆ ನನ್ನ ಜತೆ ಮಾತಾಡೋಕೆ ಅವರಿಗೇಕೆ ಸಂಕೋಚವೊ ತಿಳಿಯದು" ಎಂದಿದ್ದರು.

ದೇಹಕ್ಕೆ ವಯಸ್ಸಾದರೂ ಮನಸ್ಸಿಗೆ ಆಗಿಲ್ಲ

ಇನ್ನೊಮ್ಮೆ ಹಂಪನಾ ಅವರ ಜತೆ ಪರಿಷತ್ತಿನ ವಿಚಾರವಾಗಿ ಹೋಗಿದ್ದಾಗ ಯಾವುದೋ ನಾಟಕವನ್ನು ಅಂತ ಕಾಣುತ್ತೆ ಬರೆಯುತ್ತಿದ್ದರು ಅದೊಂದು ಯುವಕ-ಯುವತಿಯರ ಪ್ರಣಯ ಪ್ರಸಂಗ ಅಂತ ಕಾಣುತ್ತೆ. ಅದನ್ನು ಲವಲವಿಕೆಯಿಂದ ಹೇಳತೊಡಗಿದರು ಆ ಬಗ್ಗೆ ಬರೆಯುತ್ತಿದ್ದೇನೆ ಎಂದರು. ಅವರು ಆ ಇಳಿವಯಸ್ಸಿನಲ್ಲಿ ನಗುನಗುತ್ತ, ಸಂತೋಷದಿಂದ ಹೆಮ್ಮೆಯಿಂದ ಭಾವಪೂರ್ಣವಾಗಿ ಆ ಕಥೆಯನ್ನು ಹೇಳಿದ್ದು ಈಗಲೂ ನೆನಪಿದೆ. ಈಚೆ ಬಂದ ಮೇಲೆ ನಾನು ಹಂಪನಾ ಮಾತಾಡಿಕೊಂಡೆವು ಈ ಅಜ್ಜನಿಗೆ ಅದೆಂಥಾ ತಾರುಣ್ಯಭಾವ ಈ ವಯಸ್ಸಲ್ಲೂ ನಮಗೆ ಈ ವಯಸ್ಸಿಗೇ ಇಲ್ಲವಲ್ಲಾ. ನಾವೇ ಮುದುಕರು ಅವರೇ ತರುಣರು ಎಂದೆ. ಹಂಪನಾ ಹೌದು ನೀನು ಹೇಳೋದು ನಿಜ ವಯಸ್ಸು ದೇಹಕ್ಕೆ ಮನಸ್ಸಿಗಲ್ಲ ಎಂದರು.

ಇಂಥಾ ಅನುಭವಗಳೆಷ್ಟೋ ಆಗಿವೆ. ಮಾಸ್ತಿ ಜತೆ ಮಾತಾಡಿದಾಗಲೆಲ್ಲ. ಇನ್ನು ಅವರ ಭಾವ ಅರ್ಚನ ಮೊದಲಾದ ಕೃತಿಗಳಲ್ಲಿ ಅವರ ಬಗ್ಗೆ ಬಂದ ಗೌರವ ಗ್ರಂಥಗಳಲ್ಲಿ ಬಂದ ಪ್ರಸಂಗಗಳನ್ನು ಕಂಡರೆ ಇಷ್ಟು ವಿಪುಲ ರೋಚಕ ಆನಂದಮಯ

ಅನುಭವಗಳ ಅಕ್ಷಯಪಾತ್ರೆ, ಕನ್ನಡದ ಬೇರಾವ ಕನ್ನಡ ಸಾಹಿತಿಗಳಲ್ಲೂ ಈ ಪ್ರಮಾಣದಲ್ಲಿ ಇಲ್ಲ ಎನ್ನಿಸುತ್ತೆ.

ಡಿವಿಜಿ ರಾಳ್ಳಪಳ್ಳಿ ಅವರ ಬಗ್ಗೆ ಒಮ್ಮೆ ಹೇಳಿದ ಮಾತು ನೆನಪಾಗುತ್ತೆ: "ಇಂಥಾ ಮಹಾಪುರುಷರ ಜತೆಯಲ್ಲಿದ್ದಾಗ ದೊರೆಯುವ ಅನುಭವದ ದನಿ, ಮಾತಿನ ಸೊಗಡು ಅಂತಃಕರಣದ ನುಡಿ ಸಾಂತ್ವನ, ರಸಾನುಭವ, ಯಾವ ವಿಶ್ವವಿದ್ಯಾನಿಲಯದ ಶಿಕ್ಷಣದಿಂದಲೂ ಸಿಗುವುದಿಲ್ಲ." ಈ ಮಾತಿಗೆ ಮಾಸ್ತಿಯೇ ಸಾಕ್ಷಿ, ನಾನೇ ಸಾಕ್ಷಿ.

■

ಮಾಸ್ತಿಯವರ ಕತೆಗಳ ಭಾಷೆ

◆

ಡಾ. ಕೃಷ್ಣ ಪರಮೇಶ್ವರ ಭಟ್ಟ

೧

ಮಾಸ್ತಿಯವರ ಸಣ್ಣಕತೆಗಳನ್ನು ಗಮನದಲ್ಲಿಟ್ಟುಕೊಂಡು ಅವರು ಬಳಸಿದ ಭಾಷೆ, ತಂತ್ರಗಳನ್ನು ಕುರಿತು ಕೆಲವು ಅಭಿಪ್ರಾಯಗಳು ಈಗಾಗಲೇ ಪ್ರಕಟವಾಗಿವೆ. ಅವುಗಳಲ್ಲಿ ಕೆಲವನ್ನು ಪ್ರಾತಿನಿಧಿಕವಾಗಿ ಇಲ್ಲಿ ಗಮನಿಸಬಹುದು: "ಅವರು ಹೇಳುವ ಕ್ರಮ ನೇರವಾಗಿ, ಮಧುರವಾಗಿ ನಯವಾದ ಮಾತು ಮತ್ತು ಸಣ್ಣ ಸಣ್ಣ ವಾಕ್ಯಗಳು: ವಾಕ್ಯಗಳ ಜೊತೆಯಲ್ಲಿ ಸೇರಿಕೊಂಡು ಇರುವ ಸಾಮ್ಯಗಳು...." (ಗೊರೂರು, ೧೯೭೨) : "ನಿರುದ್ವಿಗ್ನವಾದ ನಿರೂಪಣಾ ವಿಧಾನ ಇವರ ಬರವಣಿಗೆಯ ಮುಖ್ಯ ಲಕ್ಷಣ. ಕತೆ ಮತ್ತು ನೈಜ ಅನುಭವಗಳಿಗೆ ದೂರ ಏರ್ಪಡುವುದಕ್ಕಾಗಿ ಮಾಸ್ತಿಯವರು ಕೆಲವು ತಂತ್ರಗಳನ್ನು ಉಪಯೋಗಿಸುತ್ತಾರೆ. ಮುಖ್ಯವಾದವು: ೧. ಕತೆ ನಡೆದ ಕಾಲ ಮತ್ತು ಹೇಳುವ ಕಾಲಗಳನ್ನು ದೂರ ಇಡುವುದು. ೨. ಕತೆ ಹೇಳುವ ಪಾತ್ರ ಹಾಗೂ ಕತೆಗಳಲ್ಲಿ ಮುಖ್ಯ ಪಾತ್ರವಹಿಸುವ ಪಾತ್ರಗಳ ಜಾತಿ, ವರ್ಗ, ವಯಸ್ಸುಗಳ ವ್ಯತ್ಯಾಸಗಳನ್ನು ಓದುಗರ ಗಮನಕ್ಕೆ ತರುವುದು...." (ಎಂ.ಜಿ. ಕೃಷ್ಣಮೂರ್ತಿ, ೧೯೭೨); ಮಾಸ್ತಿಯವರು ನವ್ಯರಿಗೆ ಸಹಜವಾದ ಕೇಂದ್ರಕ್ಕೆ ಬದ್ಧವಾದ ದೃಷ್ಟಿಕೋನವನ್ನು ಹೊಂದದೆ, ಸರ್ವಸಾಕ್ಷಿತ್ವದ ನಿರೂಪಣಾ ತಂತ್ರವನ್ನು ಬಳಸುವುದರಿಂದ ಅವರ ಬರವಣಿಗೆ ಹೆಚ್ಚು ವ್ಯಾಪಕವಾಗುತ್ತದೆ. (ಕೆ.ಪಿ. ವಾಸುದೇವನ್ ೧೯೮೧). ಮಾಸ್ತಿಯವರು ಸಾಮಾಜಿಕ ವಸ್ತುವನ್ನುಳ್ಳ ತಮ್ಮ ಕತೆಗಳಲ್ಲಿ ನಿರೂಪಕನೊಬ್ಬನನ್ನು ಅಥವಾ ಕೆಲವೊಮ್ಮೆ ನಿರೂಪಕರ ಒಂದು ಬಳಿಯನ್ನೇ ತರುತ್ತಾರೆ. ಇದು ರಾಮಾಯಣ, ಮಹಾಭಾರತ ಅಥವಾ ಜನಪದ ಕತೆಗಳಲ್ಲಿ ಕಾಣುವಂತಹ ತಂತ್ರವೇ. ಕತೆ ಹಳೆಯದು ಎಂದು ತೋರಿಸುವುದರ ಮೂಲಕ ಅದರ ಬಗೆಗೆ ವಿಶ್ವಾಸ ಹುಟ್ಟಿಸಲು ಇದರಿಂದ ಸಾಧ್ಯವಾಗುತ್ತದೆ (ಗಿರಡ್ಡಿ ಗೋವಿಂದರಾಜ. ೧೯೮೬). ಈ ಮೇಲಿನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಮಾಸ್ತಿಯವರ ಕತೆಗಳ ಭಾಷೆಯನ್ನು ಗಮನಿಸಿ ಕೆಲವು ಮಾತುಗಳನ್ನು ಹೇಳಲು ಈ ಮುಂದೆ ಪ್ರಯತ್ನಿಸಲಾಗಿದೆ.

೨

ಕತೆಯಲ್ಲಿಯ ಭಾಷೆಯ ಬಂಧವನ್ನು ಮುಖ್ಯವಾಗಿ ಎರಡು ಅಂಗಗಳಿಂದ ಕೂಡಿದ ಘಟಕವೆಂದಾಗಿ ಪರಿಗಣಿಸಬಹುದೆಂದು ತೋರುತ್ತದೆ. ಒಂದು, ಕತೆಯ ನಿರೂಪಕನಿಂದ ಬಂದ ಮಾತುಗಳು; ಎರಡು, ಕತೆಯಲ್ಲಿಯ ಪಾತ್ರಗಳು ನಡೆಸುವ ಸಂಭಾಷಣೆಗಳು. (ಕೇವಲ ನಿರೂಪಕನ ಮಾತುಗಳಿಂದಲೇ ಕೂಡಿದ ಅಥವಾ ಕೇವಲ ಸಂಭಾಷಣೆಗಳ ಮೂಲಕವೇ ಹೆಣೆದ ಕತೆಗಳಿರಬಹುದಾದರೂ ಅವುಗಳ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ.) ಕಥಾ ಸಾಹಿತ್ಯದಲ್ಲಿ ನಿರೂಪಕನ ಭಾಷೆ ಹಾಗೂ ಕತೆಯಲ್ಲಿಯ ಪಾತ್ರಗಳು ಬಳಸುವ ಭಾಷೆ ಬಹುಮಟ್ಟಿಗೆ ಒಂದೇ ಮಾದರಿಯದ್ದಾಗಿರಬಹುದು ಇಲ್ಲವೇ ಬೇರೆಯದಾಗಿರಬಹುದು. ಮಾಸ್ತಿಯವರ ಕತೆಗಳ ವಿಷಯದಲ್ಲಿ ಇವೆರಡೂ ಬೇರೆ ಬೇರೆಯಾಗಿಯೇ ಇವೆ. ಆದ್ದರಿಂದ ಮಾಸ್ತಿಯವರು ಕತೆಗಳನ್ನು ಒಟ್ಟಾಗಿ ಗಮನಿಸಿ ಅವುಗಳ ಭಾಷೆಯಲ್ಲಿ ಸಾಮಾನ್ಯವಾಗಿ ತೋರುವ ಲಕ್ಷಣಗಳನ್ನು ಹೇಳುವಾಗ ನಿರೂಪಕನ ಭಾಷೆಯನ್ನಷ್ಟೇ ಗಮನದಲ್ಲಿರಿಸಿಕೊಳ್ಳಲಾಗಿದೆ.

ಶಾಬ್ದಿಕಸ್ತರದಲ್ಲಿ ಮಾಸ್ತಿಯವರು ಬಹುಮಟ್ಟಿಗೆ ಆಡುಭಾಷೆಗೆ ಸಮೀಪವಾದ ರೂಪಗಳನ್ನೇ ಬಳಸುವರಾದರೂ ಕೆಲವೊಮ್ಮೆ ಕೆಲವು ಕನ್ನಡ ಶಬ್ದಗಳಿಗೆ ಪರ್ಯಾಯವಾಗಿ ಸಂಸ್ಕೃತ ಶಬ್ದಗಳನ್ನೂ ಕೇವಲ ಗ್ರಾಂಥಿಕ ರೂಪವೆನ್ನಿಸುವ ಪದಪುಂಜಗಳನ್ನೂ ಬಳಸುತ್ತಾರೆ. ಉದಾಹರಣೆಗೆ, ಒಂದೇ ಕತೆಯಲ್ಲಿ ನಾರಿ–ಹೆಂಗಸು, ಯಜ್ಞೇಶ್ವರ–ಬೆಂಕಿ, ಗೃಹ–ಮನೆ ಎಂಬ ಸಮಾನಾರ್ಥಕ ಶಬ್ದಗಳು (ಹಿನ್ನೆಲೆಯ ಸಂದರ್ಭ ವ್ಯತ್ಯಾಸವಿಲ್ಲದೆ) ಪರ್ಯಾಯ ರೂಪಗಳಾಗಿ ಬಳಕೆಯಾಗುತ್ತವೆ. ಸಂತೋಷವನ್ನು ಪ್ರಕಟ ಮಾಡಿದರು. ವ್ಯಾಕುಲಚಿತ್ತನಾದನು. ಸುಖವನ್ನು ಅನುಭವ ಮಾಡಿದನು– ಇತ್ಯಾದಿಯಾದ ರೂಪಗಳು ಕೇವಲ ಗ್ರಾಂಥಿಕವೆನ್ನಿಸಬಹುದಾದಂಥವು. ಈ ರೀತಿಯ ಬಳಕೆ ಮಾಸ್ತಿಯವರ ಮೊದಮೊದಲಿನ ಕತೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ ಎಂಬುದು ಗಮನಿಸಬೇಕಾದದ್ದು. ಅದು ಕನ್ನಡದ ಪ್ರಾರಂಭಿಕ ಕಥೆ–ಕಾದಂಬರಿಗಾರರನೇಕರ ಬರವಣಿಗೆಯಲ್ಲಿಯೂ ಕಾಣುವುದರಿಂದ ಮಾಸ್ತಿಯವರ ವೈಯಕ್ತಿಕ ಲಕ್ಷಣವಾಗಿರದೇ ಆ ಕಾಲದ ಕಥಾ ಸಾಹಿತ್ಯದ ಭಾಷೆಯೊಂದು ರೂಪುಗೊಳ್ಳುತ್ತಿದ್ದಾಗ ಕಾಣಿಸಿಕೊಂಡ ಲಕ್ಷಣವಾಗಿದೆ, ಅಂತೆಯೇ ವಾಚಕರನ್ನು ಕುರಿತು 'ಪ್ರಿಯ ವಾಚಕರೇ' 'ಪ್ರಿಯ ಪಾಠಕರೇ' ಎಂಬ ಸಂಬೋಧನೆಯ ಬಳಕೆಯೂ ಇಂತಹ ಇನ್ನೊಂದು ಲಕ್ಷಣ. ಇದೂ ಮಾಸ್ತಿಯವರ ಮೊದಮೊದಲ ಕತೆಗಳಲ್ಲಿಯೇ ಕಾಣಿಸಿಕೊಳ್ಳುತ್ತದೆ. ಈ ಲಕ್ಷಣವನ್ನು ಕತೆಯ ಆಶಯ ಅಥವಾ ಕತೆಗಾರ ಮಾಸ್ತಿಯವರ ಧೋರಣೆಯೊಂದಿಗೆ ತಳುಕು ಹಾಕುವುದು ಕಷ್ಟವೇ.

ಮಾಸ್ತಿಯವರ ಕತೆಗಳಲ್ಲಿ, ಅದರಲ್ಲಿಯೂ ನಿರೂಪಕನ ಭಾಷೆಯಲ್ಲಿ ಭಾವಸೂಚಕ ಪದಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಈ ಸಂಗತಿಯನ್ನು ವಿಮರ್ಶಕರು ಈಗಾಗಲೇ ಕಂಡುಕೊಂಡಿದ್ದಾರೆ. "ನಿರುದ್ವಿಗ್ನವಾದ ಬರವಣಿಗೆ" ಎಂಬ ಎಂ.ಜಿ. ಕೃಷ್ಣಮೂರ್ತಿಯವರ

ಮಾತು ಪರೋಕ್ಷವಾಗಿ ಇದನ್ನೇ ಹೇಳುತ್ತದೆ. ವಾಕ್ಯರಚನೆಯ ವಿಷಯದಲ್ಲಿಯೂ ಮಾಸ್ತಿಯವರ ಭಾಷೆ ಆಡುಮಾತಿಗಿಂತ ದೂರವಿಲ್ಲ. ಸಾಮಾನ್ಯವಾಗಿ ಎರಡು, ಮೂರಕ್ಕಿಂತ ಹೆಚ್ಚಿನ ಒಳವಾಕ್ಯವನ್ನೊಳಗೊಂಡ ವಾಕ್ಯಗಳು; ದೀರ್ಘವಾಕ್ಯಗಳಲ್ಲಿ ಸಾಮಾನ್ಯವಾಗಿ ಮೂಲವಾಕ್ಯದ ಕೊನೆಯ ಕ್ರಿಯಾಪದ ಕೃದ್‌ರೂಪವಾಗಿ ಬದಲಾಗಿ ಮುಂದಿನ ಇನ್ನೊಂದು ಮೂಲ ವಾಕ್ಯದೊಂದಿಗೆ ಸೇರುತ್ತದೆ. ಈ ಕ್ರಮದಿಂದಾದ ದೀರ್ಘವಾಕ್ಯಗಳು ಅರ್ಥ ಸಂವಹನದ ದೃಷ್ಟಿಯಿಂದ ಮೂಲದ ಸರಳವಾಕ್ಯಗಳಿಗಿಂತ ಹೆಚ್ಚಿನ ತೊಡಕನ್ನು ಒಡ್ಡುವುದಿಲ್ಲ. (ಉದಾ: "ನಾನು ಕೆಲವು ವರ್ಷಗಳ ಹಿಂದೆ ದಿನವೂ ಬೆಳಗಾಗ ನಮ್ಮ ವಾಸದ ವಿಸ್ತರಣದ ಹತ್ತಿರದ ಹಳ್ಳಿಗಳನ್ನು ದಾಟಿ ಹತ್ತಿರ ಹತ್ತಿರ ಒಂದೂವರೆ ಗಂಟೆ ಗುಡ್ಡಬಯಲಿನ ದಾರಿ ನಡೆದು ಮನೆಗೆ ಹಿಂದಿರುಗುವ ವಾಡಿಕೆ ಇಟ್ಟುಕೊಂಡಿದ್ದೆ." ('ಗುಡ್ಡದ ದೇವರು') ಹೆಚ್ಚಿನ ಸಂದರ್ಭಗಳಲ್ಲಿ ಸರಳವಾಕ್ಯಗಳನ್ನು ಆದರೆ, ಯಾಕೆಂದರೆ ಇತ್ಯಾದಿ ಸೇರಿಕೆಯ ಪದಗಳನ್ನು ಬಳಸಿ ದೀರ್ಘವಾಗಿಸಲಾಗುತ್ತದೆ. ಇನ್ನಿತರ ಕೆಲವು ವಿಧಾನಗಳೂ ಆಡುಭಾಷೆಯಲ್ಲಿ ಕಾಣಿಸಿಕೊಳ್ಳುವಂಥವೇ. ಈ ಬಗೆಗೆ ಹೆಚ್ಚಿನ ವಿವರಗಳನ್ನಿಲ್ಲಿ ಕೊಡಲು ಉದ್ದೇಶಿಸಿಲ್ಲ. ಆದರೆ ಮಾಸ್ತಿಯವರು ಕ್ರಿಯಾಪದಗಳನ್ನು ಭೂತಕೃದ್‌ನಾಮವಾಗಿ (cleft forms - ಹೇಳಿದ್ದು, ಮಾಡಿದ್ದು ಇತ್ಯಾದಿ) ಪರಿವರ್ತಿಸಿ ಸ್ಥಳಾಂತರಗೊಳಿಸಿ ಬಳಸಿದ ಉದಾಹರಣೆಗಳು ಬಹು ಕಡಿಮೆ ಎಂಬುದು ಗಮನಿಸಬೇಕಾದದ್ದು. (ಈ ಮಾತನ್ನು ಹೇಳುವಾಗ ಆಗಲೀ ಮುಂದೆ ಮತ್ತೆ ಕೆಲವು ರೂಪಗಳ ಬಳಕೆಯನ್ನು ಕುರಿತು ಹೇಳುವಾಗ ಆಗಲೀ ಇದಕ್ಕೆ ಆಧಾರವಾಗಿ ಖಚಿತವಾದ ಅಂಕೆ ಸಂಖ್ಯೆಗಳನ್ನು ನೀಡದೆ ಒಟ್ಟಿನ ಓದಿನಿಂದ ರೂಪಿತವಾದ ಅಭಿಪ್ರಾಯದಿಂದ ಹೇಳುತ್ತಿದ್ದೇನೆ.) ಮಾಸ್ತಿಯವರ ವಾಕ್ಯಗಳು ಅರ್ಥಗ್ರಹಿಕೆಗೆ ಹೇಗೆ ಸುಲಭವಾಗಿ ಒದಗುತ್ತವೆ ಎಂಬುದನ್ನು – ಕೇವಲ ಕುತೂಹಲಕ್ಕಾಗಿ – ಯಶವಂತ ಚಿತ್ತಾಲರ ಕತೆಗಳ ಒಂದೆರಡು ವಾಕ್ಯಗಳ ಹಿನ್ನೆಲೆಯಲ್ಲಿಟ್ಟು ನೋಡಬಹುದು.

೧. "ಮಧ್ಯಾಹ್ನದ ನಿದ್ದೆ, ಮುಗಿಸಿ ಚಹ ಕುಡಿಯುತ್ತ ಬಾಲ್ಕನಿಯಲ್ಲಿ ಕೂತಿರುವ ಹೊತ್ತಿಗೆ ಕದದ ಕರೆಗಂಟೆ ಸದ್ದು ಮಾಡಿದ್ದು ಕೇಳಿಸಿ ಯಾರಿರಬಹುದೆಂದು ತಿಳಿಯಲು ಆತುರನಾಗಿರುವಾಗ ಕದ ತೆರೆದ ಅವನ ಹೆಂಡತಿಯ ಹಿಂದೆಯೇ ಒಳಬಂದ ಎಳೆಯ ಪ್ರಾಯದ ಹುಡುಗಿ ಬಾಲ್ಕನಿಯಲ್ಲಿ ಕೂತ ಅವನೆದುರು ನಿಂತು, ನಮಸ್ಕಾರ ಮಾಡುತ್ತಾ, "ಮಾಮಾ, ನಾನು ನಿಮ್ಮ ದಾಸಣ್ಣನ ಮಗಳು –ರೇಖಾ" ಎಂದಾಗ ಕಣ್ಣು ಕಿವಿಗಳನ್ನು ನಂಬದಾದ."

(ಚಿತ್ತಾಲ: 'ಮಾತಿನಲ್ಲಿ ಬರಲು ಒಪ್ಪದ ದಾಸಣ್ಣ', ಪು. ೧)

೨. "ತೆರೆಗಳು ಒಡೆಯುವ ಕ್ಷಣದಲ್ಲೇ ಪರಿಶುಭ್ರ ನೊರೆಯಾಗುತ್ತ ಬಿಸಿಲಲ್ಲಿ ಹೊಳೆಯುವ ಬಗೆ ನಿತ್ಯ ಪರಿಚಯದ್ದಾಗಿಯೂ ಅದರ ಅಲೌಕಿಕ ಘನತೆ ಕಣ್ಣು ತುಂಬಿರುವ ಹೊತ್ತಿಗೆ ಸುಂದರವಾದ ಹಲ್ಲುಗಳ ಸಾಲುಗಳನ್ನು ತೋರಿಸಿ ನಗುತ್ತ ಉಲ್ಲಾಸ ವ್ಯಕ್ತಪಡಿಸಿದ ಹುಡುಗಿಯ ಆರೋಗ್ಯಪೂರ್ಣ ಲಾವಣ್ಯಕ್ಕೆ ಬಹಿಯಾಯಿತು."

(ಅದೇ. ಪು. ೧೨)

ಮೇಲೆ, ಮೊದಲ ಉದಾಹರಣವಾಕ್ಯದಲ್ಲಿ ಕೊನೆಯ ಪಕ್ಷ ಮೂರು ಸ್ಥಾನಗಳಲ್ಲಿ 'ಅವನು' ಎಂಬ ಕರ್ತೃಪದವನ್ನು ಅಧ್ಯಾಹಾರಗೊಳಿಸಲಾಗಿದೆ (ಕ್ರಮವಾಗಿ ವಾಕ್ಯದ ಪ್ರಾರಂಭದಲ್ಲಿ; 'ಆತುರನಾಗಿರುವಾಗ' ಎಂಬ ಪದಕ್ಕೆ ಮೊದಲು ಹಾಗೂ 'ಕಣ್ಣುಕಿವಿಗಳನ್ನು' ಎಂಬುದಕ್ಕೆ ಮೊದಲು). ಈ ರೀತಿ ಅಧ್ಯಾಹಾರಗೊಳಿಸುವುದು ಸಾಮಾನ್ಯ ಭಾಷೆಯಲ್ಲಾಗಲೀ ಮಾಸ್ತಿಯವರ ವಾಕ್ಯಗಳಲ್ಲಾಗಲೀ ಅಸಾಮಾನ್ಯವೇನಲ್ಲ. ಆದರೆ ಈ ವಾಕ್ಯದಲ್ಲಾದಂತೆ ಮೊದಮೊದಲು (ಒಳವಾಕ್ಯಗಳಲ್ಲಿ) ಅಧ್ಯಾಹಾರಗೊಳಿಸಿ ಮುಂದೆ ಅದನ್ನು ಬಳಸುವುದು ಅಪರೂಪದ ಸಂಗತಿ. ಹಾಗೂ ಇದು ಕರ್ತೃವಿನ ಕುರಿತಾದ ನಿರೀಕ್ಷೆಯನ್ನು ತಡೆಯುವುದರಿಂದಾಗಿ ಅರ್ಥಗ್ರಹಿಕೆಯಲ್ಲಿ ವಿಳಂಬಕ್ಕೆ ಕಾರಣವಾಗುತ್ತದೆ ಎಂದು ಹೇಳಬಹುದು. ಜೊತೆಗೆ ಮೇಲಿನ ವಾಕ್ಯದಲ್ಲಿ ಅಡಗಿರುವ ಒಳವಾಕ್ಯಗಳ ಕರ್ತೃ ಉದ್ದಕ್ಕೂ ಪರಸ್ಪರ ಬದಲಾಗುವುದನ್ನು ಗಮನಿಸಬಹುದು. "ಮಧ್ಯಾಹ್ನದ.... ಹೊತ್ತಿಗೆ" ಎಂಬ ಭಾಗದ ಕರ್ತೃ 'ಅವನು'; ಮುಂದೆ "ಕದನ...ಮಾಡಿದ್ದು" ಭಾಗಕ್ಕೆ ಕರ್ತೃ 'ಯಾರೋ' ಅಥವಾ 'ಕರೆಗಂಟೆ'; ಮತ್ತೆ "ಯಾರಿರಬಹುದು" ಎಂಬಲ್ಲಿ 'ಯಾರ'; ಮುಂದೆ "ನಾನು.... ರೇಖಾ" ಎಂಬ ಭಾಗಕ್ಕೆ 'ಹುಡುಗಿ' ಕರ್ತೃ; ಪುನಃ "ಕಣ್ಣು... ನಂಬದಾದ" ಎಂಬುದಕ್ಕೆ ಕರ್ತೃ 'ಅವನು', ಹೀಗೆ ಈ ವಾಕ್ಯದ ಒಳಗೆ 'ಅವನು' ಹಾಗು 'ಯಾರೋ ಹುಡುಗಿ' ಅನೇಕ ಬಾರಿ ಕರ್ತೃಗಳಾಗಿ ಪರಸ್ಪರ ಬದಲಾಗಿವೆ. ಈ ರೀತಿ ವಿಭಿನ್ನ ಕರ್ತೃಗಳಿರುವ ಅನೇಕ ವಾಕ್ಯಗಳನ್ನು ವಾಕ್ಯಭಾಗವನ್ನಾಗಿ ರೂಪಾಂತರಿಸಿ ಒಂದೇ ವಾಕ್ಯದೊಳಗೆ ತೂರಿಸುವ ವಿಧಾನ ಮಾಸ್ತಿಯವರಲ್ಲಿ ಇಲ್ಲವೆನ್ನಬಹುದು. (ಮೇಲೆ ಉದಾಹರಿಸಿದ ಚಿತ್ತಾಲರ ಇನ್ನೊಂದು ವಾಕ್ಯವೂ ಆಂತರ್ಯದಲ್ಲಿ ಅನೇಕ ಕರ್ತೃಗಳನ್ನೊಳಗೊಂಡಿದ್ದೇ.) ಮೇಲಿನ ವಾಕ್ಯಗಳು ಅರ್ಥಗ್ರಹಿಕೆಯನ್ನು ವಿಳಂಬ ಗೊಳಿಸಲು ಈ ರೀತಿಯ ಅಡಕರಚನೆಯೂ ಒಂದು ಮುಖ್ಯಕಾರಣ. (ಚಿತ್ತಾಲರ ಅರ್ಥಗ್ರಹಿಕೆಯ ವಿಷಯದಲ್ಲಿ ಬಹುಶಃ ಇನ್ನೊಂದು ಅತಿಗೆ ವಾಲುವ ಮಾದರಿಯವೆಂದು ಕಾಣುತ್ತವೆ.) ಜೊತೆಗೆ ಎರಡನೇ ಉದಾಹರಣ ವಾಕ್ಯದಲ್ಲಿ ಕಾಣಿಸಿಕೊಂಡಿರುವ, ಸಾಹಿತ್ಯಿಕ ಭಾಷೆಗೆ ಮೀಸಲೆನಿಸುವ **ನಿತ್ಯಪರಿಚಯ, ಆರೋಗ್ಯಪೂರ್ಣ ಲಾವಣ್ಯ, ಅಲೌಕಿಕ ಘನತೆ ಕಣ್ಣುತುಂಬಿರುವ** ಎಂಬ ಸಮಾಸ, ವಾಕ್ಯರಚನೆಗಳು, ಈ ವಿಳಂಬವನ್ನು ಹೆಚ್ಚಿಸುತ್ತವೆ. ಮಾಸ್ತಿಯವರ ವಾಕ್ಯಗಳು ಶಬ್ದಕೋಶದ ವಿಷಯದಲ್ಲಾಗಲೀ, ವಾಕ್ಯದೊಳಗೆ ಅಡಕಿಸಿದ ಒಳವಾಕ್ಯಗಳ ಸಂಖ್ಯೆಯ ವಿಷಯದಲ್ಲಾಗಲೀ, ಅವು ಒಳಗೊಳ್ಳುವ ಕರ್ತೃಗಳು ಮತ್ತೆ ಮತ್ತೆ ಬದಲಾಗುವ ವಿಷಯದಲ್ಲಾಗಲೀ ದೈನಂದಿನ ಭಾಷೆಗಿಂತ ಬಹಳ ಬೇರೆಯಾಗಿರುವುದಿಲ್ಲ ಎಂಬುದಕ್ಕೆ ಹಿನ್ನೆಲೆಯಾಗಿ ಮೇಲಿನ ವಾಕ್ಯಗಳನ್ನು ಕೊಡಲಾಗಿದೆಯಷ್ಟೇ.

೩

ಬಿಡಿವಾಕ್ಯರಚನೆಯ ಸ್ತರದಲ್ಲಿ ಮಾಸ್ತಿಯವರ ಭಾಷೆ "ಸುಲಭಗ್ರಹಿಕೆ" ಯನ್ನು ವ್ಯಕ್ತಪಡಿಸುತ್ತದೆ ಎಂಬುದನ್ನು ನೋಡಿದ್ದೇವೆ. ಈಗ ಪರಿಚ್ಛೇದದ (paragraph) ಅಥವಾ ಇಡೀ ಕಥೆಯ ರಚನೆಯ ಹಂತದಲ್ಲಿ ಭಾಷೆಯ ಮೂಲಕ ವ್ಯಕ್ತವಾಗುವ ಕೆಲವು

ಸಂಗತಿಗಳನ್ನು ಗಮನಿಸೋಣ. ಮಾಸ್ತಿಯವರ ಕಥೆಗಳಿಗೆ ಸಂಬಂಧಿಸಿದ ಕೆಲವು ವಿಶೇಷ ಲಕ್ಷಣಗಳು ವ್ಯಕ್ತವಾಗುವುದು. ಈ ಹಂತದಲ್ಲಿಯೇ. ಇವು: ೧. ಹೆಚ್ಚಿನ ಸಾಮಾಜಿಕ ಕತೆಗಳೆಲ್ಲ ಒಬ್ಬನಿಗಿಂತ ಹೆಚ್ಚಿನ ನಿರೂಪಕರನ್ನು ದಾಟಿ ಬಂದವುಗಳು, ೨. ಸಾಮಾಜಿಕ/ಪೌರಾಣಿಕ ವಸ್ತುಗಳನ್ನುಳ್ಳ ಹಲವಾರು ಕತೆಗಳಲ್ಲಿ ಆಲೋಚನೆ, ಅನುಭವಗಳು ಕತೆಯ ಪಾತ್ರವೊಂದಕ್ಕೆ ಸೀಮಿತವಾದಂತೆ ಭಾಷೆ ಬಳಕೆಯಾಗಿರುವುದು, ೩. ಭೂತ ಮತ್ತು ವರ್ತಮಾನಗಳ ಅಂತರವನ್ನು ಸೂಚಿಸುವ ರೀತಿಯಲ್ಲಿ ಪದಗಳನ್ನು ಪೂರ್ವಸೂಚಕಗಳಾಗಿ (anaphorically) ಬಳಸಿರುವುದು, ೪. ಮೇಲಿಂದ ಮೇಲೆ ಅದರಲ್ಲಿಯೂ ಪರಿಚ್ಛೇದಗಳ ಪ್ರಾರಂಭದಲ್ಲಿ (ಒಂದು ಕಾಲದಲ್ಲಿ, ಸುಮಾರು ವರ್ಷಗಳ ಹಿಂದೆ ಇತ್ಯಾದಿ) ಕಾಲವಾಚಕ ಪದಪುಂಜಗಳನ್ನು ಬಳಸಿರುವುದು, ೫. ಕತೆಯಲ್ಲಿಯ ಘಟನೆಗಳ ಕಾಲ ಅಥವಾ ಕಾಲದ ಗಡುವನ್ನು ಹೇಳುವ ಪದಗಳ ಬಳಕೆ, ೬. ಕತೆಯಲ್ಲಿಯ ಘಟನೆಗಳು ವ್ಯಕ್ತಿ/ಪರಿಸರಗಳಿಗೆ ಅನ್ವಯಿಸುವಂತೆ ಸಾಮಾನ್ಯೀಕರಣಗೊಳಿಸುವಂತಹ ವಾಕ್ಯಗಳ ಬಳಕೆ. ಈ ಲಕ್ಷಣಗಳನ್ನು ಒಂದೊಂದಾಗಿ ಸ್ವಲ್ಪ ವಿವರದಲ್ಲಿ ಈಗ ಪರಿಶೀಲಿಸೋಣ.

ಮಾಸ್ತಿಯವರ ಕತೆಗಳಲ್ಲಿ ಕೆಲವದರಲ್ಲಿ ಮಾಸ್ತಿಯವರೇ ನೇರವಾಗಿ, ನಿರೂಪಕರಾಗಿ ಹೇಳಿದಂತಿದ್ದರೆ ಇನ್ನು ಕೆಲವರಲ್ಲಿ ಬೇರೆಯವರಿಂದ ಕೇಳಿದ ಕತೆಗಳನ್ನು ಎರಡನೆಯ ಅಥವಾ ಮೂರನೆಯ ಹಂತದ ನಿರೂಪಕರಾಗಿ ಹೇಳುತ್ತಾರೆಂದೂ ಅವರ ಬಹುಪಾಲು ಸಾಮಾಜಿಕ ಕತೆಗಳು ಎರಡನೆಯ ರೀತಿಯವೆಂದೂ ಈಗಾಗಲೇ ವಿಮರ್ಶಕರು ಗಮನಿಸಿದ್ದಾರೆ (ನೋಡಿ : ಗಿರಡ್ಡಿ ಗೋವಿಂದರಾಜು, ೧೯೮೬). 'ರಂಗನ ಮದುವೆ', 'ರಂಗಪ್ಪನ ದೀಪಾವಳಿ', 'ಬೈಚೇಗೌಡ', 'ಚನ್ನಮ್ಮ', 'ನಳಿನಿಯ ತಂದೆ' ಮೊದಲಾದವು ಮೊದಲನೆಯ ಜಾತಿಗೆ ಸೇರಿದ್ದರೆ 'ಚಿಕ್ಕವ್ವ', 'ವೆಂಕಟಶಾಮಿಯ ಪ್ರಣಯ', 'ಮಲೆನಾಡಿನ ಒಂದು ಪಿಶಾಚ' ಮೊದಲಾದವು ಎರಡನೆಯ ಜಾತಿಗೆ ಸೇರಿದ್ದು, ಬೇರೆಯವರು ಹೇಳಿದ ಕತೆಗಳನ್ನು ಮಾಸ್ತಿಯವರು ಎರಡನೆಯ ಅಥವಾ ಮೂರನೆಯ ನಿರೂಪಕರಾಗಿ ಹೇಳಿದಂತಿದೆ. ಇದು ಮಾಸ್ತಿಯವರು ಅನುಸರಿಸಿದ ತಂತ್ರಗಳಲ್ಲಿ ಒಂದೆಂದೂ ಕತೆಯ ದೂರವನ್ನು ಹೆಚ್ಚಿಸಿ ಅದರ ಬಗೆಗೆ ವಿಶ್ವಾಸ ಹುಟ್ಟಿಸುವುದು ಇದರ ಉದ್ದೇಶವೆಂದೂ ವಿಮರ್ಶಕರ ಅಭಿಪ್ರಾಯವಿದೆ. ತಂತ್ರವೆಂಬುದು ಕತೆಯ ಶಿಲ್ಪಕ್ಕಿಂತ ಬೇರೆಯಾದ, ಕತೆಯ ಸಂವಹನಕ್ಕಾಗಿ ಬಳಸಲಾದ ಅಥವಾ ನಿರ್ದಿಷ್ಟ ಪರಿಣಾಮವನ್ನು ಉದ್ದೇಶಿಸಿ ಬಳಸಲಾದ (ಶಿಲ್ಪಕ್ಕೆ ತೊಡಿಸಲಾದ) ಒಂದು ಹೊರಕವಚ (super structure) ಹಾಗೂ ಒಂದು ಉದ್ದೇಶಪೂರ್ವಕ ಆಯ್ಕೆ ಎಂಬ ಗ್ರಹಿಕೆ ಸಾಮಾನ್ಯವಾಗಿ ವಿಮರ್ಶೆಯ ವಲಯದಲ್ಲಿದೆ. ಶಿಲ್ಪ ಹಾಗೂ ತಂತ್ರಗಳ ಪ್ರತ್ಯೇಕತೆ ಚರ್ಚಾಸ್ಪದವಾದ ವಿಷಯವೇ. ಈ 'ತಂತ್ರ' ಭಾಷಾಬಳಕೆಯ ವಿಶಿಷ್ಟತೆಯಿಂದಾಗಿರಬಹುದು ಅಥವಾ ಭಾಷೆಯ ಮೂಲಕ ಸಾಧಿಸಲಾದ ಪ್ರತಿಮೆ, ಸಂಕೇತ, ಪ್ರಾಸ ಮುಂತಾದ 'ಭಾಷೇತರ ಸಂಗತಿ'ಗಳಿಂದಾಗಿರಬಹುದು. ಪ್ರಸ್ತುತ ಲೇಖನದಲ್ಲಿ 'ನಾನು' ಎಂಬ ನಿರೂಪಕನ ಬಳಕೆಯನ್ನು ತಂತ್ರವೆಂದಾಗಿ ಪರಿಗಣಿಸದೇ ಭಾಷೆಯ ಬಳಕೆಯ ಒಂದು ಸಾಧ್ಯತೆಯನ್ನಾಗಿ ಮಾತ್ರ ಪರಿಗಣಿಸಲಾಗಿದೆ.

ಒಬ್ಬನಿಗಿಂತ ಹೆಚ್ಚು ನಿರೂಪಕರನ್ನು ದಾಟಿಬಂದ ಕತೆ ದೂರವನ್ನು ಹೆಚ್ಚಿಸಿಕೊಳ್ಳುವುದೇನೋ ನಿಜವೇ. (ಇದರ ಉದ್ದೇಶ ವಿಶ್ವಾಸವನ್ನು ಹುಟ್ಟಿಸುವುದು ಎಂಬುದು ಒಂದು ವ್ಯಾಖ್ಯಾನಸಾಧ್ಯತೆ ಮಾತ್ರ). ಆದರೆ ಇದರ ಪರಿಣಾಮ ಕತೆಯ ಶಿಲ್ಪ-ಭಾಷೆಗಳ ಮೇಲೆ ವಿಶಿಷ್ಟವಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಮೇಲೆ ಪಟ್ಟಿಮಾಡಿದ ಇತರ ಲಕ್ಷಣಗಳೆಲ್ಲ ಈ ಕಾರಣದಿಂದಲೇ ಉಂಟಾದವೆಂದು ತರ್ಕಿಸಲು ಸಾಧ್ಯ. ನಿರೂಪಕನೂ ಒಂದು ಪಾತ್ರವಾಗಿ ಇರುವ ಎಲ್ಲ ಕತೆಗಳಲ್ಲೂ ಅವನು(ಳು) ಕತೆಯ ಆಗುವಿಕೆಯಲ್ಲಿ ಸಕ್ರಿಯವಾಗಿ ತೊಡಗಿರದ ಆದರೆ ಮಾಹಿತಿಯನ್ನು ದೊರಕಿಸುವ ರೀತಿಯಲ್ಲಿ ಪ್ರಶ್ನೆ ಕೇಳುವ ಅಥವಾ ನೆನಪಿಸಿಕೊಳ್ಳುವ, ಹೆಚ್ಚೆಂದರೆ ಅನುಭವಿಸುವ ಒಂದು ಗೌಣಪಾತ್ರವಾಗಿರುತ್ತಾನೆ(ಳೆ). ಇದಕ್ಕೆ ನಿದರ್ಶನವಾಗಿ ಕೆಲವು ಉದಾಹರಣೆಗಳನ್ನು ನೋಡಬಹುದು:

೧. "ಇದೆಲ್ಲ ಏನವ್ವ? ಹುಡುಗ ಬೆಳೆಯೋ ತಂಕಾನೇ, ಬೆಳೆದ ಮೇಲೆ ಯಾವಳೋ ಬರ್ತಾಳೇ, ಈಗ ಅಮ್ಮ. ಅಮ್ಮ ಅಂತ ಇರೋ ಮಗ ಆಗ ಅಮ್ಮನ್ನ ನೀನು ಇದ್ದೀಯಾ ಸತ್ಯಾ ಅಂತಾ ಕೇಳೋಲ್ಲ" ಅಂದಳು. ನಾನು 'ಯಾಕೆ ಮಂಗಮ್ಮ ಏನಾಯಿತು. ಮಗ ನೀ ಹೇಳಿದ ಮಾತು ಕೇಳಲಿಲ್ಲವೇ ಎಂದೆ. ('ಮೊಸರಿನ ಮಂಗಮ್ಮ')

೨. ಇದನ್ನೆಲ್ಲ ಕೇಳಿ ನನಗೆ ಬಹಳ ವ್ಯಸನವಾಯಿತು (ಅದೇ.)

೩. ಶಾಸ್ತ್ರಿಗಳು ಮನೆಗೆ ಹೋದಮೇಲೆ ಕೃಷ್ಣಮೂರ್ತಿಯ ಕತೆಯನ್ನೆಲ್ಲ ನೆನೆದುಕೊಂಡೆನು. ('ಕೃಷ್ಣಮೂರ್ತಿಯ ಹೆಂಡತಿ')

೪. ಆಕೆ "ನಾನು ಇನ್ನು ಯಾವಾಗಲೂ ಬರುವುದು ಸರಿಹೋಗುವುದಿಲ್ಲ, ಒಂದು ಮಾತಿದೆ. ಅದನ್ನು ಹೇಳಿ ಹೊರಟುಹೋಗುತ್ತೇನೆ" ಎಂದರು.... ನಾನು 'ಅವಶ್ಯವಾಗಿ ಹೇಳಿ ತಾಯಿ, ಬನ್ನಿ' ಎಂದು ಒಳಗೆ ಬಂದು ಒಂದು ನಾಗಾಲಿಗೆಯನ್ನು ಹಾಕಿದೆನು. (ಅದೇ)

(ಓರೆ ಅಕ್ಷರಗಳಿಂದ ಸೂಚಿಸಿದ) ಈ ಉದಾಹರಣೆಗಳಲ್ಲಿ ನಿರೂಪಕ (ಕಿ) ಕತೆಯ ಘಟನೆ ನಡೆದ ಕಾಲಕ್ಕೆ ಇತರ ಪಾತ್ರಗಳೊಂದಿಗೇ ಇದ್ದರೂ ಮೇಲೆ ಹೇಳಿದಂತೆ ಸಕ್ರಿಯವಾಗಿ ಕಾಣಿಸಿಕೊಳ್ಳದ, ಜನಪದ ಕತೆಗಳಲ್ಲಿ ಕತೆ ಮುಂದುವರೆಯಲು ಹೂಂಗುಟ್ಟುತ್ತ ನಿಮಿತ್ತಮಾತ್ರವಾಗಿರುವಂತೆ ಇರುವ ಅಥವಾ ಅನುಭವವನ್ನು ನಿರೂಪಿಸುವ ಪಾತ್ರ ಮಾತ್ರವಾಗಿದೆ. ಕತೆಯ ಕಾಲ, ಸ್ಥಳಗಳಿಂದ ದೂರವಾಗಿ ಹೇಳುತ್ತಿರುವ 'ವೆಂಕಟಿಗನ ಹೆಂಡತಿ'ಯ ಶ್ರೀರಾಮ್, 'ಸುಬೇದಾರರಿಗೆ ಪ್ಯಾದೇಮಾತಿ'ನ ರಾಮಣ್ಣನಂತಹ ನಿರೂಪಕರು ಅನಿವಾರ್ಯವಾಗಿಯೇ ಕೇವಲ ವರದಿಗಾರರಾಗುತ್ತಾರೆ. ಹೀಗೆ ಲೇಖಕನಲ್ಲದ ನಿರೂಪಕ ವರದಿಗಾರ, ಹಾಗೂ ನಿರೀಕ್ಷಕನಾಗಿದ್ದಾನೆ.

ಮಾಸ್ತಿಯವರ ಅನೇಕ ಕತೆಗಳಲ್ಲಿ ಯಾವುದೋ ಒಂದು ಪಾತ್ರದ ಮಾನಸಿಕ ವರ್ತನೆಗಳನ್ನು ದಾಖಲಿಸುವಂತೆ ಕ್ರಿಯಾಪದಗಳು (ಯೋಚಿಸು, ಭಯಪಡು, ನೆನೆ, ಮನಸೋಲು, ಆಶ್ಚರ್ಯಪಡು, ಎಂದುಕೊಳ್ಳು ಇತ್ಯಾದಿ) ಬಳಕೆಯಾಗಿವೆ. 'ಒಂದು

ಹಳೆಯ ಕತೆ'ಯ ಸನ್ಯಾಸಿ, 'ಕೃಷ್ಣಮೂರ್ತಿಯ ಹೆಂಡತಿ'ಯ ಕೃಷ್ಣಮೂರ್ತಿ, 'ಹೇಮಕೂಟದಿಂದ ಬಂದಮೇಲೆ'ಯ ಶಕುಂತಲೆ, 'ರಂಗಸ್ವಾಮಿಯ ಅವಿವೇಕ'ದಲ್ಲಿಯ ರಂಗಸ್ವಾಮಿ ಮುಂತಾದ ಪಾತ್ರಗಳು ಈ ಬಗೆಯವು. ಈ ಕತೆಗಳಲ್ಲಿಯ ಉಳಿದ ಪಾತ್ರಗಳ ವಿಷಯದಲ್ಲಿ ಬಹುಮಟ್ಟಿಗೆ ಬಾಹ್ಯವರ್ತನೆಗಳನ್ನು (ಹೋಗು, ಬಾ, ಕೇಳು ಮಲಗು ಇತ್ಯಾದಿ) ಮಾತ್ರ ಹೇಳಲಾಗಿದೆ. ಇಂತಹ ಕತೆಗಳಲ್ಲಿ ಸನ್ಯಾಸಿ ಶಕುಂತಲೆ ಮೊದಲಾದ ಕೇಂದ್ರ ಪಾತ್ರಗಳ ಮಾನಸಿಕ ಸ್ಥಿತ್ಯಂತರಗಳನ್ನೆ ಮುಖ್ಯವಾಗಿ ಚಿತ್ರಿಸಲಾಗಿದೆ. ಹೀಗಾಗಿ ಇಂತಹ ಕಥೆಗಳು (ಸಂಖ್ಯೆಯಲ್ಲಿ ಇವು ಕಡಿಮೆ) ಕೇಂದ್ರಪಾತ್ರಗಳ ದೃಷ್ಟಿಕೋನವನ್ನು ಅಭಿವ್ಯಕ್ತಿಸುವುವೆಂದು ಹೇಳಬಹುದು. ಹೀಗೆ ಹೇಳಬಹುದಾದರೆ ಮಾಸ್ತಿಯವರು "ಕೇಂದ್ರಪಾತ್ರಕ್ಕೆ ಬದ್ಧವಾದ ದೃಷ್ಟಿಕೋನವನ್ನು ಹೊಂದದೆ ಸರ್ವಸಾಕ್ಷಿತ್ವದ ನಿರೂಪಣಾ ತಂತ್ರವನ್ನು ಬಳಸುತ್ತಾರೆ"ಎಂಬ, (ಈ ಲೇಖನದ ಪ್ರಾರಂಭದಲ್ಲಿ ಉದ್ಧರಿಸಿದ) ವಾಸುದೇವನ್ ಅವರ ಹೇಳಿಕೆ ಪೂರ್ಣ ಸತ್ಯವಲ್ಲ.

ಭೂತ ಮತ್ತು ವರ್ತಮಾನದ ಸನ್ನಿವೇಶಗಳ ಅಂತರವನ್ನು ಸೂಚಿಸುವಂತಹ ವಾಕ್ಯಗಳನ್ನು ಮಾಸ್ತಿಯವರ ಸಾಕಷ್ಟು (ಸ್ವದೇಶಕ್ಕೆ ಸಂಬಂಧಿಸಿದ) ಕತೆಗಳಲ್ಲಿ ಕಾಣಬಹುದು, ಇದಕ್ಕೆ ನಿದರ್ಶನವಾಗಿ ಅಂತಹ ಕೆಲವು ವಾಕ್ಯಗಳನ್ನು ಕೊಟ್ಟಿದೆ.

೧. "ಈ ರೀತಿಯಾದ ಅಮೂಲ್ಯವಾದ ಇಂಗ್ಲೀಷು ಭಾಷೆ ಆಗ ನಮ್ಮೂರಿನಲ್ಲಿ ಪ್ರಚುರವಾಗಿರಲಿಲ್ಲ." ('ರಂಗನ ಮದುವೆ')

೨. "ಈಗಿನವರೆಗೆ "ಅವಳು" ಎನ್ನುವವರು ಹೆಚ್ಚಾಗಿರಬಹುದು ; ಹಿಂದಿನ ಕಾಲದವರಿಗೆ "ಅವಳು' ಒಬ್ಬಳೇ." ('ನಮ್ಮ ಮೇಷ್ಟರು')

೩. "ಈಚೆಗೆ ಅದೆಲ್ಲಾ ಕಡಿಮೆಯಾಗಿದೆ, ... ಹಿಂದೆ ನಮಗೆ ಇಂಥ ಸಂಕೋಚ ಕಾರ್ಪಣ್ಯಗಳು ಇರಲಿಲ್ಲ." ('ಕಾಮನಹಬ್ಬದ ಒಂದು ಕತೆ')

೪. "ಇದು ಆ ಕಾಲದಲ್ಲಿ ರಾಣಿಯರಿಗೆ ಸಾಮಾನ್ಯವಾದ ಅನುಭವ". ('ಹೇಮಕೂಟದಿಂದ ಬಂದ ಮೇಲೆ')

೫. "ಈಗ ಆ ಹಬ್ಬ ನಡೆಯುತ್ತಿಲ್ಲ, ಊರು ಪಾಳೆಯಗಾರನನ್ನು ಮರೆತಿದೆ. ಆದರೆ ನಿಜಗಲ್ಲಿಗೆ ಹೋದವರಿಗೆ ಊರಜನ ಅಲ್ಲಿಯ ರಾಣಿಯ ಈ ಕತೆಯನ್ನು ಹೇಳುವರು." ('ನಿಜಗಲ್ಲಿನ ರಾಣಿ')

ಇಂತಹ ಉದಾಹರಣೆಗಳನ್ನು ಗಮನಿಸಿದರೆ ಕತೆಗಾರ ಕತೆಯ ನಿರೂಪಣೆಯ ಉದ್ದಕ್ಕೂ ಭೂತ – ವರ್ತಮಾನಗಳ ಅಂತರವನ್ನು ಸದಾ ನೆನಪಿನಲ್ಲಿರಿಸಿಕೊಂಡಿರು ತ್ತಾನೆಂದು – ಇದನ್ನು ಸಾಮಾನ್ಯಗೊಳಿಸಿ ಹೇಳಬಹುದಾದರೆ – ಕಾಲದ ಸಾಕಷ್ಟು ವಿಸ್ತಾರವಾದ ಹರಹಿನಲ್ಲಿ ಆದ ಬದಲಾವಣೆ ಕತೆಗಾರರ ಗಮನದಲ್ಲಿದೆ ಎಂದು ಹೇಳಬಹುದೆಂದು ತೋರುತ್ತದೆ.

ಈ ಮೇಲಿನ ಹೇಳಿಕೆಗೆ ಪೂರಕವೆಂಬಂತಿರುವ ಮತ್ತೂ ಒಂದರೆಡು ಅಂಶಗಳು ಮಾಸ್ತಿಯವರ ಕತೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕಾಲಸೂಚಕ ಪದಪುಂಜಗಳ ಬಳಕೆ, ಅದೂ ಪರಿಚ್ಛೇದಗಳ ಪ್ರಾರಂಭದಲ್ಲಿಯೇ ಹೆಚ್ಚಾಗಿ ಬಳಕೆಯಾಗುವುದು ಇವುಗಳಲ್ಲಿ ಒಂದು. ಅಂತಹ ಕೆಲವು ಉದಾಹರಣೆಗಳನ್ನಿಲ್ಲಿ ಗಮನಿಸಬಹುದು:

೧. "ಸ್ವಲ್ಪಕಾಲ ಕಳೆದಿದೆ: ಎಷ್ಟುವಾರ ಎಂದು ಈಗ ನಾನು ಗೊತ್ತಾಗಿ ಹೇಳಲಾರೆ" ('ಕಾಕಲೋಕ')

೨. "ಮತ್ತೆ ಕೆಲವು ಕಾಲ ಕಳೆದಿದೆ: ಇಷ್ಟೇ ಎಂದು ನಾನು ಹೇಳಲಾರೆ" (ಅದೇ.)

೩. "ಈಗ ಸುಮಾರು ಒಂದು ತಿಂಗಳ ಹಿಂದೆ ಮಂಗಮ್ಮ ಬೆಳಗಾಗ "ಮೊಸರು ತಕ್ಕೊಳ್ಳುತ್ತೀರಾ ಅಮ್ಮಯ್ಯ" ಅಂತ ಬಂದಾಗ ನಾನು ಎಲ್ಲೋ ಒಳಗಿದ್ದೆ." ('ಮೊಸರಿನ ಮಂಗಮ್ಮ')

೪. "ಈಗ ಹದಿನೈದು ದಿನದ ಹಿಂದೆ ಮಂಗಮ್ಮ ಮನೆಗೆ ಬಂದಾಗ ಬಹಳ ಬೇಸರಪಟ್ಟಿದ್ದಳು ಅಂತ ಕಂಡಿತು." (ಅದೇ)

೫. "ಮಾರನೆಯ ದಿನ ಮಂಗಮ್ಮ ಬಂದಾಗ ಹಿಂದಿನ ದಿನದಷ್ಟು ವ್ಯಸನವಿರಲಿಲ್ಲ." (ಅದೇ)

೬. "ಆಮೇಲೆ ಒಂದೆರಡು ದಿನ ಈ ಮಾತನ್ನು ಎತ್ತಲಿಲ್ಲ." (ಅದೇ)

೭. "ಮಾರನೆಯ ದಿನ ಮಂಗಮ್ಮ ನನಗೆ ಇದನ್ನು ಹೇಳಿದಳು" (ಅದೇ)

೮. "ಇದಾದ ಕೆಲವು ದಿನದ ಮೇಲೆ ಮಂಗಮ್ಮ ನನ್ನನ್ನು 'ಅವ್ವಾ ನೀವು ಸತ್ಯವಂತರು." (ಅದೇ)

ಮೇಲೆ ಎರಡೇ ಕತೆಗಳಿಂದ ಉದಾಹರಣವಾಕ್ಯಗಳನ್ನು ಆಯ್ದುಕೊಟ್ಟದ್ದರ ಕಾರಣ: ಕತೆಯ ಕಾಲದ ಗಡುವು ಹೇಗೆ ವಿಸ್ತಾರಗೊಳ್ಳುತ್ತ ಹೋಗುತ್ತದೆ ಎಂಬುದನ್ನು ತಿಳಿಯಬಹುದೆಂದು. ಇಲ್ಲಿ ಒಂದು ಸಂಗತಿಯನ್ನು ಗಮನಿಸುವುದು ಅವಶ್ಯ: ಕತೆಯ ಘಟನೆಗಳಿಗೆ ಹಿನ್ನೋಟವಾಗಿ ಭೂತಕಾಲದ ವಿವರಗಳನ್ನು ಕೊಡುವುದಕ್ಕಿಂತ ('ಕಲ್ಮಾಡಿಯ ಕೋಣ'ದಲ್ಲಿಯಂತೆ) ಕಾಲಾನುಕ್ರಮದಲ್ಲಿ ಕತೆಯ ಘಟನೆಗಳನ್ನು ಪ್ರಸ್ತಾಪಿಸುವ, ನೆನಪಸಿಕೊಳ್ಳುವ ಈ ಕತೆಗಳ ರೀತಿ ಭಿನ್ನವಾದುದು. ಮೊದಲ ರೀತಿಯಲ್ಲಿ ಭೂತಕಾಲದ ಘಟನೆಗಳು ವರ್ತಮಾನದ ಒಂದು ಭಾಗ ಎಂಬಂತೆ ಸೇರಿದ್ದರೆ ಎರಡನೆಯ ರೀತಿಯಲ್ಲಿ ಕತೆಗೆ ಹಿನ್ನೆಲೆಯಾದ ಕಾಲಾನುಕ್ರಮಣಿಕೆಯ ಪ್ರಜ್ಞಾಪೂರ್ವಕವಾದ ಪರಿಗಣನೆಯಿರುತ್ತದೆ.

ಐತಿಹಾಸಿಕ ವಸ್ತುವನ್ನುಳ್ಳ ಅನೇಕ ಕತೆಗಳಲ್ಲಿ ಕಾಲವನ್ನು ಕುರಿತಾದ ಬೇರೊಂದು ರೀತಿಯ ಪ್ರಸ್ತಾಪವಿದೆ. ಕತೆಯ ಪ್ರಾರಂಭದಲ್ಲಿ ಅದು ಇತಿಹಾಸಕ್ಕೆ ಸೇರಿದ್ದೆಂಬುದನ್ನು ಸ್ಪಷ್ಟವಾಗಿ ತೋರಿಸುವ ರೀತಿಯಲ್ಲಿ ನಿರ್ದಿಷ್ಟ ಕಾಲವನ್ನು ಹೇಳುವ ವಾಕ್ಯಗಳಿವೆ.

ಹಾಗೂ ಕತೆಯ ಕೊನೆಯಲ್ಲಿ ಮುಖ್ಯಕತೆಗೆ ಹೊಂದಿಕೊಂಡಂತೆ ದೀರ್ಘಾವಧಿಯಲ್ಲಿ ನಡೆದ ಮತ್ತಿನ ಕೆಲವು ಘಟನೆಗಳನ್ನು ಸಾರಾಂಶರೂಪವಾಗಿ (ಕೆಲವೊಮ್ಮೆ ಅವುಗಳನ್ನು ಕುರಿತ ವ್ಯಾಖ್ಯಾನದೊಡನೆ) ಹೇಳಲಾಗಿದೆ. ಕ್ರಮವಾಗಿ ಇವುಗಳಿಗೆ ನಿದರ್ಶನವಾಗಿ (ಅ) ಹಾಗೂ (ಬ) ವಿಭಾಗದ ವಾಕ್ಯಗಳನ್ನು ನೋಡಬಹುದು :

೧. ಅ) ಕ್ರಿಸ್ತಶಕ ೧೮೦೦ ಡಿಸೆಂಬರ್ ೧೨ನೇ ತಾರೀಖು, ಶ್ರೀರಂಗಪಟ್ಟಣದಿಂದ.... ('ಡೂಬಾಯಿ ಪಾದ್ರಿಯ ಒಂದು ಪತ್ರ')

೨. ಅ) ಕ್ರಿಸ್ತಪೂರ್ವ ಮುನ್ನೂರ ಇಪ್ಪತ್ತು ಮೇಲ್ಪಟ್ಟು ಹಿಂದೆ ಒಂದು ದಿನ. ಏಥೆನ್ಸ್ ನಗರದ ಪ್ರಮುಖ ತತ್ವಜ್ಞ ಅರಿಸ್ಟಾಟಲ್... ಓದುತ್ತಿದ್ದನು. ('ಅಲೆಕ್ಸಾಂಡರನ ಗುರುದಕ್ಷಿಣೆ')

೩. ಅ) ಕ್ರಿಸ್ತಶಕ ಮುನ್ನೂರ ತೊಂಭತ್ತನೆಯ ವರ್ಷದ ಒಂದು ದಿನ. ಮಿಲಾನ್ ನಗರದ ದೇವಮಂದಿರದಲ್ಲಿ ಜನ ಸಾವಿರಸಾವಿರವಾಗಿ ಸೇರಿದ್ದಾರೆ. ('ಅಂಬ್ರೋಸ್ ಅಪ್ಪಾಜಿ')

೪. ಅ) ಹೂಣರ ರಾಜ ಆ್ಯಟಿಲಾ ದೇಶ ದೇಶದ ಮೇಲೆ ದಾಳಿ ಮಾಡಿ ಜನಾಂಗಗಳನ್ನು ತಲ್ಲಣಗೊಳಿಸುತ್ತಿದ್ದ ಕಾಲ. ('ಆ್ಯಟಿಲಾನ ದಾಕ್ಷಿಣ್ಯ')

೫. ಅ) ಶಕವರ್ಷ ೯೪೪ : ದುಂದುಭಿ ಸಂವತ್ಸರ. ಹೊಯ್ಸಳರ ಮೊದಲಿಗ ಕಾಮರಸ ಮೊಲನೂರಿನಲ್ಲಿ ಆಳುತ್ತಿದ್ದಾನೆ. ('ಹೊಯಿಸಳನ ದಳಪತಿ')

೧. ಬ) ಅಶೋಕ ಮಹಾರಾಜರು ತಾನು ಬುದ್ಧ ಮೂರ್ತಿಗೆ ಕೊಟ್ಟಮಾತನ್ನು ಹೇಗೆ ನಡೆಸಿದನೆನ್ನುವುದು ಇತಿಹಾಸ ಪ್ರಸಿದ್ಧವಾಗಿದೆ. ಅವನು ಮತ್ತೆ ಯುದ್ಧ ಮಾಡಲಿಲ್ಲ. ತನ್ನ ಆಳ್ವಿಕೆಯ ಉಳಿದೆಲ್ಲ ಕಾಲವನ್ನೂ ಧರ್ಮದ ಪ್ರಚಾರಕ್ಕೆ ಮೀಸಲು ಮಾಡಿ.... ('ಪ್ರಿಯದರ್ಶಿ ಅಶೋಕ')

೨. ಬ) ಇತಿಹಾಸದ ಸಂಗತಿಯಾಗಿ ಇನ್ನೊಂದು ಮಾತನ್ನು ಹೇಳುವುದು ಉಚಿತವಾಗಬಹುದು. ಈ ಮದುವೆಯಾದ ಮಾರನೆಯ ವರ್ಷ ಮೇರಿ ತೀರಿಕೊಂಡಳು. ನೆಪೋಲಿಯನ್ ಆಮೇಲೆ ನಾಲ್ಕು ವರ್ಷ ಜೀವಿಸಿದ್ದನು. ('ನೆಪೋಲಿಯನ್ನನ ಸೋಲು')

೩. ಬ) ಹಿರಿಯರು ಹೇಳಿದರು. ಕಿರಿಯರು ಬೇಡಿದರು... ಹೇಗೆಂದು ಅರಿಯದೆ ವಾಸಂತಿ ತನ್ನ ಜೀವವನ್ನು ಧರಿಸಿನಿಂತಳು... ಮಗ ಜೋಗನ ಹೆಸರನ್ನು ಹೇಳುವ ವೀರಗಲ್ಲು ದೊರೆತಿಲ್ಲ. ಅವನು ಬಹುಕಾಲ ಬಾಳಿದನೆಂದು ನಂಬಿದರೆ ತಪ್ಪಿಲ್ಲ. ('ಹೊಯಿಸಳನ ದಳಪತಿ')

೪. ಬ) ನಾನು ನೋಡುವ ದಿನಕ್ಕೆ ಹುಂಡಿ ಬಹಳ ಖಿಲವಾಗುತ್ತ ಬಂದಿದ್ದಿತು. ಆ ಮನುಷ್ಯನಿಗೆ ಆಗ ಮಧ್ಯವಯಸ್ಸು ಮೀರಿದ್ದಿತು. ಈ ಕಥೆಯಲ್ಲಿ ಬಹುಜನಕ್ಕೆ ನಂಬಿಕೆಯಿಲ್ಲ... ('ಬಿಳಿಗಿರಿ ರಂಗ')

೫ ಬ) ಸಾವಿಯಬ್ಬೆಗೆ ಸ್ವರ್ಗದಲ್ಲಿ ಇನಿಯನ ಒಲವಿನಂತೆ ತಂದೆಯ ವಾತ್ಸಲ್ಯವೂ ಒದಗಿತು. ಭೂಮಿಯಲ್ಲಿ ಒಂದು ವೀರಗಲ್ಲು ಅವಳ ಕೀರ್ತಿಯನ್ನು ಸಾರಿತು; ('ಸಾವಿಯಬ್ಬೆ')

ಮೇಲೆ ೧ ಅ) – ೫ ಅ)ದ ವಾಕ್ಯಗಳು ಕತೆಗಳನ್ನು ನಿರ್ದಿಷ್ಟ ಕಾಲ, ದೇಶದಲ್ಲಿ ಆಗಿಹೋದ ಘಟನೆಗಳೆಂಬಂತೆ – ಇತಿಹಾಸದ ಭಾಗಗಳೆಂಬಂತೆ ಪ್ರಸ್ತುತಗೊಳಿಸುತ್ತವೆ. ಸಾಮಾನ್ಯವಾಗಿ ಇತರತ್ರ ಐತಿಹಾಸಿಕ ವಸ್ತುಗಳನ್ನು ಹೊಂದಿರುವ ಸಾಹಿತ್ಯಕೃತಿಗಳ (ಕಾಲವನ್ನು ಪರೋಕ್ಷವಾಗಿ ಮಾತ್ರ ಸೂಚಿಸುವ) ರೀತಿಗಿಂತ ಇದು ಭಿನ್ನವಾದುದು. ೧ಬ) – ೫ ಬ) ವರೆಗಿನ ಉದಾಹರಣೆಗಳು ಮುಖ್ಯಕಥೆಗೆ ಸಂಬಂಧಿಸಿದ ಮತ್ತೆ ಕೆಲವು ಘಟನೆಗಳನ್ನು ಕತೆಯನ್ನು ಕುರಿತು ನಿರ್ದಿಷ್ಟ ನಿಲುವುಗಳನ್ನು ಹೊಂದಲು ಅನುಕೂಲವಾಗುವ ರೀತಿಯಲ್ಲಿ ಸಾರಾಂಶ ರೂಪದಲ್ಲಿ ಪ್ರಸ್ತುತಪಡಿಸುತ್ತವೆ. ಇಲ್ಲಿ 'ಮುಖ್ಯ–ಕಥೆ' ಎಂಬ ಪದವನ್ನು ಬಳಸಲು ಕಾರಣ ಕತೆಗಾರರು ಇತಿಹಾಸದಲ್ಲಿ ಯಾವುದೋ ಒಂದು ನಿರ್ದಿಷ್ಟ ಕಾಲಾವಧಿಯ ಘಟನೆಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಮುಂದಿನದನ್ನು ಸಡಿಲವಾಗಿ – ಸಾರಾಂಶರೂಪವಾಗಿ ಹೇಳಿದಂತೆ ಕತೆಯ ರಚನೆಯಿದೆ.

ಕೊನೆಯದಾಗಿ ಮಾಸ್ತಿಯವರ ಕತೆಗಳಲ್ಲಿ ಸಾಮಾನ್ಯವಾಗಿ ಕಾಣಿಸುವ ಇನ್ನೊಂದು ಬಗೆಯ ವಾಕ್ಯಗಳನ್ನು ಗಮನಿಸಬಹುದು. ಇವು ಕತೆಯಲ್ಲಿಯ ಸಂದರ್ಭ ಪಾತ್ರಗಳನ್ನು ಕುರಿತು ಅಥವಾ ಇಡೀ ಕತೆಯನ್ನು ಕುರಿತು ಮಾಡುವ ವ್ಯಾಖ್ಯಾನಗಳು; ಹಲವೊಮ್ಮೆ ಗುಣ, ಸ್ವಭಾವಗಳನ್ನು ಸಾಮಾನ್ಯೀಕರಣಗೊಳಿಸುವಂತಹ ಹೇಳಿಕೆಗಳು. ನಿದರ್ಶನವಾಗಿ ಕೆಲವನ್ನಿಲ್ಲಿ ನೋಡಬಹುದು:

೧. ವಿವಾಹದ ಕಾಲದಲ್ಲಿ ಗೃಹವೆಲ್ಲ ಪತಿಯ ಆಲೋಚನೆಯಿಂದ ತುಂಬಿತ್ತು... **ಮದುವೆಯಾದವರೆಲ್ಲರಿಗೂ ಇದು ಅನುಭವದಲ್ಲಿರಬೇಕು.** ಸ್ವಲ್ಪ ಕಸ್ತೂರಿಯನ್ನು ಒಂದು **ಕೋಣೆಯಲ್ಲಿಡಿ**; ಮನೆಯಲ್ಲೆಲ್ಲ ಗಮಗಮ ಎಂದಿರುತ್ತದೆ; ವಾಸನೆ ಬಲ್ಲವರಿಗೆ. ಪತಿಯ ಭಾವವು ಪತ್ನಿಗೆ ಹಾಗೆಯೇ. ('ರಂಗಪ್ಪನ ದೀಪಾವಳಿ')

೨. ರಂಗಪ್ಪನ ಸುಖಕ್ಕಂತೂ ಪಾರವೇ ಇಲ್ಲ. ಯಾಕೆ?... **ಒಬ್ಬೊಬ್ಬನೂ ತನ್ನ ಹೆಂಡತಿ ತನ್ನ ಸಂಗಡ ಮೊದಲು ಮಾತನಾಡಿದಾಗ ಏನೋ ಮಹಾಕೋಟೆ ಕೊತ್ತಲವನ್ನು ಗೆದ್ದವನಿಗಿಂತ ಹೆಚ್ಚು ಸುಖಿಯಾಗುತ್ತಾನೆ.** (ಅದೇ.)

೩. ಸರಸ್ವತಿಯದು ಬಹಳ ಜಂಭ. **ಹುಡುಗಿಯರೇ ಹಾಗೆ ಎಂದು ತೋರುತ್ತದೆ.** ('ನಮ್ಮ ಮೇಸ್ಟರು')

೪. ರಾಮರಸನಾಯಕನು ದೇವರ ಮುಂದೆ ನಮ್ರವಾಗಿ ನಿಂತು ಕಿಂಕರನಂತೆ ನಡೆದುಕೊಂಡನು. **ಹಿರಿಯರೂ ಪುಣ್ಯವಂತರೂ ಭಕ್ತರಂತೆ ನಡೆದರೆ ಜನರು ಅವರಿಗೆ ಅತಿಶಯವಾದ ಪ್ರೀತಿ ಗೌರವಗಳನ್ನು ತೋರಿಸುವರು.** (ನಿಜಗಲ್ಲಿನ ರಾಣಿ')

೫. ಊರಿನಲ್ಲಿ ಉತ್ಸವಗಳು ಹೆಚ್ಚುದುವೆಂದರೆ ಬರಿಯ ಒಳ್ಳೆಯದು ಮಾತ್ರ ಹೆಚ್ಚಾಗುವುದಿಲ್ಲ. (ಅದೆ)

೬. ಆದರೆ ತಾನು ಯಜಮಾನಿ ಅಂತ ತನಗೆ ಎಲ್ಲರೂ ಗೌರವ ತೋರಿಸಬೇಕು. ಮನುಷ್ಯನಾದವನಿಗೆ ಈ ಚಪಲ ತಪ್ಪಿದ್ದಲ್ಲ. ('ಮೊಸರಿನ ಮಂಗಮ್ಮ')

ಇಂತಹ ವ್ಯಾಖ್ಯಾನರೂಪದ, ಸಾಮಾನ್ಯೀಕರಣಗೊಳಿಸುವಂತಹ (generalizing) ವಾಕ್ಯಗಳು ಕತೆಗಳಲ್ಲಿ ಮಧ್ಯೆ ಮಧ್ಯೆ ಕಾಣಿಸಿಕೊಳ್ಳುತ್ತವೆ. ಕತೆಗಾರ/ನಿರೂಪಕ ಕತೆಯ ಘಟನಾವಳಿಗಳನ್ನು ಇಡಿಯ ಒಂದು ಆಕೃತಿಯಾಗಿ ಪರಿಗಣಿಸಿ ಅದರಲ್ಲಿ ತಲ್ಲೀನನಾಗಿ ಹೇಳದೆ ತಾನು ದೂರವಾಗಿ ಎಚ್ಚರವಾಗಿಯೇ ಉಳಿಯುತ್ತಾನೆ. ಹಾಗೂ ತನ್ನ ಹಾಗೂ ಓದುಗ (ಕೇಳುಗ)ರ ಸಂಬಂಧವನ್ನೂ (ಇದು ಬಹುಮಟ್ಟಿಗೆ ಹಿತವಚನದ ಧಾಟಿಯದು) ಮನಸ್ಸಿನಲ್ಲಿರಿಸಿಕೊಂಡಿರುತ್ತಾನೆಂಬುದು ಇಂತಹ ವಾಕ್ಯಗಳಿಂದ ಸ್ಪಷ್ಟ. ಮಾಸ್ತಿಯವರು ಮೊದಮೊದಲ ಕೆಲವು ಕತೆಗಳಲ್ಲಂತೂ 'ನೀವು' ಎಂಬ ಪದದೊಂದಿಗೆ ಓದುಗರೊಡನೆ ಆತ್ಮೀಯತೆಯನ್ನು ಕುದುರಿಸುವಂತಹ ಕೆಲವು ವಾಕ್ಯಗಳನ್ನು ಬಳಸುತ್ತಾರೆ (ಗಮನಿಸಿ : "ನೀವು ನಿಮ್ಮ ಪತ್ನೀರತ್ನಗಳನ್ನು... ಮುತ್ತಿಡುವಾಗ ಹತ್ತಿರ ಯಾರಾದರೂ ಮಕ್ಕಳಿದ್ದರೆ 'ಇವರಿದ್ದರೇನು' ಎಂತ ಮಾತ್ರ ಅಲಕ್ಷ್ಯ ಮಾಡಬೇಡಿ... ಬಹಳ ನಗೆಗೇಡಿಗೆ ಗುರಿಯಾಗುವಿರಿ ಜೋಕೆ! ಹೇಳಿದ್ದೇನೆ"... 'ರಂಗಪ್ಪನ ದೀಪಾವಳಿ'). ಕತೆಗಾರ–ಓದುಗ ಸಂಬಂಧ ಕತೆಯ ಸಂವಹನದ ಒಂದು ಮುಖ್ಯವಾದ ಅಂಶವೇ ಆಗಿದೆ. ಈ ವಿಷಯದಲ್ಲಿ ಈ ಕತೆಗಳು ಹರಟೆ – ಪ್ರಬಂಧಗಳ ರಚನೆಯೊಂದಿಗೆ ಹೋಲಿಕೆ ಪಡೆದಿವೆ. ಪ್ರಾರಂಭದ ಕೆಲವೇ ಕತೆಗಳಲ್ಲಿ ಕಾಣಿಸಿಕೊಳ್ಳುವ ಈ ಲಕ್ಷಣ ಮುಂದೆ ಉಳಿದಿಲ್ಲವೆಂಬುದು ಬೇರೆ ಮಾತು.

೪

ಈವರೆಗೆ ಮಾಸ್ತಿಯವರ ಸಣ್ಣಕತೆಗಳಲ್ಲಿ ಕಾಣಿಸುವ – ವಾಕ್ಯಗಳು, ವಾಕ್ಯ ಭಾಗಗಳು ಹಾಗೂ ಪದಗಳ ಸ್ತರದಲ್ಲಿ ವ್ಯಕ್ತವಾಗುವ – ಕೆಲವು ವಿಶಿಷ್ಟ ಲಕ್ಷಣಗಳನ್ನು ಗುರುತಿಸಿ ಅವಕ್ಕೆ ವಿವರಣೆ ನೀಡಲು ಪ್ರಯತ್ನಿಸಲಾಗಿದೆ. (ಕಟ್ಟುನಿಟ್ಟಾದ ಅರ್ಥದಲ್ಲಿ, ಮೇಲೆ ಗುರುತಿಸಿದ ಲಕ್ಷಣಗಳಲ್ಲಿ ಹೆಚ್ಚಿನವನ್ನು ಭಾಷೆಗೆ ಸಂಬಂಧಿಸಿದ ಲಕ್ಷಣಗಳೆಂದು ಕರೆಯುವುದಕ್ಕಿಂತ ಕತೆಯ ರಚನೆಯ ಲಕ್ಷಣಗಳೆಂದು ಗುರುತಿಸುವುದು ಸೂಕ್ತ. ಆದರೆ ವಿಷಯಾಧಾರಿತವಾಗಿ ವಾಕ್ಯ, ವಾಕ್ಯಭಾಗಗಳನ್ನಾಯ್ದು, ಅವನ್ನೇ ಸಡಿಲವಾದ ಅರ್ಥದಲ್ಲಿ ಭಾಷಿಕ ವಿಶ್ಲೇಷಣೆ ಎಂದು ಇಲ್ಲಿ ಕರೆದಿದ್ದೇನೆ.) ಈಗ ಮೇಲಿನ ವಿವರಣೆಗಳನ್ನೆ ಒಟ್ಟಾಗಿ ನೋಡಿ ಮಾಸ್ತಿಯವರ ಕತೆಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಬಹುದು.

ಮಾಸ್ತಿಯವರ ಕತೆಗಳು ಕಾಲ, ದೇಶ, ಓದುಗರ ನೇರ ಸಂಬಂಧಗಳನ್ನು ಕಳಚಿಕೊಂಡು ತನಗೆ ತಾನೇ ಒಂದು ಆಕೃತಿಯಾಗಿ ನಿಲ್ಲುವ ಇತರ ಆಧುನಿಕ ಕತೆಗಳಿಗಿಂತ ಭಿನ್ನವಾದವು. ಇಲ್ಲಿ ವಸ್ತು ಮತ್ತು ಆಕೃತಿಗಳ ನಡುವಿನ ಗೆರೆ (ಹೆಚ್ಚಿನ ಕತೆಗಳ ವಿಷಯದಲ್ಲಿ) ಸ್ಪಷ್ಟವಿಲ್ಲ. ಐತಿಹಾಸಿಕ ವಸ್ತುವನ್ನುಳ್ಳ ಕತೆಗಳಲ್ಲಿ ಇದು ಖಚಿತವಾದ

ಕಾಲವನ್ನು ಹೇಳುವ ವಾಕ್ಯಗಳು, ವಿಸ್ತೃತವಾದ ಕಾಲದ ಹಿನ್ನೆಲೆಯಲ್ಲಿ ಘಟನೆಗಳನ್ನಾಯ್ದುಕೊಳ್ಳುವ ರೀತಿ, ಕತೆಗಾರನ ನಿಲುವಿನ ಅನುಗುಣವಾಗಿ ಕತೆಯ ಆಕೃತಿಗೆ ಸಂಬಂಧವಿಲ್ಲದ ಘಟನೆಗಳನ್ನು ಸಂಗ್ರಹವಾಗಿ ಸೇರಿಸುವ ರೀತಿ ಇವುಗಳ ಮೂಲಕ ವ್ಯಕ್ತವಾಗುತ್ತದೆ. ಸಾಮಾಜಿಕ ವಸ್ತುವನ್ನುಳ್ಳ ಕತೆಗಳಲ್ಲಿ ಇದು ವಿಷಯಾಂತರ, ಮಧ್ಯೆ ಮಧ್ಯೆ ನಿರೂಪಕನ ಪ್ರವೇಶ, ಪಾತ್ರ, ಘಟನೆಗಳನ್ನು ಕುರಿತ ವಿವರಣೆ – ವ್ಯಾಖ್ಯಾನ – ಇವುಗಳ ಮೂಲಕ ವ್ಯಕ್ತವಾಗುತ್ತದೆ. ಕತೆಗಾರ ಕತೆಯಲ್ಲಿ, ನೇರವಾದ ನಿರೂಪಕನಾಗಿ ಪ್ರವೇಶಿಸಿದಾಗಲೂ ಅದರಲ್ಲಿ ಒಂದು ಸಕ್ರಿಯ ಪಾತ್ರವಾಗದೇ, ಅಥವಾ ಪರೋಕ್ಷ ನಿರೂಪಕನಾದಾಗಲೂ ಅದರಲ್ಲಿ ತಲ್ಲೀನವಾಗದೇ ಉದ್ದಕ್ಕೂ ನಿರೀಕ್ಷಕನಾಗಿ, ವ್ಯಾಖ್ಯಾನಕಾರನಾಗಿಯೇ ಉಳಿಯುತ್ತಾನೆಂದು ಹಿಂದೆಯೇ ಹೇಳಲಾಗಿದೆ. ಇದು ಕತೆಗಾರ, ಉದ್ದೇಶಪೂರ್ವಕವಾಗಿ ಉಳಿಸಿಕೊಂಡ ನಿಲುವಿರಬಹುದು. ಭಾವಾತ್ಮಕ ಪ್ರತಿಕ್ರಿಯೆಯನ್ನಪೇಕ್ಷಿಸುವುದಕ್ಕಿಂತ ನೈತಿಕ ಉದ್ದೇಶಗಳಿಗಾಗಿ ಬಳಸುವುದೇ ಉತ್ತಮ ಎಂಬ ಕತೆಗಾರನ ನಿಲುವು ಇಂತಹ ಕತೆಗಳಿಗೆ ಜನ್ಮ ನೀಡಿರಬೇಕು. ಗಮನಿಸಬೇಕಾದ ಮೂರನೆಯ ಮತ್ತೊಂದು ಅಂಶ : ಪಾತ್ರ, ಘಟನೆಗಳು ಅಥವಾ ಮನುಷ್ಯನ ಜೀವನ ಕ್ರಮ–ಪರಿಣಾಮಗಳು ಕಾಲದ ಹಿನ್ನೆಲೆಯಲ್ಲಿ ಪರೀಕ್ಷೆಗೆ ಒಳಗಾಗುತ್ತಿರುತ್ತವೆ ಎಂಬ ನಂಬಿಕೆ ಮಾಸ್ತಿಯವರ ಕತೆಗಳನ್ನು ರೂಪಿಸಿದೆ.

■

ಕನ್ನಡದಲ್ಲಿ ವಚನ ವ್ಯವಸ್ಥೆ – ಒಂದು ಐತಿಹಾಸಿಕ ಅವಲೋಕನ

◆

ಡಾ. ಎಂ.ಜಿ. ವಾರಿ

ಲೇಖನದ ಹರವು

(ಅಡಕವಾಗಿ ಅಂಕಿ–ಸಂಕಿಗಳ ನಮೂದನೆಯೊಂದಿಗೆ)–ಒಂದು ಹಂದರವುಳ್ಳ ನಕಾಶೆ

೧.೧ ಒರ್ವಚನ

೨.೧ ಇರ್ವಚನ

೩.೧ ಹಲವಚನ

- ೩.೧ ಹಲವಚನ
  - ಅಬುದ್ಧಿಕ ವರ್ಗ – ೩.೨
  - ಬುದ್ಧಿವಂತ ವರ್ಗ – ೩.೩
  - ಭಾವ ಸೂಚಕ – ೩.೪
- ೩.೨ ನಪ್ ವರ್ಗ
  - ವು, ಅವು, ಉವು – ೧
  - ಗಳ್ – ೨
- ೩.೩ ಮನುಜ ವರ್ಗ
  - ಗಳ್, ೧
  - ಕಳ್, ೨
  - ಆರ್, ೩
  - ಅಂದಿರ್, ಇರ್, ಏರ್ ೪
- ೩.೪ ಹೀಗಳೆವ ಸೂಚಕ
  - ಗೌರವ ಸೂಚಕ – ೩.೪.೧
  - ಹೀಗಳೆವ ಧಾಟಿ – ೩.೪.೨

೩.೪.೨ ಹೀಗಳೆವ ಧಾಟಿ: ಒಳಬೇಗುದಿ, ತಳಮಳ, ಸಿಟ್ಟು, ಇರುವ ತಿರುಳನ್ನೆ (ಮಯ್+ಮೇಲೆಲ್ಲಾ<ಮಯ್ಮೇಲೆಲ್ಲಾ (ಬಳಿದುಕೊಂಡ<) ಬಳಕೊಂಡ ಕೊಂಕುನುಡಿಯ (*ಅರ್+ಎ ಪ್ರತ್ಯಯದೊಂದಿಗೆ) ರೂಪಗಳು.

ತನ್ನತನವುಳ್ಳ ವಿಶಿಷ್ಟ ರಚನೆಗಳು :

೪.೦ ವಿಶಿಷ್ಟ ಶೀರ್ಷಿಕೆಯಾಗಿ —
- ಅಬುದ್ಧಿಕ ವರ್ಗದ ಹಲವಚನ
- 'ಗಳ್' ಹಲವಚನ ಸ್ಥಾನ

ಒರ್ವಚನ

ಇತರ ದ್ರಾವಿಡ ಭಾಷೆಗಳಂತೆ ನಾಮಪದಗಳು ಇರುವ ಸ್ಥಿತಿಯಲ್ಲೇ ಒರ್ವಚನವನ್ನು ಸೂಚಿಸುತ್ತವೆ. ಹಾಗೆಂದರೆ ಒರ್ವಚನವನ್ನು ಸೂಚಿಸುವ ಪ್ರತ್ಯೇಕ ಪ್ರತ್ಯಯ ಇಲ್ಲವೆಂದೆ ಅರ್ಥ. ಹಾಗಾದರೆ ಸರ್ವನಾಮದ ಸವಕಲು ರೂಪಗಳಾದ ಅನ್, ಅಳ್, ಅದು–ಇವು ಒರ್ವಚನವನ್ನು ಅರುಹುತ್ತವೆ ಎಂದರೂ ಮೂಲತಹ ಇವು ಲಿಂಗಸೂಚಕ ಪ್ರತ್ಯಯ[೧]ಗಳೆಂದು ಪರಿಗಣಿಸಬೇಕಾಗುತ್ತದೆ. ಹೀಗೆ ಲಿಂಗಭೇದವಿರದ ಎಲ್ಲ ಬಗೆಯ ನಾಮಗಳಿಗೂ ಹತ್ತುವ ಸಾರ್ವತ್ರಿಕವಾದ ಒಂದು ಒರ್ವಚನ ಸೂಚಕ ಪ್ರತ್ಯಯವೆಂಬುದು ಇಲ್ಲ. ಒಟ್ಟಾರೆ ನಾಮಪದಗಳು ಇರುವಂತೆಯೆ ಒರ್ವಚನವನ್ನು ಪ್ರತಿನಿಧಿಸುತ್ತದೆ ಎಂದು ಹಾಗಾಯಿತು.

ಇರ್ವಚನ [ದ್ವಿವಚನ][೨]

"ವಚನಮ್ । ಏಕ ಬಹು ಕ್ರಮದಿಂದೆ + ಎರಟಿಜ಼್ + ತರ + ಅಕ್ಕು"[೩] ಹೀಗೆ ಶ್ರೀವಿಜಯನು ಕವಿರಾಜಮಾರ್ಗದಲ್ಲಿ ಒರ್ವಚನ ಮತ್ತು ಹಲವಚನವೆಂಬ ಎರಡೆ ಬಗೆಯ ವಚನಗಳಿವೆ ಎಂದು ಸ್ಪಷ್ಟಪಡಿಸಿದ್ದಾನೆ. ಇಷ್ಟಾದರೂ ಮುಂದಿನ ವೈಯಾಕರಣರಾದ ನಾಗವರ್ಮ (ಶಬ್ದಸ್ಮೃತಿ, ೩–೧೭, ಹಾಗು ಭಾಷಾಭೂಷಣ ಸೂ–೪೦), ಮತ್ತು ಆತನ ಮಾತನ್ನೆ ಅನುಸರಿಸಿ ಕೇಶಿರಾಜನೂ (ಸೂ–೧೦೪) ಇರ್ವಚನವನ್ನು ಅಂಗೀಕರಿಸಿದ್ದಾರೆ. ಆದರೆ "ನಾಗವರ್ಮ ಮತ್ತು ಕೇಶಿರಾಜರು ಮಾತ್ರ ದ್ವಿಚನವನ್ನು ಪ್ರಯತ್ನಪೂರ್ವಕ ತಂದಿರುವುದನ್ನು ಭಟ್ಟಾಕಳಂಕ ಒಪ್ಪಿಕೊಳ್ಳಲಿಲ್ಲ ಎಂಬುದು ಮೆಚ್ಚತಕ್ಕದ್ದಾಗಿದೆ."[೪]

ಸಂಸ್ಕೃತದಲ್ಲಿ ಇರ್ವಚನ ಮತ್ತು ಹಲವಚನಕ್ಕೆ ಅನ್ವಯಿಸುವ ಹಾಗೆ ಪ್ರತ್ಯೇಕ ಪ್ರತ್ಯಯ ರೂಪಗಳೇ ಇವೆ. ಇವುಗಳಲ್ಲಿ ಒಂದು ಇನ್ನೊಂದರಲ್ಲಿ ಬರಲಾರವು ಎಂಬುದು ಗಮನೀಯ ಅಂಶ. ಕನ್ನಡದಲ್ಲೂ ಸಂಸ್ಕೃತದ ಹಾಗೆ ಇರ್ವಚನ ಇದೆ ಎನ್ನುತ್ತ ಈ ಅರ್ಥದಲ್ಲಿ 'ಗಳ್' ಮತ್ತು 'ಅರ್' ಪ್ರತ್ಯಯಗಳು (ಸೂ. ೧೦೪) ಬಳಕೆ ಆಗುತ್ತವೆ ಎಂಬುದು ಕೇಶಿರಾಜನ ಅಂಬೋಣ. ಈ ಪ್ರತ್ಯಯಗಳೆ ಹಲವಚನದಲ್ಲೂ ಬಳಕೆ ಆಗುವುದರಿಂದ ಈ ಇರ್ವಚನದ ಇರವಿನ ಕುರಿತೆ ಪ್ರಶ್ನಾತ್ಮಕ ಕುತೂಹಲ ಉಂಟಾಗುತ್ತದೆ. ಇದರಿಂದ ಒಟ್ಟಾರೆ "...ಇಲ್ಲಿ ಸಂಸ್ಕೃತದ ದ್ವಿವಚನ ಬಹುವಚನಗಳಲ್ಲಿರುವ ಅಂತರ ಹಾಗು ಕನ್ನಡದಲ್ಲಿ ಆ ಅಂತರ ಇಲ್ಲದಿರುವಿಕೆ–ಇವೆರಡೂ ಸ್ಪಷ್ಟವಾಗುತ್ತದೆ"[೫]

ಒಂದು ಕ್ಷಣ ಕೇಶಿರಾಜನಿಗೆ ಮಾತ್ರ ಇರ್ವಚನದ ಇರವಿನ ಕುರಿತು ಸ್ವಲ್ಪ ಸಂದೇಹ ಹುಟ್ಟಿಕೊಂಡದ್ದಂತೂ ನಿಜ. ಆದರೂ ಸಂಸ್ಕೃತದ ಸೆಳವಿಗೆ ಸಿಲುಕಿ ಅಂತಿಮವಾಗಿ "ದ್ವಿವಚನಮ್ + ಉಚಿತದೆ ಬರ್ಕುಮ್"[೬] ಎಂದು ತೇಪೆಯನ್ನು ಎಳೆಯಲು ಯತ್ನಿಸುತ್ತಾನೆ.

ಒಟ್ಟಾರೆ ನಾಗವರ್ಮ ಮತ್ತು ಕೇಶಿರಾಜ ಇವರು ಇಲ್ಲದ ಇರ್ವಚನ ಇದೆಯೆಂದು ಹೇಳಿ ತಂದು ತುರುಕುವ ಪ್ರಯತ್ನವ್ನು ಮಾಡಿದ್ದಾರೆಂದು ಇದೀಗ ಸ್ಪಷ್ಟವಾಗಿ ಗೋಚರವಾಗುತ್ತದೆ.

ಹಲವಚನ[೭] [ಬಹುವಚನ]

ಒಂದನ್ನು ಸೂಚಿಸುವುದು ಒರ್ವಚನವಾದರೆ ಒಂದಕ್ಕಿಂತ ಹೆಚ್ಚಿದ್ದರೆ ಹಲವಚನವೆನಿಸುತ್ತದೆ. ಬಳಕೆಯ ಸ್ವರೂಪವನ್ನಾಧರಿಸಿ ಹಲವಚನವನ್ನು ಮೂರು ಪ್ರಕಾರವಾಗಿ ವಿಂಗಡಿಸಬಹುದು.

೧. ಅಬುದ್ಧಿಕ ವರ್ಗ ಅಥವಾ ನಪ್‌ಲಿಂಗದ ನಾಮಗಳಿಗೆ ಸೇರುವ ಪ್ರತ್ಯಯಗಳು

-ಅವು, ವು, ಗಳ್

೨. ಬುದ್ಧಿವಂತ ವರ್ಗದ (ಸ್ತ್ರೀ + ಪುನ್) ನಾಮಗಳಿಗೆ ಸೇರುವ ಪ್ರತ್ಯಯಗಳು

-ಗಳ್, ಕಳ್, ಅರ್, ಇರ್, ದಿರ್, ವಿರ್.

೩. ವಿಶಿಷ್ಟ ಸಂದರ್ಭಗಳಲ್ಲಿ ಅಂದರೆ ಭಾವಪೂರ್ಣ ಪ್ರಸಂಗಗಳಲ್ಲಿ (ಅದು ಪ್ರೀತ್ಯಾದರವೇ ಆಗಲಿ ಅಥವಾ ವ್ಯಂಗ್ಯಾರ್ಥದೊಂದಿಗೆ ಬೇಸರ ತಿರಸ್ಕಾರ ಹೊಮ್ಮಿಸುವಾಗಲೆ ಆಗಲಿ) ಮೇಲೆ ಸೂಚಿಸಲಾದ 'ಅರ್' ಮತ್ತು 'ಗಳ್' ಪ್ರತ್ಯಯಗಳು.

ಈ ಹಲವಚನ ಮತ್ತು ವಿಭಕ್ತಿ ಪ್ರತ್ಯಯಗಳು ಪದರೂಪ ಪ್ರತ್ಯಯಗಳೆಂದು[೮] ಕರೆಯಲಾಗುತ್ತದೆ. ಇಲ್ಲಿ ಹಲವಚನ ಪ್ರತ್ಯಯದ ಬಳಿಕ ವಿಭಕ್ತಿ ಪ್ರತ್ಯಯ ಬರುತ್ತದೆ ಎನ್ನುವುದನ್ನು ಗಮನಿಸಬೇಕು.

ಪದರೂಪ -> ನಾಮಪದ + ಹಲವಚನ ಪ್ರತ್ಯಯ + ವಿಭಕ್ತಿ ಪ್ರತ್ಯಯ

'ಗಳ್' ಪ್ರತ್ಯಯ್

೧. ನಪ್ ಲಿಂಗದ (ಅಬುದ್ಧಿಕ ವರ್ಗದ) ನಾಮಪದಗಳಿಗೆ-

ಉದಾ : ಕಣ್ಗಳ್, ಕೊಳಗಳ್, ತೋಳ್ಗಳ್, ತುಱುಗಳ್

೨. ವಿಕಲ್ಪವಾಗಿ ಬುದ್ಧಿವಂತ ವರ್ಗದ (ಪುನ್ + ಸ್ತ್ರೀ) ನಾಮಪದಗಳಿಗೆ

ಉದಾ : ಅಣ್ಣಂಗಳ್, ಅಕ್ಕಂಗಳ್, ತಂದೆಗಳ್, ತಾಯ್ಗಳ್, ಭಾವಂಗಳ್. ಇಲ್ಲಿ ಅಕಾರಾಂತ ನಾಮಗಳಿಗೆ ಬಿಂದು ಬರಲು ಕಾರಣ ಇಲ್ಲಿರುವ ಪುನ್, ಸ್ತ್ರೀಗಳಲ್ಲಿ ಬರುವ 'ಅನ್' ಪ್ರತ್ಯಯವೇ ಆಗಿದೆ.

ಉದಾ : ಅಕ್ಕನ್ + ಗಳ್ > ಅಕ್ಕನ್ಗ್‌ಳ್ < ಅಕ್ಕಂಗಳ್

ಅಣ್ಣನ್ + ಗಳ್ > ಅಣ್ಣನ್ಗ್‌ಳ್ < ಅಣ್ಣಂಗಳ್

ಅಕಾರಾಂತ ನಪ್‌ಲಿಂಗದ (ಕನ್ನಡ) ನಾಮಪದಗಳಾದರೆ 'ಗಳ್' ಹತ್ತಿದಾಗ

ನಡುವೆ ಬಿಂದು ವಿಕಲ್ಪವಾಗಿ ಬರುತ್ತದೆ ಆದರೆ ಸಂಸ್ಕೃತ ನಾಮಪದಗಳಾದರೆ ಬಿಂದು ಕಡ್ಡಾಯ !

ಉದಾ : ವಿಕಲ್ಪಕ್ಕೆ ಮರಂಗಳ್–ಮರಗಳ್, ಪೊಲಂಗಳ್–ಪೊಲಗಳ್

ಕಡ್ಡಾಯಕ್ಕೆ : ದೇಶಂಗಳ್ – ದೇಶಗಳ್ ಎಂದು ಬಳಸುವುದು ದೋಷ[೧೦]

'ಕಳ್' ಪ್ರತ್ಯಯ : ೧. ಪ್ರತ್ಯೇಕ ಬಳಕೆ

ಅ) ಉದಾ: ಕೋಡು + ಕಳ್ > ಕೋಟ್ಕಳ್

ನಾಡು + ಕಳ್ . ನಾಟ್ಕಳ್

ಆ) ಉದಾ : ಮಗು + ಕಳ್ > ಮಕ್ಕಳ್

ಇ) ಉದಾ: ಆವು + ಕಳ್ > ಆವುಕಳ್ < ಆಕಳ್ < ಆಕಳು

೨. ಜೊತೆಯಾಗಿ ಬಳಕೆ

ಅ) 'ಅರ್' ಪ್ರ.ದೊಂದಿಗೆ[೧೧] – ಬುಧರ್ + ಕಳ್ > ಬುದರ್ಕಳ್

–ಗೋವರ್ + " > ಗೋವರ್ಕಳ್

ಆ) 'ವಿರ್' ಪ್ರ.ದೊಂದಿಗೆ – ತಾಯ್ವಿರ್ + " > ತಾಯ್ವಿರ್ಕಳ್

–ತಂದೆವಿರ್ + " > ತಂದೆವಿರ್ಕಳ್

ಪ್ರಾಚೀನವಾದ ಒಂದೆರಡು ಉದಾ.ಗಳನ್ನು ಹೊರತುಪಡಿಸಿದರೆ ಇದು ಸ್ವತಂತ್ರವಾಗಿ ಬರಲಾರದೆಂದೆ ತೋರುತ್ತದೆ. ಹೊಸಗನ್ನಡದಲ್ಲಿ ಇದು ಬಳಕೆಯಲ್ಲಿಲ್ಲ.

ಅವು/ಉವು : ಪ್ರತ್ಯಯ

ಅ) ಪೆಱತು + ವು > ಪೆಱವು

ಎಲ್ಲದು + " > ಎಲ್ಲವು

ಆ) ಕರಿದು + ಅವು > ಕರಿಯವು

ಬಿಳಿದು + " > ಬಿಳಿಯವು

ಇ. ಒಳ್ಳಿತು + ಉವು > ಒಳ್ಳಿದುವು

ತೆಳ್ಳಿತು + " > ತೆಳ್ಳಿದುವು

ಬೆಟ್ಟಿತು + " > ಬೆಟ್ಟಿದುವು

೨. ಬುದ್ಧಿವಂತ ವರ್ಗದ (ಪುನ್ + ಸ್ತ್ರೀ) ನಾಮಗಳಿಗೆ ಬರುವ ಪ್ರತ್ಯಯಗಳು

'ಗಳ್' : ಸ್ತ್ರೀವಾಚಕ – ವಧುಗಳ್

ಪುನ್‌ವಾಚಕ – ದೊರೆಗಳ್

ಅರ್ : ಪುಲ್ಲಿಂಗ ಪದಗಳು – ದೇವರ್, ನಂಟರ್, ನಲ್ಲರ್

ಸ್ತ್ರೀಲಿಂಗ ಪದಗಳು – ದೇವಿಯರ, ಕಾಂತೆಯರ್

ಸಂಖ್ಯಾ ಪದಗಳು – ಇರ್ವರ್, ನಾಲ್ವರ್, ಐವರ್

ಸರ್ವನಾಮಗಳು – ಎಲ್ಲರ್, ಪೆರರ್

ಕೃನ್ನಾಮಗಳು – ಮಾಡಿದರ್, ಬೇಡಿದರ್

ಗುಣಪದಗಳು – ಒಳ್ಳಿದರ್, ಬಲ್ಲಿದರ್

ಪ್ರಮಾಣ ಸೂಚಕ ಪದಗಳು – ಪಲಂಬರ್ – ಪಲಬರ್ – ಪಲರ್

ಕೆಲಂಬರ್ – ಕೆಲಬರ್ – ಕೆಲರ್

(ಕೆಲವರ್, ಪಲವರ್ – ಎಂಬ ರೂಪಗಳು ಇವೆ.)

ಸಬುದ್ಧಿಕ ವರ್ಗದ ನಾಮಗಳಿಗೆ ಬಳಕೆ ಆಗುವ ಅರ್, ಇರ್, ದಿರ್, ವಿರ್ – ಇವುಗಳಲ್ಲಿ 'ಅರ್'[೧೨] ಎನ್ನುವ ಪ್ರತ್ಯಯವೇ ವಿಶೇಷವಾಗಿ ಪ್ರಯೋಗಗೊಳ್ಳುತ್ತದೆ.

ದಿರ್ ಪ್ರ:

ಉದಾ. ಅಕ್ಕಂದಿರ್, ಅಣ್ಣಂದಿರ್, ತಮ್ಮಂದಿರ್, ಮಾವಂದಿರ್, ಭಾವಂದಿರ್, ಈ ಕುರಿತು ಕುಶಾಲಪ್ಪಗೌಡರು ಆಡಿದ ಮಾತು ಗಮನಾರ್ಹವೆನಿಸುತ್ತದೆ. "ಅಕಾರಾಂತವಲ್ಲದ ಪದಗಳಲ್ಲೂ ಉದಾ. ಅತ್ತೆಂದಿರು, ತಾಯಂದಿರು–ಎಂದು ಮುಂತಾಗಿ ಬರುವುದರಿಂದ ಹೊಸಗನ್ನಡದಲ್ಲಿ 'ದಿರು' ಎಂಬುದನ್ನು ಮಾತ್ರ ಈ ಸಂಬಂಧ ಸೂಚಕ ಬಹುವಚನ ಪ್ರತ್ಯಯವೆಂದು ಪರಿಗಣಿಸದೆ 'ಅಂದಿರು'– ಎಂದೇ ತೆಗೆದುಕೊಂಡರೆ ವಿವರಣೆ ಸರಳವಾಗುತ್ತದೆ."[೧೩]

ಇದೆ ಮಾತನ್ನು ಪುಷ್ಟಿಕರಿಸುವ ಹಾಗೆ ಬಹಳ ಹಿಂದೆ ಕಾರವೆಲ್‌ರು[೧೪] 'ಅಂದಿರು' ಎಂಬುದೊಂದು ಹಲವಚನ ಪ್ರತ್ಯಯವೆಂದು ಉಲ್ಲೇಖಿಸಿರುವುದು ಗಮನ ಸೆಳೆಯುತ್ತದೆ. ಇಂದಿಗೂ ಈ ಭಾಗದ ಒಳನುಡಿಯಲ್ಲಿ ಅಕ್ಕಂದ್ರು ಅಣ್ಣಂದ್ರು, ತಮ್ಮಂದ್ರು, ತಂಗೆಂದ್ರು ಎಂದು ಬಳಸುತ್ತಿರುವುದನ್ನು ನೋಡಬಹುದು.

ವಿರ್ ಪ್ರ: ಉದಾ. ತಂದೆವಿರ್, ತಾಯ್ವಿರ್, ಸೊಸೆವಿರ್, ಅತ್ತೆವಿರ್.

ಇಂದು ಈ ಪ್ರತ್ಯಯ ರೂಪ ಬಳಕೆಯಲ್ಲಿ ಇಲ್ಲ.

ಇರ್.ಪ್ರ– ಉದಾ: ಪೆಂಡಿರ್, ತೊಟ್ಟಿರ್. ಇದು ಕೇವಲ ಸ್ತ್ರೀವಾಚಕ ಹಲವಚನವಾಗಿ ಬಳಕೆಯಾಗುತ್ತದೆಯೆ(?) ಎಂಬ ಅನುಮಾನ ಉಂಟಾಗುತ್ತದೆ. ಇಲ್ಲಿ "ಪಂದ ಎಂಬುದು

ಸಾಮಾನ್ಯ ಸ್ತ್ರೀವಾಚಕವಾಗಿದ್ದು 'ತಿ' ಸೇರಿ 'ಪೆಂಡತಿ' ಎಂದಾದಾಗ ಪತ್ನಿ ಎಂಬರ್ಥದಲ್ಲಿಯೂ ಪ್ರಯೋಗವಾಗುತ್ತದೆ. ಪೆಂಡತಿ ಎಂಬುದಕ್ಕೆ ಸಾಮಾನ್ಯ ಸ್ತ್ರೀ ಎಂಬರ್ಥವೂ ಇರುವುದನ್ನು 'ಪಂಪಭಾರತ'ದಲ್ಲಿ ಕಾಣುತ್ತೇವೆ."[೧೫]

[ಬಾದಾಮಿ ಒಳನುಡಿ] ಪೆಂಡತಿ > ಹೆಂಡತಿ < ಹೆಡ್ತಿ < ಹೇಂತಿ]

ಆ ಪ್ರಕಾರ ಪೆಂಡ + ತಿ > ಪೆಂಡತಿ – ಒರ್ವಚನ

ಪೆಂಡ + ಇರ್ > ಪೆಂಡಿರ್ – ಹಲವಚನ

ಇಂದು ಹಲವಚನವಾಗಿ ಹೆಂಡಂದ್ರು (<ಹೆಂಡಂದಿರು) ಬಳಕೆ ಇದೆ.

೩. ವಿಶಿಷ್ಟ ಭಾವ (ಸೂಚಕಾರ್ಥದ) ಪೂರ್ಣ ಸಂದರ್ಭಗಳಲ್ಲಿ 'ಗಳ್' ಮತ್ತು 'ಅರ್' ಪ್ರಗಳು

ಹಲವಚನ — ಗೌರವ ಭಾವಾಭಿವ್ಯಕ್ತಿಯಲ್ಲೂ
— ಹೀಗಳೆಯುವ ಭಾವಾಭಿವ್ಯಕ್ತಿಯಲ್ಲೂ

(ಅ) ಗೌರವಾರ್ಹ ವ್ಯಕ್ತಿಯನ್ನು ಉದ್ದೇಶಿಸಿ ಮಾತನಾಡುವಾಗ (ವ್ಯಕ್ತಿ ಒಬ್ಬನೆ ಆಗಿದ್ದರೂ) ಹಲವಚನವೆನ್ನುವುದು ಬಳಕೆಯಾಗುತ್ತದೆ.

ಉದಾ : ಎಮ್ಮ ತಂದೆಗಳ್, ಎಮ್ಮ ತಾಯಗ್ಗಳ್, ಸಮಂತಭದ್ರ ಸ್ವಾಮಿಗಳ್ ತಂದೆ ತಾಯಿಯರು, ಗುರು ಹಿರಿಯರು ಆದ್ದರಿಂದ ಅವರ ಬಗ್ಗೆ ಇರುವ ಗೌರವದಿಂದಾಗಿ ಬಹುವಚನ ಪ್ರಯೋಗ ಹೊಸಗನ್ನಡದಲ್ಲಿ ತಂದೆಯವರು, ತಾಯಿಯವರು ಎಂಬ ಪ್ರಯೋಗಗಳಿವೆ, ಸ್ವಾಮಿಗಳು, ಗುರುಗಳು–ಈಗಲೂ ಬಹುವಚನ ರೂಪವೇ"[೧೬]

(ಆ) ಗೌರವಾರ್ಥದಲ್ಲಿ ಬಳಕೆ ಆಗುವಂತೆಯೆ ನಗೆ ಚಾಟಿಗೆಯಿಂದ ಕೂಡಿದ ತೆಳುವಾದ ಹಾಸ್ಯವನ್ನು ಚಿಮ್ಮಿಸುವಲ್ಲಿ ಇಲ್ಲವೆ ತೀಕ್ಷ್ಣವಾದ ಕಟಕಿ ಭಾವಾರ್ಥವನ್ನು ಚಿಮುಕಿಸುವಲ್ಲಿ ಈ ಹಲವಚನ ಪ್ರತ್ಯಯ ಬಳಕೆಯಾಗುವುದು ಮತ್ತೊಂದು ವಿಶೇಷ ಸಂಗತಿ.

ಇದಕ್ಕಾಗಿ ಒಂದು ಸೊಗಸಾದ ಉದಾಹರಣೆಯೊಂದನ್ನು ಕೇಶಿರಾಜ ಕೊಡುತ್ತಾನೆ. ಇಲ್ಲಿಯ ಉದಾ.ಯಲ್ಲಿ[೧೭] ನುಡಿಪ್ರಹಾರಕ್ಕೆ ಒಬ್ಬ ವ್ಯಕ್ತಿ ಒಳಗಾಗುತ್ತಾನೆ. ಆ ವ್ಯಕ್ತಿಯೆ ಇಲ್ಲಿ ಒಬ್ಬ ಮಾಜಿ ರಾಜ. ರಾಜನಾಗಿದ್ದಾಗ ಬಹುತೇಕವಾಗಿ ಪ್ರಜಾಪೀಡಕನಾಗಿಯೆ ಜೀವನವನ್ನು ಸವೆಸಿದ್ದನೆಂದು ತೋರುತ್ತದೆ. ಇಂಥ ವ್ಯಕ್ತಿಯನ್ನುದ್ದೇಶಿಸಿ ಆಡುವ ಆರಂಭಿಕ ಮಾತುಗಳಾಗಿ "ಬಡವಾದಿರಽಽ ಅರಸಽಽ" – ಎಂದೆ ಶುರುವಾಗುತ್ತದೆ. ಈ ವಾಕ್ಯರಚನೆಯ ವ್ಯಾಕರಣಾಂಶಗಳತ್ತ ಗಮನಿಸಬೇಕು. ಇಲ್ಲಿ ರಂಗದ ಮೇಲೆ ಕಾಣಿಸಿಕೊಂಡು ನಿಂದೆಗೆ ಒಳಗಾಗುವ ವ್ಯಕ್ತಿ ಅಂದರೆ ಕರ್ತೃಪದ ಒರ್ವಚನವಾದರೆ ಕ್ರಿಯಾಪದ ಮಾತ್ರ ಹಲವಚನವಾಗಿದೆ. ಕನ್ನಡ ವಾಕ್ಯರಚನೆಯ ನಿಯಮಾನುಸಾರ ಕರ್ತೃ ಮತ್ತು ಕ್ರಿಯಾಪದಗಳೆರಡೂ ಒಂದೇ ಲಿಂಗ, ವಚನವನ್ನು (ಸಬುದ್ಧಿಕ ವರ್ಗದಲ್ಲಿ

ಮಾತ್ರ) ಹೊಂದಿರಬೇಕಾಗುತ್ತದೆ. ಆ ಪ್ರಕಾರ "ಬಡವಾದಿರ + ಅರಸರೆ" – ಎಂಬ ಪ್ರಯೋಗ ಸಾಧುವಾದುದು ಹಾಗಾದಾಗ ಏನಾದೀತು ನೋಡಿ.

೧) ಮೂಲ ಕಂದ ಪದ್ಯದ ಮೊದಲ ಪಾದ

```
∪∪–  |∪∪∪∪∪|– –
ಬಡವಾ|ದಿರರಸ |ಕಾಲೊಳ್        – ೪. ೪. ೪.
```

೨) ವ್ಯಾಕರಣಾಂಶವನ್ನು ಸರಿಪಡಿಸಿಕೊಂಡಾಗ

```
∪∪–  |∪∪∪∪∪ | – –
ಬಡವಾ|ದಿರರಸರೆ|ಕಾಲೊಳ್       – ೪. ?. ೪.
```

ಹೀಗೆ ಅಪರೂಪಕ್ಕೆ ಛಂದೋರಚನೆ (ಮಾತ್ರಾಲಯ) ಮತ್ತು ವಾಕ್ಯರಚನೆಯ (ವ್ಯಾಕರಣಾಂಶ) ನಡುವೆ ತಿಕ್ಕಾಟ ನಡೆಯುವುದುಂಟು. ಆಗ ನಮ್ಮ ಕವಿಗಳು ಛಂದಸ್ಸಿನ ನಿಯಮ ಪಾಲನೆಯತ್ತ ವಾಲುತ್ತ ವ್ಯಾಕರಣಾಂಶವನ್ನೆ ಸ್ವಲ್ಪ ಸಡಿಲಗೊಳಿಸಿಕೊಳ್ಳುತ್ತಾರೆ. ಅದೆ ತರಹ ಇಲ್ಲೂ ಆಗಿದೆ ಎನ್ನಬೇಕು.

ಹೀಗಿರುವಾಗ ಇಲ್ಲಿ ಊಹಾಗುದುರೆಯನ್ನು ಹತ್ತಿ ಅರ್ಥೈಸಿಕೊಳ್ಳುವ ಹಾಗೆ ಅನುವು ಮಾಡಿಕೊಳ್ಳುತ್ತೇವೆ ಎಂದಿಟ್ಟುಕೊಳ್ಳೋಣ. ಇದನ್ನೆ ನಾವು ಒಂದಿಷ್ಟು ಕಾವ್ಯ ಪರಿಭಾಷೆಯಲ್ಲಿ 'ಧ್ವನಿ' ಎನ್ನುವುದಿಲ್ಲವೆ?

ಹಾಗೆ ಇಲ್ಲಿ ಉದಾಹರಣೆಯಾಗಿ ಕೊಟ್ಟ ಕಂದವನ್ನು ಪುಟ್ಟ ಪುಟ್ಟ ನುಡಿಗಳಾಗಿ ಬಿಡಿಸಿಕೊಂಡಾಗ ಕಾಣಿಸುವುದು ಹೀಗೆ.–

೧. ಬಡವಾದಿರ ಅರಸ(ರೆ)!

೨. ಕಾಲೊಳ್ ನಡೆದಪಿರ (ಅರಸರೆ) !!

೩. ಒಡನೆ ಆರುಮ್ ಇಲ್ಲ (ಅರಸರೆ) !?

೪. ಕಡ್ಗಲೆಗಳೇನ್ ನಿಮ್ಮ ಉಡಿಯೊಳಗೆ (ಅರಸರೆ) ?

೫. ಪಡುವ ದೇಗುಲದ ಎಡೆ ಆವುದು (ಅರಸರೆ) ?

೬. (ಅರಸರೆ) ಕುಡದ ನಿಮಗುಂ ಈ ಎಡರಾಯ್ತೆ ?!

'ಸೇಡಿಗೆ ಸೇಡು' ಎನ್ನುವ ಹಾಗೆ ಈ ರೀತಿ (ಕೊಂಕು ನುಡಿಯುಳ್ಳ) ಪ್ರಶ್ನೆಯ ಸುರಿಮಳೆಗೈಯುತ್ತಿದ್ದಾನೆಂದರೆ ಆ ಮಾಜಿ ರಾಜನ ಯಾತನೆಯ ಸ್ಥಿತಿ, ಶಿಖರಾವಸ್ಥೆಯನ್ನು ತಲುಪಿರಬೇಕು? ಈ ಒಂದೊಂದು ಕಿರುನುಡಿ (ಆತನ ಮುನ್ನಿನ 'ಅಹಂ'ನ ಭಾವ ಸ್ಥಿತಿಗೆ) ಉಂಟು ಮಾಡುವ ಒಳಪೆಟ್ಟು ಆ ಮೂಲಕ ಆಗುವ ಮಾನಸಿಕ ಕಿರಿಕಿರಿ ಒಳಬೇಗುದಿಯು ಕಣ್ಣಿಗೆ ಕಂಡೂ ಕಾಣದಂತಿರುವ ಬರ್ಜಿಯ ತಿವಿತವನ್ನು ಮೀರಿಸುವಂತಿದೆ.

ಹೀಗೆ ಹಲವಚನವೆನ್ನುವುದು ('ಅರ್' ಅಥವಾ 'ಗಳ್' ಪ್ರ.) ಎರಡು ವಿರುದ್ಧ ದ್ರುವಗಳಲ್ಲೂ ನಿಲ್ಲುವ ಹಾಗೆ ಪ್ರಯೋಗಗಳ್ಳುತ್ತಿರುವುದುಏ ಇದರ ಒಂದು ವೈಶಿಷ್ಟ್ಯ ಎನ್ನಬೇಕು.

ಹಲವಚನ ಪ್ರ. — ಸಹಜ ಹ.ವ. ಪ್ರತ್ಯಯವಾಗಿ (ಶಿಷ್ಟ ಭಾಷೆಯಲ್ಲಿ)

ಹಲವಚನ ಪ್ರ. — ಭಾವಸೂಚಕ ಪ್ರ — ಗೌರವಾರ್ಥದಲ್ಲಿ (ಶಿಷ್ಟ ಭಾಷೆಯಲ್ಲಿ)

ಭಾವಸೂಚಕ ಪ್ರ — ಹೀಗಳೆಯುವಲ್ಲಿ (ಆಡುನುಡಿಯಲ್ಲಿ)

ಹೀಗಳೆಯುವಾಗ ೧. ೨. ಸಿಟ್ಟು ಅಸಮಾಧಾನ ಸೂಚಕ (ವ್ಯಂಗ್ಯ ಕಾಕುವಿನೊಂದಿಗೆ)

೨. (ಹಾಸ್ಯ ಲೇಪಿತ ಲಘು ವ್ಯಂಗ್ಯ ಭಾವನೆಯೊಂದಿಗೆ)

ಈ ಅಸಹ್ಯ ವೃತ್ತಿಗೆ ಕೇಶಿರಾಜನು ಕೊಟ್ಟ ಉದಾಹರಣೆಯನ್ನು ಕುರಿತು ಹಲವರು ಇಬ್ಬಗೆಯಾದ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೧. "ಬಹುತ್ವ ಸೂಚಕ ಪ್ರತ್ಯಯ ಹತ್ತಿದ ನಾಮವಾಚಕಗಳೇ ಇಲ್ಲದಿರುವುದರಿಂದ ಕೇಶಿರಾಜನು ಹೇಳುವ ಅಸಹ್ಯವೃತ್ತಿಯ ಲಕ್ಷ್ಯ ತೃಪ್ತಿಕರವಾಗಿಲ್ಲ."[೧೮]

೨. "ಆಧುನಿಕ ವ್ಯಾಕರಣಗಳಲ್ಲೂ ಅಸಹ್ಯ ವೃತ್ತಿಯಲ್ಲಿ ಬಹುವಚನವನ್ನು ಪ್ರಯೋಗಿಸುತ್ತಾರೆಂಬ ವಿಚಾರವನ್ನು ಯಾರು ಹೇಳಿಲ್ಲ. ಇಂತಹ ಸೂಕ್ಷ್ಮ ವಿಚಾರಗಳನ್ನು ಕೇಶಿರಾಜ ಗಮನಿಸಿಬಿಟ್ಟಿದ್ದಾನೆಂಬುದು ಮೆಚ್ಚತಕ್ಕ ವಿಷಯ."[೧೯]

೩. "ಆದರೆ ಅಸಹ್ಯ ವೃತ್ತಿಗೆ ಕೊಟ್ಟ ಉದಾಹರಣೆ ಅನನ್ಯವಾಗಿದೆ."[೨೦]

೪. ಈ "...ಒಂದು ಪದ್ಯ ಅತ್ಯಂತ ಆಶ್ಚರ್ಯಕರವಾಗಿ ರಾಜ್ಯಚುತನಾದ ರಾಜನೊಬ್ಬನನ್ನು ಅವನಿಂದ ಶೋಷಣೆಗೆ ಒಳಗಾದ ಜನ ಪರಿಹಾಸ ಮಾಡುವ ಸಂದರ್ಭವನ್ನು ಚಿತ್ರಿಸುತ್ತದೆ."

"ವ್ಯಂಗ್ಯ, ಕಟಕಿ, ಪರಿಹಾಸ್ಯಗಳಿಂದ ಇಡಿಕಿರಿದ ಇಂತಹ ಇನ್ನೊಂದು ಪದ್ಯವನ್ನು ನಾನು ಕಂಡಿಲ್ಲ."[೨೧]

ಅಬುದ್ಧಿಕ ವರ್ಗದಲ್ಲಿ ಹಲವಚನ : ಒಂದು ವಿಶಿಷ್ಟ ಸಂಗತಿ

ಈ ಒಂದು ಸಂಗತಿಯನ್ನು ಪ್ರಸ್ತಾಪಿಸುತ್ತ ಕೇಶಿರಾಜ ಇದನ್ನು ಜಾತ್ಯೇಕ ವಚನವೆಂದು ಕರೆದಿದ್ದಾನೆ.

ಜಾತಿಯೊಳ್ + ಏಕತ್ವಕ್ಕೆ ಬಹುತ್ವಂ

ಬಹುತ್ವದ + ಎಡೆಗೆ – ಏಕತ್ವಂ ಅಕ್ಕುಮ್[೨೨]

ಜಾತಿ ಇಲ್ಲವೆ ಸಮೂಹ (ಪ್ರಾಣಿ, ಪಶು ಪಕ್ಷಿ ಸಮೂಹವೆಂದೇ ಅರ್ಥ)ಗಳಲ್ಲಿ ನಾಮವೆನ್ನುವ ಕರ್ತೃಪದ ಒರ್ವಚನವಾಗಿದ್ದರೂ ಕ್ರಿಯಾಪದ ಹಲವಚನವನ್ನೆ ಹೊಂದಿರುತ್ತದೆ. ಅದೆ ರೀತಿ (ನಾಮಪದಗಳ ಸರಮಾಲೆಯೊಂದಿಗೆ) ಹಲವಚನವನ್ನು ಸೂಚಿಸುವಂತಿದ್ದರೂ ವಾಕ್ಯ ಕೊನೆಗೊಳ್ಳುವಾಗ ಒರ್ವಚನವನ್ನೆ ಸೂಚಿಸುತ್ತದೆ.

ಕೇಶಿರಾಜನ ಈ ಹೇಳಿಕೆಯನ್ನಾಧರಿಸಿ ಇದನ್ನು 'ವಚನಪಲ್ಲಟ ಕ್ರಿಯೆ' ಎಂದು ನಮ್ಮ ವೈಯಾಕರಣರು ಗುರುತಿಸುತ್ತಾರೆ. ಇದು ಅಷ್ಟೇನು ಸೂಕ್ತವೆಂದು ಅನಿಸುವುದಿಲ್ಲ. ಏಕೆಂಧರೆ 'ಏಕತ್ವಕ್ಕೆ ಬಹುತ್ವಮ್' ಎನ್ನುವ ಪ್ರಕ್ರಿಯೆ ಸಹಜವಾಗಿ ಕಾಣಿಸಿಕೊಳ್ಳುವಂತೆ 'ಬಹುತ್ವದೆಡೆಗೆ ಏಕತ್ವಂ' ಎನ್ನುವುದು ಕಾಣಿಸದು ಎಂದೆ ಹೇಳಬೇಕು.

ಉದಾ : ಆನೆ ನೂಂಕಿದುವು
ಕುದುರೆ ಏರಿದುವು
ಕಾಲಾಳ್ ಕವಿದುವು

ಇದನ್ನು ನಾವು ವಾಕ್ಯರಚನೆಯ ನೆಲೆಯಲ್ಲಿ ಗ್ರಹಿಸಿಕೊಳ್ಳಬೇಕಾಗುತ್ತದೆ.

(ಅಬುದ್ಧಿಕ ವರ್ಗದ) 'ಗಳ್' ಹಲವಚನದ ಸ್ಥಾನ?

"ಬಹುಮಟ್ಟಿಗೆ ನಪ್ ಲಿಂಗವನ್ನು ಸೂಚಿಸುವ 'ಗಳ್' ಬಹುವಚನ ಪ್ರತ್ಯಯ ಸಂದರ್ಭೋಚಿತವಾಗಿ ಪುಲ್ಲಿಂಗ ಸ್ತ್ರೀಲಿಂಗಗಳನ್ನೂ ತಿಳಿಯುವ ಈ ಉದಾಹರಣೆಗಳು ಭಾಷಾ ಚರಿತ್ರೆಯ ದೃಷ್ಟಿಯಿಂದ ಗಮನಾರ್ಹವಾಗಿವೆ."[೨೩] ಹೀಗೆ ಸಬುದ್ಧಿಕ ಅಬುದ್ಧಿಕ ವರ್ಗಗಳಲ್ಲಷ್ಟೆ ಅಲ್ಲ ಭಾವಸೂಚಕಾರ್ಥದಲ್ಲೂ ಬಳಕೆ ಇದೆ. ಇದು ಇನ್ನಷ್ಟು ಕುತೂಹಲಕರ ಕೆಲವು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಅವುಗಳಲ್ಲಿ ಪ್ರಮುಖವಾದುದು ಎಂದರೆ 'ಗಳ್' ಪ್ರತ್ಯಯದ ಸ್ವರೂಪ ಮತ್ತು ಇದರ ಮೂಲಚೂಲವನ್ನು ಕಂಡುಕೊಳ್ಳಲು ಪ್ರಯತ್ನಿಸುವುದೇ ಆಗಿದೆ.

ಪ್ರಾಚೀನ ಕಾಲದ ಮೂಲ ದ್ರಾವಿಡ ಭಾಷೆಯಲ್ಲಿ ಲಿಂಗಭೇದ ಇದ್ದಿರಲಾರದು. "(ದ್ರಾವಿಡ) ಭಾಷೆಯ ಬೆಳವಣಿಗೆಯಲ್ಲಿ ವಚನ ಭೇದದ ಕಲ್ಪನೆಯು ಮೊದಲಿಗೆ ಬರುತ್ತದೆ ಆಮೇಲೆ ಲಿಂಗಭೇದದ ಕಲ್ಪನೆಯು ಬರುತ್ತದೆ. ಈ ಕಾರಣದಿಂದಲೇ ಸರ್ವನಾಮದಿಂದ ಭಿನ್ನವಾದ ಎಲ್ಲ ಲಿಂಗಗಳಲ್ಲಿಯೂ ಬಳಸಲ್ಪಡುವ 'ಗಳ್' ಎಂಬ ಅನೇಕ ವಚನದ ವಿಭಕ್ತಿ ವಿಕರಣವು ಮೊದಲು ವ್ಯುತ್ಪನ್ನವಾದುದೆಂದು ಹೇಳಬೇಕಾಗುತ್ತದೆ."[೨೪] ಆಗ 'ಗಳ್' ಪ್ರತ್ಯಯ ಸಬುದ್ಧಿಕ ಅಬುದ್ಧಿಕ ಎನ್ನುವ ವಿಭೇದದ ಎಣಿಕೆ ಇರದೆ ಹತ್ತುತ್ತಿದ್ದಿರಬಹುದು. ಕ್ರಮೇಣ ಮನುಷ್ಯ ಮನುಷ್ಯೇತರ ಎಂಬ ವಿಂಗಡಣೆ ಆದ ಬಳಿಕ ಮನುಷ್ಯ ವರ್ಗದ ಪದಗಳಿಗೆ ವಿಕಲ್ಪವಾಗಿ ಹತ್ತಲಾರಂಭಿಸಿತು. ಹೀಗೆ ಆದಾಗಲೂ ಅದು ಅಪಪ್ರಯೋಗ ಎನಿಸಲಿಲ್ಲ. ಆದರೆ ಕ್ರಮ ಕ್ರಮೇಣ ಮನುಷ್ಯೇತರ ವರ್ಗದ ಪದಗಳಲ್ಲಿ ವಿಶೇಷವಾಗಿ ಬಳಕೆಗೊಂಡದ್ದರಿಂದ ಅಬುದ್ಧಿಕ ಅಥವಾ ನಪ್

ವರ್ಗದ ಹಲವಚನ ಎಂಬ ಹಣೆಪಟ್ಟಿಯೊಂದಿಗೆ ಗುರುತಿಸಿಕೊಳ್ಳಲು ಕಾರಣ ಆಗಿರಬಹುದೇನೋ?

ಈ ರೀತಿ ಕನ್ನಡ ಮತ್ತಿತರ ಭಾಷೆಗಳಲ್ಲಿ (ಅಂದರೆ ಎಲ್ಲ ದ್ರಾವಿಡ ಭಾಷೆಗಳಲ್ಲೂ) ಹಲವಚನ ಪ್ರತ್ಯಯವಾಗಿ 'ಗಳ್' ಎಂಬುದೇ ಎಲ್ಲದರಲ್ಲೂ ಬಳಕೆ ಆಗುತ್ತಿರುವುದು. ಹಲವಚನ ಪ್ರತ್ಯಗಳಲ್ಲೆಲ್ಲಾ ಹಳೆಯದು ಎಂದು ತಿಳಿಯಲು ಸಾಕ್ಷ್ಯವಾದಂತಾಗುತ್ತದೆ.

ಅಡಿ ಟಿಪ್ಪಣಿಗಳು

೧. ಹೆಚ್ಚಿನ ವಿವರಣೆಗೆ ನೋಡಿ – ನನ್ನ ಲೇಖನ.
ಲೇಖನ : ಲಿಂಗಸೂಚಕ ಪ್ರತ್ಯಯಗಳು – ಒಂದು ಪರಿಶೀಲನೆ ಪುಟ ೪೧–೪೨.
ಗ್ರಂಥ : 'ಹಳಗನ್ನಡ ವ್ಯಾಕರಣ ಮತ್ತು ಬಾದಾಮಿ ಉಪಭಾಷೆ' ಮೊದಲ ಮುದ್ರಣ ೨೦೦೦.

೨. ಕೇಶಿರಾಜ ತನ್ನ 'ಶಬ್ದಮಣಿದರ್ಪಣ'ದಲ್ಲಿ ಕೊಟ್ಟಿರುವ ವಿವರಣೆಗಳನ್ನಾಧರಿಸಿ ಈ ಸಂಶೋಧನಾತ್ಮಕ ಲೇಖನವನ್ನು ಸಿದ್ಧಪಡಿಸಲಾಗಿದೆ. ಆದರೂ ಪೂರಕವೆನಿಸುವ ಇತರ ವೈಯಾಕರಣರ ವಿವರಗಳ ಉಲ್ಲೇಖದ ನೆರವನ್ನು ಅಲ್ಲಲ್ಲಿ ಪಡೆಯಲಾಗಿದೆ.

೩. ಸಂಪಾದಕರು : ಕೆ. ಕೃಷ್ಣಮೂರ್ತಿ, ಕವಿರಾಜಮಾರ್ಗ, ಪದ್ಯ : ೧–೧೧೪, ಮೊ.ಮು: ೧೯೮೬.

೪. ಕೆ. ಕುಶಾಲಪ್ಪಗೌಡ, ಗ್ರಂ. 'ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ', ಮೈ.ವಿ.ವಿ., ಮೊ.ಮು: ೧೯೮೬, ಪುಟ ೧೩೩.

೫. ಪಿ. ಶ್ರೀಕೃಷ್ಣಭಟ್, ಗ್ರಂ: 'ಕನ್ನಡ ವ್ಯಾಕರಣ ಪರಂಪರೆ ಮೇಲೆ ಸಂಸ್ಕೃತದ ಪ್ರಭಾವ', ಮೊ.ಮು: ೧೯೮೯, ಪುಟ ೧೯೫.

೬ ಶಬ್ದಮಣಿ ದರ್ಪಣ ಸೂತ್ರ–೧೦೪. ೧) ಇವರು ಹೀಗೆನ್ನಲೂ ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳೆಲ್ಲವೂ ಸಂ. ಮೂಲದವು ಎಂಬ ಬಲವಾದ ನಂಬಿಕೆಯೂ ಕಾರಣವಾಗಿರಬಹುದು.

೭. 'ಶಮ'ದ ೧೦೪ರಿಂದ ೧೧೩ನೇ ಸೂತ್ರಗಳವರೆಗೆ ವಚನದ ವಿಷಯ ಕುರಿತ ವಿವರಣೆ ಕೊಡುತ್ತಾನೆ. ಇವುಗಳಲ್ಲಿ ಮೊದಲ ಸೂತ್ರವನ್ನು ಬಿಟ್ಟರೆ ಉಳಿದ ಒಂಬತ್ತು ಸೂತ್ರಗಳಲ್ಲಿ (ವಿಭಿನ್ನ ಸಾಮಾಜಿಕ ಸ್ವರೂಪ ಮತ್ತು ಸ್ತರಗಳಲ್ಲಿ ಬಳಕೆ ಆಗುವ) ಹಲವಚನದ ಕುರಿತಾಗಿಯೆ ಚರ್ಚಿಸುತ್ತಾನೆ.

೮. ಪ್ರತ್ಯಯಗಳ ಕುರಿತಾದ ಪರಿಭಾಷೆಗಳನ್ನೆಲ್ಲಾ ಸಂಸ್ಕೃತದಿಂದ ಎರವಲಾಗಿ ತೆಗೆದುಕೊಳ್ಳಲಾಗಿದೆ. ಹೀಗೆ ವ್ಯಾಕರಣಾತ್ಮಕವಾ ಪರಿಭಾಷೆಗೆಲ್ಲಾ ಸಂಸ್ಕೃತವನ್ನೆ ಮಕ್ಕಿಕಾಮಕ್ಕಿ ಅನುಸರಿಸಿ ಅಸಮಂಜಸವಾಗಿ ಕನ್ನಡದಲ್ಲಿ ಅಳವಡಿಸಿಕೊಂಡು ಕನ್ನಡ ವ್ಯಾಕರಣವನ್ನು ಮತ್ತಷ್ಟು ಜಟಿಲವನ್ನಾಗಿ ಮಾಡಿಕೊಂಡಿದ್ದೇವೆ. ಈ ಕುರಿತು ಬಹು ಹಿಂದೆಯೆ ಅಂದರೆ ಕ್ರಿ.ಶ. ೨೦೦೦ರಲ್ಲಿ ಪ್ರಕಟವಾದ ಶಂಕರಭಟ್ಟರ 'ಕನ್ನಡಕ್ಕೆ ಬೇಕು ಕನ್ನಡದ್ದೆ ಆದ ವ್ಯಾಕರಣ' ಪುಸ್ತಕದಲ್ಲಿಯ ವಿವರಗಳು ಮನನೀಯವಾಗಿವೆ. ಈ ಸಂದರ್ಭಕ್ಕೆ

ಅನ್ವಯಿಸಿ ಹೇಳಬೇಕೆಂದರೆ ಅವರ ವಿಚಾರಗಳನ್ನೇ ಇನ್ನಷ್ಟು ಸ್ಪಷ್ಟಗೊಳಿಸಲು ಹೊರಟ ಕೆ.ವಿ. ನಾರಾಯಣರ (ಗ್ರಂ. ನಮ್ಮೊಳಗೆ ನಮ್ಮ ನುಡಿ, ಮೊ.ಮು. ೨೦೦೫) 'ಪದಪ್ರತ್ಯಯ, ಪದರೂಪ ಪ್ರತ್ಯಯ : ಮರುಚಿಂತನೆ' ಎಂಬ ಲೇಖನ ಇಲ್ಲಿ ಪ್ರಸ್ತುತವೆನಿಸುತ್ತದೆ. ಸ್ಥೂಲವಾಗಿ ಹೇಳುವುದಾದರೆ-

i) ಪದ ರಚನೆಯಲ್ಲಿ ಬಳಕೆಯಾಗುವ ಪ್ರತ್ಯಯ ಪದಪ್ರತ್ಯಯಗಳು
ಉದಾ: ತುಡಿತ, ಮಿಡಿತ, ಕುಡುಕ, ಕಟುಕ, ಹಾಡುಗಾರ, ಹಾಡುವಿಕೆ.

ii) ವಾಕ್ಯದ ಸಂದರ್ಭದಲ್ಲಿ ಬಳಕೆ ಆಗುವ ಪ್ರತ್ಯಯಗಳು ಪದರೂಪ ಪ್ರತ್ಯಯಗಳು
ಉದಾ :- ಹಲವಚನ ಪ್ರ.ಗಳು, ವಿಭಕ್ತಿ ಪ್ರ.ಗಳು, ಆಖ್ಯಾತ ಪ್ರ.ಗಳು

೯. ಇನ್ನಷ್ಟು ವಿವರಣೆಗೆ ಗಮನಿಸಿ – ನನ್ನ ಲೇಖನ ಲೇ. 'ಗಳ್'-ಬಹುವಚನ ಪ್ರತ್ಯಯ –ಒಂದು ಟಿಪ್ಪಣಿ: ಗ್ರಂ. 'ಹಳಗನ್ನಡ ವ್ಯಾಕರಣ ಮತ್ತು ಬಾದಾಮಿ ಉಪಭಾಷೆ. ಮೊ.ಮು. ೨೦೦೦, ಪುಟ ೪೫, ೪೬.

೧೦. ಈ ರೀತಿ ಉದ್ದಕ್ಕೂ ಸಂಸ್ಕೃತ ಕನ್ನಡ ಎನ್ನುವ ಭೇದವನ್ನು ಮಾಡುತ್ತ ಸಂಸ್ಕೃತಕ್ಕೆ ಒಂದು ಮಣೆ ಕನ್ನಡಕ್ಕೆ ಮತ್ತೊಂದು ಮಣೆ ಹಾಕಿ ನೋಡುವ, ವಿಶ್ಲೇಷಣೆ ಮಾಡುವ, ಪ್ರವೃತ್ತಿಯನ್ನು ನಿರಂತರವಾಗಿ ಕಾಣುತ್ತಲೇ ಇದ್ದೇವೆ. ಸಂಸ್ಕೃತ ಯಾವಾಗಲೂ ಕಟ್ಟುನಿಟ್ಟಿನ ನಿಯಮಗಳನ್ನು ಒಳಗೊಂಡಿರುವಂಥದ್ದು. ಕ್ರಿಪೂ. ಕಾಲದಲ್ಲೆ ಅಂದರೆ ಅಶೋಕನ ಕಾಲಾವಧಿಯಲ್ಲೆ ಸ್ಥಾವರ ರೂಪವನ್ನು ಪಡೆಯುತ್ತಲಿದ್ದಿತು ಎಂಬುದು ಗಮನೀಯ ಅಂಶ. ಆದರೆ ಕನ್ನಡ ಆಡುನುಡಿಯ ಸ್ವರ್ಯವನ್ನು ಹೊಂದಿದ್ದರಿಂದ ನಿರಂತರ ಪರಿವರ್ತನೆಯ ಹಾದಿಯಲ್ಲಿದ್ದುದನ್ನು ಕಾಣುತ್ತೇವೆ.

ಇಲ್ಲಿ ಇನ್ನೊಂದು ಪ್ರಶ್ನಾರ್ಹ ವಿಷಯ. ಇದು ಭಾಷೆ ಮತ್ತು ಪರಿವರ್ತನಾ ಪ್ರಕ್ರಿಯೆಯು ಭಾಷಾ ಶಾಸ್ತ್ರಕ್ಕೆ ಸಂಬಂಧಿಸಿದ್ದಾದರೂ ನಮ್ಮ ಪೂರ್ವದ ವೈಯಾಕರಣಿಗಳು ಪಯಣಿಸಿದ ಸ್ವರೂಪವನ್ನು ತಾರ್ಕಿಕವಾಗಿ ವಿಶ್ಲೇಷಿಸುವಂತಾಗಿದೆ.

ಇಂದಿನ ಭಾಷಾಜ್ಞಾನದ ಪ್ರಕಾರ ಯಾವ ಭಾಷೆಯ ಪದಗಳೆ ಆಗಲಿ ಅವು ಒಮ್ಮೆ ಎರವಲಾಗಿ ಬಂದ ಮೇಲೆ ಇಲ್ಲಿಯ ಭಾಷಾ ಧ್ವನಿ ವ್ಯವಸ್ಥೆಗನುಸಾರವಾಗಿ ಒಗ್ಗಿಕೊಂಡು (ಬೇರೆ ಮನೆಯ ಮಗಳು ನಮ್ಮ ಮನೆಯ ಸೊಸೆಯಾದ ಬಳಿಕ ಮನೆಯ ಅವಿಭಕ್ತ ಕುಟುಂಬದ ಓರ್ವ ಸದಸ್ಯಳೆ ಆಗುವುದಿಲ್ಲವೆ! ಹಾಗೆ) ಬಳಕೆಯ ಮಾತಿನಲ್ಲಿ ಮಿಳಿತಗೊಂಡಾಗ ಅವನ್ನೆಲ್ಲ ಕನ್ನಡ ಪದಗಳೆಂದೆ ಪರಿಗಣಿಸಬೇಕಾಗುತ್ತದೆ. ಹೀಗೆ ಕನ್ನಡದಲ್ಲಿ ಹದವರಿತು ಬೆರೆತುಕೊಂಡು ಹಲವು ಶತಮಾನಗಳು ಸಂದು ಹೋದರೂ ಅವನ್ನು ಇನ್ನೂ ಸಂಸ್ಕೃತ ಪದವೆಂದು ಭೇದವೆಣಿಸುವ ಅಥವಾ ಮಡಿವಂತಿಕೆಯ ಲೆಕ್ಕಾಚಾರ ಎಷ್ಟು ಸರಿಯಾದುದು?

ಇಲ್ಲಿ ಕನ್ನಡ ನಾಮಪದಗಳಾದರೆ 'ವಿಕಲ್ಪ' ಎನ್ನುತ್ತಾನೆ. ಹಾಗೆಯೆ ಸಂಸ್ಕೃತ ಪದಗಳಾದಲ್ಲಿ ಕಡ್ಡಾಯ ಎನ್ನುವಲ್ಲಿಯೂ ಗಮನಿಸುವ ವಿಶೇಷತೆ ಅಡಗಿದೆ ಎನ್ನಬೇಕು.

ಈ ಬಗೆಯಲ್ಲಿ ಸಂಸ್ಕೃತ ಬದಲಾಗದ ಕಟ್ಟುನಿಟ್ಟಿನ ನಿಯಮಗಳನ್ನು ಒಳಗೊಂಡಿದೆ. ಇದೆ ಸರಿಯಾದುದು. ನಿರಂತರ ಬದಲಾಗುವ 'ವಿಕಲ್ಪ' ರೂಪಗಳನ್ನು ಹೊಂದಿರುವುದು; ಅಷ್ಟೇನು ಸರಿಯಾದುವಲ್ಲ! ಹೀಗೆ ನಮ್ಮ ವೈಯಾಕರಣರು ಪೂರ್ವಭಾವಿ ಕಲ್ಪನೆ ಹೊಂದಿದ್ದರೆ ಎಂಬ ಅನುಮಾನ ನನ್ನನ್ನು ಕಾಡುತ್ತಿದೆ!

೧೧. ಇದು ಏಳನೇ ಶತಮಾನದಲ್ಲಿ ದೊರೆಯುವ ಕಪ್ಪೆ ಅರಭಟ್ಟ ಶಾಸನದಲ್ಲೆ ಬಳಕೆಯಲ್ಲಿ ಇದ್ದುದು ಕಂಡುಬರುತ್ತದೆ.

ಉದಾ. ಮೂರನೇ ತ್ರಿಪದಿಯಲ್ಲಿ-
.... ಅಹಿತರ್ಕಳ್
ಕೆಟ್ಟರ್ ಮೇಣ್ ಸತ್ತರ್ ಅವಿಚಾರಂ

೧೨. ಇನ್ನೂ ಹೆಚ್ಚಿನ ವಿವರಣೆಗೆ ನೋಡಿ. ನನ್ನ ಲೇಖನ.
ಲೇ : 'ಆರ್. ಪ್ರತ್ಯಯ ರೂಪ : ಒಂದು ಅವಲೋಕನ, ಪೂರ್ವೋಕ್ತ ಗ್ರಂಥ, ಪುಟ ೫೫–೫೮.

೧೩. ಕೆ. ಕುಶಾಲಪ್ಪಗೌಡ, ಅಧ್ಯಾಯ ೮, (ನಾಮಪದ) ಪೂರ್ವೋಕ್ತ ಗ್ರಂಥ, ಪುಟ ೧೪೨.

೧೪. ರಾಬರ್ಟ್ಸ್ ಕಾಲ್ಡವೆಲ್, ಅನು. ಮಾಧವ ಪೆರಾಜೆ.
ಗ್ರಂ: ತೌಲನಿಕ ದ್ರಾವಿಡ ವ್ಯಾಕರಣ, ಕ.ವಿ.ವಿ. ಹಂಪಿ, ಮೊ.ಮು. ೨೦೦೫, ಪು. ೧೬೯.

೧೫. ತೆಕ್ಕುಂಜ ಗೋಪಾಲಕೃಷ್ಣಭಟ್ಟ ('ಶಮದ'ದ ವ್ಯಾಖ್ಯಾನಕಾರರು)
೧೦೭ನೇ ಸೂತ್ರದ ವಿವರಣೆ, ಮೊ.ಮು. ೧೯೯೯.

೧೬. ಸಂಪಾದಕರು, ವ್ಯಾಖ್ಯಾನಾತ್ಮಕ ವಿವರಣೆ, ಬೆಂಗಳೂರು ವಿ.ವಿ., ಮೊ.ಮು. ೧೯೯೦, ಪು ೧೩೯.

೧೭. 'ಶಬ್ದಮಣಿ ದರ್ಪಣ'ದ ೧೧೨ನೇ ಸೂತ್ರದಲ್ಲಿ ಮನಸ್ಸನ್ನು ತಟ್ಟಿ ಕಲಕುವ ಅಸಹ್ಯ ವೃತ್ತಿಗೆ ಕೊಟ್ಟ ಉದಾಹರಣೆ. ಇದು ಯಾವ ಕಾವ್ಯದ್ದೆಂದು ತಿಳಿಯದು.

೧೮. ಟಿ.ವಿ. ವೆಂಕಟಾಚಲಶಾಸ್ತ್ರಿ, 'ಗ್ರಂ: 'ದರ್ಪಣ ವಿವರಣೆ', ಮೊ.ಮು. ೨೦೦೧, ಪುಟ ೮೯.

೧೯. ಕೆ. ಕುಶಾಲಪ್ಪಗೌಡ, ಪೂರ್ವೋಕ್ತ ಗ್ರಂಥ, ಪು. ೧೪೦.

೨೦. ಸಂಪಾದಕರು, ಸೂತ್ರದ ಟಿಪ್ಪಣಿ, ಬೆ.ವಿ.ವಿ., ಪು. ೧೩೯.

೨೧. ಜಿ.ಎಸ್. ಶಿವರುದ್ರಪ್ಪ, ಗ್ರಂ: ಕನ್ನಡ ಸಾಹಿತ್ಯ ಸಮೀಕ್ಷೆ, ಮೊ.ಮು. ೧೯೮೯, ಲೇ. ಕ.ಕ.ಗಳ ಕಾ.ಕ., ಪು. ೫೧ರ ಅಡಿಟಿಪ್ಪಣಿಯಲ್ಲಿ.

೨೨. 'ಶಬ್ದಮಣಿ ದರ್ಪಣ', ಸೂತ್ರ ೧೪೮.

೨೩. ಜಿ. ವರದರಾಜರಾವ್, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೪.
ಮೊ.ಮು. ೧೯೭೭, ಪು. ೧೬೫೧, ಸಾಲು (೭–೯)

೨೪. i) ಪ್ರ.ಗೋ. ಕುಲಕರ್ಣಿ, ಗ್ರಂ: ಕನ್ನಡ ಭಾಷಾ ಚರಿತ್ರೆ
ಮೊ.ಮು. ೧೯೭೫, ಪು. ೪೪೦, ಸಾಲು (೨–೫)

ii) ಹೊಸಗನ್ನಡ ನಾಮಪದಗಳಿಗೆಲ್ಲ ಪ್ರಯೋಗವಾಗುವ ಬಹುವಚನ ಪ್ರತ್ಯಯಗಳ ಸಮೀಕ್ಷೆ ನಡೆಸಿದ ಕೆ.ವಿ.ತಿ.ರು "ಗಳು .... ಶ್ರೋತೃಗಳು)" ಲೇಖನ ಪತ್ರಿಕೆ, ಪು. ೨೧. ಲೇಖನ: ಕನ್ನಡದಲ್ಲಿ ಬಹುವಚನ ಪತ್ರಿಕೆ, ಗಾಂಧಿ ಬಜಾರ ಪತ್ರಿಕೆ, ಸ. ೨೬, ಸಂ. ೬.

(ಈ ನನ್ನ ಲೇಖನ ಕೆ.ವಿ. ಈ ಲೇಖನಕ್ಕೆ ಪೂರಕವೆಂದು ತಿಳಿಯಬೇಕು)

ಕನ್ನಡದಲ್ಲಿ ಬಹುವಚನ, ಕೆ.ವಿ.ವಿ. ಹೊಸ ಗನ್ನಡಕ್ಕೆ ಸಂಬಂಧಿಸಿದ ಲೇಖನ ಇದು ಗಾಂ.ಬ. ಪತ್ರಿಕೆ ಜೂನ್ ೨೦೦೨ (೨೦೧೨)

೨೫. 'ಗಳ್' ರೂಪದ ವಿಸ್ತಾರ
- ಜಡವಸ್ತು :
  ೧. ಹೊಲಗಳ್, (ಗ ಟ್ದ್>ಗರ್ದ್) ಗದ್ದೆಗಳ್
  ೨. ಜೀವ ಉಳ್ಳವು : ಕ್ರಿಮಿಗಳ್, ಕೀಟಕಂಗಳ್
- ಬುದ್ಧಿಜೀವಿ : ೩. ತಂದೆಗಳ್, ತಾಯ್ಗಳ್ (ಇದೀಗ ಬಳಕೆಯಲ್ಲಿಲ್ಲ)
- ಗವ್ರವ ಸೂಚಕ : ೪. ಗುರುಗಳ್, ಸ್ವಾಮಿಗಳ್

■

ಅಣ್ಣಿಗೇರಿಯ ದೇಸಗತಿ ಮನೆತನಗಳು

◆

ಸಂಜಯ ಎನ್. ಹಂಜೆ

೧. ಪೀಠಿಕೆ

ಇಂದಿನ ದಕ್ಷಿಣ ಮಹಾರಾಷ್ಟ್ರ (ಪುಣೆ, ಸಾತಾರಾ, ಕೊಲ್ಲಾಪುರ, ಸಾಂಗಲಿ, ಸೊಲ್ಲಾಪುರ ಜಿಲ್ಲೆಗಳು) ಮತ್ತು ಉತ್ತರ ಕರ್ನಾಟಕದ (ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರ್ಗಿ, ಧಾರವಾಡ, ಗದಗ, ಹಾವೇರಿ, ಕಾರವಾರ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳು) ವಿವಿಧೆಡೆಗಳಲ್ಲಿ ಕ್ರಿ.ಶ. ಸುಮಾರು ೧೫ನೆಯ ಶತಮಾನದಿಂದ ಸ್ವಾತಂತ್ರ್ಯಪೂರ್ವದವರೆಗೂ ವೀರಶೈವ, ವೈದಿಕ (ಬ್ರಾಹ್ಮಣ), ಜೈನ, ಮುಸಲ್ಮಾನ, ಮರಾಠಾ, ಕ್ಷತ್ರಿಯ ಧರ್ಮಗಳ ಸುಮಾರು ಒಂದುನೂರಾ ಇಪ್ಪತ್ತಕ್ಕೂ ಹೆಚ್ಚು ದೇಸಗತಿ ಮನೆತನಗಳು ಬಹಮನಿ ಸುಲ್ತಾನರು, ವಿಜಯಪುರದ ಆದಿಲ್‌ಷಾಹಿಗಳು, ಸವಣೂರು ನವಾಬರು, ಮರಾಠರು, ಪೇಶ್ವೆಗಳು, ಘೋರ್ಪಡೆಗಳು, ಪಟವರ್ಧನರು ಮತ್ತು ಬ್ರಿಟಿಷರ ಆಳ್ವಿಕೆಯ ಕಾಲಾವಧಿಯಲ್ಲಿ ಅವರಿಂದ ದೇಸಗತಿ, ಸರದೇಸಗತಿ, ಸರದೇಸಮುಖಿ, ನಾಡಗೌಡಕಿ, ದೇಸಾಯಿ ಮೊದಲಾದ ವತನಗಳನ್ನು (ಮೀರಾಸ್‌ಗಳು) ಬಳುವಳಿಯಾಗಿ ಸಂಪಾದಿಸಿ ಪ್ರಾದೇಶಿಕ ಆಡಳಿತ ನಿರ್ವಹಣೆ, ಕಂದಾಯ ನಿಗದಿ ಮತ್ತು ವಸೂಲಿ, ರಕ್ಷಣೆ (ಪೋಲಿಸ್ ಅಧಿಕಾರ), ಕೃಷಿಯ ಮೇಲ್ವಿಚಾರಣೆ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತ ಬಂದಿವೆ.[೧] ದೇಸಗತಿ ಎಂಬ ಪದದಲ್ಲಿ 'ದೇಸ' ಮತ್ತು 'ಗತಿ' ಎಂಬೆರಡು ಪದಗಳ ಸಮ್ಮಿಶ್ರಣವಾಗಿದೆ. ದೇಸ ಎಂಬುದು ಒಂದು ಪ್ರದೇಶದ ನಿರ್ದಿಷ್ಟ ಸ್ಥಳ ಅಥವಾ ಪ್ರದೇಶವನ್ನು ಸೂಚಿಸುತ್ತದೆ. ಗತಿ ಎಂಬುದು ಹೊಂದಿರುವುದು ಎಂಬ ಅರ್ಥವನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ 'ದೇಸಗತಿ' ಎಂದರೆ ಒಂದು ಪ್ರದೇಶದ ಆಡಳಿತದ ಪರಿಭಾರವನ್ನು ಹೊಂದಿರುವುದು ಎಂದರ್ಥವಾಗುತ್ತದೆ. ಪ್ರಜೆಗಳಲ್ಲಿ ಸ್ವಾಭಿಮಾನ, ಧರ್ಮ, ನೀತಿಗಳಂತ ಉಚ್ಚಮೌಲ್ಯಗಳನ್ನು ರಕ್ಷಿಸಿಕೊಂಡು ಬಂದ ಭವ್ಯ ಪರಂಪರೆಯನ್ನು ಹೊಂದಿರುವ ಈ ದೇಸಗತಿಗಳು ರಾಜ ಮತ್ತು ಪ್ರಜೆಗಳ ಮಧ್ಯೆ

ಆಡಳಿತಾತ್ಮಕ ಸೇತುವೆಯಾಗಿ ಕಾರ್ಯನಿರ್ವಹಿಸಿವೆ. ಅವುಗಳು ಏಕಸ್ವಾಮ್ಯ, ಉಭಯಸ್ವಾಮ್ಯ, ಬಹುಸ್ವಾಮ್ಯ ಮತ್ತು ವಂಶಪಾರಂಪರ್ಯ ಅಧಿಕಾರ ಹೊಂದಿದ್ದವು.

'ದೇಸಗತಿ' ಎಂಬ ಪದವು ಕೇವಲ ಅಧಿಕಾರ ವರ್ಗಕ್ಕೆ ಮತ್ತು ದಾಖಲೆಗಳಲ್ಲಿ ಮಾತ್ರ ಬಳಕೆಯಾಗುತ್ತಿದ್ದಂತೆ ತೋರುತ್ತದೆ. ಈ ಪದವನ್ನು ಸಾಮಾನ್ಯ ಜನರು ಬಳಸುತ್ತಿರಲಿಲ್ಲ. ಬದಲಾಗಿ ಕುಲೀನ ವರ್ಗಗಳು ಸೃಷ್ಟಿಸಿದ ದೈವಿಸಂಭೂತವಾದ 'ಧಣಿ' ಎಂಬ ಪದದಿಂದಲೇ ದೇಸಗತಿಯನ್ನು ಗುರುತಿಸುತ್ತಿದ್ದರು. ವಾಸ್ತವವಾಗಿ ಮುಷ್ಠಿ ಕಾಳು ಸಹ ದೇಸಗತಿಯವರಿಂದಲೇ ಬರಬೇಕಾಗಿದ್ದರಿಂದ, ಸಂಪೂರ್ಣ ಧನ-ಧಾನ್ಯಗಳ ಮೇಲೆ ಇವರ ಅಧಿಕಾರವಿದ್ದಿದ್ದರಿಂದ ಇವರು 'ಧಣಿ'ಕ ವರ್ಗವಾಗಿಯೇ ಪರಿಣಮಿಸಿದ್ದರು. ದೇಸಗತಿಗಳ ಮುಖ್ಯಸ್ಥರನ್ನು ದೇಸಾಯಿ, ದೇಶಮುಖ, ದೇಶಪಾಂಡೆ, ಪಾಟೀಲ, ಮುಖದ್ದಮ್, ದೇಶಕುಲಕರ್ಣಿ, ಕುಲಕರ್ಣಿ, ಸೇಠ, ಮಹಾಜನ ಎಂದೆಲ್ಲ ಕರೆಯಲಾಗುತ್ತಿತ್ತು. ಪ್ರಾಚೀನ ಕಾಲದ ಗಾವುಂಡ, ಗೌಡ, ನಾಡಗೌಡ ಮುಂತಾದವುಗಳು ಮತ್ತು ವಿಜಯನಗರದ ಅವಧಿಯಲ್ಲಿನ ನಾಯಕರ ಪದ್ಧತಿಯ ನಂತರದ ದೇಶಮುಖ, ದೇಸಾಯಿ ಮೊದಲಾದವರೆಲ್ಲರ ಕಾರ್ಯ ಒಂದೇ ಆಗಿತ್ತು. ಕೇವಲ ಅವರನ್ನು ಸಂಬೋಧಿಸುವ ಪದಗಳು ಮಾತ್ರ ವಿಭಿನ್ನವಾಗಿದ್ದವು. ಒಂದರ್ಥದಲ್ಲಿ ಇವುಗಳನ್ನು ಸಮಾನಾರ್ಥಕ ಪದಗಳೆಂದೇ ಕರೆಯಬಹುದು. ಒಟ್ಟಾರೆ ದೇಸಾಯಿಯು ದೇಸಗತಿ ಮನೆತನದ ಮುಖ್ಯಸ್ಥನಾಗಿದ್ದು, 'ಧಣಿ' ಎಂದು ಗೌರವಿಸಲ್ಪಡುತ್ತಿದ್ದನು. ಈತನು ತನ್ನ ಶೌರ್ಯ, ಸಾಹಸ, ನಿಷ್ಠೆ, ಸೇವೆಗೆ ಪ್ರತಿಫಲವಾಗಿ ಮತ್ತು ಅಗತ್ಯ ಬಿದ್ದಾಗ ಸೈನ್ಯ ಸಹಾಯ ಒದಗಿಸುವ ಕರಾರಿನೊಂದಿಗೆ ಆಳರಸರಿಂದ ವಿಶಾಲ ಪ್ರದೇಶಗಳನ್ನು ಜಹಗೀರು (ಇನಾಂ, ಉಂಬಳಿ) ಪಡೆದು, ಅಲ್ಲಿ ತನ್ನ ಅಧಿಕಾರವನ್ನು ಚಲಾಯಿಸುತ್ತಿದ್ದನು. ಈ ಪ್ರದೇಶಗಳನ್ನು 'ದೇಸಗತಿಗಳು', 'ಪರಗಣಗಳು', 'ಹೋಬಳಿ ಪರಗಣಗಳು', 'ಸಂಸ್ಥಾನಗಳು' ಎಂದೆಲ್ಲ ಕರೆಯಲಾಗುತ್ತಿತ್ತು.[೨]

ಪರಗಣಗಳ ವ್ಯಾಪ್ತಿಯಲ್ಲಿ ೧೦ ರಿಂದ ೨೦೦ರವರೆಗೂ ಗ್ರಾಮಗಳು ಇರುತ್ತಿದ್ದವು. ದೇಸಾಯಿ ಸಮಾಜದ ಸಂವಹನಕಾರನಾಗಿ, ಪ್ರಜಾಪಾಲಕನಾಗಿ, ಕಂದಾಯ ಸಂಗ್ರಹಾಧಿಕಾರಿಯಾಗಿ, ನ್ಯಾಯಾಧೀಶನಾಗಿ, ಸೈನಿಕ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುತ್ತಿದ್ದನು. ಮಹಲುಗಳು ಮತ್ತು ಪರಗಣಗಳಲ್ಲಿ ಸ್ಥಳೀಯ ಆಡಳಿತ ಅಗತ್ಯಗಳ ಹಿನ್ನೆಲೆಯಲ್ಲಿ ೮೦ ರಿಂದ ೧೦೦ ಗ್ರಾಮಗಳ (ಚಾವರಾತ ಹಳ್ಳಿಗಳು) ವ್ಯಾಪ್ತಿಯ ಸಮತ್, ೧೦ ರಿಂದ ೪೦ ಗ್ರಾಮಗಳ ವ್ಯಾಪ್ತಿಯ ತರಾಫ್, ೨೦ ಗ್ರಾಮಗಳ ವ್ಯಾಪ್ತಿಯ ಕಸಬಾ, ೧೦ ರಿಂದ ೨೦ ಮನೆಗಳ ವ್ಯಾಪ್ತಿಯ ದೆಯ ಎಂಬ ವಿಭಾಗಗಳನ್ನು ರೂಪಿಸಲಾಗಿತ್ತು. ಹಾಗೆಯೇ ಅಂದು ವೇಂಠೆ, ವೇಂಠಕ, ವಳಿತ, ಚಾವಡಿ, ಮಾಗಣಿ, ಸೀಮೆ, ಸರಕಾರ, ಸುಬಾ, ತಾಲೂಕಾ, ಪೇಟ್, ಹಿಸಾರ್, ಕರ್ಯಾತು ಎಂಬಿತ್ಯಾದಿ ಆಡಳಿತ ವಿಭಾಗಗಳೂ ಕಾಣಿಸಿಕೊಳ್ಳುತ್ತವೆ. ಪರಗಣಗಳಲ್ಲಿ ಸುವ್ಯವಸ್ಥಿತವಾದ ಆಡಳಿತ ನಿರ್ವಹಣೆಗೆ ಸಹಾಯಕರಾಗಿ ದೇಶಕುಲಕರ್ಣಿ, ದೇಶಪಾಂಡೆ, ಪಾಟೀಲ, ಕುಲಕರ್ಣಿ, ಜಾಗೀರದಾರ, ಸರದಾರ ಇತ್ಯಾದಿ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿತ್ತು.

ಇವರೆಲ್ಲರೂ ತಮ್ಮ ಆಡಳಿತಾವಧಿಯಲ್ಲಿ ಪ್ರಜಾವರ್ಗದ ಹಿತವನ್ನು ಬಯಸಿ, ಲೋಕೋಪಯೋಗಿ ಕಾರ್ಯಗಳನ್ನು ಕೈಗೊಂಡು, ಕೋಟೆ-ಕೊತ್ತಲುಗಳನ್ನು ನಿರ್ಮಿಸಿ, ಸಂಗೀತ-ಸಾಹಿತ್ಯಗಳನ್ನು ಸೃಷ್ಟಿಸಿ, ಜಾತ್ರೆ-ಉತ್ಸವಗಳ ಮೂಲಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಗಳ ವಾಹಕವಾಗಿ ತಮ್ಮ ದೇಸಗತಿಗಳ ವ್ಯಾಪ್ತಿಯಲ್ಲಿ ರಾಜ-ಮಹಾರಾಜರಂತೆ ಬದುಕಿ ಆಳರಸರು ಮತ್ತು ಪ್ರಜೆಗಳಿಂದ ವಿವಿಧ ಬಿರುದಾವಳಿಗಳನ್ನು ಪಡೆದು ವೈಭಯುತವಾಗಿ ಮೆರೆದಿದ್ದಾರೆ.[೩]

ಬ್ರಿಟಿಷರ ಕಾಲಾವಧಿಯಲ್ಲಿ ಹಲವು ಗ್ರಾಮಗಳನ್ನು ಸೇರಿಸಿ ಒಂದು ಸಣ್ಣ ಮಹಲ್, ಪರಗಣೆ ಅಥವಾ ಪ್ರದೇಶವನ್ನು ರಚಿಸಲಾಗುತ್ತಿತ್ತು. ಅವುಗಳಲ್ಲಿ ಆಡಳಿತ, ಕಂದಾಯ ವಸೂಲಿ ಇತ್ಯಾದಿ ಕಾರ್ಯಗಳಿಗಾಗಿ ದೇಸಾಯಿ (ದೇಶಮುಖ, ಜಮೀನ್ದಾರ) ಮತ್ತು ದೇಶಪಾಂಡೆ (ದೇಶಕುಲಕರ್ಣಿ, ಕಾನಂಗೋ) ಎಂಬ ಇಬ್ಬರು ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಇವರಿಬ್ಬರೂ ಸಾಂದರ್ಭಿಕವಾಗಿ 'ಜಮೀನ್ದಾರ' ಎಂಬ ಬಿರುದನ್ನು ಹೊಂದಿದ್ದರು.[೪] ಅಂದು ಪರಗಣೆಗಳಿಗೆ ಮೂರು ಪ್ರಕಾರದ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ೧ನೆಯ ಹಂತದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಪರಗಣೆಗಳನ್ನು ಸೇರಿಸಿ, ಅದಕ್ಕೆ ಉನ್ನತಮಟ್ಟದ ಸರಕಾರಿ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ೨ನೆಯ ಹಂತದಲ್ಲಿ ಪರಗಣೆಗಳನ್ನು ಸಣ್ಣ ಆಡಳಿತ ಘಟಕಗಳನ್ನಾಗಿ ವಿಭಜಿಸಿ, ಮಧ್ಯಮ ವರ್ಗದ ಸರಕಾರಿ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಈ ಹಂತದ ಪರಗಣೆಗಳಿಗೆ ಹೊಂದಿಕೊಂಡ ಭಾಗದ ಆಡಳಿತದ ಜವಾಬ್ದಾರಿಯನ್ನು ದೇಸಾಯಿ ಅಥವಾ ದೇಶಮುಖರಿಗೆ ವಹಿಸಿಕೊಡಲಾಗುತ್ತಿತ್ತು. ೩ನೆಯ ಹಂತದಲ್ಲಿ ಸಂಪೂರ್ಣ ಪರಗಣೆಯನ್ನು ಕೇಂದ್ರ ಸರಕಾರಕ್ಕೆ ಸೇರಿಸಿ, ಇದರ ಅಧಿಕಾರವನ್ನೂ ದೇಸಾಯರಿಗೆ ವಹಿಸಿಕೊಡಲಾಗುತ್ತಿತ್ತು. ಆದರೆ ದೇಸಾಯಿಯ ಕಾರ್ಯವೈಖರಿಯನ್ನು ಪರೀಕ್ಷಿಸಲು ಸಾಂದರ್ಭಿಕವಾಗಿ ಸರಕಾರಿ ಅಧಿಕಾರಿಗಳನ್ನು ಕಳುಹಿಸಲಾಗುತ್ತಿತ್ತು.[೫] ದೇಸಾಯಿಗೆ ಸಹಾಯಕನಾಗಿ ನಾಡಗೌಡ ಅಥವಾ ದೇಶಕುಲಕರ್ಣಿ ಎಂಬ ಇನ್ನೊಬ್ಬ ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದನು.

ಬ್ರಿಟಿಷರು ಮತ್ತು ಪೇಶ್ವೆಗಳ ಕಾಲಾವಧಿಯಲ್ಲಿ ಪ್ರತಿ ಗ್ರಾಮದಿಂದ ದೊರೆಯುತ್ತಿದ್ದ ಪ್ರತಿಶತ ೩ರಷ್ಟು ಕಂದಾಯದಲ್ಲಿ ದೇಶಪಾಂಡೆ ೧ರಷ್ಟು ಮತ್ತು ಉಳಿದ ೨ರಷ್ಟು ಪ್ರಮಾಣ ದೇಸಾಯಿ ಪಡೆದುಕೊಳ್ಳುತ್ತಿದ್ದನು. ವತನ ಮೊದಲಾದವುಗಳಿಗೆ ಸಂಬಂಧಿಸಿದ ದಾಖಲೆಗಳ ಮೇಲೆ ಮೊದಲು ದೇಸಾಯಿ ಸಹಿ ಮಾಡುತ್ತಿದ್ದನು. ನಂತರ ಅದರ ಬದಿಗೆ ದೇಶಪಾಂಡೆ ಸಹಿ ಮಾಡುತ್ತಿದ್ದನು. ಸರಕಾರಕ್ಕೆ ತಮ್ಮ ಕಾಣಿಕೆಗಳನ್ನು ಸಲ್ಲಿಸುವಾಗ ಮೊದಲು ದೇಸಾಯಿ ನಂತರ ದೇಶಪಾಂಡೆ ಕೊಡುತ್ತಿದ್ದನು. ದೇಸಾಯಿ ಹಬ್ಬ-ಹರಿದಿನಗಳಲ್ಲಿ ಮಹರ್ ಮತ್ತು ಪ್ರತಿ ಗ್ರಾಮಗಳಿಂದ ತೆರಿಗೆಯ ರೂಪದ ಎಣ್ಣೆಯನ್ನು ತೆಗೆದುಕೊಳ್ಳುತ್ತಿದ್ದನು. ಸಂಗೀತಗಾರರು ಮೊದಲು ದೇಸಾಯಿಯಿಂದ ನಂತರ ದೇಶಪಾಂಡೆಯಿಂದ ಬಹುಮಾನಗಳನ್ನು ಪಡೆಯುತ್ತಿದ್ದರು. ತೆರಿಗೆಗಳ ಸಂಗ್ರಹಣೆ ದೇಸಾಯಿಯ ಕೆಲಸವಾಗಿದ್ದು, ಅದಕ್ಕೆ ಸಂಬಂಧಿಸಿದ ಸೂಕ್ತ ಲೆಕ್ಕಪತ್ರಗಳ

ದಾಖಲೆಗಳನ್ನಿಡುವುದು ದೇಶಪಾಂಡೆಯ ಕರ್ತವ್ಯವಾಗಿತ್ತು. ಕ್ರಮೇಣ ದೇಸಾಯಿ ಮತ್ತು ದೇಶಪಾಂಡೆ ಅವರು ತಮ್ಮ ಪ್ರದೇಶದ ಜಮೀನುಗಳ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿ, 'ಧಣಿ'ಕರಾಗಿ ರೈತರ ಮೇಲೆ ದಬ್ಬಾಳಿಕೆಯನ್ನು ಪ್ರಾರಂಭಿಸಿದರು. ಇದರಿಂದ ಕ್ರಿ.ಶ. ೧೮೨೪ರಲ್ಲಿ ಕಿತ್ತೂರ ದೇಸಗತಿಯ ದಂಗೆ ಮತ್ತು ಅನಂತರ ಮುಂಬಯಿ-ಕರ್ನಾಟಕದಾದ್ಯಂತ ಬ್ರಿಟಿಷರ ವಿರುದ್ಧ ದಂಗೆಗಳು ಪ್ರಾರಂಭವಾದವು. ಇದರ ಪರಿಣಾಮಗಳನ್ನು ಅರಿತ ಬ್ರಿಟಿಷರು ಇನಾಂ ಕಮೀಷನ್ ರಚಿಸಿ, ಜಮೀನುಗಳ ದಾಖಲೆಗಳಲ್ಲಿ ದೇಸಾಯಿ ಮತ್ತು ದೇಶಪಾಂಡೆ ಅವರ ಹೆಸರುಗಳಿರುವುದನ್ನು ಪರೀಕ್ಷಿಸಿ, ದಾಖಲೆಗಳಿಲ್ಲದ ಜಮೀನುಗಳನ್ನು ವಶಪಡಿಸಿಕೊಂಡು, ದೇಸಗತಿಗಳ ಪ್ರಭಾವವನ್ನು ತಗ್ಗಿಸಿದರು.[೬]

೨. ಅಣ್ಣಿಗೇರಿಯ ದೇಸಗತಿ ಮನೆತನಗಳು

ಅಣ್ಣಿಗೇರಿ ಪಟ್ಟಣದಲ್ಲಿರುವ ದೇಸಾಯಿ ಮತ್ತು ದೇಶಪಾಂಡೆ ಎಂಬೆರಡು ದೇಸಗತಿ ಮನೆತನಗಳು ಆದಿಲ್‌ಷಾಹಿಗಳು, ಪೇಶ್ವೆಗಳು ಮತ್ತು ಬ್ರಿಟಿಷರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಪ್ರದೇಶದ ಆಡಳಿತ ಮತ್ತು ಕಂದಾಯ ವಸೂಲಿ ಕಾರ್ಯಗಳನ್ನು ಕೈಗೊಂಡಿವೆ. ಈ ಎರಡೂ ಮನೆತನಗಳ ವಂಶಾವಳಿ, ಆಳ್ವಿಕೆ, ಸಾಂಸ್ಕೃತಿಕ ಚಟುವಟಿಕೆಗಳ ವಿವರಗಳು ಈ ಕೆಳಗಿನಂತಿವೆ.

೨.೧. ದೇಶಪಾಂಡೆ ದೇಸಗತಿ ಮನೆತನ

ಕನ್ನಡನಾಡಿನ ದೇಸಗತಿ ಮನೆತನಗಳಲ್ಲಿ ಗದಗ ಜಿಲ್ಲೆಯ ಮುಳಗುಂದ, ಹೊಸೂರು, ಧಾರವಾಡ ಜಿಲ್ಲೆಯ ಅಣ್ಣಿಗೇರಿ, ಅಮ್ಮಿನಬಾವಿ, ಕಾರವಾರ ಜಿಲ್ಲೆಯ ಹಳಿಯಾಳ, ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಕಾಕತಿ, ಐನಾಪುರ, ಆನಗೋಳ, ಉಗಾರ ಬದ್ರುಕ, ಸಿಂಧಿಕುರಬೆಟ್ಟ, ಚಚಡಿ, ವಿಜಯಪುರ ಜಿಲ್ಲೆಯ ಬಾಬಾನಗರ, ಬಾಗಲಕೋಟೆ ಜಿಲ್ಲೆಯ ತೇರದಾಳ, ಹನಗಂಡಿ, ಹಳಿಂಗಳಿ, ಕಲಬುರ್ಗಿ ಜಿಲ್ಲೆಯ ಶಾಲಿಬಿದರಿ ಮೊದಲಾದೆಡೆಗಳಲ್ಲಿದ್ದ ಜೈನ ದೇಸಗತಿ ಮನೆತನಗಳು ಸಮಕಾಲೀನ ಪ್ರಭುಗಳು ಮತ್ತು ಪ್ರಜೆಗಳ ನಡುವೆ ಸೇತುವೆಯಾಗಿ ಸ್ಥಾನಿಕ ಆಡಳಿತ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಕೊಡುಗೆಗಳು ಅಪಾರವಾಗಿವೆ. ಕೆಲವು ಮನೆತನಗಳ ಸುಸಜ್ಜಿತವಾದ ವಾಡೆಗಳು ಇಂದಿಗೂ ಉಳಿದು ಬಂದಿದ್ದು, ಇವು ಸಮಕಾಲೀನ ಪ್ರಾದೇಶಿಕ ವಾಸ್ತುಕಲೆಯ ಪ್ರತೀಕಗಳಾಗಿವೆ. ಆ ದೇಸಗತಿ ಮನೆತನಗಳಲ್ಲಿ ಅಣ್ಣಿಗೇರಿಯ ಜೈನ ದೇಶಪಾಂಡೆ ಮನೆತನವೂ ಒಂದಾಗಿದೆ. ಈ ಮನೆತನವು ಆದಿಲ್‌ಷಾಹಿಗಳು ಮತ್ತು ಪೇಶ್ವೆಗಳ ಆಳ್ವಿಕೆಯ ಕಾಲಾವಧಿಯಲ್ಲಿ ನಾಲ್ಕು ಸಾವಿರಕ್ಕಿಂತಲೂ ಅಧಿಕ ಎಕರೆ ಭೂಮಿಯನ್ನು ಜಹಗೀರು (ಇನಾಂ) ಪಡೆದು ತನ್ನ ಅಧಿಕಾರವನ್ನು (ನಾಡಗೌಡಕಿ) ಚಲಾಯಿಸುತ್ತಿತ್ತು. ಆದರೆ ಇದರ ಅಧಿಕಾರದ ವ್ಯಾಪ್ತಿ, ಇದರಡಿಯಲ್ಲಿದ್ದ ಚಾವರಾತ ಗ್ರಾಮಗಳ ಕುರಿತು ಸ್ಪಷ್ಟವಿಲ್ಲ. ೧೯೭೪ರ ಮಾರ್ಚ್ ೧ರಂದು ಜಾರಿಗೆ ಬಂದ 'ಗೇಣಿದಾರರ ಕಾಯ್ದೆ' (Tenant Act) ಅಡಿಯಲ್ಲಿ ಬಹುತೇಕ ಭೂಮಿ ಉಳುವವರ ಪಾಲಾಯಿತು. ಈ

ಮನೆತನದವರು ಕಾಲಕ್ರಮೇಣ ವ್ಯಾಪಾರದೆಡೆಗೆ ಲಕ್ಷ್ಯವಹಿಸಿ ಇಲ್ಲಿಯ ಭೂಮಿಯನ್ನು ಮಾರುತ್ತ ಬಂದಿದ್ದರಿಂದ ಈಗ ೧೨೦ ಎಕರೆಗಳಷ್ಟು ಭೂಮಿ ಮಾತ್ರ ಉಳಿದಿದೆ. ಈ ಮನೆತನವು ಪ್ರಾದೇಶಿಕ ಆಡಳಿತ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಲೋಕೋಪಯೋಗಿ ಇತ್ಯಾದಿ ಕ್ಷೇತ್ರಗಳಲ್ಲಿ ಕೈಗೊಂಡಿರುವ ಚಟುವಟಿಕೆಗಳು ಗಮನಾರ್ಹವಾಗಿವೆ.

ಕನ್ನಡದ ಆದಿಕವಿ ನಾಡೋಜ ಪಂಪನ (ಕ್ರಿ.ಶ. ೯೦೨–೯೪೫) ಸಹೋದರ ಜಿನವಲ್ಲಭನ ಆಂಧ್ರಪ್ರದೇಶದ ಕರೀಮನಗರ ಜಿಲ್ಲೆಯ ಕುರ್ಕ್ಯಾಲದ ಕ್ರಿ.ಶ. ಸುಮಾರು ೧೦ನೆಯ ಶತಮಾನದ ಶಾಸನದಲ್ಲಿ–

> ಸ್ವಸ್ತಿ ಸಕಳಕಳಾಳಾಪ ಪ್ರವೀಣಂ ಭವ್ಯರತ್ನಾಕರಂ ಗುಣಪಕ್ಷಪಾತಿ
> ಬೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಱ್ಱ ಕಮ್ಮೆಬ್ರಾಹ್ಮಣಂ
> ಜಮದಗ್ನಿ ಪಂಚಾರ್ಷೇಯಂ ಶ್ರೀವತ್ಸಗೋತ್ರಂ ಗುಣ್ಡಿಕಱಱ
> ನಿಡುಂಗೋಣ್ಡೆಯಭಿಮಾನಚನ್ದ್ರನ ಮರ್ಮ್ಮಂ ಭೀಮಪಯ್ಯನಾ
> ಬೆಳ್ವೊಲದಣ್ಣಿಗೆಱೆಯ ಜೋಯಿಸ ಸಿಂಘನ ಮರ್ಮ್ಮಳಬ್ಬಣಬ್ಬೆಯ
> ಮಗಂ ಕೊಣ್ಡಕುನ್ದೆಯ ದೇಸಿಗಗಣದ ಪೊತ್ತಗೆಯಬಟಿಯ
> ಪಣ್ಡರಂಗವಲ್ಲಿಯ ಜಯಣನ್ದಿಸಿದ್ಧಾನ್ತಭಟಾರರ ಗುಡ್ಡಂ
> ಜಿನವಲ್ಲಭಂ ಸಬ್ಬಿನಾಡ ನಟ್ಟನಡುವಣ ಧರ್ಮ್ಮಪುರದುತ್ತರದಿಗ್ಭಾಗದ
> ವೃಷಭಗಿರಿಯೆಂಬನಾದಿ ಸಂಸಿದ್ಧ ತೀರ್ತ್ಥದ ದಕ್ಷಿಣ ದಿಶಾಭಾಗದೀ
> ಸಿದ್ಧಶಿಲೆಯೊಳ್ತಮ್ಮ ಕುಲದೈವಮಾದ್ಯನ್ತಂ ಜಿನಬಿಂಬಂಗಳುಮಂ
> ಚಕ್ರೇಶ್ವರಿಯುಮಮಂ ಪೆಱವುಂ ಜಿನಪ್ರತಿಮೆಗಳುಮಂ ತ್ರಿಭುವನತಿಲಕ
> ಮೆಂಬ ಬಸದಿಯುಮಂ ಕವಿತಾಗುಣಾರ್ಣವಮೆಂಬ ಕೆಱೆಯುಮಂ
> ಮದನವಿಳಾಸಮೆಂಬ ಬನಮುಮಂ ಮಾಡಿಸಿದಂ ॥ ....

'ಜಿನವಲ್ಲಭನು ವೆಂಗಿನಾಡಿನ (ಆಂಧ್ರಪ್ರದೇಶದಲ್ಲಿ ಕೃಷ್ಣಾ ಮತ್ತು ಗೋದಾವರಿ ನದಿಗಳ ಮಧ್ಯದ ಪ್ರದೇಶ) ಸಪ್ತಗ್ರಾಮಗಳಲ್ಲಿ ಒಂದಾದ ವೆಂಗಿಪರ್ರವ (ಗುಂಟೂರು ಜಿಲ್ಲೆಯ ಬಾಪಟ್ಲಾ ತಾಲ್ಲೂಕಿನ ವಂಗಿಪುರ) ಕಮ್ಮೆ ಬ್ರಾಹ್ಮಣನೂ, ಜಮದಗ್ನಿ ಪಂಚಾರ್ಷೇಯ ಪ್ರವರದ ಶ್ರೀವತ್ಸಗೋತ್ರದವನೂ ಆದ ಗುಂಡಿಕರ್ರದ ನಿಡುಂಗೊಂಡೆಯ (ನಿಡಗುಂದಿ) ಅಭಿಮಾನಚಂದ್ರನ ಮೊಮ್ಮಗನಾದ ಭೀಮಪಯ್ಯನಿಗೆ ಮತ್ತು ಬೆಳ್ವೊಲದ ಅಣ್ಣಿಗೇರಿಯ ಜೋಯಿಸ ಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಗೆ ಹುಟ್ಟಿದ ಮಗನು. ಕೊಂಡಕುಂದೆಯ ದೇಸಿಗಗಣದ ಪುಸ್ತಕಗಚ್ಛ ಪರಂಪರೆಯ ಪಂಡರಂಗವಲ್ಲಿಯ (ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಪಂಡರಪುರ) ಜಯನಂದಿಸಿದ್ಧಾಂತ ಭಟ್ಟಾರಕನ ಶಿಷ್ಯನು. ಎಲ್ಲ ವಿದ್ಯೆಗಳಲ್ಲಿಯೂ ಕುಶಲನಾಗಿದ್ದನು. ಭವ್ಯರತ್ನಾಕರ ಎನಿಸಿದ್ದನು. ಅವಯವಾಷ್ಟಕಗಳೆಂಬ ಎಂಟು ಗುಣಗಳ ಕಡೆಗೆ ಪಕ್ಷಪಾತಿಯಾಗಿದ್ದನು. ಅಂತಹ ಜಿನವಲ್ಲಭನು ಸಬ್ಬಿನಾಡಿನ ನಟ್ಟನಡುವೆ ಇದ್ದ ಧರ್ಮಪುರದ ಉತ್ತರ ದಿಕ್ಕಿನ ವೃಷಭಗಿರಿ

ಎಂಬ ಅನಾದಿಸಂಸಿದ್ಧ ತೀರ್ಥದ ದಕ್ಷಿಣದಲ್ಲಿದ್ದ ಸಿದ್ಧಶಿಲೆಯಲ್ಲಿ ತನ್ನ ಕುಲದೈವಗಳೆನಿಸಿದ್ದ ಎಲ್ಲ (ಇಪ್ಪತ್ನಾಲ್ಕು) ಜಿನಬಿಂಬಗಳನ್ನೂ, ಚಕ್ರೇಶ್ವರಿಯ ಬಿಂಬವನ್ನೂ (ಆದಿನಾಥ ತೀರ್ಥಂಕರನ ಯಕ್ಷಿ), ಇತರ ಜಿನಪ್ರತಿಮೆಗಳನ್ನೂ, ತ್ರಿಭುವನತಿಳಕ ಎಂಬ ಬಸದಿಯನ್ನೂ, ಕವಿತಾಗುಣಾರ್ಣವ ಎಂಬ ಕೆರೆಯನ್ನೂ, ಮದನವಿಳಾಸ ಎಂಬ ವನವನ್ನೂ ಮಾಡಿಸಿದನು' ಎಂಬ ನಿರೂಪಣೆಯಿದೆ.[೭]

ಅಣ್ಣಿಗೇರಿ ಪಟ್ಟಣದಲ್ಲಿರುವ ಜೈನ ದೇಶಪಾಂಡೆ ದೇಸಗತಿ ಮನೆತನದವರೇ ಜಿನವಲ್ಲಭನ ತಂದೆ ಭೀಮಪ್ಪಯ್ಯನ ವಂಶಸ್ಥರು ಎಂಬುದನ್ನು ಜಿ. ಬ್ರಹ್ಮಪ್ಪ, ಹಂಪ' ನಾಗರಾಜಯ್ಯ, ಎಂ.ಎಂ. ಕಲಬುರ್ಗಿ, ಎಂ. ಚಿದಾನಂದಮೂರ್ತಿ ಅವರು ಗುರುತಿಸಿದ್ದಾರೆ.[೮] ಹಾಗೆಯೇ ಈ ಪಟ್ಟಣದಲ್ಲಿರುವ ಗೋವಿಂದಭಟ್ಟ ಜೋಷಿ ಮನೆತನದವರೇ ಜಿನವಲ್ಲಭನ ತಾಯಿ ಜೋಯಿಸ ಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಯ ವಂಶಸ್ಥರು ಎಂಬುದನ್ನು ಎಂ. ಚಿದಾನಂದಮೂರ್ತಿ ಅವರು ಗುರುತಿಸಿದ್ದಾರೆ. ಇವರು ಸ್ಮಾರ್ತ ಬ್ರಾಹ್ಮಣರು ಮತ್ತು ಅತ್ರಿ ಗೋತ್ರದವರು.[೯]

ಪಂಪನ ಪೂರ್ವಿಕರಾದ ಮಾಧವ ಸೋಮಯಾಜಿ (ಕ್ರಿ.ಶ. ೮೦೧), ಅಭಿಮಾನಚಂದ್ರ, ಕೊಮರಯ್ಯ, ಭೀಮಪ್ಪಯ್ಯ ವೆಂಗಿಮಂಡಲದ (ಆಂಧ್ರಪ್ರದೇಶದಲ್ಲಿ ಕೃಷ್ಣಾ ಮತ್ತು ಗೋದಾವರಿ ನದಿಗಳ ಮಧ್ಯದ ಪ್ರದೇಶ) ಗುಂಡಿಕರ್ರ (ಗುಂಡ್ಲುಕಮ್ಮ) ನದಿತೀರದ ವೆಂಗಿಪಳು ಎಂಬ ಅಗ್ರಹಾರದಲ್ಲಿ (ಗುಂಟೂರು ಜಿಲ್ಲೆಯ ಬಾಪಟ್ಲಾ ತಾಲ್ಲೂಕಿನ ವಂಗಿಪುರ) ನೆಲೆಸಿದ್ದರು. ವೇದವಿದ್ವತ್ತು, ಯಜ್ಞನಿರ್ವಹಣೆ, ದಾನಗುಣ, ಜ್ಞಾನಸಂಪತ್ತು ಈ ವಂಶದ ಮುಖ್ಯ ಲಕ್ಷಣಗಳಾಗಿದ್ದವು. ಅವರೆಲ್ಲರೂ ಕಮ್ಮೆಕುಲದ ಜಮದಗ್ನಿ ಪಂಚಾರ್ಷೇಯ ಪ್ರವರದ ಶ್ರೀವತ್ಸಗೋತ್ರದ ಸ್ಮಾರ್ತ ಬ್ರಾಹ್ಮಣರಾಗಿದ್ದರು. ಸಕಲ ಶಾಸ್ತ್ರಾರ್ಥಗಳಲ್ಲಿ ಪಾಂಡಿತ್ಯ ಹೊಂದಿದ್ದ ಮಾಧವ ಸೋಮಯಾಜಿ ವೇಮುಲವಾಡದ ಅರಸ ೧ನೆಯ ನರಸಿಂಹನು ರಾಜದತ್ತವಾಗಿ ಕೊಡಮಾಡಿದ ವೆಂಗಿಪಳುವಿನ (ವಸಂತ, ಕೊಟ್ಟೂರು, ನಿಡುಗುಂದಿ, ವಿಕ್ರಮಪುರ ಎಂಬ ನಾಲ್ಕು ಅಗ್ರಹಾರಗಳಿಂದ ಕೂಡಿ ರೂಪುಗೊಂಡಿದ್ದ ಪ್ರದೇಶ) ಮೇಲಾಧಿಕಾರಿಯಾಗಿದ್ದನು. ಈತನು ಶ್ರೇಷ್ಠವಾದ ದಿಕ್ಕೆಂಬ ಹೆಣ್ಣಿಗೆ ಅಲಂಕಾರವೆನಿಸಿ ಹಬ್ಬಿದ್ದ ಸರ್ವಕ್ರತು ಯಜ್ಞದ ಹೊಗೆಯಿಂದ ತನ್ನ ಯಶಸ್ಸನ್ನೂ ಕಪ್ಪಾಗಿಸಿದನು. ಸೋಮ ಎಂಬ ಹೆಸರಿನ ಯಜ್ಞ ಮಾಡುವ ವೃತ್ತಿಯಿಂದಾಗಿ ಈತನ ಮನೆತನಕ್ಕೆ ಸೋಮಯಾಜಿ ಎಂಬ ಅಡ್ಡಹೆಸರು ಬಂದಿದ್ದಿತು. ಮಾಧವ ಸೋಮಯಾಜಿಯ ಮಗನಾದ ಅತ್ಯಭಿಮಾನಿಯಾಗಿದ್ದ ಅತಿಪುರುಷೋತ್ತಮ ಅಭಿಮಾನಚಂದ್ರನು ಅಸದೃಶ್ಯ ಸಂಪತ್ತಿಗೊಡೆಯನಾಗಿ ಸರ್ವಸ್ವವನ್ನೂ (ಆನೆ, ಕುದುರೆ ಇತ್ಯಾದಿ ಸಂಪತ್ತು) ದಾನವೆಸಗಿದ ಅಪ್ರತಿಮ ದಾನಿಯಾಗಿದ್ದನು. ಈತನು ವೆಂಗಿಪಳುವನ್ನು ಬಿಟ್ಟು ಗುಂಡಿಕರ್ರದ ಗುಂಡಿನದಿಯ ಸಮೀಪದ ನಿಡುಂಗೊಂಡೆಗೆ (ನಿಡಗುಂದಿ) ಬಂದು ನೆಲೆಸಿದ್ದನು. ಈತನ ಮಗನಾದ ಉಚಿತ ಪುರಾತನ ಚರಿತನಾದ ಕೊಮರಯ್ಯನು ಸಮಸ್ತ ವೇದ-ವೇದಾಂಗಗಳಲ್ಲಿ ಅಸಾಧಾರಣ ವಿದ್ಯಾವಂತನಾಗಿ ಆಚಾರ ಸಂಪನ್ನನಾಗಿದ್ದನು. ಈತನು ವೆಂಗಿಮಂಡಲದ

ನಿಡುಂಗೊಂಡೆಯಿಂದ ಕಿಸುಕಾಡಿನ (ಕಿಸುಕಾಡು-೭೦) ಸಯ್ಯಡಿ (ರೋಣ ತಾಲ್ಲೂಕಿನ ಸವಡಿ) ಪ್ರದೇಶಕ್ಕೆ ಬಂದಿರಬೇಕು.[೧೦]

ಕೊಮರಯ್ಯನ ಮಗನಾದ ಭೀಮಪ್ಪಯ್ಯನು ಅಣ್ಣಿಗೇರಿಯ ಬ್ರಾಹ್ಮಣ ಮನೆತನದ ಜೋಯಿಸ ಸಿಂಘನ ಮೊಮ್ಮಗಳಾದ ಅಬ್ಬಣಬ್ಬೆಯನ್ನು ವಿವಾಹವಾಗುವ ಪೂರ್ವದಲ್ಲಿ ಶೈವ ಸ್ಮಾರ್ತನಾಗಿದ್ದನು. ಅಜ್ಞಾನವೆಂಬ ಕತ್ತಲೆಗೆ ಸೂರ್ಯನಂತಿದ್ದವನೂ, ಗುಣಶಾಲಿಯೂ, ಮಹಾಜ್ಞಾನಿಯೂ, ಗುಣಮಣಿ ರತ್ನಾಕರನೂ ಆಗಿದ್ದನು. ಪಂಪನು 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ (ಕ್ರಿ.ಶ. ೯೪೨ರ) ಭೀಮಪ್ಪಯ್ಯನು–

ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ
ಮಾತೊ ಜಿನೇಂದ್ರಧರ್ಮವೆ ವಲಂ ದೊರೆ ಧರ್ಮದೊಳೆಂದು ನಂಬಿ ತ
ಜ್ಞಾತಿಯನುತ್ತರೋತ್ತರಮೆ ಮಾಡಿ ನೆಗಳ್ಚಿದನಿಂತಿರಾತ್ಮ ವಿ
ಖ್ಯಾತಿಯನಾತನಾತನ ಮಗಂ ನೆಗಳ್ದಿಂ ಕವಿತಾಗುಣಾರ್ಣವಂ ॥

'ಜಾತಿಯಲ್ಲೆಲ್ಲ ಉತ್ತಮಜಾತಿಯ ಬ್ರಾಹ್ಮಣಕುಲಜನಿಗೆ, ಧರ್ಮಗಳಲ್ಲೆಲ್ಲ ರಾಜಧರ್ಮವೇ ನಿಶ್ಚಯವಾಗಿಯೂ ಯೋಗ್ಯವಾದದ್ದೆಂದು ನಂಬಿ ತನ್ನ ಬ್ರಾಹ್ಮಣ ಜಾತಿಯನ್ನು ಅಭಿವೃದ್ಧಿ ಮಾಡಿ, ಸ್ವ-ಇಚ್ಛೆಯಿಂದ ಜೈನ ಧರ್ಮಕ್ಕೆ ಮತಾಂತರನಾಗಿ ತನ್ನ ಹೆಸರನ್ನು ಹೆಚ್ಚಿಸಿಕೊಂಡನು' ಎಂದು ದಾಖಲಿಸಿದ್ದಾನೆ.[೧೧] ಹೀಗಾಗಿ ಭೀಮಪ್ಪಯ್ಯನು ಮತಾಂತರದ ವಿಷಯದಲ್ಲಿ ಭೌತಿಕ ಲಾಭಗಳಿಗೆ ಆಸೆಪಡದೇ 'ಜಾತಿಗಳಲ್ಲಿ ವಿಪ್ರಜಾತಿಯೇ ಉತ್ತಮ. ಈ ಜಾತಿಯವನು ಸ್ವೀಕರಿಸಲು ಯೋಗ್ಯವಾದ ಇನ್ನೂ ಉತ್ತಮವಾದ ಜಾತಿಯೆಂದರೆ ಜೈನ' ಎಂದು ಗಂಭೀರವಾಗಿ ವಿಚಾರಮಾಡಿ ಮತಾಂತರವಾಗಿದ್ದರಿಂದ ವಿವೇಕಶೀಲನಾಗಿ, ಪ್ರಗತಿಪರ ಮನೋಭಾವದವನಾಗಿ ತೋರುತ್ತಾನೆ. ಭೀಮಪ್ಪಯ್ಯನ ಅಜ್ಜ ಅಭಿಮಾನಚಂದ್ರನಿಗಿದ್ದ ಜೈನಪರವಾದ ಬಿರುದುಗಳನ್ನು (ಭವ್ಯರತ್ನಾಕರ, ಸಕಳಕಳಾಪ್ರವೀಣ, ಗುಣಪಕ್ಷಪಾತಿ) ಅವಲೋಕಿಸಿದಾಗ, ಆತನು ಅದಾಗಲೇ ಜೈನಧರ್ಮದೆಡೆಗೆ ಒಲವು ಹೊಂದಿದ್ದನೆಂಬುದು ಸೂಚಿತವಾಗುತ್ತದೆ.[೧೨] ಆದರೆ ಭೀಮಪ್ಪಯ್ಯನೇ ಅಧಿಕೃತವಾಗಿ ಜೈನ ಧರ್ಮಕ್ಕೆ ಮತಾಂತರನಾಗಿದ್ದರಿಂದ ಆತನ ಹೆಸರನ್ನೇ ಮುಂದಣ ವಂಶದುದ್ದಕ್ಕೂ ಉಳಿಸಿಕೊಂಡು ಬರಲಾಗಿದೆ. ಅಣ್ಣಿಗೇರಿ ಪಟ್ಟಣದಲ್ಲಿರುವ ಜೈನ ದೇಶಪಾಂಡೆ ಮನೆತನದಲ್ಲಿ 'ಭೀಮಪ್ಪಯ್ಯ' ಎಂಬ ಹೆಸರು ತಲೆಮಾರಿನಿಂದ ತಲೆಮಾರಿಗೆ ಇಂದಿಗೂ ಉಳಿದು ಬಂದಿದೆ. ಹಾಗೆಯೇ ಈ ಮನೆತನದ ಬಹುತೇಕ ಹೆಸರುಗಳಲ್ಲಿ ಆತನ ಹೆಸರಿನ ಉತ್ತರಪದ 'ಅಯ್ಯ' ಎಂಬುದರ ಪ್ರಭಾವ ಗೋಚರಿಸುತ್ತದೆ. ಈ ಮನೆತನಕ್ಕೆ ಪೇಶ್ವೆಯವರ ಕಾಲದಲ್ಲಿ 'ದೇಶಪಾಂಡೆ' ಎಂಬ ವಂಶನಾಮ ಬಂದಿರುವಂತೆ ತೋರುತ್ತದೆ.

ಪಂಪ ಮತ್ತು ಜಿನವಲ್ಲಭನ ಹುಟ್ಟೂರು, ಪತ್ನಿಯರು, ಮಕ್ಕಳು, ಮೊಮ್ಮಕ್ಕಳು, ವಾಸಸ್ಥಳ ಇತ್ಯಾದಿ ವಿಚಾರಗಳ ಕುರಿತು ಇದುವರೆಗೂ ಯಾವುದೇ ಅಧಿಕೃತ ದಾಖಲೆಗಳು ಲಭ್ಯವಾಗಿಲ್ಲ. ಭೀಮಪ್ಪಯ್ಯನು ಜೈನ ಧರ್ಮಕ್ಕೆ ಮತಾಂತರವಾದ ತರುವಾಯ ವೆಂಗಿಪಳುವನ್ನು ತೊರೆದು ಬೆಳ್ವೊಲ, ಪುಲಿಗೆರೆ, ಬನವಾಸಿ ಪ್ರದೇಶಗಳನ್ನೊಳಗೊಂಡ

ತೆಂಕನಾಡಿಗೆ ಬಂದು ನೆಲೆಸಿರುವಂತೆ ತೋರುತ್ತದೆ. ಇದೇ ಸಂದರ್ಭದಲ್ಲಿ ಪಂಪನು ಜನಿಸಿದನು. ಈತನನ್ನು ಇಂದ್ರನರೇಂದ್ರವಂದ್ಯನಾದ (ಮಳಖೇಡದ ರಾಷ್ಟ್ರಕೂಟರ ಮುಮ್ಮಡಿ ಇಂದ್ರ?) ದೇವೇಂದ್ರಮುನೀಂದ್ರಾದಿ ಗುರುಗಳಿಂದ ಅಧಿಷ್ಠಿತವಾದ ಗುರುಕುಲದಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಿಸಿದ್ದನು. ಇದು ಪಂಪನೇ 'ಆದಿಪುರಾಣ'ದಲ್ಲಿ (ಕ್ರಿ.ಶ. ೯೪೧) ತಾನು ಮಲಧಾರಿಸಿದ್ಧಾಂತ ಮುನೀಶ್ವರ, ಜಯನಂದಿಮುನಿ, ದೇವೇಂದ್ರಮುನಿಗಳಿಂದ ಅಧಿಷ್ಠಿತವಾದ ಗುರುಕುಲದಲ್ಲಿ ಬಾಲ್ಯಮೊದಲ್ಗೊಂಡು ಪ್ರೌಢತೆಗೊಳ್ಳುವವರೆಗೂ ಅಭ್ಯಾಸಿಸಿ ಪ್ರಬುದ್ಧನಾದವನೆಂದೂ, ತಾನೊಬ್ಬನೇ ಗುರುಗಳಿಗೆ ಪ್ರಿಯತಮನಾಗಿದ್ದವನೆಂದೂ ಸೂಚಿಸಿರುವ ದಾಟಿಯಿಂದ ಮನದಟ್ಟಾಗುತ್ತದೆ.[೧೩] ಶ್ರವಣಬೆಳಗೊಳದ ಕ್ರಿಶ. ಸುಮಾರು ೧೨ನೆಯ ಶತಮಾನದ ಶಾಸನವು ಪ್ರಾಚೀನ ಮುನಿಪರಂಪರೆಯನ್ನು ಸ್ಮರಿಸುತ್ತ, ವಂಕಾಪುರದ (ಶಿಗ್ಗಾಂವ ತಾಲ್ಲೂಕಿನ ಬಂಕಾಪುರ) ದೇವೇಂದ್ರಮುನಿಯನ್ನು ಮುನಿಸಂಘಾಧಿಪತಿಯೂ, ಸದ್ಗುಣಗಣಿಯೂ, ಸಿದ್ಧಾಂತ ಮತ್ತು ಆಗಮ ವಿಶಾರದನೂ, ಸಮ್ಯಗ್‌ಜ್ಞಾನಾದಿಗುಣಾನ್ವಿತನೂ ಎಂದೆಲ್ಲ ವರ್ಣಿಸಿದೆ.[೧೪] ಇದರಿಂದ ದೇವೇಂದ್ರಮುನಿಯಿಂದ ಅಧಿಷ್ಠಿತವಾದ ಕೊಂಡಕುಂದಾನ್ವಯ ದೇಸಿಗಣ ಪರಂಪರೆಯ ಗುರುಕುಲವು (ಜೈನ ಮಠ) ಬನವಾಸಿ ದೇಶದ ಕೇಂದ್ರ ಪಟ್ಟಣವಾಗಿದ್ದ ಬಂಕಾಪುರದಲ್ಲಿದ್ದು, ಇಲ್ಲಿಯೇ ಪಂಪನು ವಿದ್ಯಾಭ್ಯಾಸ ಮಾಡಿದ್ದನೆಂಬುದು ಭಾಸವಾಗುತ್ತದೆ. ಪಂಪನು ತನ್ನ ಬಾಲ್ಯಾವಧಿ ಮತ್ತು ಯೌವನಾವಸ್ಥೆಯಲ್ಲಿ ಬೆಳ್ವೊಲ, ಪುಲಿಗೆರೆ, ಬನವಾಸಿ ಪ್ರದೇಶಗಳಲ್ಲಿ ಸಂಚರಿಸಿ, ಇಲ್ಲಿಯ ಪ್ರಾಕೃತಿಕ ಸೌಂದರ್ಯದ ವಿಲಾಸ ವೈಭವ ಮತ್ತು ಭಾಷೆ, ಸಂಸ್ಕೃತಿಯ ಪ್ರಭಾವಕ್ಕೊಳನಾಗಿದ್ದನು. ಈ ಪೂರ್ವಾನುಭವವನ್ನು 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಮನದುಂಬಿ ನೆನೆಯುತ್ತ, ತಾನು ಮತ್ತೆ ಇಲ್ಲಿಯೇ ಹುಟ್ಟಬೇಕೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.[೧೫] ಜೊತೆಗೆ ಈತನ ಕವಿತೆಗಳಿಗೆ (ಕಾವ್ಯಗಳು) ಪುಲಿಗೆರೆಯ (ಲಕ್ಷ್ಮೇಶ್ವರ) ತಿರುಳ್ಗನ್ನಡ ಭಾಷೆಯೇ ಸಾಜವಾಗಿದೆ.[೧೬] ಈ ಎಲ್ಲ ಸೂಚನೆಗಳು ಭೀಮಪ್ಪಯ್ಯ ಮತ್ತು ಅಬ್ಬಣಬ್ಬೆ ದಂಪತಿಗಳ ಚೊಚ್ಚಲ (ಹಿರಿಯ) ಮಗನಾದ ಪಂಪನು ತನ್ನ ತಾಯಿಯ ತವರೂರಾದ ಬನವಾಸಿ ದೇಶದ ಬೆಳ್ವೊಲನಾಡಿನ ರಾಜಧಾನಿ ಪಟ್ಟಣ ಅಣ್ಣಿಗೇರಿ ಪಟ್ಟಣದಲ್ಲಿಯೇ ಕ್ರಿಶ. ೯೦೨ರಲ್ಲಿ ಜನಿಸಿರುವುದನ್ನು ದೃಢಪಡಿಸುತ್ತವೆ.[೧೭]

ಪಂಪನ 'ವಿಕ್ರಮಾರ್ಜುನ ವಿಜಯ' ಕಾವ್ಯವನ್ನು ಮೆಚ್ಚಿ, ಅರಿಕೇಸರಿ ಈತನನ್ನು ತನ್ನ ರಾಜಧಾನಿ ಬೋಧನಕ್ಕೆ ಬರಮಾಡಿಕೊಂಡು ಬೀರ, ಅಳವಿ, ನನ್ನಿ, ಚಾಗಗಳೆಂಬ ಚತುರ್ಮುಖಾಲಂಕೃತವಾದ ತನ್ನ ರಾಜಶಾಸನದ ಕೀರ್ತಿಯು ಆ ಕಾವ್ಯದೊಡನೆ ಕ್ರಮವಾಗಿ ಚಂದ್ರ, ಅರ್ಕ, ತಾರ, ಮೇರುಗಳಿರುವವರೆಗೂ ನೆಲೆಗೊಳ್ಳಬೇಕೆಂಬ ಉದ್ದೇಶದಿಂದ ಸಬ್ಬಿನಾಡೊಳಗಿನ ಧರ್ಮಪುರ ಎಂಬ ಅಗ್ರಹಾರವನ್ನು ಶಾಸನಪೂರ್ವಕವಾಗಿ ದತ್ತಿಯಾಗಿ ಕೊಟ್ಟು ಮನ್ನಿಸಿದನು. ಹಾಗೆಯೇ 'ಕವಿತಾಗುಣಾರ್ಣವ' ಎಂಬ ಬಿರುದಿನಿಂದ ಗೌರವಿಸಿದನು.[೧೮] ಪಂಪನು ಕೆಲಕಾಲ ಆ ಧರ್ಮಪುರ ಅಗ್ರಹಾರದಲ್ಲಿದ್ದು, ಪ್ರಾಯಶಃ ತನ್ನ ಆಶ್ರಯದಾತ ಇಮ್ಮಡಿ ಅರಿಕೇಸರಿಯ

ಮರಣದ ತರುವಾಯ ಕ್ರಮೇಣ ಬೋಧನ, ಬೆಳ್ವೊಲ (ಅಣ್ಣಿಗೇರಿ), ಪುಲಿಗೆರೆ (ಲಕ್ಷ್ಮೇಶ್ವರ), ಗೋಕರ್ಣ, ಬನವಾಸಿ ಪ್ರದೇಶಗಳಲ್ಲಿ ಸಂಚರಿಸುತ್ತ, ಕೊನೆಗಾಲದಲ್ಲಿ ತನ್ನ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣಗಳ ಪ್ರೀತಿಯ ಗುರುಗಳಾದ ರಾಜಾಧಿರಾಜರುಗಳಿಂದ ಪೂಜಿತನೂ, ಭಾರತೀಭಾಳಪಟ್ಟ ಬಿರುದಾಂಕಿತನೂ ಆದ ಕೊಂಡಕುಂದಾನ್ವಯ ಪರಂಪರೆಯ ದೇವೇಂದ್ರಕೀರ್ತಿಯಿಂದ ದೀಕ್ಷೆಯನ್ನು ಸ್ವೀಕರಿಸಿ ಮುನಿಯಾದನೆಂದು ಅಭಿಪ್ರಾಯವಿದೆ.[೧೯]

ಪಂಪನ ತರುವಾಯ ಆತನ ಸಹೋದರ ಜಿನವಲ್ಲಭನು ಧರ್ಮಪುರ ಅಗ್ರಹಾರದ ಅಧಿಪತಿಯಾದನು. ಬ್ರಾಹ್ಮಣರಿಗೆ ಕೊಡಬೇಕಾದ ಧರ್ಮಪುರ ಅಗ್ರಹಾರವನ್ನು ಅಬ್ರಾಹ್ಮಣರಿಗೆ (ಜೈನರು) ಕೊಟ್ಟಿದ್ದರಿಂದ ಸ್ಥಳೀಯ ಬ್ರಾಹ್ಮಣರು ಪ್ರಾರಂಭದಿಂದಲೂ ಅಸಂತುಷ್ಟರಾಗಿದ್ದರು. ಜಿನವಲ್ಲಭನು ಧರ್ಮಪುರ ಅಗ್ರಹಾರದ ಅಧಿಪತಿಯಾದೊಡನೇ, ಇದರ ಒಡೆತನದ ಕುರಿತಾಗಿ ವಾದ–ವಿವಾದಗಳು ಮತ್ತು ಘರ್ಷಣೆಗಳು ಚುರುಕುಗೊಂಡವು. ಇದರಿಂದ ಮನನೊಂದ ಜಿನವಲ್ಲಭನು ಅಲ್ಲಿಂದ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಪೂರ್ವಾರ್ಧದಲ್ಲಿ ತನ್ನ ತಾಯಿಯ ತವರೂರು ಅಣ್ಣಿಗೇರಿಗೆ ವಲಸೆ ಬಂದಿರುವಂತೆ ತೋರುತ್ತದೆ. ಈ ವಿಚಾರವು "ಪ್ರಸಿದ್ಧವಾದ ಚಾಳುಕ್ಯವಂಶದ ಉದಾತ್ತನಾದ ದೊರೆ ಅರಿಕೇಸರಿಯು ಪ್ರಸಿದ್ಧವಾದ ವಿಕ್ರಮಾರ್ಜುನ ವಿಜಯ ಕಾವ್ಯಕ್ಕೆ ಮೆಚ್ಚಿ ಬರೆದುಕೊಟ್ಟ ಧರ್ಮಪುರ ಎಂಬುದು ಅದೇಯವಾದದ್ದು (ಬೇರೆಯವರಿಗೆ ಕೊಡದೆ ತಾನೇ ಅನುಭವಿಸಬೇಕಾದದ್ದು) ಎಂಬ ಶಾಸನ ಮತ್ತು ಪಂಪನು ನಂಬಿದ್ದ ಜೈನಧರ್ಮದ ಖ್ಯಾತಿಯನ್ನು ಈ ವೃಷಭಪರ್ವತವು ತಾನೇ ಹೇಳುವುದಿಲ್ಲವೇ?. ಅಲ್ಲಿ ಗಾಳಿ ಬೀಸಲು, ಸೂರ್ಯಕಿರಣ ಪ್ರವೇಶಿಸಲು, ಮೃಗಗಳು ಸುಳಿಯಲು, ಆಗಸದಲ್ಲಿ ಹಕ್ಕಿಗಳು ಹಾರಲು ಸಾಧ್ಯವಿಲ್ಲವೆನಿಸಿದ್ದು, ಅನ್ಯತ್ವದ ಉದಯವು ಧರ್ಮದಲ್ಲಿ ಯಶಸ್ಸನ್ನು ಬೆಳೆಸುವಂತೆ ಮೆಚ್ಚಿ ಹರಿಗನು (ಅರಿಕೇಸರಿ) ಪಂಪನಿಗೆ ಕೊಟ್ಟ ಆ ಬ್ರಾಹ್ಮಣರ ವಾಸಗ್ರಾಮವು (ಅಗ್ರಹಾರವು) ಖ್ಯಾತವಾದ ಕಳಾಪಗ್ರಾಮವನ್ನು ಏನು ಹೋಲುವದಾಯಿತೋ?. ಎಲೆ ಹುಚ್ಚನೇ, ತಾಮ್ರಶಾಸನವನ್ನು ಬರೆಯಲಾಯಿತೇ? ಅದು ಅದೇಯವಾದದ್ದೇ? ಧರ್ಮಪುರವು ಖ್ಯಾತಿವೆತ್ತ ಅರಿಕೇಸರಿ ಕೊಟ್ಟಿದ್ದೇ? ಪ್ರಸಿದ್ಧನಾದ ಪಂಪನು ಅದನ್ನು ಪಡೆದನೇ? ಹೇಳಿ ಎಂದು ಕಂಡಕಂಡವರನ್ನೆಲ್ಲ ಪದೇ ಪದೇ ಕೇಳದೆ ನೀನೇ ಹೋಗಿ ಆ ಸುಂದರವಾದ ವೃಷಭಪರ್ವತದ ಬಂಡೆಯ ಮೇಲೆ ಬರೆದಿರುವ ಅಕ್ಷರಗಳನ್ನು (ಶಾಸನವನ್ನು) ನೋಡು" ಎಂದು ಕುರ್ಕ್ಯಾಲ ಶಾಸನದಲ್ಲಿ ಜಿನವಲ್ಲಭನೇ ಸೂಚಿಸಿರುವ ನಿರೂಪಣೆಯ ಧಾಟಿಯಿಂದ ವ್ಯಕ್ತವಾಗುತ್ತದೆ.[೨೦]

ಜಿನವಲ್ಲಭನು ಅಣ್ಣಿಗೇರಿಗೆ ಆಗಮಿಸಿದ್ದ ಕಾಲಾವಧಿಯಲ್ಲಿ (ಕ್ರಿ.ಶ. ಸುಮಾರು ೧೧–೧೨ನೆಯ ಶತಮಾನ) ಈ ಪ್ರದೇಶದಲ್ಲಿಯೂ ಜೈನ ಧರ್ಮಕ್ಕೆ ಆಳರಸರಾದಿ ಅಧಿಕಾರಿಗಳು ಮತ್ತು ವರ್ತಕರ ಆಶ್ರಯ ತಪ್ಪಿಹೋಗಿ ಇದರ ಬೇರುಗಳು ಸಡಿಲುಗೊಳ್ಳಲಾರಂಭಿಸಿದ್ದವು. ಅಗ್ರಹಾರ ಸಂಸ್ಕೃತಿಯ ಮಹಾಜನರು ಮತ್ತು ದೇವಾಲಯ ಸಂಸ್ಕೃತಿಯ ಕಾಳಾಮುಖ ಶೈವರು ರಾಜಕೀಯ, ಧಾರ್ಮಿಕ, ಸಾಮಾಜಿಕವಾಗಿ

ಪ್ರಬಲರಾಗಿ ಜೈನರೊಂದಿಗೆ ಶೀತಲ ಸಮರವನ್ನು ಪ್ರಾರಂಭಿಸಿ, ಇವರನ್ನು ಮತಾಂತರ ಮತ್ತು ಬಸದಿಗಳ ನಾಶಪ್ರಯತ್ನದಿಂದ ದುರ್ಬಲಗೊಳಿಸುವಲ್ಲಿ ನಿರತರಾಗಿದ್ದರು. ಇಂತಹ ಸಂದರ್ಭದಲ್ಲಿ ಜೈನರು ತಮ್ಮ ರಕ್ಷಣೆಗಾಗಿ ವೈಷ್ಣವ-ಶೈವರೊಂದಿಗೆ ಹೊಂದಾಣಿಕೆ ಮತ್ತು ಒಡಂಬಡಿಕೆಯಿಂದ ಬದುಕುವುದು ಅನಿವಾರ್ಯವಾಗಿತ್ತು.[21] ಹೀಗಾಗಿ ಜಿನವಲ್ಲಭ ಮತ್ತು ಆತನ ವಂಶಜರು ಇಲ್ಲಿಯ ರಾಜಕೀಯ, ಧಾರ್ಮಿಕ, ಸಾಮಾಜಿಕ ವಾತಾವರಣಕ್ಕೆ ಹೊಂದಿಕೊಂಡು ಮುಂದುವರಿದಂತೆ ತೋರುತ್ತದೆ.

ದೇಶಪಾಂಡೆ ಮನೆತನಕ್ಕೆ ಸಂಬಂಧಿಸಿದಂತೆ ಈಗ ಲಭ್ಯವಿರುವ ಕಂದಾಯ ದಾಖಲೆಗಳು ಮತ್ತು ಹೆಳವರ ಹೊತ್ತಿಗೆಗಳಲ್ಲಿ ಉಲ್ಲಿಖಿತ ಧರ್ಮರಸಯ್ಯ ಎಂಬುವವನು ಜಿನವಲ್ಲಭನ ವಂಶಸ್ಥನಾಗಿದ್ದಾನೆ. ಅಣ್ಣಿಗೇರಿಯ ಕ್ರಿ.ಶ. ೧೬೪೬ರ ಶಾಸನದಲ್ಲಿ–

> ಶ್ರೀಮನ್ಮಹಾರಾಜ ಸಿಂಹ್ವಾಸನ ವಿದ್ಯಾಪುರದ ರಾಜ್ಯಾಧಿಪತಿ
> ರಾಜಸಿಂಹಾಸನಕೆ ಅಧಿಪತಿಯಾದ ಕೂಲಿತಾನ ಮಾಮುದ
> ಪಾಥುಕ್ಯ ಸ್ಥರಿಂಜೀವಿ ರಾಜ್ಯವನಾಳುತ್ತಯಿರಲಾಗಿ ಅವರ
> ಕಾರ್ಯ್ಯಕ್ಕೆ ಕರ್ತರಾದ ರಣದುಲ್ಲಕಾನ ಸಾಹೇಬರಿಗೆ ರುಸ್ತುಂ
> ಮಜಮೆ ಸಾಹೇಬರು ಅಂಣಿಗೆರೆಯ ಸೀಮೆಯ ವೊಳಗೆ
> ರುಸ್ತುಂಮ ಪೇಠೆಯ ಕಟ್ಟಿಸಿದಾತ ಸೀರಅಲಿ ಸಾಹೇಬರು
> ಮುಜೆಮಿದಾರ ತಂಮಪ್ಪಸ್ವಾಮಿ ದೇಸಾಯ ಮಗ ಪರಪ್ಪ
> ದೇಸಕುಲಕರುಣಿ ಧರ್ಮರಸೈಯ್ಯಂಗಳ ಮಗ ನಾಗಪ್ಪ
> ಪಟ್ಟಣಸೆಟಿ ಗಿರಿಯಪ್ಪನ ಮಗ ಪರಮೇಶ್ವರಸೆಟಿ ಮಮಹ
> ನಾಡುಗಳಿಗೆ ಸಾಹೇಬರು ಕೊಟ ಕವಲು ಹಂನೆರಡು
> ವರುಷ ೧೨ ....

‘ವಿಜಯಪುರ ಮಹಮ್ಮದಷಹನ (ಕ್ರಿ.ಶ. ೧೬೨೬–೧೬೫೮) ಆಳ್ವಿಕೆಯ ಸಂದರ್ಭದಲ್ಲಿ, ಆತನ ಸಾಮಂತನಾದ ರಣದುಲ್ಲಖಾನ ಸಾಹೇಬನ ಅಧಿಕಾರಿಯಾದ ರುಸ್ತುಂ ಮಜಮೆ ಸಾಹೇಬನು ಕ್ರಿ.ಶ. ೧೬೪೬ರ ನವೆಂಬರ್ ೨೯, ರವಿವಾರದಂದು ಅಣ್ಣಿಗೇರಿ ಸೀಮೆಯೊಳಗೆ ತನ್ನ ಹೆಸರಿನಲ್ಲಿ ‘ರುಸ್ತುಂಮ ಪೇಠೆ’ಯನ್ನು ಕಟ್ಟಿಸಿ, ಇದರ ನಿರ್ವಹಣೆಗಾಗಿ ದೇಸಕುಲಕರ್ಣಿ ಧರ್ಮರಸಯ್ಯನ ಮಗ ನಾಗಪ್ಪ (ನಾಗಪ್ಪಯ್ಯ) ಮೊದಲಾದವರಿಗೆ ಹನ್ನೆರಡು ವರ್ಷ ಕೌಲು ಕೊಟ್ಟನು’ ಎಂಬ ನಿರೂಪಣೆಯಿದೆ.[22] ಧರ್ಮರಸಯ್ಯನಿಗೆ ನಾಗಪ್ಪಯ್ಯ, ರಾಮರಸಯ್ಯ, ಚಾಮರಸಯ್ಯ ಎಂಬ ಮೂವರು ಮಕ್ಕಳಿದ್ದರು. ಚಾಮರಸಯ್ಯನಿಗೆ ಸಂತಾನ ಇರಲಿಲ್ಲ. ರಾಮರಸಯ್ಯನಿಗೆ ಹಿರೇನಾಗಪ್ಪಯ್ಯ ಎಂಬ ಮಗನಿದ್ದನು. ಈತನಿಗೆ ಸಂತಾನ ಇರಲಿಲ್ಲ. ಈತನು ಚಂದಪ್ಪಯ್ಯನನ್ನು ದತ್ತು ತೆಗೆದುಕೊಂಡನು. ಹಿರೇನಾಗಪ್ಪಯ್ಯ, ಈತನ ಧರ್ಮಪತ್ನಿ ಮತ್ತು ಮಗ ಚಂದಪ್ಪಯ್ಯ ಕೂಡಿಕೊಂಡು ವಂಶಾಭಿವೃದ್ಧಿಯ ಪುಣ್ಯ ಸಂಗ್ರಹಕ್ಕಾಗಿ ತಮ್ಮ ಇನಾಮತಿ ಓರೆಮಾನ್ಯದೊಳಗಿನ ಕೊಂಡಿಕೊಪ್ಪದ ಸೀಮೆಯಲ್ಲಿ ಕ್ರಿ.ಶ. ೧೭೧೬ರಲ್ಲಿ ಗದುಗಿನ

ತೋಂಟದಾರ್ಯ ಮಠಕ್ಕೆ ಭೂದಾನ ಮಾಡಿದ್ದಾರೆ.[೨೩] ಚಂದಪ್ಪಯ್ಯನಿಗೆ ನಾಗಪ್ಪಯ್ಯ ಎಂಬ ಮಗನಿದ್ದನು. ಈತನಿಗೆ ಬಾಳಪ್ಪಯ್ಯ ಎಂಬ ಮಗನಿದ್ದನು. ನಾಗಪ್ಪಯ್ಯ, ಈತನ ಧರ್ಮಪತ್ನಿ ಮತ್ತು ಮಕ್ಕಳು (ಬಾಳಪ್ಪಯ್ಯ) ತಮ್ಮ ವಂಶಾಭಿವೃದ್ಧಿ ಹಾಗೂ ಪುಣ್ಯ ಸಂಪಾದನೆಯ ನಿಮಿತ್ಯವಾಗಿ ಕ್ರಿ.ಶ. ೧೭೧೭ರ ಮೇ ೪ರಂದು ಗದುಗಿನ ಅನ್ನದಾನಿ ಮಠದ ಕರ್ತೃಗಳಾದ ತೋಂಟದ ಸಿದ್ಧೇಶ್ವರ ಸ್ವಾಮಿಗಳಿಗೆ ಕೊಂಡಿಕೊಪ್ಪ ಸೀಮೆಯಲ್ಲಿ ಭೂದಾನ ಮಾಡಿದ್ದಾರೆ.[೨೪]

ಬಾಳಪ್ಪಯ್ಯನಿಗೆ ಚಂದಪ್ಪಯ್ಯ ಎಂಬ ಮಗನಿದ್ದನು. ಚಂದಪ್ಪಯ್ಯನಿಗೆ ಬಾಳಪ್ಪಯ್ಯ ಎಂಬ ಮಗನಿದ್ದನು. ಬಾಳಪ್ಪಯ್ಯನಿಗೆ ಸಂತಾನ ಇರಲಿಲ್ಲ. ಈತನು ನಾರಪ್ಪಯ್ಯನನ್ನು (ಈತನನ್ನು ಶೂಗಪ್ಪ ಎಂತಲೂ ಕರೆಯಲಾಗಿದೆ) ದತ್ತು ತೆಗೆದುಕೊಂಡನು. ನಾರಪ್ಪಯ್ಯನು ಪೇಶ್ವೆಗಳು ಮತ್ತು ಬ್ರಿಟಿಷರ ಆಳ್ವಿಕೆಯ ಕಾಲಾವಧಿಯಲ್ಲಿ ಅಣ್ಣಿಗೇರಿ ಸೀಮೆಯಲ್ಲಿ ದೇಶಕುಲಕರ್ಣಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಕೊಲ್ಲಾಪುರದ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮೀಜಿಯ ಪರಮ ಶಿಷ್ಯನಾಗಿದ್ದನು. ಅವರ ಸ್ಫೂರ್ತಿ–ಪ್ರೇರಣೆಯಿಂದ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾನೆ. ಗದುಗಿನ ತೋಂಟದಾರ್ಯ ಮಠದಲ್ಲಿರುವ ಕ್ರಿ.ಶ. ೧೮೪೩ರ (ಶೋಭನ ಸಂವತ್ಸರ) ದಾಖಲು ಪತ್ರದಲ್ಲಿ 'ಅಣಿಗೇರಿ ದೇಶಪೆಂಡೆರ ಹೊಲದ ದಾನಪತ್ರ' ಎಂಬ ಪ್ರಸ್ತಾಪವಿದೆ.[೨೫] ಈ ಹಿನ್ನೆಲೆಯಲ್ಲಿ ಈತನು ಪ್ರಸ್ತುತ ಮಠಕ್ಕೆ ಭೂದಾನ ಮಾಡಿರುವಂತೆ ತೋರುತ್ತದೆ. ಈತನು ಕ್ರಿ.ಶ. ೧೮೪೫ರಲ್ಲಿ ಅಣ್ಣಿಗೇರಿಯ ಶಾಂತಿನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದ್ದಾನೆ.[೨೬] ನಾರಪ್ಪಯ್ಯನಿಗೆ ಬಾಳಪ್ಪಯ್ಯ ಮತ್ತು ಚಂದಪ್ಪಯ್ಯ ಎಂಬಿಬ್ಬರು ಮಕ್ಕಳಿದ್ದರು. ಬಾಳಪ್ಪಯ್ಯನಿಗೆ ನಾರಪ್ಪಯ್ಯ ಎಂಬ ಮಗನಿದ್ದನು. ನಾರಪ್ಪಯ್ಯನಿಗೆ ಸಂತಾನ ಇರಲಿಲ್ಲ. ಚಂದಪ್ಪಯ್ಯನಿಗೆ ಭಾಗುಬಾಯಿ, ಪದ್ಮಾಬಾಯಿ, ರಂಗುಬಾಯಿ ಎಂಬ ಮೂವರು ಮಕ್ಕಳಿದ್ದರು. ಭಾಗುಬಾಯಿಗೆ ಚಲ್ಲುಬಾಯಿ, ಪದ್ಮಾಬಾಯಿಗೆ ಲಕ್ಷ್ಮಿಬಾಯಿ, ರಂಗುಬಾಯಿಗೆ ಭೀಮಪ್ಪಯ್ಯ ಎಂಬ ಮಕ್ಕಳು ಜನಿಸಿದರು.

ಭೀಮಪ್ಪಯ್ಯ ಆದರ್ಶ ಜಿನಭಕ್ತರಾಗಿದ್ದರು. ಸದಾಚಾರ ಸಂಪನ್ನರಾಗಿದ್ದರು. ನೋಂಪಿ–ಪರ್ವಗಳನ್ನು ತುಂಬಾ ಆಸ್ಥೆಯಿಂದ ಆಚರಿಸುತ್ತಿದ್ದರು. ಕಾಯಕ ಹಿರಿಮೆಯನ್ನು ಬಲ್ಲವರಾಗಿದ್ದರು. ತಮ್ಮ ದುಡಿಮೆಯಿಂದ ಸುಖ–ಸಂತೃಪ್ತ ಜೀವನವನ್ನು ನಡೆಸುತ್ತಿದ್ದರು. ಅಣ್ಣಿಗೇರಿ ಪರಿಸರದಲ್ಲಿ ವಿವಿಧ ಧಾರ್ಮಿಕ, ಸಾಮಾಜಿಕ, ಲೋಕೋಪಯೋಗಿ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಅಣ್ಣಿಗೇರಿಯ ಶಾಂತಿನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ. ಈ ಬಸದಿಗೆ–

॥ ಭೀಮಪಯ್ಯಾ ದೇಶಪಾಂಡೆ ಬಸ್ತಿಗೆ ಕೊ ॥

ಹಿತ್ತಾಳೆಯ ಸಮಯುವನ್ನು (ಧೂಪಾರತಿ) ದಾನ ಕೊಟ್ಟಿದ್ದಾರೆ.[೨೭] ಇವರು ೧೯೧೬ರಲ್ಲಿ(?) ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಹಾತಕಣಗಲಾ ತಾಲ್ಲೂಕಿನ ಪೇಠವಡಗಾವದ ಲಡಗೆ ಮನೆತನದ ಭೂಪಾಲ ಅವರ ಸಹೋದರಿ

ಸುಂದ್ರಾಬಾಯಿಯನ್ನು ವಿವಾಹವಾಗಿದ್ದರು. ಇವಳಿಗೆ ಸಂತಾನ ಪ್ರಾಪ್ತಿಯಾಗಲಿಲ್ಲ. ಹಾಗಾಗಿ ೧೯೧೯ರಲ್ಲಿ(?) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೋರಗಾಂವದ ಚಿಪ್ರೆ ಮನೆತನದ ಲಕ್ಷ್ಮಣ ಮತ್ತು ಏನೂತಾಯಿ ದಂಪತಿಗಳ ಮಗಳು ಚಂದ್ರಾಬಾಯಿಯನ್ನು ವಿವಾಹವಾದರು. ಇವಳಿಗೂ ಸಂತಾನ ಪ್ರಾಪ್ತಿಯಾಗಲಿಲ್ಲ. ಹೀಗಾಗಿ ಕೊಲ್ಲಾಪುರ ಜಿಲ್ಲೆಯ ಹಾತಕಣಗಲಾ ತಾಲ್ಲೂಕಿನ ರಂಗೋಳಿಯ ಪುಷ್ಪಾವತಿಬಾಯಿ ಅವರನ್ನು ವಿವಾಹವಾದರು. ಗದುಗಿನ ತೋಂಟದಾರ್ಯ ಮಠದಲ್ಲಿರುವ ೧೯ನೆಯ ಶತಮಾನದ (ದುಂದುಭಿ ಸಂವತ್ಸರ) ದಾಖಲು ಪತ್ರದಲ್ಲಿ, ತೋಟದ ಸ್ವಾಮಿಗಳು ತಮ್ಮ ಕಾರುಣ್ಯಪ್ರಿಯ ಭಕ್ತರಾದ ಅಣ್ಣಿಗೇರಿ ಸೀಮೆಯ ದೇಶಪಾಂಡೆಯವರಿಗೆ (ಪ್ರಾಯಶಃ ಭೀಮಪ್ಪಯ್ಯ ಅವರಿಗೆ) ತಮ್ಮ ಸ್ಥಳದ ಮಠದಲ್ಲಿ ಧರ್ಮದಾಸೋಹ ಸಾಂಗವಾಗಿ ನಡೆಯಲು ವ್ಯವಸ್ಥೆ ಮಾಡಬೇಕೆಂದು ಬರೆದು ತಿಳಿಸಿರುವ ವಿವರವಿದೆ.[೨೮]

ಪುಷ್ಪಾವತಿಬಾಯಿ ಅವರ ಮನೆತನದ ಪೂರ್ವಜರಾದ ಅಪ್ಪಾಜಿ ಎಂಬುವವನು ವಿಜಯಪುರದ ಆದಿಲ್‌ಷಾಹಿಗಳ ಆಳ್ವಿಕೆಯ ಕಾಲಾವಧಿಯಲ್ಲಿ ಇಂದಿನ ವಿಜಯಪುರ ಜಿಲ್ಲೆಯ ಬಾಬಾನಗರ ಪರಿಸರದಲ್ಲಿ 'ದೇಶಮುಖ'ನಾಗಿ ಕಾರ್ಯನಿರ್ವಹಿಸುತ್ತಿದ್ದನು. ಈತನಿಗೆ ವಂಶಪರಂಪರಾಗತವಾಗಿ ದೇಶಮುಖ ವತನ ಬಂದಿತ್ತು. ಅಪ್ಪಾಜಿಯ ತರುವಾಯ ಈತನ ಮಗ ಜಿನ್ನಪ್ಪ, ಜಿನ್ನಪ್ಪನ ತರುವಾಯ ಈತನ ಮಗ ನರಸಪ್ಪ ಇವರು ದೇಶಮುಖರಾಗಿ ಕಾರ್ಯನಿರ್ವಹಿಸಿದರು. ನರಸಪ್ಪನಿಗೆ ಕಾಳಪ್ಪ, ಅಪ್ಪಣ್ಣ, ನೇಮಣ್ಣ ಎಂಬ ಮೂವರು ಮಕ್ಕಳಿದ್ದರು. ನರಸಪ್ಪನ ತರುವಾಯ ಈತನ ಹಿರಿಯ ಮಗನಾದ ಕಾಳಪ್ಪನು ಕ್ರಿ.ಶ. ೧೭೪೫ರಲ್ಲಿ ದೇಶಮುಖನಾದನು. 'ಕಾರಹುಣ್ಣಿಮೆ'ಯಂದು ಕರಿಹರಿಯುವ ಕುರಿತಾಗಿ ದೇಶಮುಖ ಮತ್ತು ಮುತಾಲಿಕ ಮನೆತನಗಳ ಮಧ್ಯದಲ್ಲಿ ವಾದ–ವಿವಾದ ಬೆಳೆದು ಘರ್ಷಣೆಯಾಯಿತು. ಈ ಘರ್ಷಣೆಯಲ್ಲಿ ಮುತಾಲಿಕ ಮನೆತನದ ವ್ಯಕ್ತಿಯೊಬ್ಬನು ಸಾವನ್ನಪ್ಪಿದನು. ಇದರಿಂದ ಮನಸ್ತಾಪಗೊಂಡ ಅಹಿಂಸಾವಾದಿ ಕಾಳಪ್ಪನು ಕುಟುಂಬ ಸಮೇತ ಇಂದಿನ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಹಾತಕಣಗಲಾ ತಾಲ್ಲೂಕಿನ ಅಬ್ದುಲಲಾಟ ಗ್ರಾಮಕ್ಕೆ ವಲಸೆ ಹೋದನು. ಈತನ ಇಬ್ಬರೂ ಸಹೋದರರು (ಅಪ್ಪಣ್ಣ ಮತ್ತು ನೇಮಣ್ಣ) ಬಾಬಾನಗರದಲ್ಲಿಯೇ ಉಳಿದುಕೊಂಡರು. ಕಾಲಾಂತರದಲ್ಲಿ ಕಾಳಪ್ಪನ ಮನೆತನದ ಒಂದು ಶಾಖೆ ರಂಗೋಳಿ ಗ್ರಾಮಕ್ಕೆ ಹೋಗಿ ನೆಲೆಸಿತು. ಈ ಎರಡೂ ಮನೆತನಗಳು 'ಪಾಟೀಲ' ಎಂಬ ವಂಶನಾಮವನ್ನು (ಅಡ್ಡಹೆಸರು) ಪಡೆದವು. ಈ ಎರಡೂ ಮನೆತನದವರು ಕೊಲ್ಲಾಪುರದ ಛತ್ರಪತಿ ಶಾಹು ಮಹಾರಾಜರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿ ತಮ್ಮ ತಮ್ಮ ಗ್ರಾಮಗಳ ಪಾಟೀಲಕಿ (ಗೌಡಕಿ) ಮತ್ತು ಇತರ ಬಾಬ್ತುಗಳನ್ನು ಇನಾಂ ಪಡೆದರು. ಈ ಗ್ರಾಮಗಳ ಕಂದಾಯ ವಸೂಲಿ, ವ್ಯಾಜ್ಯಗಳ ತೀರ್ಮಾನ ಮತ್ತು ಗ್ರಾಮಗಳ ಆಡಳಿತವನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.[೨೯]

ಕಾಳಪ್ಪನ ಮರಿಮೊಮ್ಮಗ ಶಾಂತಪ್ಪನಿಗೆ ಕುರುಂದವಾಡದಲ್ಲಿ ಮಗಳ ಆಸ್ತಿಗೆ ಸಂಬಂಧಿಸಿದ ಜಮೀನು ಮತ್ತು ಮನೆ ದೊರೆತವು. ಹೀಗಾಗಿ ಈತನು ಕ್ರಿ.ಶ. ೧೮೦೦ರಲ್ಲಿ

ಕುರುಂದವಾಡಕ್ಕೆ ವಲಸೆ ಹೋಗಿ ಪಟವರ್ಧನ ಸರಕಾರದಿಂದ ಸ್ಥಳೀಯ ಗೌಡಕಿ ವತನ ಪಡೆದನು. ಈತನು ಅಬ್ದುಲಲಾಟದಿಂದ ಹೋದನಾದ್ದರಿಂದ 'ಲಾಟದಗೌಡರು > ಲಠ್ಠೆಗೌಡರು > ಲಠ್ಠೆ' ಎಂಬ ವಂಶನಾಮವನ್ನು ಪಡೆದನು. ಶಾಂತಪ್ಪನ ಮರಿಮೊಮ್ಮಗನೂ, ಬಾಬಾಜಿಯ ಮಗನೂ ಆದ ರಾವಬಹಾದ್ದೂರ ಅಣ್ಣಾಸಾಹೇಬ ಲಠ್ಠೆ (೧೮೭೮-೧೯೫೦) ಅವರು ಭಾರತದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಹೊಸಯುಗದ ಪರಿವರ್ತಕರಲ್ಲಿ ಒಬ್ಬರಾಗಿದ್ದಾರೆ. 'ದಕ್ಷಿಣ ಭಾರತ ಜೈನ ಸಭೆ'ಯನ್ನು ರೂಪಿಸಿದ ಶಿಲ್ಪಿಯೂ, ಮೇಧಾವಿ ಪ್ರಾಧ್ಯಾಪಕರೂ, ನಾಮಾಂಕಿತ ವಕೀಲರೂ, ಕೊಲ್ಲಾಪುರದ ಖ್ಯಾತನಾಮ ದಿವಾನರೂ, ಅಸ್ಪೃಶ್ಯೋದ್ಧಾರಕರೂ, ಸ್ತ್ರೀ ಶಿಕ್ಷಣಕ್ಕಾಗಿ ಹೋರಾಡಿದವರೂ, ಪರಧರ್ಮಸಹಿಷ್ಣರೂ, ಸ್ಪಷ್ಟವಕ್ತಾರರೂ, ದಕ್ಷಿಣ ಸಂಸ್ಥಾನಗಳ ಸಲಹೆಗಾರರೂ, ಉತ್ತಮ ಲೇಖಕರೂ, ಪತ್ರಿಕಾಕರ್ತರೂ, ಹಿಂದುಳಿದ ವರ್ಗಗಳ ಉದ್ಧಾರಕರೂ, ಯಶಸ್ವಿ ಅರ್ಥಮಂತ್ರಿಗಳೂ, ರಾಷ್ಟ್ರೀಯ ರಾಜಕಾರಣ ಧುರೀಣರೂ, ಬಹುಜನ ಸಮಾಜ ಶಿಲ್ಪಿಗಳೂ ಆದ ಅಣ್ಣಾಸಾಹೇಬ ಲಠ್ಠೆ ಅವರು ಆಧುನಿಕ ಭಾರತದ ಸಮಾಜೋ-ಧಾರ್ಮಿಕ ಚಳವಳಿಗಳ ನೇತಾರರಲ್ಲಿ ಒಬ್ಬರಾಗಿದ್ದಾರೆ.[೩೦]

ರಂಗೋಳಿಯ ಪಾಟೀಲ ಮನೆತನವು ತನ್ನ ಪೂರ್ವಪರಂಪರೆಯ ಧರ್ಮಾನುಷ್ಠಾನದಲ್ಲಿ ದೃಢಚಿತ್ತವಾಗಿ ನಿತ್ಯ ದೇವದರ್ಶನ, ಪೂಜೆ-ಪುನಸ್ಕಾರ, ವ್ರತ-ನಿಯಮಗಳ ಆಚರಣೆ, ನೋಂಪಿಗಳ ಉದ್ಯಾಪನೆ, ದಾನ-ದತ್ತಿಗಳು ಇತ್ಯಾದಿ ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿತ್ತು. ಈ ಮನೆತನದ ಬಾಪುಸಾಹೇಬ ಮತ್ತು ಅವರ ೧ನೆಯ ಧರ್ಮಪತ್ನಿ ಅಕ್ಕಾತಾಯಿಯ ಉದರದಲ್ಲಿ ೧೯೦೧ರಲ್ಲಿ(?) ಪುಷ್ಪಾವತಿಬಾಯಿ ಜನಿಸಿದರು. ಇವರು ಬಾಲ್ಯಾವಧಿಯಿಂದಲೂ ಸುಸಜ್ಜಿತ ಧಾರ್ಮಿಕ ವಾತಾವರಣ ಮತ್ತು ತಂದೆ-ತಾಯಿಯರ ಧರ್ಮಾಚರಣೆಯ ಆಚಾರ-ವಿಚಾರಗಳ ಪ್ರಭಾವದಲ್ಲಿ ಬೆಳೆದರು. ಸ್ಥಳೀಯ ಪ್ರಾಥಮಿಕ ಶಾಲೆಯಲ್ಲಿ ೪ನೆಯ ತರಗತಿವರೆಗೆ ಮರಾಠಿ ಭಾಷೆಯಲ್ಲಿ ಶಿಕ್ಷಣ ಪಡೆದರು. ತರುವಾಯ ಇವರನ್ನು ೨೨ನೆಯ ವಯಸ್ಸಿನಲ್ಲಿ ಅಂದರೆ ೧೯೨೩ರಲ್ಲಿ ಅಣ್ಣಿಗೇರಿಯ ಭೀಮಪ್ಪಯ್ಯ ಅವರೊಂದಿಗೆ ವಿವಾಹ ಮಾಡಲಾಯಿತು. ಭೀಮಪ್ಪಯ್ಯ ಅವರನ್ನು ವಿವಾಹವಾದ ಪುಷ್ಪಾವತಿಬಾಯಿ ಅವರು ಪತಿಯ ಧರ್ಮಾರ್ಥಕಾಮಮೋಕ್ಷ ಅನುಷ್ಠಾನದಲ್ಲಿ ಸಹಭಾಗಿನಿ ಸತಿಯಾಗಿ ಬಹು ಬೇಗನೆ ಕುಟುಂಬದ ಮತ್ತು ಸ್ಥಳೀಯರ ಪ್ರೀತಿ-ವಾತ್ಸಲ್ಯಗಳನ್ನು ಸಂಪಾದಿಸಿದರು. ಜೊತೆಗೆ ತಮ್ಮ ಜೀವನದುದ್ದಕ್ಕೂ ಪತಿಯ ಪ್ರತಿಯೊಂದು ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ನೆರಳಿನಂತೆ ಹಿಂಬಾಳಿಸಿ ದಾಂಪತ್ಯದಲ್ಲಿ ಜೀವನ ಸಾರ್ಥಕ್ಯವನ್ನು ಅರಸಿದರು.

ಅಣ್ಣಿಗೇರಿಯ ಶಾಂತಿನಾಥ ಬಸದಿಯ ಎಡಬದಿಯಲ್ಲಿ ಕೌಂಪೌಂಡ (ಪ್ರಾಕಾರ) ಗೋಡೆಯನ್ನು ನಿರ್ಮಿಸಲು ೧೯೪೧ರಲ್ಲಿ ಪಾಯ ತೋಡುತ್ತಿದ್ದ ಸಂದರ್ಭದಲ್ಲಿ, ಮುಂಜಾಗ್ರತಾ ಕ್ರಮದಿಂದ ಹೂಳಿಟ್ಟಿದ್ದ ಪಾರ್ಶ್ವನಾಥ ಮತ್ತು ಆದಿನಾಥ ತೀರ್ಥಂಕರರ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಿಲ್ಪಗಳು ದೊರೆತಿದ್ದವು. ಈ ಬಸದಿಯ

ಗರ್ಭಗೃಹದಲ್ಲಿದ್ದ ಮೂಲನಾಯಕ ಶಾಂತಿನಾಥನ ಶಿಲ್ಪವು ತ್ರುಟಿತವಾಗಿತ್ತು. ಪುಷ್ಪಾವತಿಬಾಯಿ ಅವರು ಈ ಬಸದಿಯನ್ನು ೧೯೪೫ರಲ್ಲಿ ಜೀರ್ಣೋದ್ಧಾರ ಮಾಡಿಸುತ್ತಿದ್ದ ಸಂದರ್ಭದಲ್ಲಿ, ಕೊಲ್ಲಾಪುರದ ಭಟ್ಟಾರಕ ಪೀಠದ ೨೭ನೆಯ ಪೀಠಾಧಿಪತಿಗಳಾದ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯರ (ಕ್ರಿ.ಶ. ೧೮೯೬–೧೯೬೫) ಸಲಹೆ–ಸೂಚನೆಯ ಮೇರೆಗೆ ತ್ರುಟಿತವಾಗಿದ್ದ ಶಿಲ್ಪವನ್ನು ಸ್ಥಳಾಂತರಿಸಿ ಪಾರ್ಶ್ವನಾಥನ ಶಿಲ್ಪವನ್ನು ವಜ್ರಲೇಪನ ಮಾಡಿಸಿ ಪಂಚಕಲ್ಯಾಣಪೂರ್ವಕವಾಗಿ ಪ್ರತಿಷ್ಠಾಪಿಸಿದರು.[೨೧] ಅಂದಿನಿಂದ ಈ ಬಸದಿ 'ಪಾರ್ಶ್ವನಾಥ ಬಸದಿ' ಎಂದು ಮರುನಾಮಕರಣ ಪಡೆದಿದೆ. ಈ ಶಿಲ್ಪದ ಪೀಠದ ಪಟ್ಟಿಕೆಯ ಮೇಲಿರುವ ಶಾಸನದಲ್ಲಿ–

ಶ್ರೀಮಂತ ಪುಷ್ಪಾವತೀಬಾಯಿ ಭರ್ತಾರ ಭೀಮಪ್ಪಯ್ಯಾ
ದೇಶಪಾಂಡೆ ಅಣ್ಣೀಗೇರಿ ಇವರು ಈ ಮೂರ್ತಿ
ಜೀರ್ಣೋದ್ಧಾರ ಮಾಡಿಸಿದರು ॥ ಮಹಾಶ್ರೀ

'ಅಣ್ಣಿಗೇರಿಯ ಭೀಮಪ್ಪಯ್ಯ ದೇಶಪಾಂಡೆ ಅವರ ಧರ್ಮಪತ್ನಿ ಪುಷ್ಪಾವತಿಬಾಯಿ ಅವರು ಈ ಶಿಲ್ಪವನ್ನು ಜೀರ್ಣೋದ್ಧಾರ ಮಾಡಿಸಿದರು' ಎಂಬ ನಿರೂಪಣೆಯಿದೆ.[೨೨] ಈ ಬಸದಿಯ ಹಿಂಬದಿಯ (ಪಶ್ಚಿಮಭಾಗ) ಪ್ರಾಕಾರದ ಗೋಡೆಯಲ್ಲಿರುವ ೧೯೪೮ರ ಐದು ಸಾಲುಗಳ ಶಾಸನದಲ್ಲಿ–

ಶ್ರೀ ಶಕೆ ೧೮೭೦ರಲ್ಲಿ ಕಟ್ಟಿಸಿಧು ಶ್ರೀ ಪುಷ್ಪಾವತಿಬಾಯಿ ॥
ದೇಶಪಾಂಡೆಯವರು

'ಪುಷ್ಪಾವತಿಬಾಯಿ ಅವರು ಈ ಗೋಡೆಯನ್ನು ಕಟ್ಟಿಸಿದರು' ಎಂಬ ವಿವರವಿದೆ.[೨೩]

ಆಚಾರ್ಯಶ್ರೀ ಪಾಯಸಾಗರರು (ಕ್ರಿ.ಶ. ೧೮೮೫–೧೯೫೮) ಧರ್ಮಪ್ರಭಾವನೆಯ ಉದ್ದೇಶದಿಂದ ಅನೇಕ ಸಲ ಅಣ್ಣಿಗೇರಿಗೆ ವಿಹಾರ ಕೈಗೊಂಡಿದ್ದರು.[೨೪] ಅವರು ೧೯೪೦ರಲ್ಲಿ ಹುಬ್ಬಳ್ಳಿಯಿಂದ ಅಣ್ಣಿಗೇರಿಗೆ ಆಗಮಿಸಿದ್ದ ಸಂದರ್ಭದಲ್ಲಿ ಚಂದಪ್ಪಯ್ಯ (ಅಜ್ಜಪ್ಪ) ಅವರು ಸಕಲ ವ್ಯವಸ್ಥೆ ಮಾಡಿದ್ದರು. ಶ್ರೀಗಳು ೧೯೪೧ರಲ್ಲಿ ಮತ್ತೊಮ್ಮೆ ಅಣ್ಣಿಗೇರಿಗೆ ಆಗಮಿಸಿದ್ದ ಸಂದರ್ಭದಲ್ಲಿ, ಬಸದಿಯ ಹೊರಬದಿಯಲ್ಲಿ ಸಂಗ್ರಹಿಸಿಟ್ಟಿದ್ದ ಆದಿನಾಥ, ಸುಪಾರ್ಶ್ವನಾಥ, ಶಾಂತಿನಾಥ, ಪಾರ್ಶ್ವನಾಥ ತೀರ್ಥಂಕರರ ಪ್ರಾಚೀನ ಶಿಲ್ಪಗಳನ್ನು ಗಮನಿಸಿ, ಇವುಗಳನ್ನು ವ್ಯವಸ್ಥಿತವಾಗಿ ವಜ್ರಲೇಪನ ಮಾಡಿಸಿದರೆ ಪೂಜೆಗೆ ಅರ್ಹವಾಗುತ್ತವೆ ಎಂದು ಪುಷ್ಪಾವತಿಬಾಯಿ ಅವರಿಗೆ ಮನವರಿಕೆ ಮಾಡಿದರು. ಹಾಗೆಯೇ ಈ ಶಿಲ್ಪಗಳನ್ನು ವಜ್ರಲೇಪನ ಮಾಡುವ ಕಾರ್ಯವನ್ನು ತಮ್ಮ ಶಿಷ್ಯನಾದ ಬೆಳಗಾವಿಯ ವೀರಪ್ಪ ಶಹಾಪುರ ಎಂಬಾತ ಶಿಲ್ಪಿಗೆ ವಹಿಸಿದರು. ಪ್ರಸ್ತುತ ಬಸದಿಯ ಗರ್ಭಗೃಹದಲ್ಲಿರುವ ಪಾರ್ಶ್ವನಾಥ ಶಿಲ್ಪದ ಹಿಂಬದಿಯಲ್ಲಿರುವ ಮೂರು ಸಾಲುಗಳ ಶಾಸನದಲ್ಲಿ–

ತಾ–೧–೧೦–೧೯೪೧ ಇಸ್ವಿ
ಪಾಯಸಾಗರ ಸಿಷ್ಯ ವೀರಪ್ಪಾ
ಸಿಲ್ಪಾಚಾರ್ಯ್ಯ ಕೃತ ॥

'ಪಾಯಸಾಗರರ ಶಿಷ್ಯ ವೀರಪ್ಪ ಎಂಬಾತ ಶಿಲ್ಪಾಚಾರ್ಯನು ೧೯೪೧ರ ಅಕ್ಟೋಬರ್ ೧ರಂದು ಈ ಪಾರ್ಶ್ವನಾಥ ಶಿಲ್ಪವನ್ನು ಜೀರ್ಣೋದ್ಧಾರ (ವಜ್ರಲೇಪನ) ಮಾಡಿದನು' ಎಂಬ ಪ್ರಸ್ತಾಪವಿದೆ.[೩೫] ವಜ್ರಲೇಪನ ಮಾಡಿದ ಆದಿನಾಥನ ಶಿಲ್ಪವನ್ನು ಕೊಲ್ಲಾಪುರ ಜಿಲ್ಲೆಯ ಹಾತಕಣಗಲಾ ತಾಲ್ಲೂಕಿನ ಕುಂಭೋಜದ ಬಾಹುಬಲಿ ಆಶ್ರಮದಲ್ಲಿ ನಿರ್ಮಾಣವಾಗುತ್ತಿದ್ದ ಬಸದಿಯಲ್ಲಿ ಪ್ರತಿಷ್ಠಾಪಿಸಲು ಕಳುಹಿಸಿಕೊಟ್ಟರು. ಸುಪಾರ್ಶ್ವನಾಥನ ಶಿಲ್ಪವನ್ನು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೆಗ್ಗೇರಿಯ ಪ್ರಾಚೀನ ಬಸದಿಯಲ್ಲಿ ಪ್ರತಿಷ್ಠಾಪಿಸಿದರು. ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ಚಿಕ್ಕೋಡಿ ತಾಲ್ಲೂಕಿನ ಮಾನಕಾಪುರದಲ್ಲಿ ಪುಷ್ಪಾವತಿಬಾಯಿ ಅವರು ಸ್ವತಃ ಬಸದಿಯನ್ನು ಕಟ್ಟಿಸಿ ಅದರಲ್ಲಿ ಪ್ರತಿಷ್ಠಾಪಿಸಿ ಪಂಚಕಲ್ಯಾಣ ಪೂಜಾಮಹೋತ್ಸವವನ್ನು ಕೈಗೊಂಡರು. ಆಚಾರ್ಯಶ್ರೀ ಪಾಯಸಾಗರರು ೧೯೪೩ರಲ್ಲಿ ಲಕ್ಷ್ಮೇಶ್ವರದಲ್ಲಿ ಚಾತುರ್ಮಾಸವನ್ನು (ವರ್ಷಾಯೋಗ) ಕೈಗೊಂಡಿದ್ದ ಸಂದರ್ಭದಲ್ಲಿ ಸ್ಥಳೀಯ ಜೈನ ಸಮುದಾಯವು ಶ್ರೀಗಳಿಗೆ 'ತ್ರೈವಿದ್ಯ ಚೂಡಾಮಣಿ' ಎಂಬ ಅಭಿದಾನವನ್ನು ಹಾಗೂ ಲಕ್ಷ್ಮೇಶ್ವರಕ್ಕೆ ಆಗಮಿಸಿ ಶ್ರೀಗಳ ದರ್ಶನ ಪಡೆದು ತಮ್ಮ ವಿದ್ಯಾಜ್ಞಾನ ಕಲಾಕೌಶಲ್ಯಗಳಿಂದ ಧರ್ಮಪ್ರಭಾವನೆಯನ್ನು ಮಾಡಿ ಪುಣ್ಯಾರ್ಜನೆಗೈದ ಪುಷ್ಪಾವತಿಬಾಯಿ ಅವರಿಗೆ 'ಮುನಿಸಂಘ ಸೇವಾಶಕ್ತಿ' ಎಂಬ ಅಭಿದಾನವನ್ನಿತ್ತು ಗೌರವಿಸಿತು.

ಪುಷ್ಪಾವತಿಬಾಯಿ ಅವರು ಅಣ್ಣಿಗೇರಿಯ ಪಾರ್ಶ್ವನಾಥ ಬಸದಿಯಲ್ಲಿ ಧಾರ್ಮಿಕ ಪಾಠಶಾಲೆಯನ್ನು ಪ್ರಾರಂಭಿಸುವ ಮೂಲಕ ಜೈನರು ಮತ್ತು ಜೈನೇತರರಿಗೆ ಜೈನ ತತ್ತ್ವ-ಸಿದ್ಧಾಂತ, ಶಾಸ್ತ್ರ-ದರ್ಶನ, ಕೃತಿ-ಕಾವ್ಯ, ಆಚಾರ-ವಿಚಾರ, ನಂಬುಗೆ-ಸಂಪ್ರದಾಯ, ಹಬ್ಬ-ಹರಿದಿನ, ತೀರ್ಥಂಕರರು, ಮುನಿಧರ್ಮ, ಶ್ರಾವಕಧರ್ಮ, ಕವಿಗಳು ಮೊದಲಾದ ವಿಷಯಗಳನ್ನು ಪರಿಚಯಿಸುವ ವ್ಯವಸ್ಥೆ ಮಾಡಿದರು. ಜೊತೆಗೆ ದಶಲಕ್ಷಣಪರ್ವ, ನೋಂಪಿ, ಮಹಾವೀರ ಜಯಂತಿ ಇತ್ಯಾದಿ ಜೈನ ಹಬ್ಬ-ಹರಿದಿನಗಳಂದು ಸುತ್ತಮುತ್ತಲಿನ ಗ್ರಾಮಗಳಲ್ಲಿ ಉಪನ್ಯಾಸಗಳನ್ನು ಮಾಡುವುದರ ಮೂಲಕ ಸಮಾಜವನ್ನು ಜಾಗೃತಗೊಳಿಸುತ್ತಿದ್ದರು. ಹಾಗೆಯೇ ಜೈನರು ಮತ್ತು ಜೈನೇತರರನ್ನು ತೀರ್ಥಕ್ಷೇತ್ರಗಳ ದರ್ಶನಗೈದು ತಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳಲು ಪ್ರೇರೇಪಿಸುತ್ತಿದ್ದರು. ಇಂದಿನ ಧಾರವಾಡ, ಗದಗ, ಹಾವೇರಿ, ಬೆಳಗಾವಿ ಮೊದಲಾದ ಜಿಲ್ಲೆಗಳಲ್ಲಿ ಪುಷ್ಪಾವತಿಬಾಯಿ ಅವರು ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರಕ್ಕೆ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ. ಆಚಾರ್ಯಶ್ರೀ ದೇಶಭೂಷಣರ ಪರಮ ಶಿಷ್ಯೆಯಾಗಿದ್ದ ಇವರು ಶ್ರೀಗಳು ಚಿಕ್ಕೋಡಿ ತಾಲ್ಲೂಕಿನ ಕೋಥಳಿಯಲ್ಲಿ ಕೈಗೊಂಡಿದ್ದ ಧಾರ್ಮಿಕ ಕಾರ್ಯಗಳಿಗೆ ಉದಾರವಾಗಿ ದಾನ ಮಾಡಿದ್ದಾರೆ. ೧೯೫೫ರಲ್ಲಿ ಕುಂಭೋಜದ ಬಾಹುಬಲಿ ಆಶ್ರಮದಲ್ಲಿ ಚೌಕಾನಿವಾಸ (ಮುನಿಗಳಿಗೆ ಆಹಾರದಾನ ಕೊಡುವ ಕೊಠಡಿ) ಕಟ್ಟಿಸಿ ಕೊಟ್ಟಿದ್ದಾರೆ. ಕೊಲ್ಲಾಪುರದ ಜೈನ ಬೋರ್ಡಿಂಗದಲ್ಲಿ ಒಂದು ಕೊಠಡಿ ಮತ್ತು ೧೯೬೧ರಲ್ಲಿ ಹುಬ್ಬಳ್ಳಿಯ ಜೈನ ಬೋರ್ಡಿಂಗದಲ್ಲಿ ಒಂದು ಕೊಠಡಿಯನ್ನು ಕಟ್ಟಿಸಿ ಕೊಟ್ಟಿದ್ದಾರೆ.[೩೬] ಹಾಗೆಯೇ ಕೆಲವು ಬಸದಿಗಳ ಪಂಚಕಲ್ಯಾಣ

ಪೂಜಾಮಹೋತ್ಸವಗಳಲ್ಲಿ ಮುಂದಾಳತ್ವವನ್ನು ವಹಿಸಿ ಅವುಗಳ ಯಶಸ್ವಿಗೆ ಶ್ರಮಿಸಿದ್ದಾರೆ. ತಮ್ಮ ತವರೂರು ರಂಗೋಳಿಯಲ್ಲಿ ಬಸದಿಯನ್ನು ನಿರ್ಮಿಸಿ ಪಂಚಕಲ್ಯಾಣ ಪೂಜಾಮಹೋತ್ಸವನ್ನು ಕೈಗೊಂಡಿದ್ದಾರೆ. ದತ್ತವಾಡದ ಬಸದಿಯಲ್ಲಿ ಪ್ರತಿಷ್ಠಾಪಿಸಲು ಮುನಿಸುವ್ರತನಾಥ ತೀರ್ಥಂಕರನ ಶಿಲ್ಪವನ್ನು ಮಾಡಿಸಿ ಕೊಟ್ಟಿದ್ದಾರೆ. ಅಣ್ಣಿಗೇರಿ, ನವಲಗುಂದ, ಹುಬ್ಬಳ್ಳಿ, ಧಾರವಾಡ ನಗರಗಳಿಗೆ ಧರ್ಮಪ್ರಸಾರ ಮತ್ತು ಚಾತುರ್ಮಾಸಕ್ಕಾಗಿ ಆಗಮಿಸುತ್ತಿದ್ದ ಮುನಿಗಳು ಮತ್ತು ಆರ್ಯಿಕೆಯರ ಸೇವೆ ಮಾಡುತ್ತ ಅವರೊಂದಿಗೆ ಧಾರ್ಮಿಕ ವಿಚಾರಗಳ ಕುರಿತಾಗಿ ಚರ್ಚಿಸುತ್ತಿದ್ದರು.[೩೭] ಇವರು ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳೊಂದಿಗೆ ಲೋಕೋಪಯೋಗಿ ಕಾರ್ಯಗಳನ್ನೂ ಕೈಗೊಂಡಿದ್ದಾರೆ. ಈ ನಿಟ್ಟಿನಲ್ಲಿ ಅಬ್ಬುಲಲಾಟ ಗ್ರಾಮದಲ್ಲಿ ಕೆರೆಯನ್ನು ಕಟ್ಟಿಸಿ ನೀರಿನ ವ್ಯವಸ್ಥೆ ಮಾಡಿಸಿರುವುದು ಗಮನಾರ್ಹವಾಗಿದೆ.

ಕವಿವರಕಾಮಧೇನು ದಾನಚಿಂತಾಮಣಿ ಅತ್ತಿಮಬ್ಬೆಯ ಆದರ್ಶಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡು ಜೀವನದುದ್ದಕ್ಕೂ ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ಪಂಚಕಲ್ಯಾಣ ಪೂಜಾಮಹೋತ್ಸವ, ಶಾಸ್ತ್ರ ಗ್ರಂಥಗಳ ಪ್ರಕಟನೆಗೆ ಪ್ರೋತ್ಸಾಹ, ಮುನಿ–ಆರ್ಯಿಕೆ–ಶ್ರಾವಿಕೆ–ಶ್ರಾವಕರಿಗೆ ಆಹಾರಾದಿ ದಾನ–ದತ್ತಿಗಳು ಮೊದಲಾದ ಚಟುವಟಿಕೆಗಳಿಗೆ ತಮ್ಮ ನ್ಯಾಯಾರ್ಜಿತ ಸಂಪತ್ತನ್ನು ವ್ಯಯಮಾಡುತ್ತ ಆತ್ಮಕಲ್ಯಾಣಕ್ಕೆ ಹಾದಿಯನ್ನು ರೂಪಿಸಿಕೊಂಡ ಪುಷ್ಪಾವತಿಬಾಯಿ ಅವರು ದಿನನಿತ್ಯವೂ ದೇವಪೂಜೆ, ಗುರುಗಳ ಸೇವೆ, ಶಾಸ್ತ್ರಗಳ ಅಧ್ಯಯನ, ಸಂಯಮ, ತಪಸ್ಸು, ದಾನ ಕ್ರಿಯೆಗಳನ್ನು ಕೈಗೊಳ್ಳುತ್ತ ಜೈನ ಧರ್ಮವನ್ನು ಪೋಷಿಸಿ ಬೆಳೆಸಿದ ಅಭಿನವ ದಾನಚಿಂತಾಮಣಿ ಅತ್ತಿಮಬ್ಬೆ ಎಂದು ಕೀರ್ತಿಶಾಲಿಯಾಗಿ ೧೯೬೧ರಲ್ಲಿ ಸ್ವರ್ಗಸ್ಥರಾಗಿದ್ದಾರೆ. ಮುಂಬಯಿ–ಕರ್ನಾಟಕ ಭಾಗದ ಜನಮನದಲ್ಲಿ ಇಂದಿಗೂ ಚಿರಸ್ಥಾಯಿಯಾಗಿ ಉಳಿದಿರುವ ಪುಷ್ಪಾವತಿಬಾಯಿ ಅವರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳು ಇಂದಿನ ಮಹಿಳೆಯರಿಗೆ ಸ್ಫೂರ್ತಿ–ಪ್ರೇರಕವಾಗಿವೆ.

ಪುಷ್ಪಾವತಿಬಾಯಿಗೂ ಸಂತಾನ ಪ್ರಾಪ್ತಿಯಾಗಲಿಲ್ಲ. ಆದ್ದರಿಂದ ಭೀಮಪ್ಪಯ್ಯ ಅವರು ತಮ್ಮ ಮೂವರೂ ಪತ್ನಿಯರ ಜೊತೆಗೆ ಸಮಾಲೋಚಿಸಿ ತಮ್ಮ ಆಸ್ತಿಯ ರಕ್ಷಣೆ, ಪೋಷಣೆಯ ಉದ್ದೇಶದಿಂದ ದತ್ತು ಮಗನನ್ನು ತೆಗೆದುಕೊಳ್ಳಲು ನಿರ್ಧರಿಸಿದರು. ೨ನೆಯ ಧರ್ಮಪತ್ನಿ ಚಂದ್ರಾಬಾಯಿಯ ಸಹೋದರ ಅಜ್ಜಪ್ಪನನ್ನು ದತ್ತು ತೆಗೆದುಕೊಳ್ಳಲು ನಿರ್ಣಯಿಸಿದರು. ಅಜ್ಜಪ್ಪನಿಗೆ ಬಾಳಾಸಾಹೇಬ ಮತ್ತು ಇವರ ೨ನೆಯ ಧರ್ಮಪತ್ನಿಯ ಉದರದಲ್ಲಿ ಜನಿಸಿದ ಚಿತ್ರಾಬಾಯಿಯನ್ನು (ಪುಷ್ಪಾವತಿಬಾಯಿ ಅವರ ಮಲಸಹೋದರಿ) ಕೊಟ್ಟು ವಿವಾಹ ಮಾಡಿಸಿದರು. ಈ ದಂಪತಿಗಳಿಗೆ ಒಂದು ಹೆಣ್ಣು (ಸರೋಜನಿ) ಮಗುವಾದ ತರುವಾಯ ಇವರನ್ನು ೧೯೫೨ರ ಜೂನ್ ೧೬ರಂದು ದತ್ತು ತೆಗೆದುಕೊಂಡು, ಅಜ್ಜಪ್ಪ ಎಂಬ ಹೆಸರನ್ನು 'ಚಂದಪ್ಪಯ್ಯ ಭೀಮಪ್ಪಯ್ಯ ದೇಶಪಾಂಡೆ' ಎಂದು ಬದಲಾಯಿಸಿದರು. ಅಣ್ಣಿಗೇರಿಯ ಪಾರ್ಶ್ವನಾಥ ಬಸದಿಯಲ್ಲಿರುವ ೧೯೫೨ರ ಪಾದಪೀಠ ಶಾಸನದಲ್ಲಿ, ಭೀಮಪ್ಪಯ್ಯ ಅವರ ೨ನೆಯ ಧರ್ಮಪತ್ನಿ ಚಂದ್ರಾಬಾಯಿ ಅವರ ತಂದೆ

ಬೋರಗಾಂವದ ಲಕ್ಷ್ಮಣ ಚೂಡಪ್ಪ ಚಿಪ್ರೆ ಅವರು ಮಹಾವೀರ ತೀರ್ಥಂಕರನ ಶಿಲ್ಪವನ್ನು ಮಾಡಿಸಿ ದಾನ ಮಾಡಿರುವ ಪ್ರಸ್ತಾಪವಿದೆ.[೩೮] ೧೯೨೮ರ ಮಾರ್ಚ್ ೬ರಂದು ಭೀಮಪ್ಪಯ್ಯ ಅವರ ೧ನೆಯ ಧರ್ಮಪತ್ನಿ ಸುಂದ್ರಾಬಾಯಿ ಮರಣವನ್ನಪ್ಪಿದರು. ೧೯೨೮ರ ಮಾರ್ಚ್ ೧೭ರಂದು ಭೀಮಪ್ಪಯ್ಯ ಮರಣವನ್ನಪ್ಪಿದರು. ಇವರು ಮೋಕ್ಷವನ್ನು ಸಂಪಾದಿಸಿದ ಪರೋಕ್ಷ ವಿನಯಾರ್ಥವಾಗಿ ೧೯೨೮ರಲ್ಲಿ ಅಣ್ಣಿಗೇರಿಯ ಪಾರ್ಶ್ವನಾಥ ಬಸದಿಗೆ ಕಂಚಿನ ಗಂಟೆಯನ್ನು ಮಾಡಿಸಿ ಕೊಡಲಾಗಿದೆ.[೩೯]

ಭೀಮಪ್ಪಯ್ಯ ಅವರ ಮರಣದ ತರುವಾಯ ಇವರ ಮನೆತನಕ್ಕೆ (ದೇಸಗತಿಗೆ) ಪರಿಹಾರ ಅಥವಾ ಕಂಭರ್ತಿ (ಹಕ್ಕವರ್ತನದ ರಕಂ ಅಥವಾ ಹಕ್ಕುವತನದ ಹಣ) ಎಂದು ಸರಕಾರ ಕೊಡುತ್ತಿದ್ದ ೧೨೮ ರೂಪಾಯಿಗಳು ನಿಲ್ಲಿಸಲ್ಪಟ್ಟವು. ಚಂದಪ್ಪಯ್ಯ ಅವರು ಹಕ್ಕವರ್ತನದ (ಹಕ್ಕುವತನದ) ರಕಂ ಯಥಾಸ್ಥಿತಿ ಮುಂದುವರಿಸಬೇಕು, ಇಲ್ಲವಾದರೆ ನಾನು ಸರಕಾರದ ಮೇಲೆ ದಾವೆ ಮಾಡಲು ಅವಶ್ಯವಿರುವ ಪೆನಶನ್ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಕೊಡಬೇಕೆಂದು ೧೯೪೩ರ ಡಿಸೆಂಬರ್ ೨೪ರಂದು ಧಾರವಾಡದ ಕಲೆಕ್ಟರರನ್ನು ಕೋರಿದ ಹಾಗೂ ಕಲೆಕ್ಟರರು ಇದಕ್ಕೆ ಸಮಂಜಸವಾಗಿ ಉತ್ತರಿಸಿದ ಎಂಡಾರ್ಸಮೆಂಟ್ ಹುಕುಂ ದಾಖಲೆ ಲಭ್ಯವಿದೆ. ಚಂದಪ್ಪಯ್ಯ ಅವರು ೧೯೪೬ರಲ್ಲಿ ರಂಗೋಳಿಯಲ್ಲಿ ಕುದುರೆಯ ಮೇಲೆ ಹೊರಟ್ಟಿದ್ದ ಸಂದರ್ಭದಲ್ಲಿ ಹೃದಯಾಘಾತದಿಂದ ಮರಣವನ್ನಪ್ಪಿದರು. ಚಂದಪ್ಪಯ್ಯ ಮತ್ತು ಚಿತ್ರಾಬಾಯಿ ದಂಪತಿಗಳ ಉದರದಲ್ಲಿ ಸರೋಜನಿ, ಬಾಳಾಸಾಹೇಬ (ಭೀಮಪ್ಪಯ್ಯ), ಶೀಲಪ್ರಭಾ ಎಂಬ ಮೂವರು ಮಕ್ಕಳು ಜನಿಸಿದರು. ಸರೋಜನಿಯನ್ನು ಬೆಳಗಾವಿಯ ನೇಮಣ್ಣ ಗೋಟಡಕಿ ಅವರ ಮಗನಾದ ತಾತ್ಯಾಸಾಹೇಬನಿಗೆ ಮತ್ತು ಶೀಲಪ್ರಭಾಳನ್ನು ಕೊಲ್ಲಾಪುರ ಜಿಲ್ಲೆಯ ಹುಪರಿಯ ದಾದಾಪಾಟೀಲ ಅವರ ಮಗನಾದ ಅಪ್ಪಾಸಾಹೇಬನಿಗೆ ಕೊಟ್ಟು ವಿವಾಹ ಮಾಡಲಾಯಿತು. ಬಾಳಾಸಾಹೇಬ ಅವರು ಸಾಂಗಲಿಯ ಜಂಬು ಅರವಾಡೆ ಅವರ ೩ನೆಯ ಮಗಳು ಸುನಂದಾಬಾಯಿ ಅವರನ್ನು ವಿವಾಹವಾದರು. ಈ ದಂಪತಿಗಳಿಗೆ ರಾವಸಾಹೇಬ, ರಾಜೇಂದ್ರ, ಬಾಪುಸಾಹೇಬ, ಧರ್ಮೇಂದ್ರ, ಪುಷ್ಪಲತಾ ಎಂಬ ಐವರು ಮಕ್ಕಳು ಜನಿಸಿದರು. ಪುಷ್ಪಲತಾಳನ್ನು ಕೊಲ್ಲಾಪುರದ ಪ್ರಸಿದ್ಧ ಚಹಪುಡಿ ವ್ಯಾಪಾರಿ ಎ.ಟಿ. ಮಗದುಮ್ಮ ಅವರ ಮಗನಾದ ಸಂಜುನಿಗೆ ಕೊಟ್ಟು ವಿವಾಹ ಮಾಡಲಾಯಿತು. ಬಾಳಾಸಾಹೇಬ ಅವರೂ ತಮ್ಮ ಪೂರ್ವಜರಂತೆ ಅನೇಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಇವರು ೧೯೬೧ರಲ್ಲಿ ಹುಬ್ಬಳ್ಳಿ ಜೈನ ಬೋರ್ಡಿಂಗದ ವ್ಯವಸ್ಥಾಪಕ ಮಂಡಳಿಯ ಸದಸ್ಯರಾಗಿದ್ದರು. ಸುನಂದಾಬಾಯಿ ಅವರು–

ತಾ–೧೫–೧೨–೧೯೮೯ ಶ್ರೀಮಂತ ಬಿ.ಸಿ. ದೇಶಪಾಂಡೆ
ಇವರ ಸ್ಮರಣಾರ್ಥಕವಾಗಿ ಸುನಂದಾಬಾಯಿ ಭೀ. ದೇಶಪಾಂಡೆ
ಇವರು ಅಣ್ಣಿಗೇರಿ ಜೈನ ಬಸ್ತಿಗೆ ಭಕ್ತಿ ಕೊಟ್ಟದ್ದು ।

ತಮ್ಮ ಪತಿ ಭೀಮಪ್ಪಯ್ಯ ಚಂದಪ್ಪಯ್ಯ ದೇಶಪಾಂಡೆ ಅವರ ಸ್ಮರಣಾರ್ಥಕವಾಗಿ (ಪರೋಕ್ಷ ವಿನಯಾರ್ಥ) ಅಣ್ಣಿಗೇರಿಯ ಪಾರ್ಶ್ವನಾಥ ಬಸದಿಗೆ ೧೯೪೯ರ ಅಕ್ಟೋಬರ್ ೧೫ರಂದು ಹಿತ್ತಾಳೆಯ ತೂಗು ಸಮಯವನ್ನು (ಧೂಪಾರತಿ) ಭಕ್ತಿಯಿಂದ ದಾನ ಕೊಟ್ಟಿದ್ದಾರೆ.[೪೦] ಹಾಗೆಯೇ–

ಸ್ವ॥ ವಾ॥ ಭೀಮಪ್ಪಯ್ಯ ಚಂದಪ್ಪಯ್ಯ ದೇಶಪಾಂಡೆ ಇವರ
ಸ್ಮರಣಾರ್ಥ ಸುನಂದಾದೇವಿ ಭೀಮಪ್ಪಯ್ಯ ದೇಶಪಾಂಡೆ
ಇವರು ಅಮೃತಶಿಲೆ ಕಲ್ಲು ಹಾಕಿಸಿದ್ದು ತಾ॥ ೨೭.೬.೧೯೯೩

ತಮ್ಮ ಪತಿ ಭೀಮಪ್ಪಯ್ಯ ಚಂದಪ್ಪಯ್ಯ ದೇಶಪಾಂಡೆ ಅವರ ಸ್ಮರಣಾರ್ಥ ೧೯೯೩ರ ಜೂನ್ ೨೭ರಂದು ಪಾರ್ಶ್ವನಾಥ ಬಸದಿಯ ಅಂತರಾಳದ ಭಿತ್ತಿಗಳಿಗೆ ಅಮೃತಶಿಲೆಯ ಕಲ್ಲುಗಳನ್ನು ಹಾಕಿಸಿದ್ದಾರೆ.[೪೧] ೧೯೬೩ರ ಜೂನ್ ೮ಕ್ಕೆ ಸಂಬಂಧಿಸಿದ ದಾಖಲು ಪತ್ರದಲ್ಲಿ, ಅಣ್ಣಿಗೇರಿಯ ಶ್ರೀಮಂತ ಸುನಂದಾಬಾಯಿ ಭೀಮಪ್ಪಯ್ಯ ದೇಶಪಾಂಡೆ ಅವರ ಒಡೆತನದ ಮಜ್ಜಿಗುಡ್ಡ ಗ್ರಾಮದ ಹದ್ದಿನಲ್ಲಿದ್ದ ಹತ್ತೊಂಭತ್ತು ಎಕರೆ ಮೂರು ಗುಂಟೆ ಜಮೀನದಲ್ಲಿ ಗಂಗವ್ವ ಬಸಪ್ಪ ಶಿರೂರ ಅವರು ಹದಿನಾಲ್ಕು ಎಕರೆ ಇಪ್ಪತ್ತಮೂರು ಗುಂಟೆ ಜಮೀನವನ್ನು ೧೯೬೩-೬೪ನೆಯ ಸಾಲಿನಿಂದ ಪ್ರತಿವರ್ಷ ೩೫೦=೦೦ ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡು ಬರೆದುಕೊಟ್ಟಿರುವ ಲಾವಣಿ ಪತ್ರದ ವಿವರಗಳಿವೆ.[೪೨]

ಬಾಳಾಸಾಹೇಬ (ಭೀಮಪ್ಪಯ್ಯ) ಅವರ ಮಕ್ಕಳು ತಮ್ಮ ಪೂರ್ವಜರ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಅವಿಚ್ಛಿನ್ನವಾಗಿ ಮುಂದುವರಿಸಿದ್ದಾರೆ. ಇವರು ಕೊಲ್ಹಾಪುರದ ಬಸ್ ನಿಲ್ದಾಣದ ಎದುರಿಗೆ ನಿರ್ಮಿಸಿರುವ ಲಾಜ ಮತ್ತು ರೆಸ್ಟೋರೆಂಟ್‌ಗೆ 'ಚಾಲುಕ್ಯ' ಎಂಬ ಹೆಸರನ್ನಿಟ್ಟು ತಮ್ಮ ಪೂರ್ವಜರಿಗೆ ಆಶ್ರಯ ಕೊಟ್ಟಿದ್ದ ವೇಮುಲವಾಡದ ಚಾಳುಕ್ಯವಂಶದ ಹೆಸರನ್ನು ಸ್ಮರಿಸಿರುವುದು ಗಮನೀಯವಾಗಿದೆ. ಕುಂಭೋಜದ ಬಾಹುಬಲಿ ಆಶ್ರಮದ ಬಸದಿಯಲ್ಲಿ ಪ್ರತಿಷ್ಠಾಪಿಸಲು ಆದಿನಾಥ ತೀರ್ಥಂಕರನ ಶಿಲ್ಪವನ್ನು ಮಾಡಿಸಿ ಕೊಟ್ಟಿದ್ದಾರೆ. ೨೦೦೨ರಲ್ಲಿ ಅಣ್ಣಿಗೇರಿಯ ಪಾರ್ಶ್ವನಾಥ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ. ಈ ಬಸದಿಯ ಪೂಜೆ-ಪುನಸ್ಕಾರ, ಜೀರ್ಣೋದ್ಧಾರ, ಪುರೋಹಿತರ (ಪಂಡಿತರು) ಉಪಜೀವನ ಇತ್ಯಾದಿ ಕಾರ್ಯಗಳಿಗೆ ಇವರ ಪೂರ್ವಜರು ಮೂವತ್ತು ಎಕರೆ ಭೂಮಿಯನ್ನು ದಾನ ಮಾಡಿದ್ದಾರೆ. ಕೊಲ್ಹಾಪುರದ ನೇಮಿನಾಥ ಬಸದಿಯ ೭೫ನೆಯ ನಿರ್ಮಾಣ ವಾರ್ಷಿಕೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ರಾವಸಾಹೇಬ (ಇವರಿಗೆ ಭೀಮಪ್ಪಯ್ಯ ಎಂತಲೂ ಹೆಸರಿದೆ) ಅವರು ೧೯೮೪-೮೯ರ ಅವಧಿಯಲ್ಲಿ ಎಪಿಎಂಸಿ ಸದಸ್ಯರಾಗಿದ್ದರು. ೧೯೯೦-೯೪ರ ಅವಧಿಯಲ್ಲಿ ಅಣ್ಣಿಗೇರಿ ಪಟ್ಟಣ ಪುರಸಭೆಯ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಪಕ್ಷದ ಅಣ್ಣಿಗೇರಿ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ೧೯೮೫ರಲ್ಲಿ ಅಣ್ಣಿಗೇರಿಯಲ್ಲಿ ಆದಿಕವಿ ಪಂಪನಿಗೆ ಸಂಬಂಧಿಸಿದಂತೆ ಆಯೋಜಿಸಲಾಗಿದ್ದ ಕಾರ್ಯಕ್ರಮಕ್ಕೆ ಧರ್ಮಸ್ಥಳದ

ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ, ಹಂಪ ನಾಗರಾಜಯ್ಯ ಮೊದಲಾದ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರ ಸ್ಫೂರ್ತಿ-ಪ್ರೇರಣೆಯಿಂದ ಶಿಥಿಲಾವಸ್ಥೆಯಲ್ಲಿದ್ದ ಅಣ್ಣಿಗೇರಿಯ ವಾಡೆಯನ್ನು ಸುಮಾರು ಹದಿನೈದು ಲಕ್ಷ ರೂಪಾಯಿಗಳಿಂದ ಜೀರ್ಣೋದ್ಧಾರ ಮಾಡಿಸಿದ್ದಾರೆ. ಕರ್ನಾಟಕ ಸರ್ಕಾರವು ಕೊಡಮಾಡುವ ಪಂಪ ಪ್ರಶಸ್ತಿಗೆ ೧೯೯೭ನೆಯ ಸಾಲಿನಲ್ಲಿ ಭಾಜನರಾಗಿದ್ದ ಎಂ.ಎಂ. ಕಲಬುರ್ಗಿ ಅವರು ಪ್ರಶಸ್ತಿಯ ಜೊತೆಯಲ್ಲಿ ಸರ್ಕಾರವು ಕೊಟ್ಟ ಒಂದು ಲಕ್ಷ ರೂಪಾಯಿಯನ್ನು ಅಣ್ಣಿಗೇರಿಯಲ್ಲಿ ಆದಿಕವಿ ಪಂಪನ ಸ್ಮಾರಕ ಭವನ ನಿರ್ಮಾಣಕ್ಕೆ ಬಿಟ್ಟುಕೊಟ್ಟಿದ್ದರು. ಅವರ ಆಶಯದಂತೆ ಸರ್ಕಾರವು ಇಲ್ಲಿ ಆದಿಕವಿ ಪಂಪನ ಸ್ಮಾರಕ ಭವನವನ್ನು ನಿರ್ಮಿಸಿರುವುದು ಶ್ಲಾಘನೀಯವಾಗಿದೆ. ಹಾಗೆಯೇ ಸರ್ಕಾರವು ಪಂಪನ ವಂಶಸ್ಥರ ವಾಡೆಯ ಜೀರ್ಣೋದ್ಧಾರ, ರಕ್ಷಣೆಯಡೆಗೂ ಲಕ್ಷವಹಿಸಿ ಈ ಅಪರೂಪದ ಸ್ಮಾರಕವನ್ನು ಮುಂದಣ ತಲೆಮಾರಿಗೆ ಉಳಿಸಿಡಲು ಸಹಕರಿಸಬೇಕೆಂದು ರಾವಸಾಹೇಬ ಅವರ ಆಶಯವಾಗಿದೆ.

ಕೊಲ್ಲಾಪುರದ ಛತ್ರಪತಿ ಶಾಹು ಮಹಾರಾಜರು ಅಣ್ಣಿಗೇರಿಯ ದೇಶಪಾಂಡೆ ಮನೆತನಕ್ಕೆ ಕೊಲ್ಲಾಪುರದ ರಾಜಮಾರ್ಗದಲ್ಲಿ (ಇಂದಿನ ಕೇಂದ್ರ ಬಸ್ ನಿಲ್ದಾಣದ ಎದುರಿಗೆ) ಅರವತ್ತು ಗುಂಟೆ (ಒಂದೂವರೆ ಎಕರೆ) ಭೂಮಿಯನ್ನು ಇನಾಂ ಕೊಟ್ಟಿದ್ದಾರೆ. ಅವರು ಯಾವ ಉದ್ದೇಶಕ್ಕಾಗಿ ಮತ್ತು ಯಾರಿಗೆ ಇನಾಂ ಕೊಟ್ಟರೆಂಬುದು ಸ್ಪಷ್ಟವಿಲ್ಲ. ಆದರೆ ಈ ವಿಚಾರವಾಗಿ ಮೂರು ಬಗೆಯ ಅಭಿಪ್ರಾಯಗಳಿವೆ. ಅಬ್ಬುಲಲಾಟದಲ್ಲಿ ಗೌಡಿಕೆಗೈಯುತ್ತಿದ್ದ ದೇವಗೌಡ ಪಾಟೀಲ (ಪುಷ್ಪಾವತಿಬಾಯಿಯ ಅಜ್ಜ) ಅವರ ಶೌರ್ಯ, ಸಾಹಸ, ಚಾಣಾಕ್ಷತೆ, ಮುತ್ಸದ್ಧಿತನವನ್ನು ಮೆಚ್ಚಿದ ಶಾಹು ಮಹಾರಾಜರು ಇವರಿಗೆ ಕೊಲ್ಲಾಪುರದ ರಾಜಮಾರ್ಗದಲ್ಲಿ ಅರವತ್ತು ಗುಂಟೆ ಭೂಮಿಯನ್ನು ಇನಾಂ ಕೊಟ್ಟರೆಂಬುದು ೧ನೆಯ ಅಭಿಪ್ರಾಯವಾಗಿದೆ. ಭೀಮಪ್ಪಯ್ಯ ದೇಶಪಾಂಡೆ ಅವರು ತಮ್ಮ ಪತ್ನಿಯರ ತವರೂರುಗಳಿಗೆ ಕಾಠೆವಾಡಿ (ಕಾತೇವಾಡ) ತಳಿಯ ಕುದುರೆಯನ್ನೇರಿ ಹೋಗುತ್ತಿದ್ದರು. ಒಮ್ಮೆ ಈ ಕುದುರೆಯನ್ನು ಗಮನಿಸಿದ ಶಾಹು ಮಹಾರಾಜರು ಇಂತಹ ಕುದುರೆಗಳನ್ನು ತಮಗೆ ಕೊಡಲು ಕೋರಿದರು. ಭೀಮಪ್ಪಯ್ಯ ಅವರು ಸಂತೋಷದಿಂದ ಅವರಿಗೆ ಕೆಲವು ಕುದುರೆಗಳನ್ನು ಕೊಟ್ಟರು. ಇದಕ್ಕೆ ಪ್ರತಿಫಲವಾಗಿ ಶಾಹು ಮಹಾರಾಜರು ಇವರಿಗೆ ಕೊಲ್ಲಾಪುರದ ರಾಜಮಾರ್ಗದಲ್ಲಿ ಅರವತ್ತು ಗುಂಟೆ ಭೂಮಿಯನ್ನು ಇನಾಂ ಕೊಟ್ಟರೆಂಬುದು ೨ನೆಯ ಅಭಿಪ್ರಾಯವಾಗಿದೆ. ಪುಷ್ಪಾವತಿಬಾಯಿ ಅವರು ಶಾಹು ಮಹಾರಾಜರ ಯಾವುದೋ ಒಂದು ಮಹತ್ವದ ರಾಜಕೀಯ ಕಾರ್ಯದಲ್ಲಿ ಭಾಗವಹಿಸಿದ್ದ ಪ್ರಯುಕ್ತ ಬ್ರಿಟಿಷರು ಇವರನ್ನು ಬಂಧಿಸಲು ಆದೇಶ ಹೊರಡಿಸಿದ್ದರು. ಬ್ರಿಟಿಷ ಅಧಿಕಾರಿಗಳು ಇವರನ್ನು ಬಂಧಿಸಲು ರಂಗೋಳಿ ವಾಡೆಗೆ ಮುತ್ತಿಗೆ ಹಾಕಿದ್ದ ಸಂದರ್ಭದಲ್ಲಿ ಇವರು ಪುರುಷ ವೇಷಧಾರಿಯಾಗಿ ಕುದುರೆಯನ್ನೇರಿ ವಾಡೆಯಿಂದ ತಪ್ಪಿಸಿಕೊಂಡರು. ಇವರ ಸಾಹಸ-ಶೌರ್ಯವನ್ನು ಮೆಚ್ಚಿದ ಶಾಹು ಮಹಾರಾಜರು ಇವರನ್ನು 'ವೀರಮಹಿಳೆ' ಎಂದು ಘೋಷಿಸಿ ಕೊಲ್ಲಾಪುರದ ರಾಜಮಾರ್ಗದಲ್ಲಿ

ಅರವತ್ತು ಗುಂಟೆ ಭೂಮಿಯನ್ನು ಇನಾಂ ಕೊಟ್ಟರೆಂಬುದು ಖಿನೆಯ ಅಭಿಪ್ರಾಯವಾಗಿದೆ. ಪ್ರಸ್ತುತ ದೇಶಪಾಂಡೆ ಮನೆತನದವರು ವ್ಯಾಪಾರ ಮತ್ತು ಉದ್ಯೋಗದ ಉದ್ದೇಶದಿಂದ ಮಹಾರಾಷ್ಟ್ರದ ಕೊಲ್ಲಾಪುರ ನಗರದಲ್ಲಿ ನೆಲೆಸಿದ್ದಾರೆ. ಆದರೂ ಅವರು ಅಣ್ಣಿಗೇರಿಯೊಂದಿಗಿನ ತಮ್ಮ ಭಾವನಾತ್ಮಕ ಸಂಬಂಧವನ್ನು ಕಳೆದುಕೊಂಡಿಲ್ಲ.

೨.೨. ದೇಸಾಯಿ ದೇಸಗತಿ ಮನೆತನ

ಎಂ.ಎಂ. ಕಲಬುರ್ಗಿ ಅವರು "ಅಣ್ಣಿಗೇರಿ ದೇಶಪಾಂಡೆ ದೇಸಗತಿ ಮನೆತನದ ಒಂದು ಶಾಖೆ ಕ್ರಿಶ. ಸುಮಾರು ೧೭ನೆಯ ಶತಮಾನದಲ್ಲಿ ವೀರಶೈವ (ಲಿಂಗಾಯತ) ಧರ್ಮಕ್ಕೆ ಮತಾಂತರವಾಗಿದೆ. ಆ ಮನೆತನವು 'ಶಿಕ್ಕೆದೇಸಾಯಿ' ಎಂಬ ವಂಶನಾಮವನ್ನು ಹೊಂದಿದೆ. ಆ ಮನೆತನಕ್ಕೂ ಪ್ರತ್ಯೇಕವಾದ ವಾಡೆಯಿದೆ. ದೇಶಪಾಂಡೆ ಮನೆತನವು ಜೈನರ ಒಳಪಂಗಡದಲ್ಲಿ 'ಪಂಚಮ'ವಾದರೆ, ಶಿಕ್ಕೆದೇಸಾಯಿ ಮನೆತನವು ವೀರಶೈವರ ಒಳಪಂಗಡದಲ್ಲಿ 'ಪಂಚಮಸಾಲಿ'ಯಾಗಿದೆ. ದೇಶಪಾಂಡೆ ಮನೆತನದ ಮನೆದೇವರು 'ಸವದತ್ತಿ ಎಲ್ಲಮ್ಮ'ವಾದರೆ, ಶಿಕ್ಕೆದೇಸಾಯಿ ಮನೆತನದ ಮನೆದೇವರು 'ಮುನಿರಾಬಾದ ಹುಲಿಗೆಮ್ಮ' ಆಗಿರುವುದು ಗಮನಾರ್ಹವಾಗಿದೆ. ಎಲ್ಲಮ್ಮ ಮತ್ತು ಹುಲಿಗೆಮ್ಮ ಇಬ್ಬರೂ ಅಕ್ಕ-ತಂಗಿಯರೆಂದು ಜಾನಪದೀಯ ಪ್ರತೀತಿಗಳಿವೆ" ಎಂದು ಸೂಚಿಸಿದ್ದಾರೆ.[೬೨] ಆದರೆ ಇದಕ್ಕೆ ಸ್ಪಷ್ಟವಾದ ಆಧಾರಗಳು ದೊರೆಯುವುದಿಲ್ಲ.

ಅಣ್ಣಿಗೇರಿಯ ದೇಸಾಯಿ ದೇಸಗತಿ ಮನೆತನವು ವಿಜಯಪುರದ ಆದಿಲ್‌ಷಾಹಿಗಳು, ಸವಣೂರು ನವಾಬರು, ಪೇಶ್ವೆಗಳು, ಬ್ರಿಟಿಷರ ಆಡಳಿತದ ಕಾಲಾವಧಿಯಲ್ಲಿ ಅಣ್ಣಿಗೇರಿ ಪ್ರದೇಶದಲ್ಲಿ ಪ್ರಜೆಗಳ ರಕ್ಷಣೆ, ನ್ಯಾಯ ತೀರ್ಮಾನ, ತೆರಿಗೆ ಸಂಗ್ರಹಣೆ, ಲೋಕೋಪಯೋಗಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿತ್ತು. ಈ ದೇಸಗತಿ ಅಧ್ಯಯನಕ್ಕೆ ಪ್ರಸ್ತುತ ಉಳಿದು ಬಂದಿರುವ ಬೆರಳೆಣಿಕೆಷ್ಟು ದಾಖಲು ಪತ್ರಗಳು ಮತ್ತು ಮೌಖಿಕ ಪರಂಪರೆಯ ಹೇಳಿಕೆಗಳು ಪ್ರಮುಖ ಆಕರಗಳಾಗಿವೆ. ಈ ದೇಸಗತಿಯನ್ನು ಮೊದಲಿಗೆ ಮಹಾಲ್ ಮಜ್ಜಿಗುಡ್ಡ, ಕಸಬಾ ಅಣ್ಣಿಗೇರಿಯ ದೇಸಗತಿ ಎಂದೆಲ್ಲ ಕರೆಯಲಾಗುತ್ತಿತ್ತು. ಇದರ ಅಧೀನದಲ್ಲಿ ಸುಮಾರು ಎಂಟು ಸಾವಿರ ಎಕರೆ ಭೂಮಿಯಿತ್ತು. ಬ್ರಿಟಿಷರು ಈ ದೇಸಗತಿಯ ಅಧಿಕಾರಗಳು ಮತ್ತು ಆಸ್ತಿಗಳನ್ನು ಬಲವಂತವಾಗಿ ಕಿತ್ತುಕೊಂಡು ಮಜ್ಜಿಗುಡ್ಡ, ಸೈದಾಪುರ, ಕೊಂಡಿಕೊಪ್ಪ, ಅಣ್ಣಿಗೇರಿ, ಭದ್ರಾಪುರ, ಬಸಾಪುರ, ಹಳ್ಳಿಕೇರಿ ಗ್ರಾಮಗಳ ಗೌಡಕಿ ಮತ್ತು ಕುಲಕರ್ಣಿಕಿ ಹಕ್ಕುಗಳನ್ನು ಕೊಟ್ಟರು. ಈ ದೇಸಗತಿ ಸರಂಜಾಮು ಇನಾಮನ್ನು ಪಡೆದ ದೇಸಗತಿಯಾಗಿ ಅಂದರೆ ಕೆಲವು ಜಮೀನುಗಳನ್ನು ಇನಾಮು ರೂಪದಲ್ಲಿ ನೀಡಿದೆ. ಉಳಿದವುಗಳಿಗೆ ೧/೩ ಅಂಶ ಹಪ್ತೆಯನ್ನು ಸರ್ಕಾರಕ್ಕೆ ಕೊಡುತ್ತಿದ್ದರು. ಮುಂದೆ ಸರ್ಕಾರಕ್ಕೆ ಪೂರ್ಣ ಹಪ್ತೆ ಕೊಡುತ್ತ ಬಂದಿದ್ದಾರೆ.

ಅಣ್ಣಿಗೇರಿಯ ಸಂಗಾಪುರ ಬಡಾವಣೆಯಲ್ಲಿ ಶಿಕ್ಕೆದೇಸಾಯಿ ಅವರ ರುದ್ರಭೂಮಿಯಲ್ಲಿರುವ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಸಮಾಧಿಯ ಮೇಲಿರುವ ಮೂರು ಸಾಲುಗಳ ಶಾಸನದಲ್ಲಿ–

ಶ್ರೀಗುರು ಸಿದ್ಧಪ್ಪ ದೇಸಾಯಿಗಳ ಸಮಾಧಿ ॥

'ಸಿದ್ಧಪ್ಪ ದೇಸಾಯಿಗಳ ಸಮಾಧಿ' ಎಂಬ ವಿವರವಿದೆ.[೪೪] ಅದೇ ರುದ್ರಭೂಮಿಯಲ್ಲಿರುವ ಹಾಳುಗುಡಿಯ ಹೊಸ್ತಿಲದ ಮೇಲಿರುವ ಕ್ರಿ.ಶ. ಸುಮಾರು ೧೭ನೆಯ ಶತಮಾನದ ಶಾಸನದಲ್ಲಿಯೂ 'ಸಿದ್ಧಗೌಡ' ಎಂಬ ನಿರೂಪಣೆಯಿದೆ.[೪೫] ಈ ಸಿದ್ಧಪ್ಪ ಮತ್ತು ಸಿದ್ಧಗೌಡ ಅವರ ಕುರಿತು ಮಾಹಿತಿಗಳು ಲಭ್ಯವಿಲ್ಲ. ಈ ರುದ್ರಭೂಮಿಯಲ್ಲಿ ಶಿಕ್ಕೆದೇಸಾಯಿ ದೇಸಗತಿ ಮನೆತನದ ಪೂರ್ವಜರ ಆರು ಸಮಾಧಿ ಗದ್ದುಗೆಗಳಿವೆ.

ಸಿದ್ಧಪ್ಪಗೌಡ ದೇಸಾಯಿ ಅವರ ಮಗ ಭದ್ರಪ್ಪಗೌಡ ಅವರ ಮಗನಾದ ಸೋಮನಗೌಡ ದೇಸಾಯಿ ಅವರು ತಮ್ಮ ದೇಸಗತಿ ವತನದ ವಂಶಾವಳಿಯ ಕುರಿತು ಕ್ರಿ.ಶ. ೧೮೪೪ರ ಫೆಬ್ರುವರಿ ೧೩ರಂದು ನವಲಗುಂದದ ಮಾಮಲೇದಾರ ಕಚೇರಿಗೆ ಕೈಫಿಯತ್ತು ಬರೆದುಕೊಟ್ಟಿರುವ ವಿವರಗಳ ಪ್ರಕಾರ ಚಿಕ್ಕನಗೌಡ ದೇಸಾಯಿ ಅವರು ಈ ದೇಸಗತಿಯ ಮೂಲಪುರುಷರಾಗಿದ್ದಾರೆ. ಇವರ ಮಗ ಚೆನ್ನಪ್ಪಗೌಡ. ಇವರ ಮಗ ಸೋಮನಗೌಡ. ಇವರಿಗೆ ಪರ್ವತಗೌಡ, ಸಂಗನಗೌಡ, ವೀರನಗೌಡ ಎಂಬ ಮೂವರು ಮಕ್ಕಳಿದ್ದರು. ಪರ್ವತಗೌಡ ಮತ್ತು ವೀರನಗೌಡ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಸಂಗನಗೌಡ ಅವರಿಗೆ ಇಬ್ಬರು ಪತ್ನಿಯರಿದ್ದರು. ೧ನೆಯ ಪತ್ನಿಯ ಉದರದಲ್ಲಿ ಸೋಮನಗೌಡ ಮತ್ತು ೨ನೆಯ ಪತ್ನಿಯ ಉದರದಲ್ಲಿ ಭದ್ರಪ್ಪಗೌಡ ಅವರು ಜನಿಸಿದರು. ಇವರಿಬ್ಬರು ತಮ್ಮ ದೇಸಗತಿ ವತನವನ್ನು ಹಂಚಿಕೊಂಡು ಬೇರೆ ಬೇರೆಯಾದರು. ಸೋಮನಗೌಡ ಅವರಿಗೆ ಸಂಗಪ್ಪಗೌಡ ಮತ್ತು ಕೊಟ್ಟೂರಪ್ಪಗೌಡ ಎಂಬಿಬ್ಬರು ಮಕ್ಕಳು. ಭದ್ರಪ್ಪಗೌಡ ಅವರಿಗೆ ಸಂಗಪ್ಪ ಮತ್ತು ಸೋಮನಗೌಡ ಎಂಬಿಬ್ಬರು ಮಕ್ಕಳು. ಸಂಗಪ್ಪ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಸೋಮನಗೌಡ ಅವರಿಗೆ ಫಕೀರಪ್ಪ, ಸಿದ್ರಾಮಪ್ಪ, ಸಿದ್ದಪ್ಪ ಎಂಬ ಮೂವರು ಮಕ್ಕಳು. ಸಿದ್ದಪ್ಪ ಅವರಿಗೆ ಆದಪ್ಪ ಎಂಬ ಒಬ್ಬ ಮಗ. ಸಂಗಪ್ಪಗೌಡ ಮತ್ತು ಕೊಟ್ಟೂರಪ್ಪಗೌಡ ತಮ್ಮ ದೇಸಗತಿ ವತನವನ್ನು ಹಂಚಿಕೊಂಡು ಬೇರೆ ಬೇರೆಯಾದರು.

ಈ ಕಾಲದಿಂದ ಈ ದೇಸಗತಿ ಮನೆತನದಲ್ಲಿ ಸಂಗಪ್ಪಗೌಡ ದೇಸಾಯಿ. ಕೊಟ್ಟೂರಪ್ಪ ದೇಸಾಯಿ ಮತ್ತು ಸಂಗಪ್ಪ ದೇಸಾಯಿ ಅವರು ಪ್ರತ್ಯೇಕವಾಗಿ ವಾಡೆಗಳನ್ನು ಕಟ್ಟಿಕೊಂಡು ಆಳ್ವಿಕೆ ಮಾಡಿರುವುದು ಗೋಚರಿಸುತ್ತದೆ. ಈ ಮೂವರೂ ಸಹೋದರರು ಬೇರೆ ಬೇರೆಯಾದ ತರುವಾಯ ತಮ್ಮ ಪೂರ್ವಜರ ನಾಲ್ಕುನೂರು ಕೂರಿಗಿ ಭೂಮಿಯನ್ನು ಸಮಾನವಾಗಿ ಪ್ರತಿಯೊಬ್ಬರು ಹದಿನಾರುನೂರು ಎಕರೆಯಂತೆ ಹಂಚಿಕೊಂಡರು. ಮೂವರಿಗೂ ಎರಡೆರಡು ಹಳ್ಳಿಗಳು ಮತ್ತು ಪ್ರತಿಯೊಂದು ಇನಾಂ ಗ್ರಾಮದಲ್ಲಿಯೂ ಕ್ಯಾಟಲ್ ಶೆಡ್ ಇದ್ದವು. ಆ ಗ್ರಾಮಗಳ ಆಡಳಿತ, ಕಂದಾಯ ವಸೂಲಿ ಮಾಡಲು ಗೌಡ, ಕುಲಕರ್ಣಿ, ತಳವಾರ ಎಂಬ ಅಧಿಕಾರಿಗಳನ್ನು ನೇಮಿಸಿದ್ದರು. ಅಂದು ಬ್ರಿಟಿಷ್ ಸರ್ಕಾರಕ್ಕೆ ಇವರಿಂದಲೇ ಹೆಚ್ಚಿನ ಪ್ರಮಾಣದಲ್ಲಿ ಕಂದಾಯ

ಸಂಗ್ರಹವಾಗುತ್ತಿತ್ತು. ಇವರು ಮುಂಬಯಿ-ಕರ್ನಾಟಕ ಪ್ರಾಂತದಲ್ಲಿ ಅತಿ ಹೆಚ್ಚು ಕಂದಾಯವನ್ನು ತುಂಬಿ, ಪ್ರಥಮರೆಂಬ ಹೆಸರನ್ನು ಹೊಂದಿದ್ದರು. ಇವರು ಹಂದಿಗನೂರು, ತೇರಣಿ ಮೊದಲಾದ ದೇಸಗತಿಯವರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿದ್ದರು. ಈ ದೇಸಗತಿಯ ಹಿರಿಯೊಬ್ಬರು ತಮ್ಮ ಧರ್ಮಪತ್ನಿಯ ಮೇಲಿನ ಅಪಾರವಾದ ಪ್ರೀತಿಯಿಂದಾಗಿ ಭೂಮಿಯನ್ನು ಕುಟುಂಬದ ಸದಸ್ಯರೆಲ್ಲರಿಗೂ ಸಮಾನವಾಗಿ ಹಂಚಿದ್ದರಿಂದ, ಮುಂದಿನ ವಂಶಸ್ಥರು ಈಗಲೂ ಭೂಮಿಯಲ್ಲಿ ಸಮ ಹಿಸ್ಸೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಈ ಮೇಲಿನ ಮೂರೂ ದೇಸಗತಿಗಳ ಆಡಳಿತ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕೊಡುಗೆಗಳು ಗಮನಾರ್ಹವಾಗಿವೆ. ಅಮೃತೇಶ್ವರ ದೇವಾಲಯದಲ್ಲಿ ಪ್ರತಿವರ್ಷ ಶ್ರಾವಣಮಾಸದ ಕೊನೆಯ ಸೋಮವಾರದಂದು ಶಿವಲಿಂಗಕ್ಕೆ ಅಭಿಷೇಕ, ಪೂಜೆ ಮಾಡುವ ಹಕ್ಕು ಈ ದೇಸಗತಿಯ ದೇಸಾಯಿಗಳಿಗಿತ್ತು. ಇವರು ಕೆಲವು ಬಿರುದುಗಳನ್ನು ಹೊಂದಿದ್ದರು. ಪಟ್ಟಣದಲ್ಲಿ ನಡೆಯುವ ಪ್ರಮುಖ ಹಬ್ಬ-ಹರಿದಿನಗಳಲ್ಲಿ ಭಾಗವಹಿಸಿ ಎಲ್ಲ ಮತದವರಿಂದಲೂ ಗೌರವವನ್ನು ಸ್ವೀಕರಿಸಿ, ಸಮಾರಂಭ ಉತ್ಸವಾದಿಗಳು ಅನ್ಯೋನ್ಯವಾಗಿ ನಡೆಯುವಂತೆ ನೇತೃತ್ವ ವಹಿಸುತ್ತಿದ್ದರು. ಮಜ್ಜಿಗುಡ್ಡ, ಬಸಾಪುರ ಗ್ರಾಮಗಳ ಜನರು ದೈವದವರೆಂದು ಈಗಲೂ ಇವರನ್ನು ಕರೆದೊಯ್ದು ಗೌರವಿಸಿ ತಮ್ಮ ಜಾತ್ರೆ-ಉತ್ಸವಗಳನ್ನು ಆಚರಿಸುತ್ತಾರೆ. ಈ ದೇಸಾಯಿಗಳು ಅಲ್ಲಿಯ ದೇವರುಗಳಿಗೆ ಜಾತ್ರೆ-ಉತ್ಸವಾದಿಗಳಲ್ಲಿ ಉಡಿ ತುಂಬುವ ಸಾಮಾನುಗಳನ್ನು ಕೊಡುವ ಸಂಪ್ರದಾಯವನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಅಣ್ಣಿಗೇರಿಯಲ್ಲಿ ನೆಲೆಸಿರುವ ಮುಸ್ಲಿಂ ಬಾಂಧವರು ತಾವು ವರ್ಷದಲ್ಲಿ ಎರಡು ಬಾರಿ ಈದ್ಗಾ ಪರಿಸರದಲ್ಲಿ ಕೈಗೊಳ್ಳುವ ಪ್ರಾರ್ಥನೆಗೆ ಮೊದಲು ಈ ದೇಸಗತಿಯವರಲ್ಲಿ ಬಂದು ಶುಭಾಶಯ ಪಡೆದುಕೊಂಡು ಹೋಗುತ್ತಿದ್ದರು. ಅವರು ಮೊಹರಂ ಹಬ್ಬದಲ್ಲಿ ಸಕ್ಕರೆ ಉದಿಸುವುದು ಮತ್ತು ನೈವೇದ್ಯ ಮಾಡುವುದನ್ನು ಮೊದಲಿಗೆ ದೇಸಗತಿಯವರಿಂದಲೇ ನೆರವೇರಿಸುತ್ತಿದ್ದರು. ಇಲ್ಲಿಯ ಜಾಮೀ ಮಸೀದೆಯಲ್ಲಿ ಅಂದಿನ ಶಿಕ್ಕಾ, ಖಡ್ಗ, ಕತ್ತಿಗಳು ಇಂದಿಗೂ ಉಳಿದು ಬಂದಿವೆ.

೨.೨.೧. ಸಂಗಪ್ಪಗೌಡ ಶಿಕ್ಕೆದೇಸಾಯಿ ಮನೆತನ

ಸಂಗಪ್ಪಗೌಡ ದೇಸಾಯಿ ಅವರಿಗೆ ನಾಲ್ಕುನೂರು ಕೂರಿಗಿ (೧೬೦೦ ಎಕರೆ) ಭೂಮಿಯಿತ್ತು. ಇವರು ಶಿರಹಟ್ಟಿಯ ಫಕೀರೇಶ್ವರ ಮಠದ ಉತ್ತರಾಧಿಕಾರಿಯ ನೇಮಕದಲ್ಲಿ ಪ್ರಧಾನ ಪಾತ್ರವಹಿಸಿದ್ದರು. ಆ ಮಠದ ಉತ್ತರಾಧಿಕಾರಿಯನ್ನು ನೇಮಕ ಮಾಡಿ ನಿರ್ಣಯಿಸಲಾಗುತ್ತಿದ್ದ ಪತ್ರಕ್ಕೆ ಇವರ ಸಹಿ ಮುಖ್ಯವಾಗಿತ್ತು. ಆ ನಿರ್ಣಯ ಪತ್ರಕ್ಕೆ ಅಂದು ಹಾಕುತ್ತಿದ್ದ ವಿವಿಧ ಶಿಕ್ಕೆ ಮತ್ತು ಆ ಮಠಕ್ಕೆ ಸಂಬಂಧಿಸಿದ ಇತರೆ ಕೆಲವು ಶಿಕ್ಕೆಗಳನ್ನು (ಮುದ್ರೆಗಳು) ಸಂಗಪ್ಪಗೌಡ ದೇಸಾಯಿ ಅವರು ತಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಇವರನ್ನು 'ಶಿಕ್ಕೆದೇಸಾಯರು' ಎಂದು ಕರೆಯಲಾಗುತ್ತಿತ್ತು.

ಅಂದಿನಿಂದ ಈ ಮನೆತನಕ್ಕೆ 'ಶಿಕ್ಕೆದೇಸಾಯಿ' ಎಂಬ ಅಡ್ಡನಾಮ ಬಂದಿದೆ. ಅವರ ವಂಶಸ್ಥರು ಆ ಶಿಕ್ಕೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಇದರಲ್ಲಿಯ ಒಂದು ಹಿತ್ತಾಳೆಯ ಶಿಕ್ಕೆಯಲ್ಲಿ-

ಬಿಸ್ಮಿಲ್ಲಾ ಈದ್ ರೆಹಮಾ ನಿರ್‍ರಹಿಮ
ಲಾ ಇಲಾಹಾ ಇಲ್ಲಲ್ಲಾಹು ಮಹಮದ್ರುರ್ ರಸುಲ್‌ಲ್ಲಾಹಿ
೧೩೭೪

'ಪರಮ ದಯಾಮಯನೂ, ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ ಏ ಪ್ರಭುವೇ ನಿನ್ನ ಕೃಪೆ ಇರಲಿ. ಅಲ್ಲಾಹನ ಸರಿಸಾಟಿ ಯಾರೂ ಇಲ್ಲ. ಅಲ್ಲಾಹನು ವಿಶ್ವದ ಪ್ರಭು ಆಗಿದ್ದಾನೆ. ಹಜರತ ಮಹಮ್ಮದ ಪೈಗಂಬರರು ಅಲ್ಲಾಹನ ಶ್ರೇಷ್ಠ ಅಧಿಕೃತ ಆಪ್ತ ಭಕ್ತರಾಗಿದ್ದಾರೆ' ಎಂಬ ಮೂರು ಸಾಲುಗಳ ಬರವಣಿಗೆಯಿದೆ.[೬] ಆ ಮಠದ ಉತ್ತರಾಧಿಕಾರಿಯ ನೇಮಕದಲ್ಲಿ ಈ ಮನೆತನದವರು ಇಂದಿಗೂ ಪ್ರಧಾನ ಪಾತ್ರವಹಿಸುತ್ತ ಬಂದಿದ್ದಾರೆ. ಆ ಮಠದ ಉತ್ತರಾಧಿಕಾರಿಯ ನೇಮಕದ ಸಂದರ್ಭದಲ್ಲಿ ಬಳಸಲಾಗುವ ವಿವಿಧ ಚಿನ್ನದ ಶಿಕ್ಕೆಗಳನ್ನು (ಮುದ್ರೆಗಳು) ಲೀಲಾತಾಯಿ ದೇಸಾಯಿ ಅವರು ಕಬ್ಬಿಣದ ಪೆಟ್ಟಿಗೆಯಲ್ಲಿ ಭದ್ರವಾಗಿ ಇಟ್ಟಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆ ಮುದ್ರೆಗಳನ್ನು ತೋರಿಸಲಿಲ್ಲ. ಆ ಮಠದ ಉತ್ತರಾಧಿಕಾರಿಯ ನೇಮಕದ ಸಂದರ್ಭದಲ್ಲಿ ಮಾತ್ರ ಈ ಪೆಟ್ಟಿಗೆಯನ್ನು ತೆರೆಯಲಾಗುತ್ತದೆ. ಸಂಗಪ್ಪಗೌಡ ಅವರು ಫಕೀರೇಶ್ವರ ಮಠದ ಮೇಲಿನ ಅಪಾರವಾದ ಭಕ್ತಿಯ ದ್ಯೋತಕವಾಗಿ ತಮ್ಮ ಹಿರಿಯ ಮಗನಿಗೆ ಫಕೀರಪ್ಪ ಎಂದು ನಾಮಕರಣ ಮಾಡಿದ್ದಾರೆ. ಸಂಗಪ್ಪಗೌಡ ಅವರಿಗೆ ಫಕೀರಪ್ಪ, ಸಿದ್ರಾಮಪ್ಪ, ಸೋಮನಗೌಡ ಎಂಬ ಮೂವರು ಮಕ್ಕಳು. ಹಿರಿಯ ಮಗ ಫಕೀರಪ್ಪ ಅವರಿಗೆ ಸಿದ್ರಾಮಪ್ಪ ಎಂಬ ಮಗ. ಸಿದ್ರಾಮಪ್ಪ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಸಂಗಪ್ಪಗೌಡ ಅವರ ೨ನೆಯ ಮಗನಾದ ಸಿದ್ರಾಮಪ್ಪ ಅವರಿಗೆ ಚನ್ನವೀರಪ್ಪ, ವೀರಬಸಪ್ಪ, ಅಂದಾನಪ್ಪ, ಚನ್ನಮಲ್ಲಪ್ಪ ಎಂಬ ನಾಲ್ವರು ಮಕ್ಕಳು. ೩ನೆಯ ಮಗ ಸೋಮನಗೌಡ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ.

ಸಿದ್ರಾಮಪ್ಪ ಅವರ ಹಿರಿಯ ಮಗನಾದ ಚನ್ನವೀರಪ್ಪ ಅವರಿಗೆ ಸೋಮಪ್ಪ ಎಂಬ ಒಬ್ಬ ಮಗ. ೨ನೆಯ ಮಗನಾದ ವೀರಬಸಪ್ಪ ಅವರಿಗೆ ಫಕೀರಪ್ಪ ಎಂಬ ಒಬ್ಬ ಮಗ. ಇವರಿಗೆ ಸಂಗಪ್ಪ ಎಂಬ ಒಬ್ಬ ಮಗ. ಇವರಿಗೆ ವೀರಬಸಪ್ಪ, ಫಕೀರಪ್ಪ, ಸಿದ್ರಾಮಪ್ಪ ಎಂಬ ಮೂವರು ಮಕ್ಕಳು. ೩ನೆಯ ಮಗನಾದ ಅಂದಾನಪ್ಪ ಅವರಿಗೆ ಸಿದ್ರಾಮಪ್ಪ ಎಂಬ ಒಬ್ಬ ಮಗ. ಇವರಿಗೆ ಚನ್ನವೀರಪ್ಪ ಎಂಬ ಒಬ್ಬ ಮಗ. ೪ನೆಯ ಮಗನಾದ ಚನ್ನಮಲ್ಲಪ್ಪ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಈ ಮನೆತನದ ಕೆಲವರು ಕುಂದಗೋಳ ಮತ್ತು ಹುಬ್ಬಳ್ಳಿ ಪಟ್ಟಣಗಳಲ್ಲಿ ನೆಲೆಸಿದ್ದಾರೆ. ಕುಂದಗೋಳ ಪಟ್ಟಣದಲ್ಲಿ ನೆಲೆಸಿರುವ ಸೋಮರಾವ ದೇಸಾಯಿ ಅವರು ತಾವು ಅಣ್ಣಿಗೇರಿಯ ಶಿಕ್ಕೆದೇಸಾಯಿ ಅವರ ವಂಶಸ್ಥರು ಎಂದು ಹೇಳುತ್ತಾರೆ.

ಅಣ್ಣಿಗೇರಿಯಲ್ಲಿ ಗದಗ-ಹುಬ್ಬಳ್ಳಿ ಹೆದ್ದಾರಿಯ ಎಡಬದಿಯಲ್ಲಿರುವ ಕಪಲಿ ಬಾವಿಯ ಗಡಗಡೆಯ ಕೆಳಭಾಗದ ಭಿತ್ತಿಯಲ್ಲಿನ ೧೯೨೭ರ ಶಾಸನದಲ್ಲಿ, 'ಅಣ್ಣಿಗೇರಿಯ ಶ್ರೀಮತಿ ಮಾತೋಶ್ರೀ ಗಂಗಾಬಾಯಿ ಸಾಹೇಬಮ್ಮ ಮತ್ತು ಫಕೀರಪ್ಪಗೌಡ ಶಿಕ್ಕೆದೇಸಾಯಿ ಅವರ ಸ್ಮರಣಾರ್ಥವಾಗಿ ಅವರ ಚಿರಂಜಿವಿಯಾದ (ಮಗ) ಶಂಕರರಾವ ಶಿಕ್ಕೆದೇಸಾಯಿ ಅವರು ಈ ಬಾವಿಯನ್ನು ಕಟ್ಟಿಸಿದರು' ಎಂಬ ನಿರೂಪಣೆಯಿದೆ.[೪೭] ಇದೇ ವಿವರವನ್ನು ಈ ಬಾವಿಯ ಪ್ರವೇಶ ಭಾಗದ ಎಡಬದಿಯ ಸ್ತಂಭದ ಮೇಲೆ ದೇವನಾಗರಿ ಲಿಪಿ ಮತ್ತು ಮರಾಠಿ ಭಾಷೆಯಲ್ಲಿ ಹಾಗೂ ಬಾವಿಯ ಪ್ರವೇಶ ಭಾಗದ ಬಲಬದಿಯ ಸ್ತಂಭದ ಮೇಲೆ ಇಂಗ್ಲೀಷ ಲಿಪಿ ಮತ್ತು ಭಾಷೆಯಲ್ಲಿರುವ ಶಾಸನಗಳಲ್ಲಿಯೂ ಬರೆಯಲಾಗಿದೆ.[೪೮] ಅಣ್ಣಿಗೇರಿಯ ಶಂಕರಪ್ಪಗೌಡ ಫಕೀರಪ್ಪಗೌಡ ಶಿಕ್ಕೆದೇಸಾಯಿ ಅವರು ಶ್ರೀಚರಪಟ್ಟಾಧಿಕಾರ ಶಿವದೀಕ್ಷಾ ಅಂದೋಲಿಕಾ ಸಮಾರಂಭ ಮಹೋತ್ಸವದ ಪ್ರಯುಕ್ತ ೧೯೩೪ರ ಜುಲೈ ೧ರಂದು ಹೊರಡಿಸಿರುವ ಮುದ್ರಿತ ಪತ್ರಿಕೆಯೊಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಲಭ್ಯವಾಗಿದೆ.[೪೯] ೧೯೫೪ರ ಡಿಸೆಂಬರ್ ೨೭ರ ದಾಖಲು ಪತ್ರದಲ್ಲಿ, ಅಣ್ಣಿಗೇರಿಯ ಶಂಕರಪ್ಪಗೌಡ ಶಿಕ್ಕೆದೇಸಾಯಿ ಅವರು ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳಿಗೆ ಪತ್ರವನ್ನು ಬರೆದು, 'ತಮಗೆ ಈ ಮೊದಲು ಅರಿಕೆ ಮಾಡಿಕೊಂಡಾಗ ತಾವುಗಳು ಒಂದು ತಿಂಗಳ ನಂತರ ಮಠದ ಕಟ್ಟಡದ ಸಲುವಾಗಿ ರೂಪಾಯಿಗಳನ್ನು ಕಳುಹಿಸುತ್ತೇನೆ ಎಂದು ತಿಳಿಸಿದ್ದೀರಿ. ಆ ಪ್ರಕಾರ ಈಗ ಅಣ್ಣಿಗೇರಿಯ ಚನ್ನಪ್ಪ ಬೂದಿಹಾಳ ಎಂಬುವನನ್ನು ಸದರ ರೂಪಾಯಿಗಳ ಸಲುವಾಗಿ ತಮ್ಮ ಕಡೆಗೆ ಕಳುಹಿಸಿಕೊಡಲಾಗಿದೆ. ಇನ್ನು ತಾವು ಸುಸ್ತು ಮಾಡಿದರೆ ಗೋದಿ ಸುಗ್ಗಿ ಪ್ರಾರಂಭವಾಗಿ, ಕಟ್ಟಡ ಕೆಲಸಕ್ಕೆ ಆಳುಗಳ ಅಡಚಣೆ ಮತ್ತು ಪಗಾರ ತುಟ್ಟಿ ಆಗುವುದು. ಕಾರಣ ತಾವುಗಳು ನಾನು ಕಳುಹಿಸಿಕೊಟ್ಟಿರುವವನ ಸಂಗಡ ರೂಪಾಯಿಗಳನ್ನು ಕಳುಹಿಸಿ ಕೆಲಸಕ್ಕೆ ಅನುಕೂಲ ಮಾಡಿಕೊಡಬೇಕು' ಎಂದು ತಿಳಿಸಿರುವ ವಿವರಗಳಿವೆ.[೫೦] ೧೯೧೨ರ ನವೆಂಬರ ೨೦ರಂದು ಅಣ್ಣಿಗೇರಿಯ ಶಿವಮೂರ್ತಿಗಳು ರಾಜಪೂಜಿತ ರಾಜತೇಜೋನಿಧಿ ಫಕೀರಯ್ಯ ವೀರಯ್ಯ ಹಿರೇಮಠ ಅವರಿಗೆ ಬಸಪ್ಪ ವೀರಪ್ಪ ಕರಿಬಸ್ತಿ ಅವರು ಚೌಕಿ ಮಠದ ಬೈಲಜಾಗದ (ಖಾಲಿ ನಿವೇಶನ) ಕುರಿತು ಬರೆದು ಕೊಟ್ಟಿರುವ ಬಾಡಿಗೆ ಪತ್ರದಲ್ಲಿ, ಈ ಜಾಗದ ಚಕ್ಕಬಂದಿಯನ್ನು ಸೂಚಿಸಿರುವ ವಿವರಗಳಲ್ಲಿ ಪಶ್ಚಿಮಕ್ಕೆ ಶ್ರೀಮಂತ ಶಂಕರಪ್ಪಗೌಡ ಶಿಕ್ಕೆದೇಸಾಯಿ ಅವರ ಮನೆಯ ಹಿತ್ತಲು ಎಂಬ ಉಲ್ಲೇಖವಿದೆ.[೫೧] ಈ ಮೇಲಿನ ವಂಶಾವಳಿಯಲ್ಲಿ ಫಕೀರಪ್ಪ ಎಂಬ ಹೆಸರಿನ ದೇಸಾಯಿಗಳು ಮೂವರು ಗೋಚರಿಸುತ್ತಾರೆ. ಪ್ರಸ್ತುತ ಶಾಸನಗಳೋಕ್ತ ಫಕೀರಪ್ಪಗೌಡ ಆ ಮೂವರಲ್ಲಿ ಯಾರು ಎಂಬುದು ಮತ್ತು ಮುದ್ರಿತ ಪತ್ರಿಕೆಯನ್ನು ಹೊರಡಿಸಿರುವ ಶಂಕರಪ್ಪಗೌಡ ಅವರು ಯಾವ ಫಕೀರಪ್ಪ ಅವರ ಮಗ ಎಂಬುದು ಸ್ಪಷ್ಟವಾಗುವುದಿಲ್ಲ.

ಶಂಕರಪ್ಪಗೌಡರು ದೊಡ್ಡ ಜಮೀನ್ದಾರರಾಗಿದ್ದರು. ಆದರ್ಶ ಒಕ್ಕಲುತನ ಮಾಡಿಸಿ ರಾಜ್ಯಾದ್ಯಂತದ ರೈತರ ಗಮನ ಸೆಳೆದು ಕೀರ್ತಿವಂತರಾಗಿದ್ದರು. ಇವರಿಗೆ ಐವರು ಗಂಡು ಮಕ್ಕಳು ಮತ್ತು ಓರ್ವ ಹೆಣ್ಣು ಮಗಳಿದ್ದಳು. ಇವರ ಹಿರಿಯ ಮಗನಾದ

ಬಾಬಾಸಾಹೇಬ ಅವರು ಎಲ್.ಎಲ್.ಬಿ. ಪದವಿ ಪಡೆದು ಸಾಮಾಜಿಕ, ಧಾರ್ಮಿಕ, ರಾಜಕೀಯದಲ್ಲಿ ಆದರ್ಶವಂತರಾಗಿ ಬಾಳಿ ಅನೇಕ ಸಂಘ–ಸಂಸ್ಥೆಗಳಿಗೆ ಜೀವಾಳವಾಗಿದ್ದರು. ಇವರನ್ನು ಅಂದಿನ ಸರ್ಕಾರವು 'ತಾಲ್ಲೂಕಾ ಗೌರವ ಮ್ಯಾಜಿಸ್ಟ್ರೇಟರು' ಎಂದು ನಾಮಕರಣ ಮಾಡಿ ಗೌರವಿಸಿತ್ತು. ಬಾಬಾಸಾಹೇಬ ಮತ್ತು ಲೀಲಾಬಾಯಿ ದಂಪತಿಗಳ ಮಗನಾದ ಶಂಕರರಾವ ಅವರು ಮೆಕಾನಿಕ್ ಇಂಜೀನಿಯರ ಪದವಿ ಪಡೆದು, ತಂದೆಯಂತೆ ಉದಾತ್ತ ಧ್ಯೇಯ ಹೊಂದಿದ್ದರು. ಇವರು ೧೯೭೦ರಲ್ಲಿ ಅಣ್ಣಿಗೇರಿ ಪಟ್ಟಣ ಪುರಸಭೆಯ ಅಧ್ಯಕ್ಷರಾಗಿದ್ದರು. ಸ್ಥಳೀಯ 'ಅಮೃತ ಕಲಾಕುಂಜ'ದ ಸಾಮಾಜಿಕ ಚಟುವಟಿಕೆಗಳನ್ನು ಅವಲೋಕಿಸಿ, ಅದಕ್ಕೆ 'ಕಲಾಭವನ' ನಿರ್ಮಿಸಲು ಹನ್ನೆರಡು ಗುಂಟೆ ಭೂಮಿಯನ್ನು ದಾನ ಮಾಡಿದ್ದಾರೆ.

೨.೨.೨. ಕೊಟ್ಟೂರಪ್ಪಗೌಡ ದೇಸಾಯಿ ಮನೆತನ

ಕೊಟ್ಟೂರಪ್ಪಗೌಡ ದೇಸಾಯಿ ಅವರಿಗೆ ನಾಲ್ಕುನೂರು ಕೂರಿಗಿ (೧೬೦೦ ಎಕರೆ) ಭೂಮಿಯಿತ್ತು. ಇವರಿಗೆ ಬಸಪ್ಪ, ಫಕೀರಪ್ಪ, ಕೊಟ್ಟೂರಪ್ಪ, ವೀರಬಸಪ್ಪ, ಬಸಲಿಂಗಪ್ಪ, ಚನ್ನಬಸಪ್ಪ ಎಂಬ ಆರು ಜನ ಮಕ್ಕಳು. ಹಿರಿಯ ಮಗನಾದ ಬಸಪ್ಪ ಅವರಿಗೆ ಕೊಟ್ಟೂರಪ್ಪ ಮತ್ತು ಫಕೀರಪ್ಪ ಎಂಬಿಬ್ಬರು ಮಕ್ಕಳು. ಇವರಿಬ್ಬರಿಗೂ ಸಂತಾನಪ್ರಾಪ್ತವಾಗಲಿಲ್ಲ. ೨ನೆಯ ಮಗನಾದ ಫಕೀರಪ್ಪ ಅವರಿಗೂ ಸಂತಾನಪ್ರಾಪ್ತವಾಗಲಿಲ್ಲ. ೩ನೆಯ ಮಗನಾದ ಕೊಟ್ಟೂರಪ್ಪ ಅವರಿಗೆ ಬಸವಂತರಾವ ಎಂಬ ಒಬ್ಬ ಮಗ. ಇವರಿಗೆ ಸಂತಾನಪ್ರಾಪ್ತವಾಗಲಿಲ್ಲ. ೪ನೆಯ ಮಗನಾದ ವೀರಬಸಪ್ಪ ಅವರಿಗೆ ಸೋಮಪ್ಪ, ನೀಲಪ್ಪ, ಬಸಪ್ಪ, ಚನ್ನಬಸಪ್ಪ, ಕೊಟ್ಟೂರಪ್ಪ ಎಂಬ ಐವರು ಮಕ್ಕಳು. ಇವರಲ್ಲಿ ಸೋಮಪ್ಪ, ಬಸಪ್ಪ, ಚನ್ನಬಸಪ್ಪ, ಕೊಟ್ಟೂರಪ್ಪ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ನೀಲಪ್ಪ ಅವರಿಗೆ ವಸಂತರಾವ ಎಂಬ ಒಬ್ಬ ಮಗ. ಇವರಿಗೆ ಸೋಮಪ್ಪ ಮತ್ತು ಬಸವಂತರಾವ ಎಂಬಿಬ್ಬರು ಮಕ್ಕಳು. ಸೋಮಪ್ಪ ಅವರಿಗೆ ನೀಲಪ್ಪಗೌಡ, ಫಕೀರಪ್ಪಗೌಡ, ಬಾಳಪ್ಪಗೌಡ ಎಂಬ ಮೂವರು ಮಕ್ಕಳು. ನೀಲಪ್ಪಗೌಡ ಅವರಿಗೆ ವೀರಬಸಪ್ಪ, ಬಾಪುಸಾಬ, ಚಿಕ್ಕನಗೌಡ ಎಂಬ ಮೂವರು ಮಕ್ಕಳು. ಫಕೀರಪ್ಪಗೌಡ ಅವರಿಗೆ ಬಸವಂತರಾವ, ಅಪ್ಪಾಸಾಹೇಬ, ಕಾಶಪ್ಪಗೌಡ, ಸೋಮಪ್ಪಗೌಡ ಎಂಬ ನಾಲ್ವರು ಮಕ್ಕಳು. ಬಾಳಪ್ಪಗೌಡ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಅಪ್ಪಾಸಾಹೇಬ ಅವರಿಗೆ ರಾವಸಾಹೇಬ ಎಂಬ ಒಬ್ಬ ಮಗ. ಸೋಮಪ್ಪಗೌಡ ಅವರಿಗೆ ಫಕೀರಪ್ಪಗೌಡ ಮತ್ತು ದೇವೇಂದ್ರಗೌಡ ಎಂಬಿಬ್ಬರು ಮಕ್ಕಳು. ದೇವೇಂದ್ರಗೌಡ ಅವರಿಗೆ ಉಮೇಶಗೌಡ, ಮಹೇಶಗೌಡ, ಮಹಾಂತೇಶಗೌಡ ಎಂಬ ಮೂವರು ಮಕ್ಕಳು. ಇವರಿಗೆ ಸಂತಾನಪ್ರಾಪ್ತವಾಗಲಿಲ್ಲ.

ಕೊಟ್ಟೂರಪ್ಪಗೌಡ ಅವರ ೫ನೆಯ ಮಗನಾದ ಬಸಲಿಂಗಪ್ಪ ಅವರಿಗೆ ವೀರಭದ್ರಪ್ಪ ಮತ್ತು ಕೊಟ್ಟೂರಪ್ಪ ಎಂಬಿಬ್ಬರು ಮಕ್ಕಳು. ವೀರಭದ್ರಪ್ಪ ಅವರಿಗೆ ಕೊಟ್ಟೂರಪ್ಪ, ಬಸಲಿಂಗಪ್ಪ, ಬಸಪ್ಪ, ವೀರಪ್ಪ ಎಂಬ ನಾಲ್ವರು ಮಕ್ಕಳು. ಹಿರಿಯ ಮಗನಾದ

ಕೊಟ್ಟೂರಪ್ಪ ಅವರಿಗೆ ನಿಂಗಪ್ಪ ಮತ್ತು ಫಕ್ಕಿರಪ್ಪ ಎಂಬಿಬ್ಬರು ಮಕ್ಕಳು. ಫಕೀರಪ್ಪ ಅವರಿಗೆ ಬಸವಂತರಾವ ಎಂಬ ಒಬ್ಬ ಮಗ. ೨ನೆಯ ಮಗನಾದ ಬಸಲಿಂಗಪ್ಪ ಅವರಿಗೆ ಫಕೀರಪ್ಪ ಮತ್ತು ವೀರಭದ್ರಪ್ಪ (ಈರಭದ್ರಪ್ಪ) ಎಂಬಿಬ್ಬರು ಮಕ್ಕಳು. ವೀರಭದ್ರಪ್ಪ ಅವರಿಗೆ ಬಸಲಿಂಗಪ್ಪ ಎಂಬ ಒಬ್ಬ ಮಗ. ೩ನೆಯ ಮಗನಾದ ಬಸಪ್ಪ ಅವರಿಗೆ ಚನ್ನಬಸಪ್ಪ ಮತ್ತು ನೀಲಪ್ಪ ಎಂಬಿಬ್ಬರು ಮಕ್ಕಳು. ಚನ್ನಬಸಪ್ಪ ಅವರಿಗೆ ಬಸಪ್ಪ ಮತ್ತು ಬಸವಂತಪ್ಪ ಎಂಬಿಬ್ಬರು ಮಕ್ಕಳು. ಬಸಪ್ಪ ಅವರಿಗೆ ಕೊಟ್ಟೂರಪ್ಪ (ಕೊಟ್ರಪ್ಪ) ಎಂಬ ಒಬ್ಬ ಮಗ. ೪ನೆಯ ಮಗನಾದ ವೀರಪ್ಪ ಅವರಿಗೆ ಬಸವಂತರಾವ ಎಂಬ ಒಬ್ಬ ಮಗ. ಬಸಲಿಂಗಪ್ಪ ಅವರ ೨ನೆಯ ಮಗನಾದ ಕೊಟ್ಟೂರಪ್ಪ ಅವರಿಗೆ ಸಿದ್ದಲಿಂಗಪ್ಪ ಎಂಬ ಒಬ್ಬ ಮಗ. ಇವರಿಗೆ ಬಸವಂತರಾವ ಎಂಬ ಒಬ್ಬ ಮಗ. ಇವರಿಗೆ ಬಾಬಾಸಾಹೇಬ, ಚನ್ನಬಸಪ್ಪ, ಬಾಬಾಸಾಹೇಬ (ಉರ್ಫ ಅಣ್ಣಪ್ಪ) ಎಂಬ ಮೂವರು ಮಕ್ಕಳು. ಕೊಟ್ಟೂರಪ್ಪಗೌಡ ಅವರ ೬ನೆಯ ಮಗನಾದ ಚನ್ನಬಸಪ್ಪ ಅವರಿಗೆ ವೀರಬಸಪ್ಪ ಎಂಬ ಒಬ್ಬ ಮಗ. ಇವರಿಗೆ ಕೊಟ್ಟೂರಪ್ಪ, ಚನ್ನಬಸಪ್ಪ ಎಂಬಿಬ್ಬರು ಮಕ್ಕಳು. ಕೊಟ್ಟೂರಪ್ಪ ಅವರಿಗೆ ಬಸಪ್ಪ ಎಂಬ ಒಬ್ಬ ಮಗ. ಚನ್ನಬಸಪ್ಪ ಅವರಿಗೆ ನಿಂಗಪ್ಪ, ಅಪ್ಪಾಸಾಬ, ಕೊಟ್ಟೂರಪ್ಪಗೌಡ (ಕೊಟ್ರಪ್ಪಗೌಡ), ರುದ್ರಗೌಡ, ಈಶ್ವರಗೌಡ, ಬಸವಂತರಾವ ಎಂಬ ಆರು ಜನ ಮಕ್ಕಳು.

೨.೨.೩. ಸಂಗಪ್ಪಗೌಡ ದೇಸಾಯಿ ಮನೆತನ

ಸಂಗಪ್ಪ ದೇಸಾಯಿ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಇವರ ಸಹೋದರನಾದ ಸೋಮನಗೌಡ ಅವರಿಗೆ ಫಕೀರಪ್ಪ, ಸಿದ್ರಾಮಪ್ಪ, ಸಿದ್ಧಪ್ಪ ಎಂಬ ಮೂವರು ಮಕ್ಕಳು. ಫಕೀರಪ್ಪ ಮತ್ತು ಸಿದ್ರಾಮಪ್ಪ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಸಿದ್ಧಪ್ಪ ಅವರಿಗೆ ಆದಪ್ಪ ಎಂಬ ಒಬ್ಬ ಮಗ. ಇವರ ಮುಂದಿನ ವಂಶಸ್ಥರ ಕುರಿತು ಮಾಹಿತಿಗಳು ಲಭ್ಯವಿಲ್ಲ. ಆದರೆ ಅಣ್ಣಿಗೇರಿ ಪಟ್ಟಣದಲ್ಲಿ ನೆಲೆಸಿರುವ ಸಂಗಪ್ಪ ದೇಸಾಯಿ ಅವರ ವಂಶಸ್ಥರಾದ ಮಹೇಶರಾವ ದೇಸಾಯಿ ಅವರು ಒದಗಿಸಿರುವ ವಂಶಾವಳಿಯ ವಿವರಗಳು ಈ ಮುಂದಿನಂತಿವೆ. ಸಂಗಪ್ಪಗೌಡ ಮತ್ತು ಕೊಟ್ಟೂರಪ್ಪಗೌಡ (ಕೊಟ್ರಪ್ಪ) ಎಂಬ ಇಬ್ಬರು ಸಹೋದರರು ತಮ್ಮ ದೇಸಗತಿ ವತನವನ್ನು ಹಂಚಿಕೊಂಡು ಬೇರೆ ಬೇರೆಯಾದರು. ಸಂಗಪ್ಪಗೌಡ ದೇಸಾಯಿ ಅವರಿಗೆ ನಾಲ್ಕುನೂರು ಕೂರಿಗಿ (೧೬೦೦ ಎಕರೆ) ಭೂಮಿಯಿತ್ತು. ಅವರು ತಮ್ಮ ಚಾವರಾತ ಗ್ರಾಮಗಳಾದ ಬಸಾಪುರ ಮತ್ತು ಮಜ್ಜಿಗುಡ್ಡಗಳಲ್ಲಿ ಕಂದಾಯ ವಸೂಲಿ, ಪ್ರಜೆಗಳ ರಕ್ಷಣೆ, ನ್ಯಾಯ ತೀರ್ಮಾನ ಕಾರ್ಯಗಳನ್ನು ಮಾಡುತ್ತಿದ್ದರು. ಗದುಗಿನ ತೋಂಟದಾರ್ಯ ಮಠದ ಶಾಖಾಮಠವಾದ ಅಣ್ಣಿಗೇರಿಯ ಈಸೂರು ನಂದೀಶ್ವರಸ್ವಾಮಿ ಮಠದ ಸ್ಥಾಪನೆಯಲ್ಲಿ ಇವರ ಕೊಡುಗೆ ಅಪೂರ್ವವಾಗಿದೆ. ಈಸೂರು ನಂದೀಶ್ವರ ಸ್ವಾಮಿಗಳು ಮಜ್ಜಿಗುಡ್ಡ ಮತ್ತು ನೀಲಗುಡ್ಡದಲ್ಲಿಯ ಹಳ್ಳದ ದಂಡೆಯಲ್ಲಿ ತಪಸ್ಸು ಮಾಡುತ್ತಿದ್ದರು. ಸಂಗಪ್ಪ ದೇಸಾಯಿ ಅವರು ಆ ಸ್ವಾಮಿಗಳನ್ನು ಅಣ್ಣಿಗೇರಿಗೆ ಕರೆತಂದು ಇಲ್ಲಿ ಮಠವನ್ನು ಸ್ಥಾಪಿಸಿ ಅವರಿಗೆ ಪಟ್ಟಕಟ್ಟಿದರು. ಕ್ರಿ.ಶ. ಸುಮಾರು ೧೭-೧೮ನೆಯ ಶತಮಾನದಲ್ಲಿ ಅಣ್ಣಿಗೇರಿ ಪ್ರದೇಶವು

ನಿರಂತರ ಬರಗಾಲಕ್ಕೊಳಪಡುತ್ತಿತ್ತು. ಬರಗಾಲದ ಸಂದರ್ಭದಲ್ಲಿ ಸಂಗಪ್ಪಗೌಡ ದೇಸಾಯಿ ಅವರು ಜೋಳದ ಸಂಗಟಿ (ನುಚ್ಚು) ಮತ್ತು ಸಾರು ಮಾಡಿಸಿ, ಜನರಿಗೆ ಹಂಚುತ್ತಿದ್ದರು. ಆಗ ಇವರನ್ನು 'ಸಂಗಟಿ ದೇಸಾಯರು' ಎಂದು ಕರೆಯಲಾಗುತ್ತಿತ್ತು. ಇವರು ಶ್ರೀಮಠದಲ್ಲಿ ಪ್ರತಿ ಅಮವಾಸ್ಯೆ ಮತ್ತು ಹುಣ್ಣಿಮೆಯಂದು ಜಪಯಜ್ಞವನ್ನು ಕೈಗೊಳ್ಳುತ್ತಿದ್ದರು. ಆ ಪರಂಪರೆ ಇಂದಿಗೂ ಪ್ರಚಲಿತದಲ್ಲಿದೆ. ಇಂದು ಪ್ರತಿವರ್ಷ ಶ್ರಾವಣ ಮಾಸದಲ್ಲಿ ಒಂದು ದಿನ ಪುರಾಣ ಸಪ್ತಾಹವನ್ನು ಮತ್ತು ಮಹಾನವಮಿಯಲ್ಲಿ ಒಂಭತ್ತು ದಿನಗಳವರೆಗೆ ಜಪಯಜ್ಞವನ್ನು ನಡೆಸಲಾಗುತ್ತದೆ.

ಸಂಗಪ್ಪಗೌಡ ದೇಸಾಯಿ ಅವರು ಅಣ್ಣಿಗೇರಿ ಮತ್ತು ತಮ್ಮ ಅಧೀನದ ಚಾವರಾತ ಗ್ರಾಮಗಳಲ್ಲಿ ಅನೇಕ ಬಾವಿಗಳನ್ನು ಕಟ್ಟಿಸಿದ್ದಾರೆ. ಇವರಿಗೆ ಫಕೀರಪ್ಪ, ಸಿದ್ರಾಮಪ್ಪ, ಸೋಮನಗೌಡ ಎಂಬ ಮೂವರು ಮಕ್ಕಳು. ಫಕೀರಪ್ಪ ಅವರಿಗೆ ಸಿದ್ರಾಮಪ್ಪ ಎಂಬ ಒಬ್ಬ ಮಗ. ಇವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಸಿದ್ರಾಮಪ್ಪ ಅವರಿಗೆ ಚನ್ನವೀರಪ್ಪ, ವೀರಬಸಪ್ಪ, ಅಂದಾನಪ್ಪ, ಚನ್ನಮಲ್ಲಪ್ಪ ಎಂಬ ನಾಲ್ವರು ಮಕ್ಕಳು. ಸೋಮನಗೌಡ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಸಿದ್ರಾಮಪ್ಪ ಅವರ ೧ನೆಯ ಮಗನಾದ ಚನ್ನವೀರಪ್ಪ ಅವರಿಗೆ ಸೋಮಪ್ಪ ಎಂಬ ಒಬ್ಬ ಮಗ. ಇವರಿಗೆ ಸಂತಾನಪ್ರಾಪ್ತವಾಗಲಿಲ್ಲ. ೨ನೆಯ ಮಗನಾದ ವೀರಬಸಪ್ಪ ಅವರಿಗೆ ಫಕೀರಪ್ಪ ಎಂಬ ಮಗ. ೩ನೆಯ ಮಗನಾದ ಅಂದಾನಪ್ಪ ಅವರಿಗೆ ಸಿದ್ರಾಮಪ್ಪ ಎಂಬ ಮಗ. ೪ನೆಯ ಮಗನಾದ ಚನ್ನಮಲ್ಲಪ್ಪ ಅವರಿಗೆ ಸಂತಾನಪ್ರಾಪ್ತವಾಗಲಿಲ್ಲ. ಫಕೀರಪ್ಪ ಅವರಿಗೆ ಸಂಗಪ್ಪ ಎಂಬ ಮಗ. ಇವರಿಗೆ ವೀರಬಸಪ್ಪ, ಫಕೀರಪ್ಪ, ಸಿದ್ರಾಮಪ್ಪ ಎಂಬ ಮೂವರು ಮಕ್ಕಳು. ವೀರಬಸಪ್ಪ ಮತ್ತು ಸಿದ್ರಾಮಪ್ಪ ಅವರಿಗೆ ಸಂತಾಸಪ್ರಾಪ್ತವಾಗಲಿಲ್ಲ. ಫಕೀರಪ್ಪ ಅವರಿಗೆ ಅಂದಾನಪ್ಪ, ತೋಟಪ್ಪ, ಬಸವಂತರಾವ (ಉರ್ಫ ಸೋಮಪ್ಪಗೌಡ) ಎಂಬ ಮೂವರು ಮಕ್ಕಳು. ಅಂದಾನಪ್ಪ ಅವರಿಗೆ ಸಂಗಪ್ಪಗೌಡ ಮತ್ತು ಚನ್ನವೀರಪ್ಪ (ಉರ್ಫ ಬಾಪುಸಾಬ) ಎಂಬಿಬ್ಬರು ಮಕ್ಕಳು. ಸಂಗಪ್ಪಗೌಡ ಅವರಿಗೆ ಅಪ್ಪಾಸಾಹೇಬ ಎಂಬ ಒಬ್ಬ ಮಗ.

ಫಕೀರಪ್ಪ ಅವರ ೨ನೆಯ ಮಗನಾದ ತೋಟಪ್ಪ (೧೮೭೪-೧೯೫೩) ಅವರು ತಮ್ಮ ೨೮ನೆಯ ವಯಸ್ಸಿನಲ್ಲಿ ಹುಕ್ಕೇರಿ ತಾಲ್ಲೂಕಿನ ಇಂಗಳಿಗಿಯ ದೇಸಾಯಿ ಅವರ ಮಗಳನ್ನು ವಿವಾಹವಾದರು. ಇವರು ೧ನೆಯ ಹೆರಿಗೆಯಲ್ಲಿಯೇ ಮರಣವನ್ನಪ್ಪಿದರು. ಪತ್ನಿ ಮತ್ತು ಮಗುವನ್ನು ಕಳೆದುಕೊಂಡ ತೋಟಪ್ಪ ಅವರು ಯಾವುದೋ ಶಾಪದಿಂದ ಈ ಘಟನೆ ನಡೆಯಿತ್ತೆಂದು ಭಾವಿಸಿ ಜೀವನದಲ್ಲಿ ವೈರಾಗ್ಯ ಹೊಂದಿದರು. ಆಗ ಇವರಿಗೆ ಮೂವತ್ತು ವರ್ಷಗಳು. ತಮ್ಮ ನಾಲ್ಕು ಕೂರಿಗಿ ಭೂಮಿಯನ್ನು ದಾನ-ಧರ್ಮಕ್ಕೆ ಉಪಯೋಗಿಸಿದರು. ಅವರು ತಮ್ಮಲ್ಲಿದ್ದ ಬಂಗಾರ, ಬೆಳ್ಳಿಯ ಸಾಮಾನುಗಳನ್ನು ಮಾರಿ, ಧರ್ಮಕಾರ್ಯಗಳಲ್ಲಿ ನಿರತರಾಗಿ ಧಾರ್ಮಿಕ ಕೇಂದ್ರಗಳ ದರ್ಶನಕ್ಕೆ ಪ್ರಯಾಣ ಬೆಳೆಸಿದರು. ಗೋಕರ್ಣದಲ್ಲಿ ಮಹಾಬಲೇಶ್ವರನಿಗೆ ಪೂಜೆ-ಅಭಿಷೇಕ ಮಾಡಿಸಿ, ಅಲ್ಲಿಯೇ ಕೆಲಕಾಲ ತಂಗಿದರು. ಅಂದು ಗೋಕರ್ಣದಲ್ಲಿ ಆಂಧ್ರಪ್ರದೇಶದ ವಂದ್ಯಾಲದ ಶಂಕರೇಂದ್ರ ಸ್ವಾಮಿಗಳ ಧರ್ಮೋಪದೇಶ ನಡೆಯುತ್ತಿತ್ತು. ತೋಟಪ್ಪ ಅವರು ಆ ಸ್ವಾಮಿಗಳ

ಉಪದೇಶದ ಪ್ರಭಾವಕ್ಕೊಳಗಾಗಿ ಇವರೇ ನನಗೆ ಯೋಗ್ಯವಾದ ಗುರುಗಳೆಂದು ಭಾವಿಸಿ, ಅವರ ಸೇವೆಯಲ್ಲಿ ನಿರತರಾಗಿ ಅವರಿಂದ ರಾಜಯೋಗ ಅಭ್ಯಾಸವನ್ನು ಮಾಡಿದರು. ಶಂಕರೇಂದ್ರ ಸ್ವಾಮಿಗಳು ತಮ್ಮ ಶಿಷ್ಯ ತೋಟಪ್ಪ ಅವರೊಂದಿಗೆ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಪೋತನಾಳ ಗ್ರಾಮಕ್ಕೆ ತೆರಳಿದರು. ಅಲ್ಲಿಯ ತಮ್ಮ ಶಿಷ್ಯ ರುದ್ರಮುನಿ ಸ್ವಾಮಿಗಳ ಜೊತೆಗೆ ಒಂದು ತಿಂಗಳು ಧರ್ಮೋಪದೇಶದಲ್ಲಿ ನಿರತರಾದರು. ತರುವಾಯ ಮೂವರೂ ಕೂಡಿಕೊಂಡು ಕಾಶಿ, ರಾಮೇಶ್ವರ, ಮಥುರಾ, ಹೃಷಿಕೇಶ, ಬದರಿನಾರಾಯಣ, ಅಮರನಾಥ ಮೊದಲಾದ ಕ್ಷೇತ್ರಗಳ ದರ್ಶನ ಮಾಡಿಕೊಂಡು, ಉತ್ತರ ಪ್ರದೇಶದ ಕೆಲವು ಕ್ಷೇತ್ರಗಳ ದರ್ಶನಕ್ಕೆ ಸಂಚರಿಸಿದರು. ಅಲ್ಲಿಂದ ಮುಂಬಯಿ, ಬೆಳಗಾವಿ ಮಾರ್ಗವಾಗಿ ೧೯೦೧ರಲ್ಲಿ ಅಣ್ಣಿಗೇರಿಗೆ ಆಗಮಿಸಿದರು. ಶಂಕರೇಂದ್ರ ಮತ್ತು ರುದ್ರಮುನಿ ಸ್ವಾಮಿಗಳು ಕೆಲಕಾಲ ಅಣ್ಣಿಗೇರಿಯಲ್ಲಿ ಧರ್ಮೋಪದೇಶ ಮಾಡಿ, ಬೆಳಗಾವಿ ಜಿಲ್ಲೆಯ ಹೊಳೆ ಇಟ್ಟಣಿಗಿ ಗ್ರಾಮಕ್ಕೆ ತೆರಳಿದರು. ಶಂಕರೇಂದ್ರ ಸ್ವಾಮಿಗಳು ಇಲ್ಲಿಂದ ತೆರಳುವ ಮುಂಚೆ ತೋಟಪ್ಪ ಅವರಿಗೆ "ನೀನು ನನ್ನ ಮೇಲಿಟ್ಟಿರುವ ಗುರುಭಾವನೆಯಂತೆ ರುದ್ರಮುನಿ ಸ್ವಾಮಿಗಳ ಮೇಲೂ ಗುರುಭಾವನೆಯಿಟ್ಟು ಅವರ ಸೇವೆಯನ್ನು ಮಾಡು, ನಿನ್ನ ಜನ್ಮ ಸಾರ್ಥಕವಾಗುತ್ತದೆ" ಎಂದು ಹೇಳಿದ್ದರು. ಶಂಕರೇಂದ್ರ ಸ್ವಾಮಿಗಳು ಹೊಳೆ ಇಟ್ಟಣಿಗಿ ಗ್ರಾಮದಲ್ಲಿಯೇ ಸಮಾಧಿಸ್ಥರಾದರು.[೫೨]

ತೋಟಪ್ಪ ಅವರು ಅಣ್ಣಿಗೇರಿಯ ಈಶ್ವರಸ್ವಾಮಿ ಮಠದಲ್ಲಿ ಪ್ರತಿನಿತ್ಯ ವೇದಾಂತ ಬೋಧೆ, ಪ್ರವಚನ, ಕೀರ್ತನೆಗಳನ್ನು ನಡೆಸುತ್ತಿದ್ದರು. ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳಿಂದ ವೇದಾಂತ ಜ್ಞಾನವನ್ನು ಕಲಿತರು. ಗುರುಗಳು ಮಾಡಿದ 'ತೋಟಪ್ಪ ನೀವು ಅಣ್ಣಿಗೇರಿಗೆ ನಡೆದು ಕಾಶಿಯ ಜ್ಞಾನ, ಪಂಡರಪುರದ ಧ್ಯಾನ, ಧರ್ಮಸ್ಥಳದ ಬಾನ ಈ ತ್ರಿವಿಧ ದಾಸೋಹ ನಡೆಸಬೇಕು' ಎಂಬ ಅಪ್ಪಣೆಯಂತೆ ತಮ್ಮ ಎರಡುನೂರು ಎಕರೆ ಭೂಮಿಯನ್ನು ಮಾರಿ, ಪಟ್ಟಣದ ಮಧ್ಯದಲ್ಲಿರುವ ತಮ್ಮ ಬೈಲು ಜಾಗದಲ್ಲಿ ಶಂಕರೇಂದ್ರ ಸ್ವಾಮಿಗಳ ಗದ್ದುಗೆಯನ್ನು ಸ್ಥಾಪಿಸಿ, ತಮ್ಮ ಪಾಲಿಗೆ ಬಂದಿದ್ದ ವಾಡೆಯ 'ಸವರ'ದ ಕಟ್ಟಿಗೆಗಳನ್ನು ಬಳಸಿಕೊಂಡು ಮಠವನ್ನು ಕಟ್ಟಿಸಿದರು. ಈ ಮಠಕ್ಕೆ ರುದ್ರಮುನಿ ಸ್ವಾಮಿಗಳನ್ನು ಪ್ರಥಮ ಪೀಠಾಧಿಪತಿಗಳಾಗಿ ನೇಮಕ ಮಾಡಿದರು. ರುದ್ರಮುನಿ ಸ್ವಾಮಿಗಳು ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳ ಪರಮ ಶಿಷ್ಯರಾಗಿದ್ದರು. ತೋಟಪ್ಪ ಅವರು ಮಠದಲ್ಲಿ ದಾಸೋಹವು ನಿರಂತರವಾಗಿ ನಡೆಯಲು ಇಪ್ಪತ್ತೆಂಟು ಎಕರೆ ಭೂಮಿಯನ್ನು ಮತ್ತು ಬಾವಿಯ ನೀರಾವರಿಯಿದ್ದ ನಾಲ್ಕು ಎಕರೆ ಭೂಮಿಯನ್ನು ದಾನ ಮಾಡಿದರು. ಈ ಮಠದಲ್ಲಿ ಪ್ರತಿವರ್ಷ ಏಳು ದಿನಗಳವರೆಗೆ ಸಪ್ತಾಹವನ್ನು ಕೈಗೊಂಡು, ನಾಡಿನಾದ್ಯಂತದ ವಿದ್ವಾಂಸರನ್ನು ಕರೆಯಿಸಿ, ಅವರಿಂದ ಧಾರ್ಮಿಕ ಉಪನ್ಯಾಸ ಮಾಡಿಸುತ್ತಿದ್ದರು. ಅಂದು ಮಠದಲ್ಲಿ ದೊಡ್ಡ ಪ್ರಮಾಣದಲ್ಲಿ ದಾಸೋಹ ನಡೆಯುತ್ತಿತ್ತು. ಅಂದಿನಿಂದ ಈ ಮಠವು 'ದಾಸೋಹ ಮಠ' ಎಂದು ಪ್ರಸಿದ್ಧವಾಯಿತು. ತೋಟಪ್ಪ ಅವರು ಈ ಮಠದಲ್ಲಿಯೇ ೧೯೫೩ರ ಮಾರ್ಚ ೩ರಂದು ಸಮಾಧಿಸ್ಥರಾದರು.

ಅವರ ಗದ್ದಿಗೆಯನ್ನು ಮಠದಲ್ಲಿಯೇ ನಿರ್ಮಿಸಲಾಗಿದೆ. ಅವರ ಸಮಾಧಿಯ ಪೂಜೆ ಮತ್ತು ಪುಣ್ಯತಿಥಿಯಂದು ಧಾರ್ಮಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ತೋಟಪ್ಪ ದೇಸಾಯಿ ಅವರ ಶ್ರೀಮಠದ ಸೇವಾಕಾರ್ಯವನ್ನು ಅವರ ವಂಶಸ್ಥರು ಇಂದಿಗೂ ಸಾಂಗವಾಗಿ ನಿರ್ವಹಿಸುತ್ತಿದ್ದಾರೆ.

ಫಕೀರಪ್ಪ ಅವರ ಇನೆಯ ಮಗನಾದ ಬಸವಂತರಾವ (ಉರ್ಫ ಸೋಮಪ್ಪಗೌಡ) ಅವರಿಗೆ ರಾವಸಾಹೇಬ (ಉರ್ಫ ವೀರಬಸಪ್ಪಗೌಡ) ಮತ್ತು ಅಪ್ಪಾಸಾಹೇಬ (ಉರ್ಫ ಫಕ್ಕಿರಪ್ಪಗೌಡ) ಎಂಬಿಬ್ಬರು ಮಕ್ಕಳು. ರಾವಸಾಹೇಬ ಅವರಿಗೆ ಗಿರಿಜಾಬಾಯಿ, ಸರೋಜಾಬಾಯಿ, ಕಮಲಾಕ್ಷಿ ಎಂಬ ಮೂವರು ಹೆಣ್ಣು ಮಕ್ಕಳು. ಅಪ್ಪಾಸಾಹೇಬ ಅವರನ್ನು ಅಂದಾನಪ್ಪ ಅವರ ಮಗನಾದ ಸಂಗಪ್ಪಗೌಡ ಅವರು ದತ್ತು ತೆಗೆದುಕೊಂಡರು. ರಾವಸಾಹೇಬ ಅವರು ಮಹೇಶರಾವ ಅವರನ್ನು ದತ್ತು ತೆಗೆದುಕೊಂಡರು. ಮಹೇಶಗೌಡ ಅವರಿಗೆ ಅಖಿಲೇಶರಾವ, ಅಪೂರ್ವರಾಣಿ, ವಿಲಾಸರಾವ ಎಂಬ ಮೂವರು ಮಕ್ಕಳು. ಇವರು ಐವತ್ನಾಲ್ಕು ಎಕರೆ ಭೂಮಿಯನ್ನು ಹೊಂದಿದ್ದಾರೆ. ಅಪ್ಪಾಸಾಹೇಬ ಅವರಿಗೆ ಮಿನಾಕ್ಷಿಬಾಯಿ, ಇಂದೂಮತಿ, ಪುಷ್ಪಾವತಿ, ಕಾಶಿಬಾಯಿ, ಬಾಯಮ್ಮ ಎಂಬ ಐವರು ಹೆಣ್ಣು ಮಕ್ಕಳು ಮತ್ತು ಬಸವಂತರಾವ (ಉರ್ಫ ಅಪ್ಪಾಸಾಹೇಬ), ಸಂಗಪ್ಪಗೌಡ, ಮಹೇಶರಾವ (ಉರ್ಫ ವೀರಬಸಯ್ಯ) ಎಂಬ ಮೂವರು ಗಂಡು ಮಕ್ಕಳು. ಬಸವಂತರಾವ ಅವರಿಗೆ ರಾಜಶೇಖರ ಎಂಬ ಒಬ್ಬ ಮಗ. ಸಂಗಪ್ಪಗೌಡ ಅವರಿಗೆ ಸಾಗರ ಎಂಬ ಒಬ್ಬ ಮಗ. ಮಹೇಶರಾವ ಅವರನ್ನು ರಾವಸಾಹೇಬ ಅವರು ದತ್ತು ತೆಗೆದುಕೊಂಡರು.

ಅಣ್ಣಿಗೇರಿಯ ದೇಸಾಯಿ ದೇಸಗತಿ ಮನೆತನಕ್ಕೆ ಸಂಬಂಧಿಸಿದಂತೆ ಹಲವು ದಾಖಲು ಪತ್ರಗಳು ಲಭ್ಯವಿವೆ. ಅವುಗಳಲ್ಲಿ ಈ ಮನೆತನದ ಕೆಲವು ದೇಸಾಯಿಗಳ ಕಾರ್ಯಚಟುವಟಿಕೆಗಳು ನಿರೂಪಿತವಾಗಿವೆ. ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದಲ್ಲಿರುವ ೧೯ನೆಯ ಶತಮಾನದ (ರುಧಿರೊದ್ಗಾರಿ ಸಂವತ್ಸರ) ದಾಖಲು ಪತ್ರದಲ್ಲಿ, ಅಣ್ಣಿಗೇರಿ ಸೀಮೆಯ ದೇಸಾಯಿಗಳಾದ ವೀರಬಸಪ್ಪಗೌಡರು ತೋಂಟದ ಸ್ವಾಮಿಗಳಿಗೆ ಪತ್ರ ಬರೆದು ತಾವು ಕ್ಷೇಮದಿಂದ ಇರುವೆವುವೆಂದೂ, ತಮ್ಮ ಆಶೀರ್ವಾದ ಬಲದಿಂದ ತಮಗೆ ಬಂದಂಥ ವಿಘ್ನಗಳು ಪರಿಹಾರವಾದವೆಂದೂ, ತಮ್ಮ ಪಾದ ದರ್ಶನವಾಗದೆ ಬಹಳ ದಿವಸವಾಯಿತೆಂದೂ, ದಯಮಾಡಿ ತಮ್ಮಲ್ಲಿಗೆ ಆಗಮಿಸಿ ದರ್ಶನ ಲಾಭವನ್ನು ಕರುಣಿಸಿ ನಮ್ಮನ್ನು ಕೃತಾರ್ಥ ಮಾಡಬೇಕೆಂದೂ ಕೋರಿದ ವಿವರವಿದೆ.[೫೩] ೧೯ನೆಯ ಶತಮಾನದ ದಾಖಲು ಪತ್ರದಲ್ಲಿ, ತೋಂಟದ ಸ್ವಾಮಿಗಳು ತಮ್ಮ ಕಾರುಣ್ಯಪ್ರಿಯ ಸದ್ಭಕ್ತರಾದ ಅಣ್ಣಿಗೇರಿಯ ದೇಸಾಯಿ ವೀರಬಸಪ್ಪ ಅವರಿಗೆ ಪತ್ರ ಬರೆದು, ಆಶೀರ್ವಾದಗಳನ್ನು ತಿಳಿಸುತ್ತ, ತಾವು ಹೊಂಬಳದಲ್ಲಿ ಶಿವಾನಂದಭರಿತವಾಗಿ ಇರುವುದನ್ನು ತಿಳಿಸುತ್ತ, ತಮ್ಮ ಜೊತೆಗೆ ಅಹಂಕಾರ ಮಾಡಿದ ಗದುಗಿನ ನಾಲವಾರದ ಕೊಟ್ಟೂರಪ್ಪ ಜಿನಗ, ಸಿದ್ಧರಾಮಪ್ಪ ತೆಂಗಿನಕಾಯಿ, ರಾಚಣ್ಣಾ ಮತ್ತು ಚನ್ನವೀರಪ್ಪ

ಅವರ ಮನೆಗಳಿಗೆ ಹೋಗಬಾರದು ಎಂದು ಗದಗ ಮತ್ತು ಅಣ್ಣಿಗೇರಿ ಮಠಗಳ ತಮ್ಮ ಭಕ್ತರಿಗೆ ತಿಳಿಸಿರುವುದಾಗಿ ವಿವರವಿದೆ.[೫೪]

೧೯ನೆಯ ಶತಮಾನದ (ದುಂದುಭಿ ಸಂವತ್ಸರ) ದಾಖಲು ಪತ್ರದಲ್ಲಿ, ತೋಟದ ಸ್ವಾಮಿಗಳು ತಮ್ಮ ಕಾರುಣ್ಯಪ್ರಿಯ ಭಕ್ತರಾದ ಅಣ್ಣಿಗೇರಿ ಸೀಮೆಯ ದೇಸಾಯಿ ವೀರಬಸಪ್ಪ ಗೌಡರಿಗೆ ತಮ್ಮ ಸ್ಥಳದಲ್ಲಿನ ಮಠದಲ್ಲಿ ಧರ್ಮದಾಸೋಹ ಸಾಂಗವಾಗಿ ನಡೆಯಲು ವ್ಯವಸ್ಥೆ ಮಾಡಬೇಕೆಂದು ಬರೆದು ತಿಳಿಸಿರುವ ವಿವರವಿದೆ.[೫೫] ಈ ಮೇಲಿನ ಮೂರೂ ಮನೆತನಗಳಲ್ಲಿ ವೀರಬಸಪ್ಪ ಎಂಬ ಹೆಸರಿನ ಕೆಲವರು ಕಾಣುತ್ತಾರೆ. ಪ್ರಸ್ತುತ ದಾಖಲು ಪತ್ರದಲ್ಲಿ ನಿರೂಪಿತ ವೀರಬಸಪ್ಪಗೌಡ ಅವರಲ್ಲಿ ಯಾರು ಎಂಬುದು ಸ್ಪಷ್ಟವಾಗುವುದಿಲ್ಲ. ೧೯೨೩ರ ನವೆಂಬರ ೯ರ ದಾಖಲು ಪತ್ರದಲ್ಲಿ, ಅಣ್ಣಿಗೇರಿಯ ಹಿರೇಮಠದವರು, ಸಂಶೀಮಠದವರು ಮತ್ತು ಚಿಕ್ಕಮಠದವರ ಬಾಬತ್ತಿಗೆ ಸಂಬಂಧಿಸಿದಂತೆ ಶ್ರೀಮಂತ ದೇಸಾಯರು, ದೇಶಪಾಂಡೆಯರು, ರುದ್ರಗೌಡರು, ಗ್ರಾಮಸ್ತರು, ಶೆಟ್ಟರು ಮತ್ತು ಸಮಸ್ತ ದೈವದವರು ಕೂಡಿಕೊಂಡು ನಿರ್ಣಯ ಮಾಡಿರುವ ಪತ್ರದ ಕೊನೆಯಲ್ಲಿ ಸಹಿ ಮಾಡಿರುವ ಹಲವರಲ್ಲಿ ಎಸ್.ಎಫ್. ದೇಸಾಯಿ ಅವರು ಒಬ್ಬರಾಗಿದ್ದಾರೆ.[೫೬] ಇವರು ಈ ಮೇಲಿನ ಯಾವ ಮನೆತನದವರು ಎಂಬುದು ಸ್ಪಷ್ಟವಿಲ್ಲ.

ಹೀಗೆ ಅಣ್ಣಿಗೇರಿಯ ದೇಶಪಾಂಡೆ ಮತ್ತು ದೇಸಾಯಿ ಮನೆತನಗಳು ವಿಜಯಪುರದ ಆದಿಲ್‌ಷಾಹಿಗಳು, ಪೇಶ್ವೆಗಳು ಮತ್ತು ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ರಾಜ್ಯಪ್ರಭುತ್ವ ಹಾಗೂ ಜನರ ಮಧ್ಯೆ ಬಹುಮುಖ್ಯ ಆಡಳಿತಾತ್ಮಕ ರಚನೆಯಾಗಿ ಕಾರ್ಯನಿರ್ವಹಿಸಿವೆ. ಈ ಮನೆತನಗಳ ದೇಸಾಯರಲ್ಲಿ ಸಜ್ಜನಿಕೆ, ಪ್ರಜಾಪ್ರೇಮ, ನ್ಯಾಯಪರತೆ, ದೂರದರ್ಶಿತ್ವ, ಧರ್ಮಸಹಿಷ್ಣುತೆ, ಸಾಹಿತ್ಯಪ್ರೇಮ ಮೊದಲಾದ ಗುಣಗಳು ಗೋಚರಿಸುತ್ತವೆ. ಇವರು ಅಣ್ಣಿಗೇರಿ ಪಟ್ಟಣದ ಸುತ್ತಲಿನ ಚಾವರಾತ ಗ್ರಾಮಗಳ ಇನಾಂ ಪಡೆದು ಇಲ್ಲಿಯ ಆಡಳಿತವನ್ನು ನೋಡಿಕೊಳ್ಳುವುದರೊಂದಿಗೆ ತೆರಿಗೆಯನ್ನೂ ಸಂಗ್ರಹಿಸಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದರು. ಹಾಗೆಯೇ ಆ ಗ್ರಾಮಗಳ ರಕ್ಷಣೆ, ಶಾಂತಿ–ಸುವ್ಯವಸ್ಥೆ, ನ್ಯಾಯ ತೀರ್ಮಾನ ಇವರ ನಿಯಂತ್ರಣದಲ್ಲಿದ್ದವು. ಕೆರೆ–ಬಾವಿಗಳ ನಿರ್ಮಾಣ, ಕಲಾಪೋಷಣೆ, ದಾನಪರತೆಗೆ ಪ್ರಸಿದ್ಧರಾಗಿದ್ದ ಇವರು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಕೊಡುಗೆಗಳೂ ಗಮನೀಯವಾಗಿವೆ.

ಅಡಿಟಿಪ್ಪಣಿಗಳು

೧. ವಿಲ್ಸನ್ ಹೆಚ್.ಹೆಚ್. (ಸಂ.), ಎ ಗ್ಲೋಸರಿ ಆಫ್ ಜ್ಯುಡಿಶಿಯಲ್ ಅಂಡ್ ರೆವಿನ್ಯೂ ಟರ್ಮ್ಸ್ (೧೯೬೯), ಪು. ೬.

೨. ಸೀಗಿಹಳ್ಳಿ ಬಾಳಣ್ಣ, ಬೆಳಗಾವಿ ಜಿಲ್ಲೆಯ ವೀರಶೈವ ದೇಸಗತಿಗಳು (೧೯೯೯), ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಗದಗ–ಡಂಬಳ. ಕಲ್ಯಾಣಿ ಎಸ್.ಕೆ., ಬಾಗಲಕೋಟ ಜಿಲ್ಲೆಯ ದೇಸಗತಿಗಳು (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ–೨೦೦೬), ಕನ್ನಡ ವಿಶ್ವವಿದ್ಯಾಲಯ ಹಂಪಿ. ಹಾಸಗಲ್ಲ ಸಂತೋಷ, ಬೆಳಗಾವಿ ಜಿಲ್ಲೆಯ ಲಿಂಗಾಯತ ವಾಡೆಗಳು (೨೦೦೧), ಪು.

೧೧೫-೧೪೪. ಶೇಕದಾರ ಎ.ಎಸ್., ವಿಜಾಪುರ ಜಿಲ್ಲೆಯ ದೇಸಗತಿಗಳು (೨೦೧೧), ಪು. ೨೦-೩೫.

೩. ಅದೇ.

೪. ಡಫ್‌ಗ್ರ್ಯಾಂಟ್, ಹಿಸ್ಟರಿ ಆಫ್ ದಿ ಮರಾಠಾಸ್ (೧೮೭೩), ಪು. ೧೨.

೫. ಹಿರೋಶಿ ಫುಕಜಾವಾ, ದಿ ಮಿಡಿವಲ್ ಡೆಖ್ಖನ್ (೧೯೯೧), ಪು. ೪.

೬. ಸೇನ್ ಸುರೇಂದ್ರನಾಥ್, ಅಡ್ಮಿನಿಸ್ಟ್ರೇಟಿವ್ ಸಿಸ್ಟಮ್ ಆಫ್ ದಿ ಮರಾಠಾಸ್ (೧೯೨೫), ಪು. ೧೪೯-೧೫೧.

೭. ಪಾಡಿಗಾರ ಶ್ರೀನಿವಾಸ, ಭಾರತೀಯ ಇತಿಹಾಸದ ಶಾಸನ ಆಕರಗಳು (೨೦೦೪), ಶಾ.ಸಂ. ೨೭.

೮. ಬ್ರಹ್ಮಪ್ಪ ಜಿ., "ಬದುಕಿರುವ ಪಂಪನ ಪೀಳಿಗೆ", ವಿವೇಕಾಭ್ಯುದಯ ಸಂ. ೬೪/೧೧ (೨೦೦೩), ಪು. ೨೦-೨೧, ಶ್ರೀ ಜೈನ ಮಠ ಮೂಡುಬಿದಿರೆ. ಹಂಪ ನಾಗರಾಜಯ್ಯ, "ಪಂಪನ ಪೂರ್ವಜರ ಜಾತಿ", ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ-೧೯೯೭), ಪು. ೩೦-೩೩. ಕಲಬುರ್ಗಿ ಎಂ.ಎಂ., "ಪಂಪನ ವಂಶಜರು : ಇಂದು ಜೈನರು-ಲಿಂಗಾಯತರು", ಮಾರ್ಗ ಸಂ. ೩ (೧೯೯೮), ಪು. ೧೭೭-೧೭೮. ಚಿದಾನಂದಮೂರ್ತಿ ಎಂ., "ಪಂಪನ (ಕ್ರಿ.ಶ. ೯೪೨) ತಾಯಿ ತಂದೆ ವಂಶಸ್ಥರು ಮತ್ತು ಕುರುಹುಗಳು", ಕರ್ನಾಟಕದ ಅಂದಿನ ಶ್ರೇಷ್ಠರ ಇಂದಿನ ವಂಶಸ್ಥರು ಮತ್ತು ಕುರುಹುಗಳು (೨೦೧೩), ಪು. ೪-೧೩.

೯. ಚಿದಾನಂದಮೂರ್ತಿ ಎಂ., ಪೂರ್ವೋಕ್ತ

೧೦. ಹಂಪ ನಾಗರಾಜಯ್ಯ, "ಪಂಪನ ಪೂರ್ವಜರ ಜಾತಿ", ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ-೧೯೯೭), ಪು. ೩೦-೩೩. ಕೇಶವ ಭಟ್ಟ ಎಂ. (ಸಂ.), ನಾಡೋಜ ಪಂಪ (೨೦೦೬), ಪು. ೫೩-೭೨.

೧೧. ಅದೇ.

೧೨. ಪಾಡಿಗಾರ ಶ್ರೀನಿವಾಸ, ಪೂರ್ವೋಕ್ತ.

೧೩. ಕೇಶವ ಭಟ್ಟ ಎಂ. (ಸಂ.), ಪೂರ್ವೋಕ್ತ, ಪು. ೧೧೨-೧೧೩.

೧೪. ಎ.ಕ. ಸಂ. II, ಶಾ.ಸಂ. ೭೯.

೧೫. ಕೇಶವ ಭಟ್ಟ ಎಂ. (ಸಂ.), ಪೂರ್ವೋಕ್ತ, ಪು. ೧೩೯-೧೪೦.

೧೬. ಅದೇ, ಪು. ೧೦೯-೧೧೦.

೧೭. ಕಲಬುರ್ಗಿ ಎಂ.ಎಂ., "ಪಂಪನ ಪರಿಸರಗಳು", ಮಾರ್ಗ ಸಂ. ೧ (ಪರಿಷ್ಕೃತ ಮುದ್ರಣ-೧೯೯೫), ಪು. ೩೦-೩೯.

೧೮. ಅದೇ.

೧೯. ಸೀತಾರಾಮ ಜಾಗೀರದಾರ್, ಸಾಪೇಕ್ಷ (೧೯೯೦), ಪು. ೧೦-೧೩.

೨೦. ಪಾಡಿಗಾರ ಶ್ರೀನಿವಾಸ, ಪೂರ್ವೋಕ್ತ.

೨೧. ಕಲಬುರ್ಗಿ ಎಂ.ಎಂ., "ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳ ನಾಶ", ಮಾರ್ಗ ಸಂ. ೩ (೧೯೯೮), ಪು. ೩೯-೫೫. ಹಂಪ ನಾಗರಾಜಯ್ಯ ದಾನಚಿಂತಾಮಣಿ ಅತ್ತಿಮಬ್ಬೆ (ಪುನರ್ಮುದ್ರಣ-೨೦೧೦), ಪು. ೧-೨೯.

೨೨. ಎಸ್.ಆಯ್.ಆಯ್. ಸಂ. XV, ಶಾ.ಸಂ. ೨೬೮.

೨೩. ಕಲಬುರ್ಗಿ ಎಂ.ಎಂ. ಮತ್ತು ರಾಠೋಡ ಪಿ.ಕೆ. (ಸಂ.), ಪೂರ್ವೋಕ್ತ, ದಾಖಲು ಸಂಖ್ಯೆ ೬೧.

೨೪. ಗೋಗಿ ಹನುಮಾಕ್ಷಿ ಮತ್ತು ರಾಠೋಡ ಪಿ.ಕೆ. (ಸಂ.), ಪೂರ್ವೋಕ್ತ, ದಾಖಲು ಸಂಖ್ಯೆ ೨೪.

೨೫. ಅದೇ, ದಾಖಲು ಸಂಖ್ಯೆ ೩೮.

೨೬. ಹಂಜೆ ಅಪ್ಪಣ್ಣ ಎನ್., "ಅಣ್ಣಿಗೇರಿಯ ಎರಡು ಜೈನ ಶಿಲಾಫಲಕ ಶಾಸನಗಳು", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೩/೨ (ಜುಲೈ/ಸಪ್ಟೆಂಬರ್-೨೦೦೫), ಪು. ೫೭-೬೦, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
೨೭. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೨೮. ಗೋಗಿ ಹನುಮಾಕ್ಷಿ ಮತ್ತು ರಾಠೋಡ ಪಿ.ಕೆ. (ಸಂ.), ಪೂರ್ವೋಕ್ತ, ದಾಖಲು ಸಂಖ್ಯೆ ೧೭೦.
೨೯. ಕುರುಂದವಾಡೆ ಎ.ಕೆ., ಸ್ಮೃತಿ-ಗಂಧ (೨೦೦೯-ಮರಾಠಿ), ಪ್ರಕಾಶಕರು ಶ್ರೀ ಬಾಬಾಸಾಹೇಬ ಪಾಟೀಲ ಮತ್ತು ಶ್ರೀ ರಾವಸಾಹೇಬ ಪಾಟೀಲ, ಅಬ್ದುಲಲಾಟ (ತಾ. ಶಿರೋಳ, ಜಿ. ಕೊಲ್ಹಾಪುರ).
೩೦. ಕುಲಕರ್ಣಿ ಎ.ಎನ್., ಬಹುಜನ ಸಮಾಜ ಶಿಲ್ಪಿ ಅಣ್ಣಾಸಾಹೇಬ ಲಠ್ಠೆ (೧೯೮೨), ದಕ್ಷಿಣ ಭಾರತ ಜೈನ ಸಭೆಯ ಮಾಣಿಕಬಾಗ ದಿಗಂಬರ ಜೈನ ಬೋರ್ಡಿಂಗ ಬೆಳಗಾವಿ.
೩೧. ಹಂಜೆ ಅಪ್ಪಣ್ಣ ಎನ್., ಪೂರ್ವೋಕ್ತ.
೩೨. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೩೩. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೩೪. ನ್ಯಾಮಗೌಡ ಬಿ.ಪಿ. (ಸಂ.), ಮಹಾಬಲಕೃತ ಸ್ಯಾದ್ವಾದ ಕೇಸರಿ (ಆಚಾರ್ಯಶ್ರೀ ಪಾಯಸಾಗರ ಮಹಾರಾಜರ ಚರಿತ್ರೆ ಗ್ರಂಥ-೨೦೦೯), ಪು. ೧೪೮-೧೪೯, ೧೫೩, ೧೫೬, ೧೬೭.
೩೫. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೩೬. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೩೭. ಹಂಜೆ ಅಪ್ಪಣ್ಣ ಎನ್., "ನವಲಗುಂದ ಪರಿಸರದ ಜೈನ ಮುನಿಗಳು", ಶೋಧ (ಜುಲೈ-೨೦೧೧), ಪು. ೫೩-೬೫, ಡಾ. ಹಾಮಾನಾ ಸಂಶೋಧನ ಕೇಂದ್ರ ಉಜಿರೆ.
೩೮. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೩೯. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೪೦. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೪೧. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೪೨. ಕ್ಷೇತ್ರಕಾರ್ಯದಲ್ಲಿ ದೊರೆತ ದಾಖಲು ಪತ್ರ.
೪೩. ಕಲಬುರ್ಗಿ ಎಂ.ಎಂ., "ಪಂಪನ ವಂಶಜರು : ಇಂದು ಜೈನರು-ಲಿಂಗಾಯತರು", ಮಾರ್ಗ ಸಂ. ೩ (೧೯೯೮), ಪು. ೧೭೭-೧೭೮.
೪೪. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೪೫. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೪೬. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದ ಹಿತ್ತಾಳೆಯ ಮುದ್ರೆ.
೪೭. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನ.
೪೮. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನಗಳು.
೪೯. ಕ್ಷೇತ್ರಕಾರ್ಯದಲ್ಲಿ ದೊರೆತ ದಾಖಲು ಪತ್ರ.
೫೦. ಶಿರೂರ ಬಿ.ವ್ಹಿ. (ಸಂ.), ಪೂರ್ವೋಕ್ತ, ದಾಖಲು ಸಂಖ್ಯೆ ೨೮.
೫೧. ಕ್ಷೇತ್ರಕಾರ್ಯದಲ್ಲಿ ದೊರೆತ ದಾಖಲು ಪತ್ರ
೫೨. ನಾಗಭೂಷಣಮೂರ್ತಿ ಎ.ಸಿ., ಧಾರವಾಡ ಜಿಲ್ಲೆಯ ವೀರಶೈವ ದೇಸಗತಿಗಳು : ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ-೧೯೯೯), ಪು. ೨೨-೨೮.
೫೩. ಕಲಬುರ್ಗಿ ಎಂ.ಎಂ. ಮತ್ತು ರಾಠೋಡ ಪಿ.ಕೆ. (ಸಂ.), ಪೂರ್ವೋಕ್ತ, ದಾಖಲು ಸಂಖ್ಯೆ ೫೭.
೫೪. ಗೋಗಿ ಹನುಮಾಕ್ಷಿ ಮತ್ತು ರಾಠೋಡ ಪಿ.ಕೆ. (ಸಂ.), ಪೂರ್ವೋಕ್ತ, ದಾಖಲು ಸಂಖ್ಯೆ ೧೨೯.
೫೫. ಅದೇ, ದಾಖಲು ಸಂಖ್ಯೆ ೧೭೦.
೫೬. ಕ್ಷೇತ್ರಕಾರ್ಯದಲ್ಲಿ ದೊರೆತ ದಾಖಲು ಪತ್ರ.

ಕವಿಜನಾಶ್ರಯಮು ಕೃತಿಯ ಕರ್ತೃತ್ವದ ವಿಚಾರ : ಪುನಃಪರಿಶೀಲನೆ

◆

ಮೂಲ ತೆಲುಗು : ಆರ್. ಶೇಷಶಾಸ್ತ್ರಿ ಮತ್ತು ಜೆ. ಸದಾನಂದಂ
ಕನ್ನಡ ಅನುವಾದ : ಎಸ್. ಕಾರ್ತಿಕ್

ಕನ್ನಡ ಮತ್ತು ತೆಲುಗು ಭಾಷೆಗಳು ಆರಂಭಕಾಲದಿಂದಲೂ ಒಟ್ಟೊಟ್ಟಿಗೇ ಅಭಿವೃದ್ಧಿಯನ್ನು ಹೊಂದುತ್ತಾ ಬಂದಿವೆ. ಇದಕ್ಕೆ ಕಾರಣಗಳು ಎಲ್ಲರಿಗೂ ಗೊತ್ತಿರುವಂತಹುದೇ ಆದುದರಿಂದ ಇಲ್ಲಿ ಅದನ್ನು ವಿವರಿಸಬೇಕಾದ ಅಗತ್ಯವಿಲ್ಲ. 'ಕವಿಜನಾಶ್ರಯಮು' ಎಂಬ ಕೃತಿ ತೆಲುಗು ಭಾಷೆಯ ಲಕ್ಷಣ ಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುದು. ಇದರಂತೆಯೇ ಕವಿರಾಜಮಾರ್ಗವು ಕನ್ನಡ ಭಾಷೆಯಲ್ಲಿನ ಪ್ರಾಚೀನ ಲಕ್ಷಣಗ್ರಂಥವಾಗಿದೆ. ನೃಪತುಂಗನ ರಚನೆಯೆಂದು ಭಾವಿಸಲಾಗಿದ್ದ ಕವಿರಾಜಮಾರ್ಗವು, ಪಂಡಿತರ, ಸಂಶೋಧಕರ ನಿಶಿತ ಶೋಧನೆಗಳ ಕಾರಣದಿಂದ ಇಂದು ಶ್ರೀವಿಜಯ ಕರ್ತೃಕವೆಂದು ನಿರ್ಣಯವಾಗಿದೆ. ಅದೇ ರೀತಿ ಕವಿಜನಾಶ್ರಯಮು ಕೃತಿಯ ಕರ್ತೃ ಯಾರೆಂಬ ವಿಷಯದಲ್ಲಿ ಇನ್ನೂ ಬಗೆಹರಿಯದ (ಬಿಡಿಸಲಾಗದ) ಸಿಕ್ಕುಗಳಿವೆ. ಈ ಸಿಕ್ಕನ್ನು ಬಿಡಿಸಲು ಮಾಡಿರುವ ಹೊಸದಾದ ಮತ್ತೊಂದು ಪ್ರಾಮಾಣಿಕ ಪ್ರಯತ್ನವೇ ಈ ಸಂಪ್ರಬಂಧವಾಗಿದೆ[೧].

ಕವಿಜನಾಶ್ರಯದ[೨] ಕರ್ತೃತ್ವದ ಬಗೆಗೆ ಮುಖ್ಯವಾಗಿ ಎರಡು ವಾದಗಳಿವೆ. ಒಂದು ಗುಂಪಿನವರು ವೇಮುಲವಾಡ ಭೀಮಕವಿಯನ್ನು, ಎರಡನೆಯ ಗುಂಪಿನವರು ಮಲ್ಲಿಯರೇಚನನನ್ನು ಕರ್ತೃವಾಗಿ ಹೇಳುತ್ತಾರೆ. ವೇಮುಲವಾಡ ಭೀಮಕವಿ ಇದರ ಕರ್ತೃ ಎಂದು ಹೇಳುವವರಿಗೆ ಇರುವ ಆಧಾರಗಳು ಇವು.

೧. ಅಪ್ಪಕವಿಯ [ಕ್ರಿ.ಶ. ೧೬೫೬] ಹೇಳಿಕೆ

ವಿಕಟಕವುಲು ಕೊನ್ನಿವಿಂತಲು ಕಲ್ಪಿಂಚಿ
ಕವಿಜನಾಶ್ರಯಮುನಂ ಗಲಿಪಿನಾರು
ವಾನಿ ಗೈಕೊನಂಗ ವಲದಪ್ರಯುಕ್ತಮು
ಲೇಲಸೆಪ್ಪು ಭೀಮುಡೆರಿಗಿ ಯೆರಿಗಿ

[ವಿಕಟಕವಿಗಳು ಕೆಲವರು ತಾವು ಮಾಡಿರುವ ಕೆಲವು ವೈಪರೀತ್ಯಗಳನ್ನು ಕವಿಜನಾಶ್ರಯದಲ್ಲಿ ಸೇರಿಸಿದ್ದಾರೆ. ತಿಳಿದೂ ತಿಳಿದೂ ಭೀಮನನು ಏಕೆ ಅಂತಹ ಅಪ್ರಯುಕ್ತವಾದ ವಿಷಯಗಳನ್ನು ಹೇಳುತ್ತಾನೆ ?]

೨. ಪೊತ್ತಪಿ ವೆಂಕಟರಮಣಕವಿ (ಅಪ್ಪಕವಿಯ ಆಸುಪಾಸಿನ ಕಾಲದವನು) "ಯತುಲು ಕವಿತಾ ಮಹತ್ವಂಬುನಂದಾದಿ ಭೀಮನ್ನಗಾರಿ ಮತಂಬುನ ದಶವಿಧಂಬು ಲನಂಬಡಿಯೆ" [=ಕವಿತೆಯ ಮಹತ್ವಕ್ಕೆ ಕಾರಣವಾಗುವ ಯತಿಗಳು ಭೀಮನನ ಮತದಂತೆ ಹತ್ತು ವಿಧಗಳು] ಎಂದು ಹೇಳಿರುವನು.

೩. ಜಯಂತಿ [ರಾಮಯ್ಯ ಪಂತುಲು] ಅವರು ಪರಿಶೀಲಿಸಿದ ಕವಿಜನಾಶ್ರಯದ ೧೦ ಹಸ್ತಪ್ರತಿಗಳಲ್ಲಿ ಒಂದರಲ್ಲಿ ಮಾತ್ರವೇ [=ಜ ಪ್ರತಿ] ಮಿಕ್ಕ ಪ್ರತಿಗಳಲ್ಲಿ ಇಲ್ಲದ ಆರು ಪದ್ಯಗಳು ಅಧಿಕವಾಗಿ ದೊರೆಯುತ್ತವೆ. ಅದರಲ್ಲಿ

ವೇಮುಲವಾಡನು ವೆಲಸಿನ
ಭೀಮೇಶ್ವರು ಕರುಣಗಲ್ಗು ಭೀಮಸುಕವಿನೇಂ
ಗೋಮಟಿ ರೇಚನ ಮೀಂದನು
ನೀಮಹಿಂಗವುಲೆನ್ನ ಛಂದಮೆಲಮಿ ರಚಿಂತುನ್

ಆಚಂದ್ರತಾರಕಂಬುಗ
ಭೂಚಕ್ರಮುಲೋನ ಸುಕವಿ ಪೂಜಿತಮಗುಚುನ್
ಏ ಛಂದಮಮರುಚುಂಡುನು
ನಾ ಛಂದಮು ನೀದುಪೇರನಮರುನು ರೇಚಾ

ರೇಚನ ಸಂತೋಷಿಂಪಗ
ಭೂಚಕ್ರಮುಲೋನ ಭೀಮ ಪುರಹರು ಕೃಪಚೇ
ನೇ ಛಂದಮು ಸುಕವುಲ ಬ್ರದು
ಕೇ ಛಂದಮು ತೆರುವುದಾನಿನೇ ರಚಿಯಿಂತುನ್

ನಿನು ನೀವೆ ಪೊಗಡು ವೈಖರಿ
ನೊನರಿಂಚೆದಂ ದೆನುಂಗುಬಾಸ ನೊಪ್ಪಂಗ ಛಂದಂ
ಬುನುಗನಕ ಕವಿತಚೆಪ್ಪಿನ
ವಿನವೇ ಲಚ್ಚನಮುವಾಂಡು ವೆಂಗಲಿರೇಚಾ

ಎನ್ನುವ ಪದ್ಯಗಳಿದ್ದು ಇವು ಭೀಮಕವಿಯು ಕೋಮಟಿ ರೇಚನನ ಹೆಸರಿನಲ್ಲಿ ಈ ಲಕ್ಷಣ ಗ್ರಂಥವನ್ನು ಬರೆದನೆಂದು ತಿಳಿಸುತ್ತವೆ.

ಮೇಲಿನ ನಾಲ್ಕು ಪದ್ಯಗಳ ಜೊತೆಗೆ (೧) ಶ್ರೀಕರಮುಗ ರೇಚನಕ್ಕೈ . . . . (೨) ಲಚ್ಚನಮೆರುಗನಿ ಕವುಲನು . . . . ಎನ್ನುವ ಪದ್ಯಗಳನ್ನು ಕೂಡ ಸೇರಿಸಿಕೊಂಡು

ಒಟ್ಟು ಆರು ಪದ್ಯಗಳನ್ನು ಜಯಂತಿ ರಾಮಯ್ಯ ಪಂತುಲು ಅವರು ಮೂಲಪಾಠವಾಗಿ ಸ್ವೀಕರಿಸಿದ್ದಾರೆ. ಇದೇ 'ಜ' ಸಂಕೇತದ ಪ್ರತಿಯಲ್ಲಿಯೇ (೧) ಪರಗಿನ . . . . (೨) ಅಸಮಾನ . . . . ಎನ್ನುವ ಮತ್ತೆರಡು ಪದ್ಯಗಳಿದ್ದು ಇವುಗಳ ಅರ್ಧಭಾಗವನ್ನು ಮಾತ್ರ ತೋರಿಸಿದ್ದಾರೆ. ಇವುಗಳು ಪ್ರಕ್ಷಿಪ್ತಗಳೆಂದು ಕೂಡ ಸ್ಪಷ್ಟಪಡಿಸಿಲ್ಲ. ಭೀಮಕವಿಯನ್ನು ಕರ್ತೃವಾಗಿ ಹೇಳುವ ಆರು ಪದ್ಯಗಳನ್ನು ಮೂಲಪಾಠವಾಗಿ ಸ್ವೀಕರಿಸಿ ಈ ಎರಡು ಪದ್ಯಗಳನ್ನು ಪೂರ್ಣವಾಗಿ ಏಕೆ ಉದಾಹರಿಸಿಲ್ಲವೋ ಈ ಅಂಶವನ್ನು ಸಮರ್ಥಿಸಲು ಸಾಧ್ಯವಿಲ್ಲ. ಇವು ಒಂದೇ ಹಸ್ತಪ್ರತಿಯಲ್ಲಿ ಇರುವುದು ಕಾರಣವೆಂದು ತಿಳಿಯುವುದಾದರೆ ಮೇಲಿನ ಆರು ಪದ್ಯಗಳೂ 'ಜ' ಪ್ರತಿಯಲ್ಲಿಯೇ ಇರುವುದು ಗಮನಾರ್ಹ[೨೫]. ಆದರೆ ವೇಮುಲವಾಡ ಭೀಮಕವಿಯೇ ಕರ್ತೃವೆಂದು ಹೇಳಹೊರಟ ಇವರಿಗೆ ಮೇಲಿನ ಎರಡು ಪದ್ಯಗಳು "ಅನ್ವಯವಾಗದೇ ಇರುವ ಕಾರಣ ಭೀಮನಿಗೂ ಈ ಗ್ರಂಥಕ್ಕೂ ಇರುವ ಸಂಬಂಧ ಎಂತಹುದು ಎಂದು ನಿರ್ಣಯಿಸಲು" ಸಾಧ್ಯವಾಗಿಲ್ಲ. ಈ ವಿಷಯವನ್ನು ಪೀಠಿಕೆಯಲ್ಲಿ ಸ್ಪಷ್ಟಪಡಿಸಿದ ಇವರ ಪ್ರಾಮಾಣಿಕತೆ ಪ್ರಶಂಸನೀಯ.

ಕವಿಜನಾಶ್ರಯವನ್ನು ಶ್ರೀ ನಿಡದವೋಲು ವೆಂಕಟರಾಯರು ೧೯೫೧ರಲ್ಲಿ ಸಂಪಾದಿಸಿ ಪ್ರಕಟಿಸಿದರು. ಅವರು ಮೊದಲೇ ಕಲ್ಪಿಸಿ ಕೊಂಡಿದ್ದ ಸಿದ್ಧಾಂತವೊಂದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಕೃತಿಯನ್ನು ಸಂಪಾದಿಸಿರುವಂತೆ ತೋರುತ್ತದೆ. ಈ ಕಾರಣದಿಂದ ಅವರ ಸಂಪಾದನ ಕಾರ್ಯವು ಶಾಸ್ತ್ರೀಯತೆಯನ್ನು ಪಡೆಯಲು ಸಾಧ್ಯವಾಗಿಲ್ಲ. ರೇಚನನೇ ಈ ಕೃತಿಯ ಕರ್ತೃವೆಂದು ದೃಢವಾಗಿ ನಂಬಿದ ಇವರು ಭೀಮನನ ಪ್ರಸ್ತಾಪವಿರುವ ಎಲ್ಲ ಪದ್ಯಗಳನ್ನು ಅವರ ಮಾತಿನಲ್ಲಿಯೇ ಹೇಳಬೇಕೆಂದರೆ "ತೊಲಗಿಸಲಾಗಿದೆ"[೩]. ಈ ಪದ್ಯ ಗಳನ್ನು ಅವರು ಪ್ರಕ್ಷಿಪ್ತಗಳೆಂದು ಭಾವಿಸಿದ್ದಾರೆ. ಒಂದು ಪ್ರತಿಯಲ್ಲಿದೆ ಎನ್ನುವ ಕಾರಣಕ್ಕಾಗಿ ಇವರು ಇವುಗಳನ್ನು ತೊಲಗಿಸಿದ್ದಾರೆ (ಬಿಟ್ಟುಬಿಡಲಾಗಿದೆ).

ಈ ಪದ್ಯಗಳು ಏಕೆ ಪ್ರಕ್ಷಿಪ್ತಗಳಿದ್ದಿರಬಾರದೆಂದು ಶ್ರೀ ಪರಬ್ರಹ್ಮ ಶಾಸ್ತ್ರಿ ಅವರು ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. "ಅಪ್ಪಕವಿಯ ಕಾಲಕ್ಕೆ ಕೆಲವರು ಇಂತಹ ಪದ್ಯಗಳನ್ನು ಭೀಮಕವಿಯ ಹೆಸರಿನಲ್ಲಿ ರೂಢಿಗೆ ತಂದರೆಂದು ಹೇಳಬಹುದು. ಇಂತಹವೇ ಜಯಂತಿಯವರು ತೋರಿಸಿದ ಕೈಬರಹದ ಪ್ರತಿಗಳಲ್ಲಿರುವ ಅಧಿಕವಾದ ಆರು ಪದ್ಯಗಳು ಅವತರಣಿಕೆ ಇದ್ದರೂ ಇರಬಹುದು (ಭಾರತಿ, ಮೇ ೧೯೮೬, ಪುಟ ೬)[೪].

ಒಂದು ಕೃತಿಯಲ್ಲಿನ ಒಂದಾನೊಂದು ಭಾಗವು ಪ್ರಕ್ಷಿಪ್ತವೋ ಅಲ್ಲವೋ ಎಂದು ನಿರ್ಣಯಿಸಲು ಗ್ರಂಥಸಂಪಾದನ ಶಾಸ್ತ್ರದಲ್ಲಿ ಕೆಲವು ನಿಯಮಗಳಿವೆ. ಕೇವಲ ಒಂದೇ ಪ್ರತಿಯಲ್ಲಿ ಇದೆಯೆಂಬ ಕಾರಣಕ್ಕಾಗಿ ಅವುಗಳನ್ನು ಪ್ರಕ್ಷಿಪ್ತವೆನ್ನಲು ಸಾಧ್ಯವಿಲ್ಲ. ಲಭ್ಯವಾದ ಪ್ರತಿಗಳ ಕಾಲ, ಪಾಠ, ಮೂಲಪಾಠಕ್ಕೆ ಹತ್ತಿರವಿರುವ ಪಾಠ ಈ ಅಂಶಗಳನ್ನು ಪರಿಶೀಲಿಸಿ ಜಾಗ್ರತೆಯಾಗಿ ನಿರ್ಣಯಿಸಬೇಕು.

ಮೇಲ್ನೋಟಕ್ಕೆ ಈ ಪದ್ಯಗಳು ಪ್ರಕ್ಷಿಪ್ತಗಳಲ್ಲವೆಂದು ಗೊತ್ತಾಗುತ್ತದೆ. ನಮ್ಮ ವಾದಕ್ಕೆ ಸರಿಬರುವುದಿಲ್ಲ ಎಂಬ ಕಾರಣಕ್ಕೆ ಪ್ರಕ್ಷಿಪ್ತಗಳೆಂದು ತೆಗೆದುಹಾಕುವುದು ಸರಿಯಲ್ಲ. ಇನ್ನು ಎರಡನೆಯ ಪಕ್ಷದವರು ಸೂಚಿಸುವ ಆಧಾರಗಳು ಇಂತಿವೆ.

೧. ಯಾಪ್ಪರುಂಗಲಂಕಾರಿಕೈ ಎನ್ನುವ ತಮಿಳು ಛಂದೋಗ್ರಂಥದಲ್ಲಿ "ರೇಚಿಯಾರ್ ಸೆಯ್ದ ವಡುಗಚ್ಚಂದವುಮ್" ಎಂದು ಇದೆ.

೨. ಇದು ಜೈನಕೃತಿ. ವೇಮುಲವಾಡ ಭೀಮಕವಿ ಶೈವ.

೩. ರೇಚನನ ಹೆಸರಿನಲ್ಲಿ ಭೀಮಕವಿ ರಚಿಸಿದನೆಂದು ಹೇಳುವ ಪದ್ಯಗಳು ಪ್ರಕ್ಷಿಪ್ತಗಳು.

ಕವಿಜನಾಶ್ರಯದ ಕರ್ತೃತ್ವವನ್ನು ನಿಷ್ಕರ್ಷೆ ಮಾಡುವಾಗ ಕವಿರಾಜಮಾರ್ಗವನ್ನು ಪಕ್ಕದಲ್ಲಿ ಇಟ್ಟುಕೊಂಡು ಪರಿಶೀಲಿಸುವುದು ಸೂಕ್ತ. ಕವಿರಾಜಮಾರ್ಗವು ಮೊದಲು ಪ್ರಕಟವಾದಾಗ ನೃಪತುಂಗನ ಕೃತಿಯೆಂದು ತಿಳಿಯಲಾಗಿತ್ತು. ಮೇಲ್ನೋಟಕ್ಕೆ ಕಂಡುಬರದ ಶ್ರೀವಿಜಯ ಕರ್ತೃತ್ವವು ನಿಶಿತ ಪರಿಶೀಲನೆಯಿಂದ ಸ್ಪಷ್ಟಪಟ್ಟಿತು. ಇದರಿಂದಾಗಿ ಸಂಶೋಧಕರೆಲ್ಲರೂ ಕವಿರಾಜಮಾರ್ಗವು ಇಂದು ಶ್ರೀವಿಜಯ ಕೃತವೆಂದು ಅಂಗೀಕರಿಸುತ್ತಿದ್ದಾರೆ[೫].

ಇದೇ ರೀತಿಯಲ್ಲಿ ಆಳವಾಗಿ ಪರಿಶೀಲಿಸಿದರೆ ಕವಿಜನಾಶ್ರಯವನ್ನು ಕೂಡ ಮಲ್ಲಿಯರೇಚನ, ವೇಮುಲವಾಡ ಭೀಮಕವಿ ಇಬ್ಬರೂ ರಚಿಸಿರದೆ ಬೇರೊಬ್ಬ ಭೀಮಕವಿ ಇದನ್ನು ರಚಿಸಿದ್ದಾನೆಂದು ತಿಳಿದುಬರುತ್ತದೆ.

ಛಂದಸ್ಸಿನ ಕವಿ ರೇಚನನನ್ನು ಹಲವು ವಿಧದಲ್ಲಿ ಪ್ರಶಂಸಿಸಿದ್ದಾನೆ. ಅದರಲ್ಲಿ ಹೆಸರಿನಿಂದ ಸಂಬೋಧಿಸಿರುವುದು, ವಂಶವನ್ನು ಕೀರ್ತಿಸಿ ರುವುದು, ಹಲವು ರೀತಿಯ ಹೋಲಿಕೆಗಳು, ಸೌಂದರ್ಯವರ್ಣನೆ, ಕೀರ್ತಿಯ ಪ್ರಶಂಸೆ, ಔದಾರ್ಯ, ಮಹತ್ತ್ವದ ವರ್ಣನೆ, ಗುಣ, ಚಾರಿತ್ರ್ಯ, ಪರಾಕ್ರಮ, ವಿದ್ಯಾವೈದುಷ್ಯ ಸ್ತುತಿ, ಜಿನಧರ್ಮಪರಾಯಣತೆಗಳು ವರ್ಣಿತವಾಗಿವೆ. ಗ್ರಂಥದುದ್ದಕ್ಕೂ ಬೇರೊಬ್ಬ ವ್ಯಕ್ತಿ ರೇಚನನನ್ನು ಸಂಬೋಧಿಸಿರುವಂತೆಯೇ ಇದೆ. "ಕವಿಜನಾಶ್ರಯುಂಡು ಮಲ್ಲಿಯರೇಚನ ಸುಕವಿ ಕವಿಜನಾಶ್ರಯಮನು ಛಂದಮು ತೆಸುಗುಬಾಸ ನರುದುಗ ಜೆಪ್ಪೆನ್" ಎಂದು ರೇಚನನಲ್ಲದೆ ಬೇರೊಬ್ಬರು ಹೇಳಿರುವಂತೆಯೇ ಇದೆ[೫೬]. ಪ್ರಥಮ ಪುರುಷದಲ್ಲಿ ಹೇಳಿರುವ ಈ ಪದ್ಯಗಳ ಮಧ್ಯದಲ್ಲಿ ಇದ್ದಕ್ಕಿದ್ದಂತೆ 'ಶ್ರುತುಲುನು ಶ್ರುತ್ಯಂತಂಬುಲು' ಎನ್ನುವ ಪದ್ಯವಿದ್ದು ಇದರಲ್ಲಿ ವ್ಯಕ್ತಿಯನ್ನು ಸಂಬೋಧಿಸುವುದು ಆರಂಭವಾಗುತ್ತದೆ. ಮತ್ತೆ ಕೊನೆಯಲ್ಲಿ ಮಲ್ಲಿಯರೇಚನ ಸುಕವಿ ಜನಾಶ್ರಯನೇ ಛಂದಸ್ಸನ್ನು ಜನರಿಗೆ ತಿಳಿಯಲು ಹೇಳಿದ ಎಂದು ಪ್ರಥಮ ಪುರುಷದಲ್ಲಿ ಈ ಗ್ರಂಥ ಮುಗಿದಿದೆ. ಈ ವೈವಿಧ್ಯವೆಲ್ಲ ಏಕೆ ? ಕವಿ ಬೇರೊಬ್ಬನಾದ ಕಾರಣದಿಂದ.

ಭೀಮಕವಿ ಈ ಪರಿಯಾಗಿ ರೇಚನನನ್ನು ಏಕೆ ಸ್ಮರಿಸಬೇಕು ? ಜೀವವು ಶರೀರವನ್ನು ತ್ಯಜಿಸಿದ ನಂತರ ಆತನ ಹೆಸರು ಈ ಲೋಕದಲ್ಲಿ ಎಷ್ಟು

ದಿನಗಳಿರುತ್ತದೆಯೋ ಅಷ್ಟುದಿನಗಳೂ ಆತ ಮೇಲಿನ ಲೋಕದಲ್ಲಿ ಇರುತ್ತಾನೆಂಬ ನಂಬಿಕೆ ವೈದಿಕರಲ್ಲಿ ಮಾತ್ರವಲ್ಲದೆ ಜೈನರಲ್ಲಿಯೂ ಇದೆ.

ತನಯುಡು ಚೆಱುವುನು ಕಾವ್ಯಂ
ಬುನಿದಾನಮು ಗುಡಿ ವನಂಬು ಭೂದೇವಸ್ಥಾ
ಪನಮುನು ನನುನಿ ಯ್ಯೇಡುನು
ಜನುಶಾಸ್ತ್ರಮುಲಂದು ಸಪ್ತಸಂತತುಲನಗನ್

–ಅಪ್ಪಕವೀಯಮು ೧–೧೫

[ಪುತ್ರಸಂತಾನ, ತಟಾಕ, ಕಾವ್ಯ ಅಥವಾ ಸತ್ಕೃತಿ, ನಿದಾನ {=ನಿಧಿ, ಐಶ್ವರ್ಯ, ಸಂಪತ್ತು}, ಗುಡಿ {=ಮನೆ, ವಾಸಸ್ಥಳ}, ವನ ಅಥವಾ ಉದ್ಯಾನ, ದೇವಾಲಯ ನಿರ್ಮಾಣ ಈ ಏಳನ್ನೂ ಸಪ್ತಸಂತಾನಗಳೆಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ]

ಮೇಲಿನ ಪದ್ಯದಲ್ಲಿ ಸೂಚಿತವಾಗಿರುವ ಏಳು ಸಂತಾನಗಳಲ್ಲಿಯೂ ಪ್ರಶಸ್ತವಾದದ್ದು ಕೃತಿ ಎಂದು ಹೇಳಲಾಗಿದೆ.

ಸಪ್ತಸಂತಾನಮುಲಲೋ ಪ್ರಶಸ್ತಮೈನ
ಕೃತಿಲಭಿಂಚುಟಯೇ ಚಾಲ ಕೀರ್ತಿಕರಮು

–ತನಿಕೆಳ್ಳ ಪ್ರಕಾಶಶಾಸ್ತ್ರಿ, ನಿಶ್ಶಂಕ ಕಥಾಂಶಮು

[ಸಪ್ತಸಂತಾನಗಳಲ್ಲಿ ಪ್ರಸಸ್ತವಾದ ಕೃತಿ ಲಭಿಸುವುದೇ ಬಹಳ ಕೀರ್ತಿಕರವಾದುದು]

ಇಲ್ಲಿ ಸಪ್ತಸಂತಾನಗಳಲ್ಲಿ ಪ್ರಶಸ್ತವಾದ ಕೃತಿ ಎಂದು ಓದಿಕೊಳ್ಳಬೇಕು. ಅಂತಹ ಕೃತಿಯನ್ನು ಹೊಂದುವುದು ಕೀರ್ತಿದಾಯಕ ಎಂದರ್ಥ. ಕೃತಿಯನ್ನು ಹೊಂದಿದವನನ್ನು [= ಅಂಕಿತ ಹೊಂದಿದವನು] ಕೃತಿ ಭರ್ತ [= ಕೃತಿಗೆ ಒಡೆಯ] ಎನ್ನುವುದು ಉಂಟು. ಕೃತಿಯನ್ನು ಅಂಕಿತವಾಗಿ ಪಡೆಯುವುದೇ ಸಪ್ತಸಂತಾನಗಳಲ್ಲಿ ಒಂದಾದರೆ ಆತ ಭರ್ತ (ಒಡೆಯ) ಹೇಗಾಗುತ್ತಾನೆ ? ಆದ್ದರಿಂದ ಅದು ರಚಯಿತನಿಗೆ ಸಪ್ತಸಂತಾನಗಳಲ್ಲಿ ಒಂದಾಗುತ್ತದೆ. ಕವಿಗೆ ಕೃತಿಯೆಂಬುದು ಕನ್ಯೆಯಾಗುತ್ತದೆ. ಇಲ್ಲಿ ಮತ್ತೊಂದು ವಿಷಯವನ್ನು ಗಮನಿಸಬೇಕು. ಕೃತಿಯನ್ನು ಅಂಕಿತವಾಗಿ ಪಡೆಯುವುದು ಬೇರೆ. ತನ್ನ ಹೆಸರಿನಲ್ಲಿ ಪ್ರಚುರಗೊಳಿಸುವುದು ಬೇರೆ. ಹೆಸರನ್ನು ಪ್ರಚುರಗೊಳಿಸುವುದು ದತ್ತು ಕೊಡುವಂತಹುದು.

ಗುರುವುನಕಿಷ್ಟದೈವಮುನಕುಂ ಬತಿಕಿಂ ಗೃತಿಂ ಜೆಪ್ಪಿ ಪುಣ್ಯಮುನ್
ವರಮುನುತೇಜಮುನ್ ಬಡಯವಚ್ಚು ಜಗಂಬುಲ ನಿಶ್ಚಯಂಬು ಮ
[ದ್ಗುರುವುನು ನಿಷ್ಟದೈವಮುನುಗೂರ್ಚು ನಿಜೇಶುಂಡು ದಾನನಾಕುಂಗಾ
ಕೊರುನಕುನಿಟ್ಲುಸೇಕುರುನೆ ಯೊಕ್ಕಟ ಲಾಭಮುಲೆನ್ನಿ ಎನ್ನಿಯುನ್]

–ನನ್ನೆಚೋಡಕವಿಯ ಕುಮಾರಸಂಭವಮು ೧–೫೦ [(ಸಂ) ನೇಲಟೂರಿ ವೆಂಕಟರಮಣಯ್ಯ, ಆಂಧ್ರಪ್ರದೇಶ ಸಾಹಿತ್ಯ ಅಕಾಡೆಮಿ, ಹೈದರಾಬಾದ್–೧೯೬೮]

[ಗುರುವಿಗೂ, ಇಷ್ಟದೈವಕ್ಕೂ, ಒಡೆಯನಿಗೂ ಕೃತಿಯನ್ನು ಹೇಳಿ ಪುಣ್ಯವನ್ನು, ವರವನ್ನು, ತೇಜಸ್ಸನ್ನು ಪಡೆಯುವುದು ನಿಶ್ಚಯವೇ ಸರಿ. ನನ್ನ ಗುರು, ಇಷ್ಟದೈವ, ನನ್ನ ಒಲವಿನ ನಿಜೇಶ ಇವರುಗಳ ಲಾಭವು ನನಗಲ್ಲದೆ ಇನ್ನಾರಿಗೆ ಹೇಗೆ ತಾನೆ ಒದಗಿ ಬರುತ್ತವೆ ?]

ಎನ್ನುವ ನಂಬಿಕೆ ಇದೆ.

ಆ ನಂಬಿಕೆಯಿಂದಲೇ ಭೀಮಕವಿ ಕವಿಜನಾಶ್ರಯವನ್ನು ರೇಚನನ ಹೆಸರಿನಲ್ಲಿ ಪ್ರಸಿದ್ಧಿಗೊಳಿಸಿದ್ದಾನೆ. ಕವಿರಾಜಮಾರ್ಗವನ್ನು ಶ್ರೀವಿಜಯನು ನೃಪತುಂಗನ ಹೆಸರಿನಲ್ಲಿ ಬರೆದಿದ್ದಾನೆ. ಮಹಾಭಾರತದ ಅರಣ್ಯಪರ್ವದ ಶೇಷಭಾಗವನ್ನು ಎಜ್ಞಾಪ್ರೆಗಡ [ಕೇತನನು] ಆತನ ರಚನೆಯಾಗಿ 'ಅಂದರೆ ನನ್ನಯ ರಚಿಸಿರುವಂತೆಯೇ' ಬರೆದಿದ್ದಾನೆ.

ಛಂದೋಂಬುಧಿಕಾರನಾದ ನಾಗವರ್ಮ ತನ್ನ ಹೆಂಡತಿಯನ್ನು ಸಂಬೋಧಿಸಿ ಲಕ್ಷಣಗ್ರಂಥವನ್ನು ರಚಿಸಿದ್ದಾನೆ. ಮುದ್ದಣನು ತನ್ನ ರಾಮಾಶ್ವಮೇಧದಲ್ಲಿ ಇದೇ ರೀತಿಯಾಗಿಯೇ ಮಾಡಿದ್ದಾನೆ. ಇದೊಂದು ರಚನಾತಂತ್ರ. "ನಿನ್ನು ನೀವೆ ಪೊಗಡುವೈಖರಿ ನೊನರಿಂಚೆದ ತೆನುಗುಬಾಸನೊಪ್ಪಗ ಛಂದಂಬು" ಎಂಬುದಕ್ಕೆ ಇಂತಹ ಗ್ರಂಥವನ್ನು ರಚಿಸುವಂತೆ ಆಗಿರುವುದಕ್ಕೆ ರೇಚನ ತನ್ನನ್ನು ತಾನು ಗರ್ವದಿಂದ ಹೊಗಳಿಕೊಳ್ಳುವುದು ಎಂಬ ಅರ್ಥವೇ ಹೊರತು ಗ್ರಂಥದಲ್ಲಿರುವ ನಾನಾ ಸಂಬೋಧನ ರೂಪಗಳಿಂದ ಹೊಗಳಿಕೊಳ್ಳುವುದು ಎಂಬ ಅರ್ಥವಲ್ಲ. ಈ ವಿಷಯವನ್ನು ತಿಳಿಯದೆ ತಮಿಳು ಛಂದೋಗ್ರಂಥ ಕರ್ತೃವು ರೇಚನನೇ ಈ ಛಂದೋಗ್ರಂಥವನ್ನು ಬರೆದನೆಂದು ಹೇಳಿದ್ದಾನೆ. ಭಟ್ಟಾಕಳಂಕನೆಂಬ [ಕನ್ನಡ] ಕವಿ ಇದೇ ರೀತಿಯಾಗಿ ನೃಪತುಂಗನೇ ಕವಿರಾಜ ಮಾರ್ಗದ ಕರ್ತೃ ಎಂದು ಹೇಳಿದ್ದಾನೆ[೬]. ಈ ಅಭಿಪ್ರಾಯಗಳು ಭ್ರಮಮೂಲವಾದವು.

ದಕ್ಷಿಣಭಾರತದಲ್ಲಿ ಸಾಹಿತ್ಯವು ಮುಖ್ಯವಾಗಿ ರಾಜಾಶ್ರಯದಲ್ಲಿದ್ದಿತು. ಕೆಲವು ಸಾರಿ ರಾಜಾಶ್ರಯವನ್ನು ತೊರೆದು ಧರ್ಮಾಶ್ರಯವನ್ನು (ಮತ) ಹೊಂದಿತು. ಅಂತಹ ಸಂದರ್ಭದಲ್ಲಿ ಆಯಾ ಧರ್ಮಾನುಯಾಯಿಗಳಾದ ಶ್ರೀಮಂತರು ಕವಿಗಳಿಗೆ ಆಶ್ರಯವನ್ನು ಇತ್ತು ಗ್ರಂಥರಚನೆಯನ್ನು ಪ್ರೋತ್ಸಾಹಿಸಿದರು. ದಾನಚಿಂತಾಮಣಿಯೆಂದು ಪ್ರಸಿದ್ಧಳಾದ ಅತ್ತಿಮಬ್ಬೆಯು ಪೊನ್ನ, ರನ್ನ ಕವಿಗಳಿಗೆ ಆಶ್ರಯವನ್ನು ನೀಡಿದ್ದಳು[೭]. ರಾಜಾಶ್ರಯದಲ್ಲಿ ಅಭಿವೃದ್ಧಿ ಹೊಂದಿದ ಸಾಹಿತ್ಯವು ಮೂರುವಿಧವಾಗಿದೆ. (೧) ಆಶ್ರಯದಾತನ ಹೆಸರು ಚಿರಸ್ಥಾಯಿಯಾಗಿ ಇರಲೆಂದು ಆತನ ಹೆಸರಿನಲ್ಲಿಯೇ ಬರೆಯುವುದು (ಇದು ಬಹುಪಾಲು ಗ್ರಂಥಗಳಲ್ಲಿಯೇ ನಡೆದಿರುವುದು ಗಮನಾರ್ಹ) ಕವಿರಾಜಮಾರ್ಗ, ಕವಿಜನಾಶ್ರಯ ಈ ಮಾದರಿಯವು. (೨) ಕೃತಿಯನ್ನು ಬರೆದು ಅಂಕಿತವನ್ನು ನೀಡುವುದು. ಈ ಪದ್ಧತಿ ತೆಲುಗಿನಲ್ಲಿ ಬಹುವಾಗಿ ಪ್ರಚಾರದಲ್ಲಿದೆ. (೩) ಪುರಾಣಪುರುಷರನ್ನು ತನ್ನ ರಾಜನೊಂದಿಗೆ ಸಮೀಕರಿಸಿ ಅದರ ಮೂಲಕ ಆತನ ಕೀರ್ತಿ ಚಿರಸ್ಥಾಯಿಯಾಗುವಂತೆ ಮಾಡುವುದು (ಈ ಪದ್ಧತಿಯನ್ನು ಕನ್ನಡ ಜೈನಕವಿಗಳು ವಿಶೇಷವಾಗಿ ಬೆಳಸಿದ್ದಾರೆ).

ಆದರೆ ಇಲ್ಲಿ ಮಲ್ಲಿಯರೇಚನ ಕೊಡುವ ಆಮಿಷಕ್ಕೆ ಬಲಿಯಾಗಿ ಭೀಮನ ಆತನ ಹೆಸರಿನಲ್ಲಿ ಕವಿಜನಾಶ್ರಯವನ್ನು ರಚಿಸಿದನೆಂದು ತಿಳಿಯುವುದು ಸಾಧುವಲ್ಲ. ಅಸಮಾನ ದಾನ, ರವಿತನಯ ಸಮಾನೋನ್ನತನಾದ ವಾಚಕಾಭರಣನ ಮಿತ್ರ ಈ ಭೀಮನ. ಇತಿಹಾಸಕಾರರು ಆತ ಈ ರೀತಿ ಮಾಡಿದ್ದಾನೆಂದು ತಿಳಿಯುವುದು ಆ ಇಬ್ಬರಿಗೂ ಅನ್ಯಾಯ ಮಾಡಿದಂತೆ ಆಗುತ್ತದೆ.

ಮಲ್ಲಿಯರೇಚನನಿಗೆ ಛಂದಃಪರಿಜ್ಞಾನವೇ ಇರಲಿಲ್ಲವೇ ? ಆ ರೀತಿ ಭಾವಿಸುವ ಅಗತ್ಯವಿಲ್ಲ. ಶ್ರೀವಿಜಯನು "ನೃಪತುಂಗ ದೇವಾನುಮತದಿಂ" ಹೇಳಿದಂತೆ ಇಲ್ಲಿ ಮಲ್ಲಿಯರೇಚನ ಹೇಳಿದುದು. ಅಂದರೆ ಆತನಿಗೆ ಛಂದಃಪರಿಜ್ಞಾನ ಇದ್ದಿತೆನ್ನುವುದು. ಆತನ ಅಭಿಪ್ರಾಯಗಳು ಆತನಿಗಿವೆ.

ವೇಮುಲವಾಡ ಭೀಮಕವಿಯೇ ಕರ್ತೃವೆಂದು ಹೇಳಲು ಆಧಾರವಾಗಿ ಇರುವ ಪದ್ಯಗಳ ವಿಷಯವೇನು ? ರೇಚನ ಕರ್ತೃ ಅಲ್ಲದಿದ್ದರೂ ವೇಮುಲವಾಡ ಭೀಮಕವಿಯೇ ಕರ್ತೃವೆಂದು ಈ ಪದ್ಯಗಳು ಹೇಳುತ್ತಿವೆಯಲ್ಲಾ ಎಂದು ವಾದಿಸುವವರಿಗೆ ಸಮಾಧಾನವಿದು.

ವೇಮುಲವಾಡನು ವೆಲಸಿನ
ಭೀಮೇಶ್ವರು ಕರುಣಗಲ್ಗು ಭೀಮಸುಕವಿನ್
ಕೋಮಟಿರೇಚನ ಪೇರುನ
ನೀ ಮಹಿಗವುಲೆನ್ನ ಛಂದಮೆಲಮಿರಚಿಂತುನ್

ರೇಚನ ಸಂತೋಷಿಂಪಗ
ಭೂಚಕ್ರಮುಲೋನ ಭೀಮಮುರಪರುಗ್ಯಪಚೇ
ನೇ ಛಂದ ಮಮರುಚುಂಡುನು
ನಾಛಂದಮು ವೀದುಪೇರ ನಮರುನು ರೇಚಾ

ಮೇಲಿನ ಎರಡು ಪದ್ಯಗಳು ಮಾರ್ಪಾಟಿಗೆ ಗುರಿಯಾಗಿವೆ. ಇವುಗಳ ವಾಸ್ತವ ಪಾಠಗಳು ಇಂತಿವೆ.

ವೇಮುಲವಾಡನು ವೆಲಸಿನ
ನೇಮೀಶ್ವರು ಕರುಣಗಲ್ಗುನೇ ಭೀಮಕವಿನ್
ಕೋಮಟಿರೇಚನ ಪೇರುನ
ನೀ ಮಹಿ ಕವುಲೆನ್ನ ಛಂದಮೆಲ ಮಿರಚಿಂತುನ್

[ವೇಮುಲವಾಡದಲ್ಲಿ ನೆಲೆಸಿರುವ ನೇಮೀಶ್ವರನ ಕರುಣೆಯಿಂದ ಭೀಮಕವಿಯಾದ ನಾನು ಕೋಮಟಿ ರೇಚನನ ಹೆಸರಿನಲ್ಲಿ ಭೂಮಿಯಲ್ಲಿರುವ ಕವಿಗಳು ಹೊಗಳಲು ಛಂದಸ್ಸನ್ನು ರಚಿಸುತ್ತೇನೆ]

ರೇಚನ ಸಂತೋಷಿಂಪಗ
ಭೂಚಕ್ರಮುಲೋನ ಭೀಮಪುತ್ರುನಾ ಕೃಪಚೇ
ನೇ ಛಂದಮುಮರುಚುಂಡುನು
ನಾ ಛಂದಮು ನೀದುಪೇರನಮರುನು ರೇಚಾ

[ರೇಚನನು ಸಂತೋಷಿಸಲು, ಭೂಮಿಯಲ್ಲಿರುವ ಭೀಮಪುತ್ರನ (=ಜಿನವಲ್ಲಭ) ಕೃಪೆಯಿಂದ ನಾನು ಛಂದಸ್ಸನ್ನು ಹೇಳುತ್ತಿದ್ದೇನೆ. ನನ್ನ ಕೃತಿ ನಿನ್ನ ಹೆಸರಿನಲ್ಲಿ ಪ್ರಸಿದ್ಧವಾಗುತ್ತದೆ ರೇಚಾ]

ವೇಮುಲವಾಡದಲ್ಲಿ ಭೀಮೇಶ್ವರನ ದೇವಾಲಯ ಇರುವುದರಿಂದಲೂ ನೇಮಿ ಎನ್ನುವ ಶಬ್ದ ತಿಳಿಯದೇ ಹೋದುದರಿಂದಲೂ ಮೇಲಿನಂತೆ ತಿದ್ದುಪಾಡುಗಳು ಜರುಗಿರಬೇಕು. ಈ ಗ್ರಂಥ ರಚನೆಯ ಕಾಲಕ್ಕೆ ವೇಮುಲವಾಡದಲ್ಲಿ ಬದ್ದಗೇಶ್ವರಾಲಯುವಿತ್ತೇ ಹೊರತು ಭೀಮೇಶ್ವರಾಲಯುವಲ್ಲ. ಕಾಲಾನುಕಾಲದಲ್ಲಿ ಬದ್ದಗೇಶ್ವರಾಲಯವೇ ಭೀಮೇಶ್ವರಾಲಯವಾಗಿರಬೇಕು[೮]. ಈಗಿನ ಭೀಮೇಶ್ವರಾಲಯದಲ್ಲಿ ದೊರಕುವ ಶಾಸನಗಳಲ್ಲಿ ಭೀಮೇಶ್ವರಾಲಯದ ಪ್ರಸಕ್ತಿಯೇ ಇಲ್ಲ. ಆದ ಕಾರಣ ಇದು ಬದ್ದಗೇಶ್ವರಾ ಲಯವೇ ಆಗಿರಬೇಕು. ಈ ವೇಮುಲವಾಡದಲ್ಲಿ ಯಶಸ್ತಿಲಕ ಚಂಪುವಿನ ಕರ್ತೃ ಸೋಮದೇವ ಸೂರಿ ನಿರ್ಮಿಸಿದ ಒಂದಾನೊಂದು ಜೈನತೀರ್ಥಂಕರನ ಬಸದಿಯನ್ನು ಕುರಿತ ವಿವರಗಳನ್ನು ಒಳಕೊಂಡ ಶಾಸನವೊಂದು ದೊರೆತಿದೆ[೯]. ಇದರಿಂದ ಮೊದಲು ಇದೊಂದು ಜೈನಕೇಂದ್ರವಾಗಿತ್ತೆಂಬ ಅಂಶ ನಿರ್ವಿವಾದ.

"ಕವಿಜನಾಶ್ರಯದ ಕರ್ತೃ ವೇಮುಲವಾಡ ಭೀಮಕವಿ ಅಲ್ಲವೆಂದು ಬ್ರ.ಶ್ರೀ. ವೀರೇಶಲಿಂಗಮ್, ಮಾನವಲ್ಲಿ ರಾಮಕೃಷ್ಣಕವಿ, ಚಿಲಕೂರಿ ವೀರಭದ್ರರಾವ್ ಇವರುಗಳು ಅಭಿಪ್ರಾಯಪಡುತ್ತಿದ್ದಾರೆ. ಇದುವೇ ಸತ್ಯವೆಂದು ನನ್ನ ಅಭಿಪ್ರಾಯ" ಎಂಬುದಾಗಿ ಶ್ರೀ ಜಾಗಂಟಿ ಶೇಷಯ್ಯನವರು ಅಪ್ಪಣೆ ಕೊಡಿಸಿದ್ದಾರೆ[೧೦].

"ಅಪ್ಪಕವೀಯದಲ್ಲಿ ಬಿಂದುಯತಿಗೆ ಲಕ್ಷ್ಯವಾಗಿ ಭೀಮನನ ಚಾಟುಪದ್ಯ (ಚಂ ॥ ಗರಳಮು . . . . .) ಉದಾಹೃತವಾಗಿದೆ. ಈ (ಶೈವ) ಭೀಮನನೇ ಕವಿಜನಾಶ್ರಯದ ಕರ್ತೃವಾದರೆ ಈ ವಳಿಭೇದವನ್ನು ತನ್ನ [= ಕವಿಜನಾಶ್ರಯಮು] ಲಕ್ಷಣಗ್ರಂಥದಲ್ಲಿ ಏಕೆ ಪ್ರಸ್ತಾಪಿಸಿಲ್ಲವೋ?" ಎಂದು ವಿದ್ವಾನ್ ರಾವೂರಿ ದೊರೆಸ್ವಾಮಿ ಶರ್ಮ ಅವರು ಅಭಿಪ್ರಾಯಪಡುತ್ತಾರೆ[೧೧].

"ವೇಮುಲವಾಡ ಭೀಮಕವಿಯೇ ಇದನ್ನು ರಚಿಸಿದ್ದ ಪಕ್ಷದಲ್ಲಿ ಈ ಗ್ರಂಥವು ನನ್ನಯ್ಯನ ತರುವಾಯ ರಚಿತವಾದುದಾಗಿರುತ್ತದೆ. ಆಗ ಈ ಗ್ರಂಥಕರ್ತ ನನ್ನಯ್ಯನ ಪ್ರಯೋಗಗಳನ್ನು ಗಮನಿಸದೇ ಇರಲು ಸಾಧ್ಯವಿಲ್ಲ. ಅಪ್ಪಕವಿ ಲ–ಳ–ಡ–ಲ ಮೈತ್ರಿಯನ್ನು ಹೇಳಿದ್ದಾನೆ. ಲ–ಳ–ಲ ಮೈತ್ರಿಗೆ [ನನ್ನಯ್ಯನ] ಆದಿಪರ್ವದಲ್ಲಿ ಪ್ರಯೋಗ ದೊರಕುತ್ತದೆ. ಆದರೆ ಕವಿಜನಾಶ್ರಯದಲ್ಲಿ ಇದನ್ನು ಹೇಳಿಲ್ಲ". ನನ್ನಯ್ಯನ ಭಾರತವನ್ನೇ ಲಕ್ಷ್ಯವಾಗಿಟ್ಟುಕೊಂಡು ಕವಿಜನಾಶ್ರಯದ ರಚನೆಯಾಗಿದೆ ಎಂಬ ಮಾತು ಸ್ವೀಕಾರಾರ್ಹ

ವಲ್ಲ. ಇದರೊಳಗಿನ ತೆಲುಗು ಕವಿತ್ವಕ್ಕೆ ವಿಶಿಷ್ಟವಾದ ಯತಿಪ್ರಾಸಗಳು ನನ್ನಯ್ಯನ ಭಾರತವನ್ನೇ ಲಕ್ಷ್ಯವಾಗಿ ಉಳ್ಳವುಗಳಲ್ಲ. ಇದರಲ್ಲಿನ ಲಕ್ಷಣಗಳಿಗೆ ನನ್ನಯ ಭಾರತದಲ್ಲಿ ಲಕ್ಷ್ಯಗಳು ದೊರಕುತ್ತವೆ ಎಂದ ಮಾತ್ರಕ್ಕೆ ಅವೇ ಈತನಗೆ ಲಕ್ಷ್ಯಗಳೆಂದು ಹೇಳುವುದು ಸರಿಯಿಲ್ಲ.

ನನ್ನಯ್ಯನಿಗೆ ಪೂರ್ವದಲ್ಲಿಯೇ ಈ ಗ್ರಂಥ ರಚನೆಯಾಗಿದೆ ಎಂಬುದಕ್ಕೆ ಗ್ರಂಥದೊಳಗೇ ನಿದರ್ಶನಗಳು ದೊರಕುತ್ತವೆ.

[೧೨]ಪರಗಿನ ವಿಮಲ ಯಶೋಭಾ
ಸುರಚರಿತುಡು ಭೀಮನಾಗ್ರಸುತುಂಡಖಿಲಕಳಾ
[೧೩]ಪರಿಣತುಂಡಯ್ಯುನು[೧೩] ಭೂಸುರ
ವರಪ್ರಸಾದೋದಿತ ಧ್ರುವಶ್ರೀಯುತುಡೈ

[ನಿರ್ಮಲತೆಯಿಂದ ಶೋಭಿಸುವ, ತನ್ನ ಯಶಸ್ಸಿನಿಂದಲೇ ಬೆಳಗುವ ಚಾರಿತ್ರ್ಯವನ್ನು ಹೊಂದಿರುವ ಭೀಮನನ ಹಿರಿಯ ಮಗನು ಎಲ್ಲ ಕಲೆಗಳಲ್ಲಿಯೂ ಪರಿಣತನಾಗಿ, ಭೂಸುರರ ಪ್ರಸಾದದಿಂದ ಅಥವಾ ಆಶೀರ್ವಚನದಿಂದ ಹುಟ್ಟಿದ ಸ್ಥಿರವಾದ ಕಾಂತಿಯಿಂದ ಕೂಡಿದವನಾಗಿದ್ದನು]

ಎನ್ನುವ ಪದ್ಯದಲ್ಲಿ ಭೀಮಾಗ್ರಸುತನ ಸ್ಮರಣೆಯಿದೆ.

[೧೨]ಅಸಮಾನ ದಾನ ರವಿತನ
ಯಸಮಾನೋನ್ನತುಡು [೧೪]ವಾಚಕಾಭರಣ[೧೪] ಪ್ರಾ
ಣ ಸಮಾನ ಮಿತ್ರುಂಡೀ ಕೃತಿ
ಕಿ ಸಹಾಯುಡುಗಾನುದಾತ್ತ ಕೀರ್ತಿಪ್ರೀತಿನ್[೧೨]

[ಅಸಮಾನದಾನಿಯೂ ಕರ್ಣನಂತಹ ವ್ಯಕ್ತಿಯ ಗುಣಕ್ಕೆ ಸಮಾನನೂ ವಾಚಕಾಭರಣನೂ ಆದ ನನ್ನ ಪ್ರಾಣಸಮಾನ ಮಿತ್ರನು ಈ ಕೃತಿಯ ರಚನೆಯಲ್ಲಿ ಸಹಾಯಕನಾಗಿ ಉದಾತ್ತವಾದ ಕೀರ್ತಿಯನ್ನೂ ಪ್ರೀತಿಯನ್ನೂ ತೋರಿದನು]

ಎನ್ನುವ ಪದ್ಯದಲ್ಲಿ ವಾಚಕಾಭರಣನ ಪ್ರಸ್ತಾವವಿದೆ. ಈ ಭೀಮನಾಗ್ರಸುತನೂ, ವಾಚಕಾಭರಣನೂ ಯಾರು ?

ಮೇಲಿನ ಪದ್ಯಗಳನ್ನು ಕುರ್ಕ್ಯಾಲ ಶಾಸನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವ ಶ್ರೀ ಪಿ. ವಿ. ಪರಬ್ರಹ್ಮ ಶಾಸ್ತ್ರೀ ಅವರು "ಪರಗಿನ ವಿಮಲಯಶೋ . . . . . . ಈ ಪದ್ಯವು ಮುಂದಣ ಒಂದಾನೊಂದು ಪದ್ಯದೊಳಗೆ ಮುಂದುವರೆದಂತೆ ತೋರುತ್ತದೆ. ಈ ಕೃತಿಯ ಆರಂಭದಲ್ಲಿ ಜೈನಪರವಾದ ಸ್ತುತಿಪದ್ಯಗಳಿದ್ದು ನಂತರ 'ಗುರು ಯತಿ ಗಣಮುಲ ಪಾದಾಂಬುರುಹಂಬುಲಕೆರಗಿ' ಎಂದು ಛಂದೋಪಾರಿಭಾಷಿಕ ಪದಗಳಲ್ಲಿ ಶ್ಲೇಷೆಯ ಮೂಲಕ ಜೈನ, ಜೈನಗುರು, ಜೈನಮುನಿ ವೃಂದಕ್ಕೆ ನಮಸ್ಕರಿಸಿದ್ದಾನೆ. ಇದರ ನಂತರದ

ಪದ್ಯವು ಆತನ ಗುರುವನ್ನು ಕುರಿತದ್ದಾಗಿರಬೇಕು ಹಾಗೂ ಅಧಿಕಾರಾಂತ್ಯದಲ್ಲಿ ತಾನೇ ಹೇಳಿದ ವಾದೀಂದ್ರ ಚೂಡಾಮಣಿಯನ್ನು ಕುರಿತದ್ದೇ ಆಗಿರಬೇಕು. ಪಂಪನಿಗೆ ವಾದೀಂದ್ರ ಚೂಡಾಮಣಿ ಎನ್ನುವ ಬಿರುದು ಇದ್ದಿತೆಂದು ಇನ್ನೂ ಸ್ಪಷ್ಟಪಡದ ಕಾರಣ ಈತ ಪಂಪನೇ ಎಂಬುದಾಗಿ ಹೇಳುವುದು ಕಷ್ಟ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಕೃತಿಯಲ್ಲಿ ಉಲ್ಲೇಖಿತ ನಾದ ವಾಚಕಾಭರಣ ಪಂಪನ ತಮ್ಮನಾದ ಜಿನವಲ್ಲಭನೇ ಎಂದು ಇವರು ಸಕಾರಣವಾಗಿ ನಿರ್ಣಯಿಸಿದ್ದಾರೆ.

ಕನ್ನಡದಲ್ಲಿ ವಿಕ್ರಮಾರ್ಜುನ ವಿಜಯವನ್ನು ರಚಿಸಿದವನು ಪಂಪ ಮಹಾಕವಿ. ಆತನ ತಮ್ಮನೇ ಕುರ್ಕ್ಯಾಲ ಶಾಸನದಲ್ಲಿ ಕೀರ್ತಿತ ನಾಗಿರುವ ಜಿನವಲ್ಲಭ. ಇವರಿಬ್ಬರ ತಂದೆಯ ಹೆಸರು ಭೀಮಪಯ್ಯ. ಇದಕ್ಕಾಗಿಯೇ ಕವಿಜನಾಶ್ರಯದ ಕರ್ತೃ ಹಿರಿಯವನಾದ ಪಂಪಕವಿಯನ್ನು ಭೀಮನಾಗ್ರಸುತನೆಂದು, ಕಿರಿಯವನಾದ ಜಿನವಲ್ಲಭನನ್ನು ಆತನ ವಾಚಕಾಭರಣ ಎಂಬ ಬಿರುದಿನಿಂದ ಕರೆದಿದ್ದಾನೆ. ಕುರ್ಕ್ಯಾಲ ಶಾಸನದ ಕಾಲಕ್ಕೆ ವಾಚಕಾಭರಣ ಎಂಬ ಬಿರುದು ಜಿನವಲ್ಲಭನಗೆ ಮಾತ್ರ ಕಾಣಸಿಗುವುದರಿಂದ ಕವಿಜನಾಶ್ರಯದಲ್ಲಿ ಕೀರ್ತಿತನಾದವನು ಇದೇ ಜಿನವಲ್ಲಭನೆಂದು ನಿಸ್ಸಂಶಯವಾಗಿ ಹೇಳಬಹುದು.

ವಾಚಕಾಭರಣನ (ಜಿನವಲ್ಲಭ) ಪ್ರಾಣಸಮಾನ ಮಿತ್ರನೆಂದು ಕವಿಜನಾಶ್ರಯದ ಕರ್ತೃ ಹೇಳಿಕೊಂಡಿರುವ ಕಾರಣ ಆತನೇ ಭೀಮನಾಗ್ರಸುತನೆಂದು ತಿಳಿಯುವುದಕ್ಕೆ ಆಸ್ಪದವಿಲ್ಲ. ಪ್ರಾಣಸಮಾನ ಮಿತ್ರನು ಸಹಾಯವನ್ನು ಮಾಡುತ್ತಾನೆಯೇ ಹೊರತು ಆ ಸಹಾಯವು ಕೃಪೆ ಎನ್ನಿಸದು. ಆದ್ದರಿಂದ ಇದು ತಪ್ಪದೇ ಪಂಪನನ್ನು ಕುರಿತಾದ ಮಾತೇ ಆಗಿರಬೇಕು. ಇದಕ್ಕೆ ಮೊದಲು ಗಮನಿಸಿದ 'ಪರಗಿನ ವಿಮಲಯಶೋಭಾಸುರ ಚರಿತುಡು . . .' ಎನ್ನುವ ಪದ್ಯದ ನಂತರ ಇರಬೇಕಾದ್ದು 'ರೇಚನ ಸಂತೋಷಿಂಪಗ' ಎನ್ನುವ ಪದ್ಯ. ಈ ರೀತಿ ಇರುವಾಗ ಭೀಮನಾಗ್ರಸುತನ ಪ್ರಸ್ತಾವನೆ ಬರುವ ಪದ್ಯ ಮಧ್ಯದಲ್ಲೇ ನಿಲ್ಲದೆ ಮುಂದಕ್ಕೆ ಸಾಗುವಂತಾ ಗುತ್ತದೆ. ಶ್ರೀಯುತ ಪರಬ್ರಹ್ಮಶಾಸ್ತ್ರಿಗಳು ಅಧಿಕಾರಾಂತ್ಯದಲ್ಲಿ ಈ ಕವಿ ತನ್ನ ಗುರುವೆಂದು ಹೇಳಿಕೊಳ್ಳುವ ವಾದೀಂದ್ರ ಚೂಡಾಮಣಿಯನ್ನು ಭೀಮನಾಗ್ರಸುತನಗೆ ಏಕೆ ತಳುಕು ಹಾಕಿದರೋ ತಿಳಿಯದು. ಅಧಿಕಾರಾಂತ್ಯದಲ್ಲಿ ಬಂದಿರುವ ಗುರುವಿನ ಸ್ಮರಣೆ ಅವತಾರಿಕಾ ಪದ್ಯದಲ್ಲಿ ಬರುವ ಅಗತ್ಯವಿಲ್ಲ. ಅದು ನಿಯಮವೂ ಅಲ್ಲ. ಈ ದೃಷ್ಟಿಯಿಂದ ನೋಡಿದರೆ ವಾದೀಂದ್ರ ಚೂಡಾಮಣಿಯೇ ಬೇರೆ, ಭೀಮನಾಗ್ರಸುತನೇ ಬೇರೆ ಎನ್ನುವುದು ಸ್ಪಷ್ಟ.

ಭೀಮಸುಕವಿ ಈ ಕೃತಿಯನ್ನು ಬರೆಯುವಾಗ ಜಿನವಲ್ಲಭನು ಸಹಾಯಕ್ಕೆ ನಿಂತರೆ, ಇಬ್ಬರಿಗೂ ಹಿರಿಯನಾದ ಪಂಪನು ಈ ಪ್ರಯತ್ನವನ್ನು ಹಾರೈಸಿದ್ದಾನೆ. ಅಂದರೆ ಈ ಕೃತಿ ಪಂಪ ಇನ್ನೂ ಜೀವಿಸಿದ್ದಾಗಲೇ, ಕುರ್ಕ್ಯಾಲ ಶಾಸನದ ಕಾಲಕ್ಕೆ ಸ್ವಲ್ಪ ಮೊದಲೇ ರಚಿತವಾಗಿರಬೇಕು.

ಈ ಕವಿ ಕವಿರಾಜಮಾರ್ಗವನ್ನು ಅನುಸರಿಸಿರುವ ಕಾರಣ, ಪಂಪಭಾರತವನ್ನು ಚೆನ್ನಾಗಿ ಓದಿಕೊಂಡು ಅದರಲ್ಲಿನ ಕರ್ಣ ಪಾತ್ರದಲ್ಲಿನ ಸ್ನೇಹಧರ್ಮವನ್ನು ಅರಿತುಕೊಂಡು ತನ್ನ ಮಿತ್ರನಾದ ವಾಚಕಾಭರಣನನ್ನು ಕರ್ಣನಿಗೆ ಹೋಲಿಸಿರುವುದರಿಂದ ಈತನಿಗೆ ಕನ್ನಡ ಭಾಷೆಯ ಪರಿಚಯ ಇತ್ತೆಂದು ತಿಳಿದುಬರುತ್ತದೆ. 'ಪಂಪಕವಿ ಮತ್ತು ಮೌಲ್ಯಪ್ರಸಾರ' ಎನ್ನುವ ಸಂಪ್ರಬಂಧದಲ್ಲಿ[೧೫] ಡಾ. ಎಂ. ಚಿದಾನಂದಮೂರ್ತಿ ಅವರು ಎತ್ತಿ ತೋರಿದ ಪಂಪನ ಕಾಲದಲ್ಲಿನ ಮೌಲ್ಯಗಳಲ್ಲಿ ಸ್ನೇಹಧರ್ಮವೂ ಒಂದಾಗಿದೆ. ಈ ಉಪಮಾನವು ಅದರ ಉದ್ದೇಶದಲ್ಲಿಯೇ ಇಟ್ಟುಕೊಂಡುದು ಎಂದು ಹೇಳಬಹುದು.

ವಾಚಕಾಭರಣನು ಕವಿತ್ವದಲ್ಲಿ ಈತನಿಗೆ ಸಹಾಯ ಮಾಡುವಂತಹ ವ್ಯಕ್ತಿಯೇ ಎನ್ನುವ ಅನುಮಾನಕ್ಕೆ ಕುರ್ಕ್ಯಾಲ ಶಾಸನವೇ ಸಮಾಧಾನವನ್ನು ಸೂಚಿಸುತ್ತದೆ. ಅದರಲ್ಲಿನ ಮೂರು [ತೆಲುಗು] ಕಂದಪದ್ಯಗಳು ಈತನಗೆ ಕವಿತ್ವದ ಪರಿಚಯವಿದ್ದುದನ್ನು ತಿಳಿಸುತ್ತದೆ ಮಾತ್ರವಲ್ಲ, ಆ ಕಾಲದ ತೆಲುಗಿನವರೂ ಈತನನ್ನು 'ಜಿತಕವಿ' ಎಂದು ಹೊಗಳಿದ್ದಾರೆ ಎಂದರೆ ಈತನ ಕವಿತ್ವದ ಪರಿಚಯವನ್ನು ಅನುಮಾನಿಸುವ ಅಗತ್ಯವಿಲ್ಲ[೧೬]. [ಆಂಧ್ರಪ್ರದೇಶದಲ್ಲಿ] ಜೈನಧರ್ಮ ಕ್ಷೀಣಿಸಿದ ತರುವಾಯ ಕಾಣಿಸದೇ ಹೋಗಿರುವ ಜಿನೇಂದ್ರ ಪುರಾಣಮು, ಗಜಾಂಕುಶನ ಕೆಲವು ಕೃತಿಗಳೊಂದಿಗೆ ಜಿನವಲ್ಲಭನ ಕೃತಿಗಳೂ ಕಾಲಗರ್ಭದಲ್ಲಿ ಸೇರಿ ಹೋಗಿರಬೇಕು[೧೭].

ಜಿನವಲ್ಲಭನೂ, ಪಂಪಮಹಾಕವಿ ನನ್ನಯ್ಯನಿಗಿಂತ ಹಿಂದಿನವರು. ಇವರಿಬ್ಬರಿಗೆ ಸಮಕಾಲೀನನಾದ ಭೀಮಕವಿ ನನ್ನಯ್ಯನ ಕಾವ್ಯವನ್ನು ಲಕ್ಷ್ಯವಾಗಿಟ್ಟುಕೊಳ್ಳಲು ಆಸ್ಪದವೇ ಇಲ್ಲ.

ಈತ ಜೈನನಾದ ಕಾರಣ ನನ್ನಯ್ಯನ ಪದ್ಯಗಳನ್ನು ಲಕ್ಷ್ಯಗಳಾಗಿ ಸ್ವೀಕರಿಸಿಲ್ಲ ವೆನ್ನುವುದು ಸಮರ್ಥನೀಯವಲ್ಲ. ಇಲ್ಲಿ ಕಾವ್ಯಧರ್ಮ ಮುಖ್ಯವೇ ಹೊರತು ಧರ್ಮ(ಮತ)ವಲ್ಲ. ಪಂಪಮಹಾಕವಿ ಈ ಎರಡರ ಭೇದವನ್ನು ಸ್ಪಷ್ಟಗೊಳಿಸುತ್ತಾ "ಅಜೀವುದು ಧರ್ಮಮುಮಂ, ಕಾವ್ಯಧರ್ಮಮುಮಂ" ಎಂದು ಹೇಳಿದ್ದಾನೆ[೧೮]. ಕನ್ನಡ ಗ್ರಂಥಗಳಲ್ಲಿ ವೈದಿಕ, ವೀರಶೈವ, ಜೈನ ಗ್ರಂಥಗಳಿಂದ ಉದಾಹರಣೆಗಳನ್ನು ತೆಗೆದುಕೊಳ್ಳಲಾಗಿದೆ. ಕವಿರಾಜಮಾರ್ಗಕಾರ ರಾಮಾಯಣದಿಂದ ಲಕ್ಷ್ಯಗಳನ್ನು ಸ್ವೀಕರಿಸಿದ್ದಾನೆ[೧೯].

ಕವಿಜನಾಶ್ರಯವು ನನ್ನಯ್ಯನಿಗಿಂತ ಮೊದಲೇ ರಚಿತವಾಗಿದ್ದರೂ ಇದರಿಂದ ನನ್ನಯ್ಯನಿಗೆ ಕುಂದೇನೂ ಇಲ್ಲ. ಆತನ ಭಾರತಕ್ಕೆ ಸರಿತೂಗುವಂತಹ ಮತ್ತೊಂದು ಗ್ರಂಥ, ಆತನಿಗಿಂತ ಪೂರ್ವದಲ್ಲಿ ರಚಿತವಾದದ್ದು ದೊರಕುವ ವರೆಗೂ ನಿಸ್ಸಂಶಯವಾಗಿ ನನ್ನಯ್ಯನೇ ಆದಿಕವಿ.

ಆಂಧ್ರದೇಶದಲ್ಲಿ ಕ್ರಿ.ಶ. ೧೦೦೦ ನಂತರ ಜೈನಧರ್ಮವು ಕ್ಷೀಣಿಸಲು ಆರಂಭವಾಯಿತು. ನನ್ನಯ್ಯನ ನಂತರದ ಕವಿಗಳು ವೈದಿಕ ಧರ್ಮೋದ್ಧರಣಕ್ಕೆ ದೇಶಭಾಷೆಯಲ್ಲಿ ರಚನೆಗಳನ್ನು ರಚಿಸತೊಡಗಿದರು. ನನ್ನಯ್ಯನು "ಕೃಷ್ಣದ್ವೈಪಾಯನ ಮುನಿವೃಷಭಾಭಿಹಿತ

ಮಹಾಭಾರತಬದ್ಧ ನಿರೂಪಿತಾರ್ಥಮೇರ್ಪಡನ್" [= ಕೃಷ್ಣದ್ವೈಪಾಯನೆಂಬ ಮುನಿವೃಷಭನು ರಚಿಸಿರುವ ಮಹಾಭಾರತ ಕಥೆಗೆ ಬದ್ಧನಾಗಿ ನಾನು ನನ್ನ ಮಹಾಭಾರತ ಕಥಾರ್ಥವನ್ನು ನಿರೂಪಿಸುತ್ತೇನೆ] ಎಂಬುದಾಗಿ ಹೇಳಿ ಮಹಾಭಾರತವನ್ನು ರಚಿಸಿದ ನಂತರ ಆ ಕಾಲಕ್ಕೆ ರಚಿಸಲ್ಪಟ್ಟ ಜೈನಕೃತಿಗಳು ಹಿಂದೆ ಬಿದ್ದವು. ಕವಿಜನಾಶ್ರಯಮು ಲಕ್ಷಣ ಗ್ರಂಥವಾದುದರಿಂದ ಉಳಿಯುವಂತಾಯಿತು.

ಜೈನಧರ್ಮದ ಪ್ರಭಾವ ಯಾವಾಗ ತಗ್ಗಿತ್ತೋ ಆಗಲೇ ಈ ಕೃತಿಯಲ್ಲಿನ ಪಾಠಗಳನ್ನು ಇಷ್ಟಬಂದಂತೆ ಮಾರ್ಪಾಟು ಮಾಡುವ ಪ್ರಕ್ರಿಯೆ ನಡೆಯಿತು. ಅಷ್ಟೇ ಅಲ್ಲದೆ ಹದಿನಾಲ್ಕನೆಯ ಶತಮಾನದ ನಂತರ ಆ ವೇಳೆಗೆ ಆಗಿಹೋಗಿದ್ದ ವರ್ಣರಂಜಿತ ವ್ಯಕ್ತಿತ್ವವನ್ನು ಹೊಂದಿದ್ದ ಭೀಮಕವಿಗೆ 'ಭೀಮನ' ಎನ್ನುವ ಹೆಸರಿನ ಸಾಮ್ಯತೆಯ ಮೇಲೆ ಕವಿಜನಾಶ್ರಯದ ಕರ್ತೃತ್ವವನ್ನು ಜೋಡಿಸಿ ಅದಕ್ಕೆ ಹೊಂದುವಂತೆ 'ಭೀಮನ' ಎಂದು ಹೇಳುವ ಪದ್ಯಗಳನ್ನು ಕೂಡ ಮಾರ್ಪಡಿಸಿದರು.

ಭೀಮನ ಕರ್ತೃತ್ವವನ್ನು ತಿಳಿಸುವ ಆರು ಪದ್ಯಗಳ ರಚನೆ, ಶೈಲಿ, ಭಾಷೆ, ಆ ಗ್ರಂಥ ರಚನೆಯ ಕಾಲದ ಭಾಷೆಗೆ ಸರಿ ಹೊಂದುತ್ತದೆಯೇ ಎನ್ನುವ ಪ್ರಶ್ನೆ ಏಳಬಹುದು. ಜೈನನಾದ ಭೀಮನಿಂದ ಶೈವನಾದ ಭೀಮನನಿಗೆ ಕರ್ತೃತ್ವ ಬದಲಾಯಿಸುವ ಸಮಯದಲ್ಲಿ ನಾನಾ ರೀತಿಯಾಗಿ ಪಾಠಗಳನ್ನು ಮಾರ್ಪಡಿಸುವ ಪ್ರಯತ್ನ ನಡೆದಿದೆ. ಮಾರ್ಪಾಟು ಹೊಂದಿರುವ ಪಾಠ ಕವಿಯ ಮೂಲಪಾಠಕ್ಕೆ ದೂರವಾಗುವುದು ಇದರಿಂದ ಸಹಜವೇ ಆಗಿದೆ. ಆದರೂ ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಮೂಲ ಪಾಠವನ್ನು ಮತ್ತೆ ಪಡೆಯಬಹುದು. 'ನಿನುನೀವೆ . . . . .' ಎಂಬ ಪದ್ಯದಲ್ಲಿನ 'ಛಂದಂಬುನು ಗನಕ ಕವಿತ ಚೆಪ್ಪಿನ ವಿನವೇ ಲಚ್ಚನಮುವಾಡು ವೆಂಗಲಿ ರೇಚಾ' ಎನ್ನುವ ಸಾಲನ್ನು 'ಛಂದಂಬುನು ಗನಕ ಕವಿತ ಚೆಪ್ಪಿನ ವಿನವೇ ತಕ್ಷಣಮುವಾಡು ವೆಂಗಲಿ ರೇಚಾ' ಎಂದು ಓದಿಕೊಳ್ಳಬೇಕು. ಮಿಕ್ಕ ಪದ್ಯಗಳಿಗೆ ಈ ಮೊದಲೇ ಕೆಲವು ತಿದ್ದುಪಾಡುಗಳನ್ನು ಸೂಚಿಸಲಾಗಿದೆ. ಅನೇಕ ರೀತಿಯ ಮಾರ್ಪಾಡುಗಳಿಗೆ ಗುರಿಯಾದ ಪಾಠಗಳನ್ನು ಆಧಾರವಾಗಿಟ್ಟುಕೊಂಡು ಆ ಪದ್ಯಗಳೇ ಪ್ರಕ್ಷಿಪ್ತಗಳೆಂದು ಹೇಳುವುದು ಸರಿಯಾದ ಕಾರಣವಲ್ಲ. ಗ್ರಂಥಸಂಪಾದನ ಶಾಸ್ತ್ರದ ತತ್ತ್ವಗಳಂತೆ ನೋಡಿದರೆ ಇಂತಹ ಆಲೋಚನೆ ಕೂಡ ತಪ್ಪೇ ಆಗುತ್ತದೆ.

ಕವಿಜನಾಶ್ರಯವನ್ನು ಕ್ರಿ.ಶ. ೧೯೫೧ ರಲ್ಲಿ ಪುನರ್ ಮುದ್ರಿಸಿದ ಶ್ರೀ ನಿಡದವೋಲು ವೆಂಕಟರಾವು ಅವರು ತಮ್ಮ ಉಪೋದ್ಘಾತದಲ್ಲಿ (ಟಿಪ್ಪಣಿಗಳು, ಪುಟ ೩೮) ಇದು ಕರ್ನಾಟ ಭಾಷೆಯಲ್ಲಿ ನಾಗವರ್ಮನಿಂದ ಕ್ರಿ.ಶ. ೯೯೦ರ ಸುಮಾರಿನಲ್ಲಿ ರಚಿತವಾದ ಛಂದೋಂಬುಧಿಯನ್ನು ಅನುಸರಿಸಿ ರಚಿತವಾಗಿದೆ ಎಂದು ಹೇಳಿರುವ ಮಾತು ಅಂಗೀಕಾರಾರ್ಹವಲ್ಲ[೯]. ಕವಿಜನಾಶ್ರಯದ ಕರ್ತೃ ಛಂದೋಂಬುಧಿಯನ್ನು ಮಾತ್ರವೇ ಅನುಸರಿಸಿದ್ದರೆ ಕೇವಲ ಛಂದಸ್ಸನ್ನು ಮಾತ್ರವೇ ಹೇಳಿರುತ್ತಿದ್ದ. ಆದರೆ ಕವಿರಾಜ ಮಾರ್ಗದಲ್ಲಿರುವಂತೆ ಕಾವ್ಯಲಕ್ಷಣ ಮತ್ತು ದೋಷಾಧಿಕಾರವನ್ನು ಕೂಡ ಹೇಳಿದ್ದಾನೆ.

ಆದ ಕಾರಣ ಈ ಮೂವರೂ ಸ್ಮರಿಸಿರುವ ಬೇರೊಬ್ಬ ಕವಿ ಇವರಿಗೆ ಮಾರ್ಗದರ್ಶಕನಾಗಿರಬೇಕು. ಆತನೇ ಜಯದೇವ. ನಾಗವರ್ಮ, ಶ್ರೀವಿಜಯ ಇಬ್ಬರೂ ಜಯದೇವನನ್ನು ಸ್ಮರಿಸಿದ್ದಾರೆ[೨೦].

ಜಯದೇವಾದ್ಯರ ಛಂದೋ
ನ್ವಯ ಪ್ರಯೋಗತರಮಾದುವಂ ಪೇಟ್ದಿಂ ನಿ
ರ್ಣಯಮಾಗಿರಲಿಂ ಷಟ್ಪ್ರ
ತ್ಯಯಮುಂ ಚೆಲ್ವಾಗೆ ಪೇಟ್ವೆನಂಬುಜವದನೇ

–[ಛಂದೋಂಬುಧಿ ೬–೧]

ಜಯದೇವಾದಿಚ್ಛಂದೋ
ನಯಮುನ ಸಂಕ್ಷಿಪ್ತರೂಪುನಂ ಜೆಲುವಗ ಮ
ಲ್ಲಿಯ ರೇಚನ ಸುಕವಿ ಜನಾ
ಶ್ರಯುಡಿ ಛಂದಂಬು ಚೆಪ್ಪೆಜನುಲಕುನೋನರನ್

ಇಲ್ಲಿ ಎರಡಕ್ಕೂ ಸಾಮ್ಯವಿದೆ. ಹಾಗೆಯೇ ದೋಷಾಧಿಕಾರ, ಕಾವ್ಯಲಕ್ಷಣವನ್ನು ಹೇಳುವುದು, ಬೇರೊಬ್ಬರ ಹೆಸರಿನಲ್ಲಿ ಗ್ರಂಥ ರಚನೆ ಮಾಡಿರುವುದು ಇವುಗಳು ಕವಿರಾಜಮಾರ್ಗದೊಂದಿಗೆ ಹೋಲುತ್ತವೆ. ಕವಿಜನಾಶ್ರಯದಲ್ಲಿ ರಗಳೆಗಳ ಪ್ರಸ್ತಾಪವಿಲ್ಲ. ಕವಿರಾಜಮಾರ್ಗದಲ್ಲಿಯೂ ಇಲ್ಲ. ಆದುದರಿಂದ ಈ ಕವಿ ಕವಿರಾಜಮಾರ್ಗವನ್ನೇ ಹೆಚ್ಚಾಗಿ ಅನುಸರಿಸಿದ್ದಾನೆಂದು ಹೇಳಬಹುದು. ನಾಗವರ್ಮನ ಛಂದೋಂಬುಧಿಯೊಡನೆ ಹೋಲಿಕೆಗಳಿರಲು ಕಾರಣ ಜಯದೇವನನ್ನು ಅನುಸರಿಸಿರುವುದೇ ಆಗಿದೆ[೨೧].

ತೆಲುಗಿನಲ್ಲಿ ಜೈನ ಸಂಪ್ರದಾಯಗಳನ್ನು ಹೇಳುವ ಗ್ರಂಥಗಳಲ್ಲಿ ಇದು ಒಂದು ಎನ್ನುವ ಅಭಿಪ್ರಾಯ ಸರಿಯಲ್ಲ. ಈ ಗ್ರಂಥದಲ್ಲಿ ಜೈನ ಸಂಪ್ರದಾಯಗಳೆಲ್ಲಿಯೂ ಹೇಳಿರುವುದಿಲ್ಲ. ಒಂದು ಧರ್ಮವನ್ನು ಪ್ರಚಾರ ಮಾಡುವುದು ಈ ಗ್ರಂಥದ ಉದ್ದೇಶವಂತೂ ಅಲ್ಲ. ಧರ್ಮಪ್ರಚಾರ ಲಕ್ಷಣಗ್ರಂಥಗಳ ಮೂಲಕ ನಡೆಯುವುದು ಸರಿಯಲ್ಲ. ಆದರೂ ಕಾವ್ಯತತ್ತ್ವವು ಧರ್ಮದೊಂದಿಗೆ ಬೆಸೆದುಕೊಂಡಿರುವುದಲ್ಲ. ಛಂದಸ್ಸುಗಳಲ್ಲಿ ಜೈನಛಂದಸ್ಸು, ವೈದಿಕ ಛಂದಸ್ಸು ಎಂಬ ಹೆಸರುಗಳುಳ್ಳವು ಇಲ್ಲ.

ಕವಿಜಿಹ್ವಾಬಂಧನದ ಕರ್ತೃ ಈಶ್ವರಕವಿ (ಕ್ರಿ.ಶ. ೧೫೦೦) ತಾನು ತೆಲುಗು ಛಂದೋಗ್ರಂಥವನ್ನು ಆಧಾರವಾಗಿ ಇಟ್ಟುಕೊಂಡು ತೆಲುಗು ವಡಿಗಳನ್ನು ಕುರಿತು ಹೇಳಿರುತ್ತಾನೆ[೨೨]. ಈತ ಕವಿಜನಾಶ್ರಯದಲ್ಲಿರುವಂತೆ ವಡಿಗಳನ್ನು ವಿಭಜಿಸಿದ್ದಾನೆ. ಸಂಯುಕ್ತಾಕ್ಷರ ಯತಿಯನ್ನು ಮಾತ್ರ ಹೆಚ್ಚಾಗಿ ಹೇಳಿದ್ದಾನೆ. ಆತನ ಕಾಲಕ್ಕೆ ಬಹುಶಃ ಸಂಯುಕ್ತಾಕ್ಷರ ಯತಿ ಪ್ರಚಾರಕ್ಕೆ ಬಂದುದಾಗಿರಬೇಕು. ಹದಿನೈದನೆಯ ಶತಮಾನದ ಅನಂತನು ಸಂಯುಕ್ತ ಯತಿಯನ್ನು ಹೇಳಿರುವುದು ಇದಕ್ಕೆ ನಿದರ್ಶನ. ಸಿದ್ಧಸಾಧ್ಯ ಸಂಯೋಗಗಳಲ್ಲಿ ಸಿದ್ಧಸಂಯೋಗದಲ್ಲಿ ಪ್ರಥಮಾಕ್ಷರಕ್ಕೆ, ಸಾಧ್ಯಸಂಯೋಗದಲ್ಲಿ

ಎರಡನೆಯ ಭಾಗದಲ್ಲಿನ ಮೊದಲ ಅಕ್ಷರಕ್ಕೆ ವಡಿಯನ್ನು ಕೂರಿಸುತ್ತಿದ್ದುದರಿಂದ ಆಯಾ ಸ್ಥಾನದಲ್ಲಿ ಅವು ಸರನವಡಿಗೋ, ಎಕ್ಕಡಿವಡಿಗೋ, ವರ್ಗವಡಿಗೋ ಸಲ್ಲುತ್ತಿದ್ದುದರಿಂದ ಪ್ರತ್ಯೇಕ ವಾಗಿ ಸಂಯುಕ್ತಾಕ್ಷರ ವಡಿಯನ್ನು ಹೇಳಬೇಕಾದ ಅಗತ್ಯವಿಲ್ಲವಾಯಿತು. ಆದ್ದರಿಂದಲೇ ಕವಿಜನಾಶ್ರಯಕಾರ ಇವನ್ನು ಹೇಳಲಿಲ್ಲ. ಕಾಲಕ್ರಮದಲ್ಲಿ ಈ ವಡಿಯನ್ನು [ಬಳಸುವಾಗ] ಕೆಲವು ಕಡೆಗಳಲ್ಲಿ ನಿಯಮವನ್ನು ತಪ್ಪಾಗಿ ಹೇಳಿದ ಕಾರಣ ಅನಂತ ಮೊದಲಾದ ವರು ಇದನ್ನು ಪ್ರತ್ಯೇಕವಾಗಿ ಹೇಳುವಂತಾಯಿತು.

ನಮ್ಮ ಈ ಪ್ರಯತ್ನವು ಕೇವಲ ಪ್ರಾಥಮಿಕ ಹಂತವಷ್ಟೇ. ಕವಿಜನಾಶ್ರಯವನ್ನು ಇನ್ನೂ ಸೂಕ್ಷ್ಮವಾಗಿ, ಆಳವಾಗಿ ಪರಿಶೀಲಿಸ ಬೇಕಾದ ಅಗತ್ಯ ಎಷ್ಟೋ ಇದೆ[೨೩]. ಕವಿಜನಾಶ್ರಯವನ್ನು ವಿಶ್ಲೇಷಿಸುವುದು ಎಂದರೆ ಅದು ಒಂದು ರೀತಿಯಲ್ಲಿ ಒಟ್ಟಾರೆ ತೆಲುಗು ಸಾಹಿತ್ಯವನ್ನೇ ವಿಶ್ಲೇಷಿಸುವಂತಾಗುತ್ತದೆ ಎಂಬುದು ನಿಜ. ಕವಿಜನಾಶ್ರಯವನ್ನು ವಿಶ್ಲೇಷಿಸುವುದು ಅಥವಾ ಅರ್ಥಮಾಡಿಕೊಳ್ಳುವ ಮೂಲಕ ಪದ್ಯವಿದ್ಯೆಗೆ ಆದ್ಯನಾದ ನನ್ನಯ್ಯನ ಮೇಲ್ಪಂಕ್ತಿ ಏನು ಎಂಬುದನ್ನು ತಿಳಿದುಕೊಳ್ಳಬಹುದು. ಇದೇ ರೀತಿಯಲ್ಲಿ ಯಾವ ಕವಿಯನ್ನಾದರೂ ಅರ್ಥಮಾಡಿಕೊಳ್ಳಬೇಕಾದರೆ, ಆ ಕವಿಗೆ ಪೂರ್ವದಲ್ಲಿ ಕಂಡುಬರುವ ಕಾವ್ಯಸಂಪ್ರದಾಯಗಳೇನು ಎಂಬುದನ್ನು ತಿಳಿದುಕೊಂಡರೆ ಮಾತ್ರ ಆ ಕವಿಯ ಶ್ರೇಷ್ಠತೆ ಏನು ಎನ್ನುವುದು ತಿಳಿದುಬರಲು ಸಾಧ್ಯ. ಒಬ್ಬ ಕವಿಯ ನಂತರ ರಚಿತವಾದ ಲಕ್ಷಣ ಗ್ರಂಥಗಳ ಆಧಾರದಿಂದ ಹಿಂದಿನ ಕವಿಯನ್ನು, ಆತನ ಕಾವ್ಯವನ್ನು ನೋಡುವುದು ಸ್ವಲ್ಪಮಟ್ಟಿಗೆ ಅವೈಜ್ಞಾನಿಕ ಎನ್ನಿಸುತ್ತದೆ. ಈ ದಿಸೆಯಲ್ಲಿ ಆಲೋಚಿಸಿ ಸಂಯುಕ್ತಾಕ್ಷರ ವಡಿಯ ಇತಿಹಾಸವನ್ನು ಪ್ರತ್ಯೇಕ ಸಂಪ್ರಬಂಧವಾಗಿ ಬರೆಯುವ ಉದ್ದೇಶ ನಮ್ಮದಾಗಿದೆ[೨೪].

ಪರಿಶಿಷ್ಟ

ಕವಿಜನಾಶ್ರಯಮು ಕೃತಿಯನ್ನು ಕುರಿತ ವಿಷಯ[೨೫]

ಭಾರತಿ ಪತ್ರಿಕೆಯ ೧೯೮೮ರ ಜುಲೈ-ಅಕ್ಟೋಬರ್ ಸಂಚಿಕೆಯಲ್ಲಿ ನಾವು ಕವಿಜನಾಶ್ರಯವನ್ನು ಕುರಿತು ಸ್ವಲ್ಪಮಟ್ಟಿಗೆ ಚರ್ಚಿಸಿದ್ದೇವೆ. ಆನಂತರ ಪತ್ರಿಕೆಯ ಮುಖಾಂತರವಲ್ಲದೆ, ವ್ಯಕ್ತಿಗತವಾಗಿ, ಲೇಖನಗಳ ಮುಖಾಂತರವೂ ಚರ್ಚೆಯನ್ನು ನಡೆಸಲಾಗಿದೆ. ಈ ಚರ್ಚೆಗಳ ಸಾರಾಂಶವನ್ನು ಭಾರತಿ ಪತ್ರಿಕೆಯ ಓದುಗರಿಗೆ ನೀಡ ಬೇಕೆಂಬ ಅಭಿಪ್ರಾಯದಿಂದ ಈ ಬರಹವನ್ನು ಸಿದ್ಧಪಡಿಸಲಾಗಿದೆ. ಸಾಹಿತ್ಯವಿಮರ್ಶೆಯಲ್ಲಿ ವ್ಯಕ್ತಿಗಳಿಗಿಂತ ವಿಷಯವೇ ಮುಖ್ಯವೆಂದು, ವಿಮರ್ಶಕರ ದೃಷ್ಟಿ ವ್ಯಕ್ತಿಗಳ ಮೇಲೆ ಕೇಂದ್ರೀಕೃತವಾಗದೆ ವಿಷಯದ ಮೇಲೆ ಮಾತ್ರ ಇರಬೇಕೆಂದು ವಿನಂತಿಸುತ್ತಾ ನಾವು ಈ ನೂತನ ಮಾರ್ಗವನ್ನು ಅವಲಂಬಿಸುತ್ತಿದ್ದೇವೆ. ಭಾರತಿ ಪತ್ರಿಕೆಯ ಓದುಗರು ನಮ್ಮ ಈ ಪ್ರಯತ್ನವನ್ನು ಕಂಡು ಸಂತೋಷಿಸುತ್ತಾರೆಂದು ಆಶಿಸುತ್ತೇವೆ.

ಕವಿಜನಾಶ್ರಯವನ್ನು ಕುರಿತು ನಮಗಿರುವ ನಿಶ್ಚಿತಾಭಿಪ್ರಾಯಗಳು ಕೆಳಗಿನಂತಿವೆ.

೧. ಕವಿಜನಾಶ್ರಯವು ತೆಲುಗು ಭಾಷೆಯಲ್ಲಿ ರಚಿತವಾಗಿರುವ ಮೊದಲ ಗ್ರಂಥ. ಇದು ನನ್ನಯ್ಯನ ಭಾರತಕ್ಕಿಂತ ಮೊದಲೇ ರಚಿತವಾದುದಾಗಿದೆ.

೨. ಕವಿಜನಾಶ್ರಯದ ಕರ್ತೃ ಜೈನ. ಅಂದಿನ ಕನ್ನಡ–ತೆಲುಗು ಸಾಹಿತ್ಯ ಚಕ್ರವರ್ತಿಗಳ ನೆಲೆವೀಡಾದ ಕರೀಂನಗರ ಜಿಲ್ಲೆಯಲ್ಲಿನ ವೇಮುಲವಾಡ ಪ್ರಾಂತದವನು. ಆ ಗ್ರಾಮದ ನಿವಾಸಿಯೂ ಆಗಿರಬಹುದು.

೩. 'ಘನುಡನ್ ವೇಮುಲವಾಡ ವಂಶಜುಡ ದ್ರಾಕ್ಷಾರಾಮ ಭೀಮೇಶನಂದನುಡನ್' ಎಂದು ಹೇಳಿಕೊಂಡಿರುವ ಶಾಪಾನುಗ್ರಹ ಸಮರ್ಥನೂ ಶೈವನೂ ಆದ ೧೨ ನೆಯ ಶತಮಾನದ ವೇಮುಲವಾಡ ಭೀಮಕವಿಗೂ ಕವಿಜನಾಶ್ರಯಕ್ಕೂ ಸಂಬಂಧವಿಲ್ಲ.

೪. ಕವಿಜನಾಶ್ರಯದಲ್ಲಿ ಅನೇಕ ಪ್ರಕ್ಷಿಪ್ತಗಳಿವೆ. ಇದರಲ್ಲಿ ಸಂಯುಕ್ತಾಕ್ಷರ ಯತಿಯನ್ನು ಕುರಿತ ಪದ್ಯವೂ ಒಂದಾಗಿದೆ.

೫. 'ಅರಯಗ ಬ್ರಾಸಂ ಬೊಕ್ಕಟಿ, ಚರಣಂಬುಲ ವಳ್ಳು ವೇಜೆ' ಎಂದು (೧–೬೧) ಹೇಳಿರುವುದನ್ನು ಗಮನಿಸಿ, ಕವಿಜನಾಶ್ರಯದಲ್ಲಿ ಪ್ರಾಸವಿಶೇಷಗಳು ಹೇಳಿಲ್ಲವೆಂದು, ಮುದ್ರಿತ ಪ್ರತಿಗಳಲ್ಲಿ ಆಯಾ ವಿಶೇಷಗಳೊಡನೆ ಕಾಣಸಿಗುವ ಪದ್ಯಗಳು ಕೇವಲ ೩, ೪ ಹಸ್ತಪ್ರತಿಗಳಲ್ಲಿ (ಒಟ್ಟು ೧೦ ಹಸ್ತಪ್ರತಿಗಳ ಸಮೂಹದಲ್ಲಿ ೩, ೪ ಹಸ್ತಪ್ರತಿಗಳಲ್ಲಿ ಮಾತ್ರ) ಮಾತ್ರವೇ ಕಂಡುಬರುವ ಕಾರಣ ಇವುಗಳು ಪ್ರಕ್ಷಿಪ್ತಗಳೆಂದು ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ೧–೮೮ ರ ಪದ್ಯದಲ್ಲಿ ಭೀಮತನೂಜಾ ಎಂಬ ಅಸಂಬದ್ಧವಾದ, ಕೃತಿಕರ್ತೃವಿನ ಸಂಬೋಧನೆಯನ್ನು ಉಳ್ಳ ಪಾಠವು ಇದಕ್ಕೆ ಪೋಷಕವೆಂದು ನಮ್ಮ ಅಭಿಪ್ರಾಯ.

೬. ಕವಿಜನಾಶ್ರಯದಲ್ಲಿ ಈಗ ಕಾಣಸಿಗುವ ಅನೇಕ ಪದ್ಯಪಾದಗಳ ಪಾಠ ಕೆಟ್ಟಿರುವ ಸಾಧ್ಯತೆ ಇದೆ. ಉದಾ : ೨–೧೩೧ ಪದ್ಯದಲ್ಲಿ 'ಪುರಾರಾತಿ ಮೂರ್ತಿ' ಎಂಬ ಸಂಬೋಧನೆ ಇದೆ. ಇದು ಶೈವ ಸಂಬೋಧನೆ. ಕವಿಜನಾಶ್ರಯದ ಕರ್ತೃ ಮತ್ತು ಕವಿಜನಾಶ್ರಯದ ಒಡೆಯ ಜೈನರಾದ ಕಾರಣ ಇದು ಅಸಂಗತವಾದ ಸಂಬೋಧನೆಯಾಗಿದೆ.

ಇನ್ನು ನಮ್ಮ ಚರ್ಚೆಯಲ್ಲಿ ನಿರ್ಣಯಗಳಿಗೆ ಬರಲಾಗದೆ ಇರುವ ವಿಷಯಗಳು ಇಂತಿವೆ.

೧. ಕವಿಜನಾಶ್ರಯವು ರೇಚನನ ಹೆಸರಿನಲ್ಲಿ ಪ್ರಸಿದ್ಧಿಗೊಳಿಸಿರುವ ಕೃತಿ ಎಂದು ಶೇಷಶಾಸ್ತ್ರೀ, ಸದಾನಂದಂ ಅವರ ಅಭಿಪ್ರಾಯ. ತೆಲುಗುನಾಡಿನಲ್ಲಿ ಬೇರೊಬ್ಬರ ಹೆಸರಿನಲ್ಲಿ ಕೃತಿಯನ್ನು ಪ್ರಸಿದ್ಧಿಗೊಳಿಸುವುದು ಬಹುಕಾಲದಿಂದಲೂ ಬಳಕೆಯಲ್ಲಿರುವ ವಿಷಯವೇ ಆಗಿದೆ. ಪೆದಕೋಮಟಿ ವೇಮಾರೆಡ್ಡಿಯ ಹೆಸರಿನಲ್ಲಿ ಶ್ರೀನಾಥಕವಿಯು ಅಮರುಕ ಕೃತಿಗೆ ವ್ಯಾಖ್ಯಾನವನ್ನು ರಚಿಸಿದ್ದಾನೆ. ಶ್ರೀನಾಥನೇ ವಲ್ಲಭರಾಯನ ಹೆಸರಿನಲ್ಲಿ ಕ್ರೀಡಾಭಿರಾಮ ಕಾವ್ಯವನ್ನು ರಚಿಸಿದಂತೆ, ಮಲ್ಲಿನಾಥನ ಹೆಸರಿನಲ್ಲಿ ಆತನ ಅಣ್ಣ ಪೆದ್ದಿಭಟ್ಟನು ಅನೇಕ ರಚನೆಗಳನ್ನು ಮಾಡಿದಂತೆ ಪ್ರತೀತಿಗಳಿವೆಯಲ್ಲವೆ ! ಲಕ್ಷ್ಮೀಧರನೆಂಬ

ಕವಿ ಗೀತಗೋವಿಂದ ವ್ಯಾಖ್ಯೆಯನ್ನು ತಿರುಮಲ ದೇವರಾಯನ ಹೆಸರಿನಲ್ಲಿ ಪ್ರಚುರಗೊಳಿಸಿದ್ದಾನೆ. ಆಧುನಿಕರಲ್ಲಿಯೂ ಕೂಡ ಇದೇ ಮಾರ್ಗವು ಕಂಡುಬರುತ್ತಲೇ ಇದೆ. ಮಲ್ಲಾದಿ ವಸುಂಧರಾ ಅವರ ಹೆಸರಿನಲ್ಲಿರುವ 'ರಾಜಶಿಲ್ಪಿ' ಕಾದಂಬರಿಯು ವಿಶ್ವನಾಥ ಅವರ ಸೃಷ್ಟಿ ಎಂಬುದಾಗಿ ಪ್ರತೀತಿಯಿಲ್ಲವೆ ! ಈ ಪದ್ಧತಿಯಲ್ಲಿಯೇ ಕವಿಜನಾಶ್ರಯವು ಕೂಡ ರಚಿತವಾಗಿರಬಹುದು. ಈ ರೀತಿ ಪ್ರಸಿದ್ಧಿಗೊಳಿಸಿದವನು 'ಆದಿ ಭೀಮನ ಕವಿ'. ಈ ಕಾರಣಕ್ಕಾಗಿಯೇ ಅನೇಕರು ಈ ಗ್ರಂಥವನ್ನು 'ಆದಿ ಭೀಮನ ಛಂದಮು' ಎಂದೇ ಹೆಸರಿಸಿದ್ದಾರೆ.

ಆದರೆ ಕವಿಜನಾಶ್ರಯದಲ್ಲಿರುವ ಕೆಳಗೆ ನೀಡಿರುವ ಪದ್ಯಗಳ ಪಾದಗಳು ಭೀಮನ ಕರ್ತೃತ್ವಕ್ಕೆ ಪ್ರತಿಬಂಧಕಗಳೆಂದು, ಕವಿಜನಾಶ್ರಯ ಕರ್ತೃ ರೇಚನ ಎನ್ನುವುದಕ್ಕೆ ಸಹಾಯಕಾರಿಗಳೆಂದು ರವಿಕುಮಾರ್ ಅವರ ಅಭಿಪ್ರಾಯ.

ದ್ವಿಪದ ಪೋಲುಪೊಂದ ರೇಚಡಿಷ್ಟಮುನ ನೊನರಿಂಚುನ್ ॥ ೩-೧೦ ॥
ರೇಚಡನ ಪದ್ಯು ಡಕ್ಕಿಲಿ ಪ್ರಾಸ ಸೀಸಮನುಚು ಬರಗ ಜೆಪ್ಪೆ ॥ ೩-೧೬ ॥
ಶ್ರೀದೇವೀ ಪತಿ ರೇಚಡು . . . . . . ತೆಲಿಯಜೆಪ್ಪು ॥ ೫-೨೭ ॥

೨. ಭೀಮಕವಿಯ ರಚನೆಯೆಂದು ಹೇಳುವ ಕವಿಜನಾಶ್ರಯದ ಹಸ್ತಪ್ರತಿಗಳಲ್ಲಿ ಒಂದರಲ್ಲಿ ಮಾತ್ರವೇ ಇರುವ ಆರು ಅವತಾರಿಕಾ ಪದ್ಯಗಳನ್ನು ಗ್ರಂಥದೊಳಗಿರುವ ಇತರ ಪದ್ಯಗಳೊಂದಿಗೆ ಹೋಲಿಸಿದರೆ ನೀರಸವಾಗಿ ಕಾಣಿಸುತ್ತವೆಯಾದರೂ ಅವತಾರಿಕಾ ಪದ್ಯಗಳಲ್ಲಿ ಪ್ರಕ್ಷಿಪ್ತಗಳು ಇರಲಾರದೆಂದು ಪಾಠಗಳು ಕೆಟ್ಟಿರುವ ಸಾಧ್ಯತೆ ಇದೆಯೆಂದೂ ಹೇಳಬಹುದು. ಈ ಕಾರಣವೇ ಕವಿಜನಾಶ್ರಯದ ಕರ್ತೃ 'ಆದಿ ಭೀಮನ' ಎನ್ನುವ ಭಾವನೆಗೆ ಬಲವೊದಗುತ್ತದೆ ಎಂದು ಶೇಷಶಾಸ್ತ್ರೀ ಮತ್ತು ಜೆ. ಸದಾನಂದಂ ಅವರ ಅಭಿಪ್ರಾಯ.

ಈ ಆರು ಪದ್ಯಗಳಲ್ಲಿ ರೇಚನನ ಪ್ರಸ್ತಾಪವಿದೆ. ಮೂರು ಕಡೆಗಳಲ್ಲಿ ರೇಚಾ ! ಎನ್ನುವ ಸಂಬೋಧನೆ ಇದೆ. ಇದೇ ಸಂಬೋಧನೆ ಗ್ರಂಥದ ಇತರ ಭಾಗಗಳಲ್ಲಿ ಐದು ಕಡೆ ಮಾತ್ರವೇ ಇದೆ. ರೇಚಾ ಎನ್ನುವ ಸಂಬೋಧನೆಗೆ ಮೊದಲು ಇರುವ ಪೂರ್ವಪದ ಮಲ್ಲಿಯ ಎಂಬುದಾಗಿದೆ. ಇದರ ಹೊರತು ಬೇರೊಂದು ಪದ ಗ್ರಂಥಭಾಗದಲ್ಲಿ ಕಾಣಸಿಗದು. ಆದರೆ ಈ ಆರು ಪದ್ಯಗಳಲ್ಲಿ ಒಂದು ಕಡೆ 'ಕೋಮಟಿ ರೇಚಾ' ಎಂದು ಕುಲದ ಪ್ರಸ್ತಾವನೆ ಇದೆ. ಗ್ರಂಥಭಾಗದಲ್ಲಿ ಇದನ್ನೇ 'ವಣಿಗ್ವಂಶ ಚೂಡಾಮಣಿ' ಎಂದು ಇರುವಂತೆ ಹೇಳಲಾಗಿದೆ. ರೇಚನ ಎಂದು ಗ್ರಂಥಭಾಗದಲ್ಲಿ ಕರೆದಿರುವುದೇ ಅಲ್ಲದೆ ಇತರ ವಿಶೇಷಣಗಳನ್ನು ಕೂಡ ಹೇಳಲಾಗಿದೆ. ಈ ಆರು ಅವತಾರಿಕಾ ಪದ್ಯಗಳಲ್ಲಿ ಒಂದರಲ್ಲಿ ಕೂಡ ಈ ರೀತಿಯ ಹೆಸರು ಕಂಡುಬರುವುದಿಲ್ಲ. ಆದುದರಿಂದ ಈ ಆರು ಪದ್ಯಗಳ ರಚಯಿತನಗೆ ರೇಚನ ಎಂಬ ಹೆಸರು ಮಾತ್ರವೇ ಪರಿಚಯವಿದ್ದಿತೆಂದು ವ್ಯಕ್ತಿಯ ನೇರ ಪರಿಚಯ ಇರಲಿಲ್ಲವೆಂದು ರವಿಕುಮಾರ್ ಅವರು ಅಭಿಪ್ರಾಯಪಡುತ್ತಾರೆ.

ಕವಿಜನಾಶ್ರಯದ ಕರ್ತೃವು ಕರೀಂನಗರ ಪ್ರಾಂತದವನಾದ ಕಾರಣ, ಆ ಪ್ರಾಂತವು ಆ ಕಾಲದ ಕನ್ನಡ ಕವಿಗಳಿಗೂ ಸಹ ನೆಲೆವೀಡಾದ ಕಾರಣದಿಂದ, ಕವಿಜನಾಶ್ರಯದಲ್ಲಿರುವ ವಿಷಯಗಳನ್ನು ಆ ಕಾಲದ ಕನ್ನಡ ಛಂದೋಗ್ರಂಥಗಳೊಂದಿಗೆ ಹೋಲಿಸಿ ನೋಡಬೇಕೆಂದೂ ಕವಿಜನಾಶ್ರಯದ ಲಭ್ಯ ಹಸ್ತಪ್ರತಿಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ಪರಿಶೀಲಿಸಿ ಅದನ್ನು ಪರಿಷ್ಕರಿಸಬೇಕೆಂಬುದು ಪ್ರಕೃತ ಲೇಖಕರ ಆಕಾಂಕ್ಷೆಯಾಗಿದೆ. ಆಗಲೇ ಕವಿಜನಾಶ್ರಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಒಂದು ಪರಿಹಾರ ಲಭಿಸುತ್ತದೆ ಎಂಬುದು ನಮ್ಮ ವಿಶ್ವಾಸವಾಗಿದೆ.

ಅಡಿಟಿಪ್ಪಣಿಗಳು

೧. ಈ ಸಂಪ್ರಬಂಧವನ್ನು ಸಿದ್ಧಪಡಿಸುವಲ್ಲಿ ನಮಗೆ ನೆರವು ನೀಡಿದ ಡಾ. ಟಿ. ಕೋಟೇಶ್ವರರಾವು, ಶ್ರೀ ಗಡಿಯಾರಂ ರಾಮಕೃಷ್ಣಶರ್ಮ, ಡಾ. ಎಂ. ಚಿದಾನಂದಮೂರ್ತಿ, ಡಾ. ಕೋರ್ಲಪಾಟಿ ಶ್ರೀರಾಮಮೂರ್ತಿ, ಡಾ. ಪಿ. ಎಲ್. ಶ್ರೀನಿವಾಸರೆಡ್ಡಿ ಅವರುಗಳಿಗೆ ನಮ್ಮ ಕೃತಜ್ಞತೆಗಳು.

ಈ ಸಂಪ್ರಬಂಧವನ್ನು ಓದಿ ಪತ್ರಿಕೆಯ ಮೂಲಕವಾಗಲಿ, ನಮ್ಮೊಡನೆ ನೇರವಾಗಿ ಪತ್ರಗಳ ಮೂಲಕವಾಗಲಿ ಪರಿಶೋಧನಾಸಕ್ತರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕಾಗಿ ಬಿನ್ನಹ.

[ಈ ಲೇಖನದಲ್ಲಿ ಚೌಕ ಕಂಸಗಳಲ್ಲಿರುವ ಭಾಗವೆಲ್ಲವೂ [ಟಿಪ್ಪಣಿಗಳ ಭಾಗದಲ್ಲಿನದೂ ಸೇರಿ] ಮೂಲ ಲೇಖನದ ವಸ್ತು, ವಿಷಯ, ಆಶಯಕ್ಕೆ ಧಕ್ಕೆಯೊದಗದಂತೆ ಪೂರಕ ಮಾಹಿತಿಯ ದೃಷ್ಟಿಯಿಂದ ಪ್ರಕೃತ ಅನುವಾದಕನ ಸೇರ್ಪಡೆಯಾಗಿರುತ್ತದೆ. ಇದಲ್ಲದೆ ಅನುವಾದಕ ಎಂಬ ಸೂಚನೆಯೊಂದಿಗೆ ಇರುವ ವಿವರವೂ ಪ್ರಕೃತ ಅನುವಾದಕನ ಸೇರ್ಪಡೆಯೇ ಆಗಿದೆ. ಮೂಲ ಲೇಖನದಲ್ಲಿರುವ ಅಡಿಟಿಪ್ಪಣಿಗಳನ್ನು ಯಥಾವತ್ತಾಗಿ ಅನುವಾದಿಸಲಾಗಿದೆ. ಇವುಗಳಿಗೆ ಯಾವುದೇ ಸೂಚನೆಯನ್ನೂ ನೀಡಿಲ್ಲ. ಇಂತಹವು ಮೂಲ ಲೇಖನದ ಭಾಗಗಳೆಂದು ತಿಳಿಯಬೇಕು. ಮೂಲ ಲೇಖನದಲ್ಲಿರುವ ಕೆಲವು ಅಚ್ಚಿನ ತಪ್ಪುಗಳನ್ನು ಮತ್ತು ಇತರ ರೀತಿಯ ಪ್ರಮಾದಗಳನ್ನು ಸಂಬಂಧಿತ ಮೂಲ ಆಕರಗಳನ್ನು ಪರಿಶೀಲಿಸಿ ತಿದ್ದಲಾಗಿದೆ. ಈ ಲೇಖನವನ್ನು ಅನುವಾದಿಸಲು ಮತ್ತು ಪ್ರಕಟಿಸಲು ಅನುಮತಿ ನೀಡಿರುವ ಡಾ. ಆರ್. ಶೇಷಶಾಸ್ತ್ರಿ ಮತ್ತು ಡಾ. ಜಿ. ಸದಾನಂದಂ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮೂಲ ತೆಲುಗು ಲೇಖನವು ಕವಿಜನಾಶ್ರಯಮು ಕರ್ತೃತ್ವಮು: ಪುನಃಪರಿಶೀಲನ ಎಂಬ ಶೀರ್ಷಿಕೆಯಲ್ಲಿ ಭಾರತಿ ಪತ್ರಿಕೆಯಲ್ಲಿ (ಸಂಪುಟ–೬೫, ಸಂಚಿಕೆ–೭, ಜುಲೈ ೧೯೮೮, ಪುಟ ೪೪–೪೯) ಪ್ರಕಟವಾಗಿದೆ. ಈ ಅನುವಾದವನ್ನು ಸಿದ್ಧಪಡಿಸುವಾಗ ಅನೇಕ ರೀತಿಯಲ್ಲಿ ನೆರವು ನೀಡಿರುವ ಡಾ. ಕೆ.ಆರ್. ಗಣೇಶ, ಡಾ. ಆರ್. ಶೇಷಶಾಸ್ತ್ರೀ, ಡಾ. ಆರ್.ವಿ.ಎಸ್. ಸುಂದರಂ, ಶ್ರೀ ವೈದ್ಯಂ ವೆಂಕಟೇಶ್ವರಾಚಾರ್ಯ, ಶ್ರೀ ಕೆ. ನಾಗಭೂಷಣ ರಾವ್ ಮುಂತಾದ ವಿದ್ವಾಂಸರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ]

[ಈ ಲೇಖನದಲ್ಲಿ ಉದಾಹೃತವಾಗಿರುವ ಅನೇಕ ಪದ್ಯಗಳಲ್ಲಿ ಕಂಡುಬರುವ ಅನುಸ್ವಾರದ ಬಗೆಗೆ ಒಂದೆರಡು ಅಂಶಗಳನ್ನು ಹೇಳಬೇಕಾಗಿದೆ. ತೆಲುಗು ಭಾಷೆಯಲ್ಲಿ ಅರ್ಧಾನುಸ್ವಾರವನ್ನು ಬಳಸಲಾಗುತ್ತದೆ. ತೆಲುಗು ಲಿಪಿಯಲ್ಲಿ ಅರ್ಧಾನುಸ್ವಾರವನ್ನು ತೋರಿಸು ವಂತೆ ಕನ್ನಡ ಲಿಪಿಯಲ್ಲಿ ತೋರಿಸುವುದು ಸಾಧ್ಯವಿಲ್ಲ. ಆದ ಕಾರಣ ಪ್ರಕೃತ ಲೇಖನದಲ್ಲಿ ಅನುಸ್ವಾರವನ್ನೇ ಅನಿವಾರ್ಯವಾಗಿ ಬಳಸಲಾಗಿದ್ದು ಂ ಈ ರೀತಿ ಸೂಚಿತವಾದೆಡೆ ಮಾತ್ರ ಅರ್ಧಾನುಸ್ವಾರವನ್ನು ಓದಿಕೊಳ್ಳಬೇಕಾಗಿ ವಿನಂತಿ]–(ಅನುವಾದಕ).

೨. ಈ ಕವಿಜನಾಶ್ರಯವನ್ನು [ಕ್ರಿ.ಶ. ೧೯೧೭ ರಲ್ಲಿ] ಮೊತ್ತಮೊದಲು ಸಂಪಾದಿಸಿ ಪ್ರಕಟಿಸಿದ ಕೀರ್ತಿ ಶ್ರೀ ಜಯಂತಿರಾಮಯ್ಯ ಪಂತುಲು ಅವರಿಗೆ ಸಲ್ಲುತ್ತದೆ. ಈ ಕೃತಿ [=ಶ್ರೀ ಜಯಂತಿರಾಮಯ್ಯ

ಅವರ ಪರಿಷ್ಕರಣ] ಮೂರು ಬಾರಿ ಮುದ್ರಣವಾಗಿದೆ. ಎರಡನೆಯ ಮುದ್ರಣದಲ್ಲಿ [ಕ್ರಿ.ಶ. ೧೯೩೨] "ಕೆಲವು ಮಾರ್ಪಾಟು"ಗಳನ್ನು ಮಾಡಲಾಗಿದೆ.

೨ಅ. [ಈ ಪದ್ಯಗಳು ಇರುವುದು 'ಬ' ಸಂಕೇತದ ಪ್ರತಿಯಲ್ಲಿ. 'ಜ' ಸಂಕೇತದ ಪ್ರತಿಯಲ್ಲಲ್ಲ]

೩. ನಿಡದವೋಲು ವೆಂಕಟರಾವು ಅವರಂತಹ ವಿದ್ವಾಂಸರು ಪರಿಶೋಧನೆಯಲ್ಲಿ ಇಂತಹ ಭಾವಾವೇಶಕ್ಕೆ ಗುರಿಯಾಗಿರುವುದು ನಮಗೆ ಆಶ್ಚರ್ಯಕರವಾಗಿದೆ. ಭಾವಾವೇಶವು ಒಂದೊಂದು ಸಾರಿ ನಾವು ಏನು ಹೇಳುತ್ತಿದ್ದೇವೆ ಎನ್ನುವುದನ್ನು ಮತ್ತು ಹೇಳುತ್ತಿರುವ ಅಭಿಪ್ರಾಯವನ್ನು ಸಮರ್ಥಿಸುವ ತರ್ಕವನ್ನು ತಪ್ಪಿಸುತ್ತದೆ. ನೋಡಿ : ಕವಿಜನಾಶ್ರಯಮು-ನಿಡದವೋಲು ವೆಂಕಟರಾವು, ಪುಟ ೨೭, ಪ್ಯಾರಾ-೧.

೪. [ಮೊದಟಿ ತೆಲುಗು ಗ್ರಂಥ ರಚಯಿತ ಮಲ್ಲಿಯ ರೇಚನ-ಪಿ. ವಿ. ಪರಬ್ರಹ್ಮ ಶಾಸ್ತ್ರಿ, ಭಾರತಿ, ಸಂಪುಟ-೬೩, ಸಂಚಿಕೆ-೫, ಮೇ-೧೯೮೬, ಪುಟ ೬-೧೦ ; ಈ ಲೇಖನದ ಕನ್ನಡ ಭಾವಾನುವಾದವು 'ಜನವಲ್ಲಭನ ಬಗ್ಗೆ ಹೊಸ ಬೆಳಕು' ಎಂಬ ಶೀರ್ಷಿಕೆಯಲ್ಲಿ ಆರ್. ಶೇಷಶಾಸ್ತ್ರೀ ಅವರಿಂದ ಅನುವಾದಿತವಾಗಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿದೆ (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೭೧-೭೨, ಸಂಚಿಕೆ ೨-೧, ಡಿಸೆಂಬರ್ ೧೯೮೬ ಮತ್ತು ಜೂನ್ ೧೯೮೭, ಪುಟ ೪೮-೫೪)]-(ಅನುವಾದಕ)

೫. ಶ್ರೀ ನೃಪತುಂಗದೇವಾನುಮತಮಪ್ಪ ಶ್ರೀವಿಜಯ ಕೃತ ಕವಿರಾಜಮಾರ್ಗಂ-(ಸಂ) ಎಂ. ವಿ. ಸೀತಾರಾಮಯ್ಯ, [ಕರ್ಣಾಟಕ ಸಂಘ, ಸರ್ಕಾರದ ಕಲೆ ಮತ್ತು ವಿಜ್ಞಾನ ಕಾಲೇಜು], ಬೆಂಗಳೂರು-೧೯೬೮, [ಪೀಠಿಕೆ, ಪುಟ xi-xcvii] ; [ಈ ಆವೃತ್ತಿಯ ಜೊತೆಗೆ ಈಚೆಗೆ ಪ್ರಕಟವಾಗಿರುವ ಪರಿಷ್ಕೃತ ಆವೃತ್ತಿಯ ಪೀಠಿಕೆಯನ್ನೂ ಗಮನಸಬಹುದು. ನೋಡಿ : ಶ್ರೀವಿಜಯಪ್ರಭೂತಂ ಕವಿರಾಜಮಾರ್ಗಂ-(ಸಂ) ಟಿ. ವಿ. ವೆಂಕಟಾಚಲ ಶಾಸ್ತ್ರೀ, ತುಮಕೂರು ವಿಶ್ವವಿದ್ಯಾನಲಯ, ತುಮಕೂರು-೨೦೧೧, ಪುಟ ತು-ತು]-(ಅನುವಾದಕ)

೫ಅ. [ಕವಿಜನಾಶ್ರಯ ಬಿರುದಾಂಕಿತನಾದ ಮಲ್ಲಿಯರೇಚನ ಸುಕವಿ ಕವಿಜನಾಶ್ರಯವೆಂಬ ಹೆಸರಿನ ಕೃತಿಯನ್ನು ತೆಲುಗು ಭಾಷೆಯಲ್ಲಿ ಅಪರೂಪವಾಗಿ ರಚಿಸಿದನು ಎಂದು ಈ ಭಾಗಕ್ಕೆ ಅರ್ಥವನ್ನು ಹೇಳಬಹುದೆಂದು ತೋರುತ್ತದೆ. ಆಗ ಪ್ರಥಮಪುರುಷದ ಅನ್ವಯವೇ ಇಲ್ಲಿಗೆ ಹೊಂದುವುದಿಲ್ಲ. ಇದರ ಬಗೆಗೆ ವಿಶ್ಲೇಷಣೆ ಅತ್ಯಗತ್ಯ].

೬ [ಭಟ್ಟಾಕಳಂಕನು ತನ್ನ ಶಬ್ದಾನುಶಾಸನದಲ್ಲಿ 'ನೃಪತುಙ್ಗ ಗ್ರನ್ಥೇ ದ್ರಷ್ಟವ್ಯ ಇತಿ' ಎಂದು ಹೇಳಿದ್ದಾನೆ {ಕರ್ಣಾಟಕ ಶಬ್ದಾನುಶಾಸನಂ-(ಸಂ) ಆರ್. ನರಸಿಂಹಾಚಾರ್ಯ, ಬೆಂಗಳೂರು-೧೯೨೩, ಸೂತ್ರ ೨೮೮ರ ವ್ಯಾಖ್ಯಾನ, ಪುಟ ೨೬೩}. ಕೇಶಿರಾಜನ ಶಬ್ದಮಣಿದರ್ಪಣಕ್ಕೆ ವ್ಯಾಖ್ಯಾನವನ್ನು ರಚಿಸಿರುವ ಅಜ್ಞಾತಕವಿಯೊಬ್ಬ ತನ್ನ ವ್ಯಾಖ್ಯಾನದಲ್ಲಿ 'ನೃಪತುಂಗನ ಪ್ರಯೋಗಂ' ಎಂದೇ ಹೇಳಿದ್ದಾನೆ. ಈ ವ್ಯಾಖ್ಯಾನಕಾರನು ಭಟ್ಟಾಕಳಂಕನಗಿಂತ ಹಿಂದಿನವನೆಂದು ಈ ವ್ಯಾಖ್ಯಾನದ ಸಂಪಾದಕರಾದ ಡಿ. ಕೆ. ಭೀಮಸೇನರಾಯರು ಹೇಳುತ್ತಾರೆ. ಭಟ್ಟಾಕಳಂಕನು ತನ್ನ ಕೃತಿಯನ್ನು ಮುಗಿಸಿದ ಕಾಲ ಕ್ರಿ.ಶ. ೧೬೦೪. ಆದರೆ ಎಂ. ವಿ. ಸೀತಾರಾಮಯ್ಯನವರು ಈ ವ್ಯಾಖ್ಯಾನದಲ್ಲಿ ಭಟ್ಟಾಕಳಂಕನ ಶಬ್ದಾನುಶಾಸನದ ಸೂತ್ರಗಳ ಉದ್ಧೃತಿಯಿರುವುದನ್ನು ತೋರಿಸಿ ಈ ವ್ಯಾಖ್ಯಾನದ ಕಾಲವನ್ನು ಕ್ರಿ.ಶ. ೧೬೦೪ ನಂತರ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಭಟ್ಟಾಕಳಂಕನ ಹೆಸರಿನಲ್ಲಿರುವ ಶಬ್ದಾನುಶಾಸನದ ಕರ್ತೃತ್ವವೇ ಅನೇಕ ಗೊಂದಲ ಗಳಿಂದ ಕೂಡಿದೆ. ಸೂತ್ರ, ವೃತ್ತಿ, ವ್ಯಾಖ್ಯಾನ ಮೂರರ ಕರ್ತೃತ್ವದ ಬಗೆಗೆ ಅನೇಕ ಚರ್ಚೆಗಳಾಗಿವೆ. ಈ ಚರ್ಚೆಗಳ ಫಲಿತವು ಸೂತ್ರ, ವೃತ್ತಿಗಳ ಕರ್ತೃ ಒಬ್ಬನಾದರೆ, ವ್ಯಾಖ್ಯಾನದ ಕರ್ತೃ ಬೇರೊಬ್ಬ ಕವಿ ಎಂಬ ನೆಲೆಗೆ ಬಂದು ಮುಟ್ಟಿದೆ. 'ನೃಪತುಙ್ಗ ಗ್ರನ್ಥೇ ದ್ರಷ್ಟವ್ಯ ಇತಿ' ಎಂದು ಶಬ್ದಾನುಶಾಸನದಲ್ಲಿ ದಾಖಲಾಗಿರುವುದು ವ್ಯಾಖ್ಯಾನ

ಭಾಗದಲ್ಲಿ. ಈ ವ್ಯಾಖ್ಯಾನದ ಕರ್ತೃವಿನ ವಿವರವೇ ಗೊಂದಲಗಳಿಂದ ಕೂಡಿರುವ ಕಾರಣ ಕವಿರಾಜಮಾರ್ಗದ ಕರ್ತೃ ನೃಪತುಂಗ ಎಂದು ಹೇಳುವ ಈ ಹೇಳಿಕೆಯನ್ನು ಪ್ರಮಾಣವಾಗಿ ಸ್ವೀಕರಿಸಲು ಸಾಧ್ಯ ವಾಗುವುದಿಲ್ಲ. ಇದರ ಬಗೆಗಿನ ಹೆಚ್ಚಿನ ವಿಚಾರ–ವಿಮರ್ಶೆಗಳಿಗೆ ನೋಡಿ : ಪ್ರಾಚೀನ ಕನ್ನಡ ವ್ಯಾಕರಣಗಳು–ಎಂ. ವಿ. ಸೀತಾರಾಮಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೧೯೮೮, ಪರಿಷ್ಕೃತ, ದ್ವಿತೀಯ ಮುದ್ರಣ, ಪುಟ ೧೧೧–೧೧೪ ; ೩೦೩–೩೦೪]–(ಅನುವಾದಕ)

೭. [ಪೊನ್ನ ಕವಿಗೆ (ಕ್ರಿ.ಶ. ಸು. ೯೫೦) ಆಶ್ರಯ ನೀಡಿದವರು ಅತ್ತಿಮಬ್ಬೆಯ ತಂದೆ ಮಲ್ಲಪಾರ್ಯ, ಚಿಕ್ಕಪ್ಪ ಪುನ್ನಮಾರ್ಯ. ಇವರಿಬ್ಬರೂ ಪೊನ್ನ ಕವಿಯಿಂದ ಶಾಂತಿಪುರಾಣವನ್ನು ಬರೆಯಿಸಿದ್ದಾರೆ. ಇದಕ್ಕಾಗಿಯೇ ಪೊನ್ನ ಕವಿ ತನ್ನ ಶಾಂತಿಪುರಾಣದಲ್ಲಿ "ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯ ತದನುಜಾತಾಭಿಜಾತ ಸಾರಸ್ವತ ಪುನ್ನಮಾರ್ಯ ಕಾರಿತಮುಮಪ್ಪ" ಎಂದು ಹೇಳಿದ್ದಾನೆ {ಪೊನ್ನಕವಿ ವಿರಚಿತ ಶಾಂತಿಪುರಾಣಂ–(ಸಂ) ಹಂ.ಪ. ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೯೮೨, ಪುಟ ೨೫}. ಮಲ್ಲಪಾರ್ಯನ ಮಗಳೇ ದಾನಚಿಂತಾಮಣಿ ಅತ್ತಿಮಬ್ಬೆ. ಈಕೆ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಬರೆಯಿಸಿ ಪ್ರಚುರಗೊಳಿಸಿದ್ದು ಗಮನಾರ್ಹ ಅಂಶ]–(ಅನುವಾದಕ)

೮. [ವೇಮುಲವಾಡದಲ್ಲಿ ಈಗಿರುವ ರಾಜೇಶ್ವರಾಲಯದಲ್ಲಿ ಪೂಜೆ, ಪುನಸ್ಕಾರಗಳು ನಡೆಯುತ್ತವೆ. ಭೀಮೇಶ್ವರಾಲಯದಲ್ಲಿ ನಡೆಯುವಂತೆ ತೋರುವುದಿಲ್ಲ. ಭೀಮೇಶ್ವರಾಲಯವೇ ಬದ್ದೇಗೇಶ್ವರಾಲಯವಾಗಿರಬೇಕು ಎಂಬ ಅಂಶ ವಿಚಾರಣೀಯ. ಈಗ ರಾಜೇಶ್ವರ ದೇವಾಲಯ ದಲ್ಲಿರುವ ಅರಿಕೇಸರಿಯ ವೇಮುಲವಾಡದ ಸ್ತಂಭ ಶಾಸನದಲ್ಲಿ 'ತತ್ರ ರಾಜೇಶ್ವರಾದಿತ್ಯಗೃಹ ಬದ್ದೆಗೇಶ್ವರ ನಗರೇಶ್ವರಪ್ರಭೃತಿಚತುಃ' ಎಂದಿದೆ (ಸಾಲು–೯೪, ೯೫). ಈ ಶಾಸನದ ಕಾಲ ಕ್ರಿ.ಶ. ಸು ೯೫೦ {ನೋಡಿ : ಪಂಪನ ಆಶ್ರಯದಾತನಾದ ಅರಿಕೇಸರಿಯ ವಂಶ–ಎನ್. ಲಕ್ಷ್ಮೀನಾರಾಯಣರಾವ್, ಅಭಿವಂದನೆ (ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಅವರ ಮಿತ್ರರೂ ಶಿಷ್ಯರೂ ಒಪ್ಪಿಸಿದ ಪ್ರಬಂಧಗಳ ಸಂಪುಟ) ಎ.ಆರ್. ಕೃ. ಸಂಭಾವನಾ ಗ್ರಂಥ ಪ್ರಕಟನ ಸಮಿತಿ, ಮೈಸೂರು–೧೯೫೬, ಪುಟ ೪೬೫–೪೮೧}. ಈ ದೇವಾಲಯದ ಪ್ರಾಕಾರವಲ್ಲಿಯೇ ಶಾಸನದಲ್ಲಿ ಹೇಳಿರುವಂತೆ ಮೂರು ದೇವಾಲಯಗಳಿವೆ. ಇವು ಕ್ರಮವಾಗಿ ಆದಿತ್ಯ, ಬದ್ದೇಗೇಶ್ವರ, ನಗರೇಶ್ವರಾಲಯಗಳೇ ಆಗಿವೆ. ಆದುದರಿಂದ ಭೀಮೇಶ್ವರಾಲಯವೇ ಬದ್ದೇಗೇಶ್ವರಾಲಯ ಎನ್ನುವ ಅಂಶ ಸರಿಯಲ್ಲ. ಇಂದು ರಾಜೇಶ್ವರಾಲಯದಲ್ಲಿ ಜೈನ ಮತಕ್ಕೆ ಸಂಬಂಧಪಡುವ ಕೆಲವು ಶಾಸನಗಳಿವೆ. ಇವುಗಳನ್ನು ಬೇರೆಡೆಯಿಂದ ತಂದು ಇಲ್ಲಿ ಇಡಲಾಗಿದೆ ಎಂಬ ವಿವರ ತಿಳಿದುಬರುತ್ತದೆ. ಹಾಗಾಗಿ ಈ ದೇವಾಲಯ ಮೊದಲು ಜೈನ ಬಸದಿಯಾಗಿರಬಹುದು ಎಂದು ಭಾವಿಸಲು ಸಾಧ್ಯವಿಲ್ಲ. ಈ ದೇವಾಲಯದ ಪ್ರಾಚೀನತೆಗೆ ಆಧಾರವಾಗಿ ಶಾಸನಗಳಿವೆ. ಈಗ ಭೀಮೇಶ್ವರಾಲಯವೆಂದು ಕರೆಯುವ ದೇವಾಲಯದಲ್ಲಿ ಜೈನಧರ್ಮದ ಕುರುಹನ್ನು ಉಳ್ಳ ಅನೇಕ ಅವಶೇಷಗಳಿವೆ. ಆ ಕಾಲದ ಶಾಸನಗಳಲ್ಲಿ ಭೀಮೇಶ್ವರಾಲಯದ ಪ್ರಸ್ತಾಪವೇ ಇಲ್ಲದಿರುವುದು ಗಮನಾರ್ಹ ಅಂಶ. ಇದು ಮೊದಲು ಜೈನಬಸದಿಯಾಗಿದ್ದರೂ ಇರಬಹುದು. ಇದರ ಬಗೆಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ಶಾಸನ ಮತ್ತು ಸಾಹಿತ್ಯಾಧಾರಗಳನ್ನು ಗಮನಿಸಿ, ವಾಸ್ತುಶಿಲ್ಪ, ಶಿಲ್ಪಕಲೆಗಳ ಸೂಕ್ಷ್ಮ ಅಧ್ಯಯನದಿಂದ ಇಂತಹ ಅಂಶಗಳನ್ನು ನಿಷ್ಕರ್ಷಿಸಬೇಕು]–(ಅನುವಾದಕ)

೯. [ಶುಭಧಾಮ ಜಿನಾಲಯವೆಂಬ ಹೆಸರಿನ ಜೈನಬಸದಿಯನ್ನು ವೇಮುಲವಾಡದಲ್ಲಿ ಗೌಡಸಂಘದ ಸೋಮದೇವ ಸೂರಿಗೆಂದು ಕಟ್ಟಿಸಿದವನು ವೇಮುಲವಾಡ ಚಾಲುಕ್ಯರ ಇಮ್ಮಡಿ ಅರಿಕೇಸರಿಯ (ಕ್ರಿ.ಶ. ಸು ೯೩೫–೯೪೬) ಮಗ ಬದ್ದೆಗನೆಂದು (ಕ್ರಿ.ಶ.ಸು ೯೪೬–೯೫೯) ಕ್ರಿ.ಶ. ೯೬೬ ರ ಮುಮ್ಮಡಿ ಅರಿಕೇಸರಿಯ (ಕ್ರಿ.ಶ.ಸು ೯೬೬) ಪರಭಣಿ ತಾಮ್ರಶಾಸನ {ನೋಡಿ : ಪರಭಣಿಯ ತಾಮ್ರಶಾಸನ ಮತ್ತು ಪಂಪಭಾರತ–ಬೆಳ್ಳಾವೆ ವೆಂಕಟನಾರಣಪ್ಪ, ಎ. ಆರ್. ಕೃಷ್ಣಶಾಸ್ತ್ರೀ, ಪ್ರಬುದ್ಧ ಕರ್ಣಾಟಕ, ೧೫–೧, ೧೯೩೪, ಪುಟ ೬೫–೮೧} ಮತ್ತು ಈಗ ವೇಮುಲವಾಡದ ರಾಜೇಶ್ವರ

ದೇವಾಲಯದಲ್ಲಿರುವ ಜಿನವಿಗ್ರಹವೊಂದರ ಪಾದಪೀಠದ ಮೇಲಿರುವ {ನೋಡಿ : Inscriptions of Andhrapradesh, Karimnagar District-(ಸಂ) ಪಿ.ವಿ. ಪರಬ್ರಹ್ಮಶಾಸ್ತ್ರೀ, Government of AndraPradesh, Hyderabad-1974, No-4, pp 12} ಶಾಸನಗಳಿಂದ ತಿಳಿದುಬರುತ್ತದೆ. ಸೋಮದೇವ ಸೂರಿ ಇದರ ನಿರ್ಮಾಪಕನಲ್ಲ. ಈ ಸೋಮದೇವಸೂರಿಯು ತನ್ನ 'ಯಶಸ್ತಿಲಕಚಂಪೂ' ಕೃತಿಯನ್ನು ಕ್ರಿ.ಶ. ೯೫೯ ರಲ್ಲಿ ಇಂದು ಕರೀಂನಗರ ಜಿಲ್ಲೆಗೆ ಸೇರಿರುವ ಗಂಗಧಾರ ಎಂಬ ಸ್ಥಳದಲ್ಲಿ ಪೂರ್ಣ ಗೊಳಿಸಿದನು. ಈತ ಮರಣಹೊಂದಿದ್ದು ಕ್ರಿ.ಶ. ೯೮೪ ರಲ್ಲಿ, ಇಂದಿನ ಕರ್ನಾಟಕದ ಕೊಪ್ಪಳ ಜಿಲ್ಲೆಯಲ್ಲಿ {ನೋಡಿ : ಕವಿ ಸೋಮದೇವನ ಎರಡು ನಿಸಿದಿಗಳು-ಚನ್ನಬಸಪ್ಪ ಎಸ್. ಪಾಟೀಲ, ಇತಿಹಾಸ ದರ್ಶನ, ಸಂಪುಟ-೧೫ (೨೦೦೦), ಪುಟ ೧೪೨-೧೪೪}. ಎಂ. ಚಿದಾನಂದಮೂರ್ತಿ ಅವರು ಸೀತಾರಾಮ ಜಾಗೀರದಾರರು ಅನುವಾದಿಸಿ ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಗಿರುವ (೫೦-೩, ೧೯೬೮, ಪುಟ ೨೩-೪೧) ಎನ್. ವೆಂಕಟರಮಣಯ್ಯನವರ ಲೇಖನವನ್ನು ಆಕರವಾಗಿ ತೋರಿಸಿ ಗಂಗಧಾರ ಊರಿನ ಹೊಲಗಳಲ್ಲಿ ಸೋಮ ದೇವಸೂರಿ ತನ್ನ ಕೃತಿಯನ್ನು ಬರೆದ ಬಸದಿಯ ಅವಶೇಷಗಳಿರುವಂತಿದೆ ಎಂದು ಬರೆದಿದ್ದಾರೆ (ನೋಡಿ : ಜಿನವಲ್ಲಭನ ಕುರಿಕ್ಯಾಲ ಶಾಸನ: ಹೆಚ್ಚಿನ ಶೋಧಗಳು ಮತ್ತು ವ್ಯಾಖ್ಯಾನಗಳು, ಹೊಸತು, ಹೊಸತು, ಸಪ್ನ ಬುಕ್ ಹೌಸ್, ಬೆಂಗಳೂರು-೨೦೧೦, ಪರಿಷ್ಕೃತ, ವಿಸ್ತೃತ ಪುಟ ೮೫). ಆದರೆ ವೆಂಕಟರಮಣಯ್ಯನವರ ಲೇಖನದಲ್ಲಿ ಕೆಲವು ಜೈನ ಅವಶೇಷಗಳಿವೆ ಎಂಬ ವಿವರ ಬಿಟ್ಟರೆ ಸೋಮದೇವನ ಬಸದಿಯ ವಿವರವೇ ಇಲ್ಲ. ಚಿದಾನಂದಮೂರ್ತಿ ಅವರು ಏಕೆ ಈ ರೀತಿ ದಾಖಲಿಸಿರುವರೋ ತಿಳಿಯದಾಗಿದೆ. ಸೋಮದೇವಸೂರಿಯ ಬಗೆಗೆ ಹೆಚ್ಚಿನ ವಿವರಗಳಿಗೆ ನೋಡಿ : Yashastilaka And Indian Culture-K K Handique, Jivaraja Jaina Granthamala, No-2, Jaina Samskrti Samrakshaka Sangha, Sholapur-1968]-(ಅನುವಾದಕ)

೧೦. ತಿಮ್ಮಕವಿ : ಸುಲಕ್ಷಣಸಾರಮು-(ಸಂ) ಶ್ರೀ ಚಾಗಂಟಿ ಶೇಷಯ್ಯ, ಪೀಠಿಕೆ

೧೧. ಅನಂತುಡು : ಅನಂತುನಿ ಛಂದಸ್ಸು-(ಸಂ) ಶ್ರೀ ರಾವೂರಿ ದೊರಸಾಮಿ ಶರ್ಮ, ಪೀಠಿಕೆ

೧೨. ಜಯಂತಿ ರಾಮಯ್ಯನವರು ಈ ಎರಡು ಪದ್ಯಗಳನ್ನು ಅಡಿಟಿಪ್ಪಣಿಯಲ್ಲಿ ಕಾಣಿಸಿದ್ದಾರೆ.

೧೩. ಪರಿಣತುಡಯ್ಯೆನು-ಜಯಂತಿ ರಾಮಯ್ಯನವರ ಪಾಠ

೧೪. ಯಾಚತಾಭರಣುಡು- ಜಯಂತಿ ರಾಮಯ್ಯನವರ ಪಾಠ

೧೫. [ಪಂಪಕವಿ ಮತ್ತು ಮೌಲ್ಯಪ್ರಸಾರ-ಎಂ. ಚಿದಾನಂದಮೂರ್ತಿ, ಪ್ರಬುದ್ಧ ಕರ್ಣಾಟಕ ೪೨-೧, ೧೯೬೦, ಪುಟ ೮೫-೯೯ ; ಹೊಸತು, ಹೊಸತು, ಸಪ್ನ ಬುಕ್ ಹೌಸ್, ಬೆಂಗಳೂರು-೨೦೧೦, ಪರಿಷ್ಕೃತ, ವಿಸ್ತೃತ, ಪುಟ ೪೬೩-೪೭೬]

೧೬. [ಜಿತಕವಿ ಶಬ್ದದ ಅರ್ಥ ವಿವರಣೆಗೆ ನೋಡಿ : ಮೊಟ್ಟಮೊದಟಿ ಕಂದಪದ್ಯಾಲು : ಪುನರ್ವಿವೇಚನ- ಆರ್. ಶೇಷಶಾಸ್ತ್ರಿ, ಜೆ. ಸದಾನಂದಂ, Journal of Telugu Studies, Vol-1, No-1, April, 1988, pp 145 ; ಈ ಲೇಖನವು 'ತೆಲುಗುಭಾಷೆಯ ಮೊತ್ತಮೊದಲ ಕಂದಪದ್ಯಗಳು : ಪುನರ್ವಿವೇಚನೆ' ಎಂಬ ಶೀರ್ಷಿಕೆಯಲ್ಲಿ ಪ್ರಕೃತ ಅನುವಾದಕನಿಂದ ಕನ್ನಡಕ್ಕೆ ಅನುವಾದಗೊಂಡಿದೆ]

೧೬ಅ. [ಜಿನವಲ್ಲಭಸೂರಿ ಕೃತವಾದ 'ಮಹಾವೀರಸ್ವಾಮಿ ಸ್ತೋತ್ರ'ವು ನಿರ್ಣಯಸಾಗರ ಪ್ರೆಸ್ ಅವರಿಂದ ಪ್ರಕಟವಾಗಿರುವ ಕಾವ್ಯಮಾಲಾದ ೭ನೆಯ ಸಂಪುಟದಲ್ಲಿ ಅಚ್ಚಾಗಿದೆ {Kavyamala Anthology, Volume-7, Bombay-1890, pp 97-101}. ಇದನ್ನು ತಿರುಮಲ ರಾಮಚಂದ್ರ ಅವರು ಗಮನಿಸಿ ಈ ಸ್ತೋತ್ರವು ಪಂಪನ ತಮ್ಮ ಜಿನವಲ್ಲಭನ ರಚನೆಯೇ ಬಹುಶಃ ಇರಬೇಕೆಂದು

ಅಭಿಪ್ರಾಯಪಟ್ಟು ಮೂಲಸಂಸ್ಕೃತ ಕೃತಿಯನ್ನು ತೆಲುಗು ಲಿಪಿಯಲ್ಲಿ, ತೆಲುಗು ಭಾಷೆಯ ತಾತ್ಪರ್ಯದೊಡನೆ ಪ್ರಕಟಿಸಿದ್ದಾರೆ. ಈ ಸ್ತೋತ್ರದಲ್ಲಿ ೩೦ ಪದ್ಯಗಳಿದ್ದು ವಸಂತತಿಲಕ, ಮಾಲಿನಿ, ಪೃಥ್ವೀ, ಶಿಖರಿಣಿ, ಮಂದಾಕ್ರಾಂತ, ಶಾರ್ದೂಲವಿಕ್ರೀಡಿತ ವೃತ್ತಗಳಲ್ಲಿ ರಚಿತವಾಗಿದೆ. ಈ ಸ್ತೋತ್ರಕ್ಕೆ 'ಭಾವಾರಿವಾರಣಸ್ತವನ', 'ಮಹಾವೀರಸ್ವಾಮಿಸ್ತವನ','ವರ್ಧಮಾನಸ್ತವ', 'ಸಮಸಂಸ್ಕೃತಸ್ತವ' ಎಂಬ ಹೆಸರುಗಳೂ ಇರುವಂತೆ ತಿಳಿದುಬರುತ್ತದೆ ಹಾಗೂ ಇದಕ್ಕೆ ಟೀಕೆಗಳೂ ರಚಿತವಾಗಿರುವುದು ಗಮನಾರ್ಹ ಸಂಗತಿ. ಇದರ ಬಗೆಗೆ ಹೆಚ್ಚಿನ ವಿವರಗಳಿಗೆ ನೋಡಿ : ಜಿನವಲ್ಲಭಸೂರಿ ಕೃತ ಮಹಾವೀರಸ್ವಾಮಿ ಸ್ತೋತ್ರಂ-ತಿರುಮಲ ರಾಮಚಂದ್ರ, ಸಾಹಿತಿ ಸಂಪದ {ಕೋವೆಲ ಸಂಪತ್ಕುಮಾರಾಚಾರ್ಯ ಷಷ್ಟಿಪೂರ್ತಿ ಅಭಿನಂದನ ಗ್ರಂಥಂ}, ಪ್ರಕಟನೆ : ಷಷ್ಟಿಪೂರ್ತಿ ಅಭಿನಂದನ ಸಮಿತಿ, ವಾರಂಗಲ್ಲು-೧೯೯೩, ಪುಟ ೮೧-೯೪ ; ಜಿನವಲ್ಲಭಸೂರಿ ಕೃತ ಮಹಾವೀರಸ್ವಾಮಿ ಸ್ತೋತ್ರಂ-ಮೂಲ : ತಿರುಮಲ ರಾಮಚಂದ್ರ (ಕನ್ನಡ ಅನುವಾದ-ಆರ್. ಶೇಷಶಾಸ್ತ್ರೀ), ಸಾಧನೆ, ಸಂಪುಟ-೨೬, ಸಂಚಿಕೆ-೧, ೧೯೯೭, ಪುಟ ೨-೧೫, ಪ್ರಕಟನೆ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಮತ್ತು Jinaratnakosha, An Alphabetical Register of Jain Works & Authors {Volume-1, Works}- H. D. Velankar, Bhandarkar Oriental Research Institute, Poona-1944, pp ೨೯೬, ೩೦೭. ಜಿನವಲ್ಲಭನ ಪತ್ನಿಯಾದ ಭಗಿಯಬ್ಬೆ ಮಾಡಿಸಿರುವ ಕಂಚಿನ ಪ್ರತಿಮೆಗಳು ಕೂಡ ಮಹಾವೀರನವೇ ಆಗಿರುವುದು ಗಮನಾರ್ಹ. ಇದರ ಬಗೆಗೆ ಹೆಚ್ಚಿನ ವಿವರಗಳಿಗೆ ನೋಡಿ : (C) Two Inscriptions of Pampa's Sister-in-Law Bhagiyabbe- A.V. Narasimhamurthy, Indian History and Epigraphy {Dr. G. S Gai Felication Volume}-(Ed) K. V. Ramesh & Others, Agam Kala Prakashan, Delhi-1990, pp 219-221 (ಆ) ಪಂಪನ ನಾದಿನ ಭಗಿಯಬ್ಬೆಯ ಎರಡು ಶಾಸನಗಳು-ಎ. ವಿ. ನರಸಿಂಹಮೂರ್ತಿ, ಕರ್ನಾಟಕ ಪುರಾತತ್ತ್ವ ಕೆಲವು ಅಧ್ಯಯನಗಳು, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು-೨೦೧೦, ಪುಟ ೧೬೧-೧೬೭]-(ಅನುವಾದಕ)

೧೭. ಪಂಪಮಹಾಕವಿಯ ಆದಿಪುರಾಣಂ-(ಸಂ) ಡಾ. ಎಲ್. ಬಸವರಾಜು, [ಗೀತಾ ಬುಕ್ ಹೌಸ್, ಮೈಸೂರು-೧೯೭೬], ಆಶ್ವಾಸ-೧, ಪದ್ಯ-೩೭

೧೮. [ಕವಿರಾಜಮಾರ್ಗದಲ್ಲಿನ ರಾಮಾಯಣ ಪದ್ಯಗಳು-ಎಂ. ವಿ. ಸೀತಾರಾಮಯ್ಯ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ-೫೧, ಜೂನ್-ಡಿಸೆಂಬರ್ ೧೯೬೬, ಪುಟ ೧-೮ ; ಕವಿರಾಜಮಾರ್ಗ ವಿವಕ್ಷೆ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೧೯೯೫, ಪುಟ ೧೩೫-೧೪೩]

೧೯. [ಕವಿಜನಾಶ್ರಯಕಾರ ಛಂದೋಂಬುಧಿಯನ್ನು ಅನುಸರಿಸಿಲ್ಲ ಎಂಬ ಅಂಶವನ್ನು ಒಪ್ಪಲು ಅನೇಕ ತೊಡಕುಗಳಿವೆ. ನಾಗವರ್ಮನ ಕಾಲ ವನ್ನು ಕ್ರಿ.ಶ. ಸು ೯೯೦ ಎಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಈತ ತಲಕಾಡು ಗಂಗರ ೩ ನೆಯ ರಾಚಮಲ್ಲ ಮತ್ತು ನೊಳಂಬ ಕುಲಾಂತಕ ಮಾರಸಿಂಹನ ಮಂತ್ರಿ ಮತ್ತು ಸೇನಾಧಿಪತಿಯಾಗಿದ್ದ ಚಾವುಂಡರಾಯನ ಆಶ್ರಿತನಾಗಿದ್ದ. ಆ ಕಾಲದ ಪ್ರಸಿದ್ಧ ಜೈನಗುರುಗಳಾಗಿದ್ದ ಅಜಿತಸೇನಾಚಾರ್ಯರ ಬಳಿ ವಿದ್ಯಾಭ್ಯಾಸ ಮಾಡಿದ್ದ. ಈ ವಿವರಗಳನ್ನು ತಿಳಿಸುವ ಪದ್ಯಗಳನ್ನು ಅನೇಕ ಜನ ಸಂಶೋಧಕರು ಯಾವುದೇ ಆಧಾರಗಳನ್ನು ಸಮರ್ಪಕವಾಗಿ ತೋರಿಸದೆ ಪ್ರಕ್ಷಿಪ್ತಗಳೆಂದು ಹೇಳಿಬಿಟ್ಟಿದ್ದಾರೆ. ಬಹುತೇಕ ಹಸ್ತಪ್ರತಿಗಳಲ್ಲಿ ಈ ಪದ್ಯಗಳಿ ರುವುದು ಗಮನಾರ್ಹ ಅಂಶ {ಇದರ ಬಗೆಗೆ ಹೆಚ್ಚಿನ ಮಾಹಿತಿಗೆ ನೋಡಿ : ಛಂದೋಂಬುಧಿ-(ಸಂ) ಟಿ.ವಿ. ವೆಂಕಟಾಚಲ ಶಾಸ್ತ್ರೀ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೭, ಪ್ರಸ್ತಾವನೆ, ಪುಟ xiii-xvi} ಬ್ರಾಹ್ಮಣಕವಿಯಾದ ನಾಗವರ್ಮನು ಜೈನಗುರುವಿನ ಬಳಿ ವಿದ್ಯಾಭ್ಯಾಸ ಮಾಡುವುದು ಒಪ್ಪುವಂತಹುದಲ್ಲ ಎಂದು ವಾದಗಳನ್ನು ಮಂಡಿಸಿದ್ದಾರೆ. ಇದಾವ ಅಂಶಗಳನ್ನು ಒಪ್ಪುವಂತಹುದಲ್ಲ. ಮತಕ್ಕೂ-ವಿದ್ಯಾಭ್ಯಾಸಕ್ಕೂ ಯಾವುದೇ ವಿಧವಾದ ಸಂಬಂಧವೂ ಇಲ್ಲ. ನಾಗವರ್ಮನು ಜೈನಗುರುವಿನ ಬಳಿ ವಿದ್ಯಾಭ್ಯಾಸ ಮಾಡಿದ ಮಾತ್ರಕ್ಕೇ ಜೈನನಾಗುವುದಿಲ್ಲ. ಛಂದಸ್ಸು, ವ್ಯಾಕರಣ, ನಿಘಂಟು

ಮುಂತಾದವು ಎಲ್ಲ ಮತೀಯರೂ ಸಮಾನವಾಗಿ ಅಧ್ಯಯನ ಮಾಡುವಂತಹವು. ನಾಗವರ್ಮನ ಪೂರ್ವಿಕರು ಪಂಪಕವಿಯ ಪೂರ್ವಿಕರಂತೆಯೇ ವೆಂಗಿಪಳುವಿನವರು. ಬಹುಶಃ ನಾಗವರ್ಮನ ತಂದೆ ಅಥವಾ ತಾತನ ಕಾಲಕ್ಕೆ ಸಯ್ಯಡಿ ಅಗ್ರಹಾರಕ್ಕೆ ಬಂದು ನೆಲೆಸಿರಬೇಕು. ನಾಗವರ್ಮನ ಪರಿಚಯ ಕವಿಜನಾಶ್ರಯಕಾರನಿಗೆ ಇದ್ದಿರುವುದೂ ಅಸಂಭವವಲ್ಲ. ಸಯ್ಯಡಿ ಎಂಬುದು ಇಂದಿನ ಗದಗ ಜಿಲ್ಲೆ ರೋಣ ತಾಲ್ಲೂಕಿಗೆ ಸೇರಿರುವ ಸವಡಿ ಎಂಬ ಹೆಸರಿನ ಗ್ರಾಮ. ನಾಗವರ್ಮನು ಸಯ್ಯಡಿಯ ಭಗವತೀ ಮತ್ತು ಪಿನಾಕಿ ದೇವತೆಗಳನ್ನು ಸ್ತುತಿಸಿದ್ದಾನೆ. ಈ ದೇವತೆಗಳನ್ನು ಗಂಗರ ವತ್ಸಯ್ಯ ಎಂಬವನು ನಿರ್ಮಿಸಿದಂತೆ ಕ್ರಿ.ಶ. ೯೭೧ ರ ಕಾಲದ ಸಯ್ಯಡಿಯಲ್ಲಿರುವ ಶಾಸನವೊಂದರಲ್ಲಿ ಹೇಳಿದೆ (ನೋಡಿ : South Indian Inscriptions, Volume-11 {Bombay-Karnataka Inscriptions, Volume-1}, Inscription No-42). ನಾಗವರ್ಮನು ಸ್ತುತಿಸಿರುವ ದೇವತೆಗಳು ಬಹುಶಃ ಇವೇ ಆಗಿದ್ದಲ್ಲಿ ಛಂದೋಂಬುಧಿಯ ರಚನಾಕಾಲದ ಪೂರ್ವಗಡಿ ಕ್ರಿ.ಶ. ಸು ೯೭೧. ಚಾವುಂಡರಾಯನನ್ನು ನಾಗವರ್ಮನು ಛಂದೋಂಬುಧಿಯಲ್ಲಿ ಸ್ಮರಿಸಿದ್ದಾನೆ. ಸಯ್ಯಡಿಯನ್ನೂ ಒಳಕೊಂಡಂತೆ ಇದ್ದ ಬೆಳ್ವೊಲ-೩೦೦ ಪ್ರದೇಶವೆಲ್ಲವೂ ಆಗ ತಲಕಾಡು ಗಂಗರ ಅಧೀನದಲ್ಲಿತ್ತು. ಚಾವುಂಡರಾಯನ 'ತ್ರಿಷಷ್ಠಿ ಲಕ್ಷಣ ಮಹಾಪುರಾಣ' ಅಥವಾ 'ಚಾವುಂಡರಾಯ ಪುರಾಣ'ದ ರಚನೆ ಸಮಾಪ್ತಿಯಾದದ್ದು ಕ್ರಿ.ಶ. ೯೭೮ ರಲ್ಲಿ. ಶ್ರವಣಬೆಳಗೊಳದ ಗೊಮ್ಮಟಮೂರ್ತಿಯ ಪ್ರತಿಷ್ಠೆಯಾದದ್ದು ಕ್ರಿ.ಶ.ಸು ೯೮೨ ರಲ್ಲಿ. ಈ ಹಿನ್ನೆಲೆಯಲ್ಲಿ ನಾಗವರ್ಮನ ಛಂದೋಂಬುಧಿಯ ರಚನೆಯ ಕಾಲವನ್ನು ಕ್ರಿ.ಶ. ಸು ೯೭೦–೯೯೦ ರೊಳಗೆ ಎಂದು ಹೇಳಲು ಸಾಧ್ಯವಿದೆ. ಏಕೆಂದರೆ ತಲಕಾಡು ಗಂಗರ ಆಳ್ವಿಕೆಯೇ ಕ್ರಿ.ಶ. ೯೯೦ ಸುಮಾರಿಗೆ ಮುಗಿದಿತ್ತು. ಕವಿಜನಾಶ್ರಯದ ರಚನೆಯ ಕಾಲವನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲವಾದರೂ ಆದಿಪುರಾಣ, ಪಂಪಭಾರತ ಮತ್ತು ಕುರ್ಕ್ಯಾಲ ಶಾಸನದ ರಚನೆಯ ನಂತರ ಎಂದು ಖಚಿತವಾಗಿ ಹೇಳಬಹುದು. ಕ್ರಿ.ಶ. ಸು ೯೫೦–೯೯೦ ರೊಳಗೆ ಕವಿಜನಾಶ್ರಯದ ರಚನೆ ಆಗಿರಬಹುದೆಂದು ಹೇಳಲು ಸಾಧ್ಯವಿದೆ. ಪಂಪಕವಿ ಬದುಕಿರುವಾಗಲೇ, ಕುರ್ಕ್ಯಾಲ ಶಾಸನದ ರಚನೆಗೂ ಮೊದಲೇ ಕವಿಜನಾಶ್ರಯದ ರಚನೆಯಾಗಿರಬೇಕು ಎಂದು ಪ್ರಕೃತ ಲೇಖನದ ಮೂಲ ಲೇಖಕರು ಹೇಳಿರುವುದನ್ನು ಒಪ್ಪುವುದು ಕಷ್ಟಸಾಧ್ಯ. ಈ ಹಿನ್ನೆಲೆಯಲ್ಲಿ ಕವಿಜನಾಶ್ರಯಕಾರ ಛಂದೋಂಬುಧಿಯನ್ನು ಅನುಸರಿಸಿರುವ ಸಾಧ್ಯತೆ ಸ್ಪಷ್ಟವಾಗಿಯೇ ಇದೆಯೆಂದು ಹೇಳಬಹುದು]–(ಅನುವಾದಕ)

೨೦. [ಛಂದೋಂಬುಧಿಕಾರನಾದ ನಾಗವರ್ಮ ಮಾತ್ರವೇ ಜಯದೇವನನ್ನು ಸ್ಮರಿಸಿದ್ದಾನೆ. ಕವಿರಾಜಮಾರ್ಗಕಾರನಾದ ಶ್ರೀವಿಜಯನು ಜಯದೇವನನ್ನು ಸ್ಮರಿಸಿಲ್ಲ]

೨೧. [ಜಯದೇವನು ಜಯದೇವ ಛಂದಸ್ ಎಂಬ ಗ್ರಂಥದ ಕರ್ತೃ. ಈತನ ಕಾಲ ಕ್ರಿ.ಶ. ಸು ೯೦೦ ಇಲ್ಲವೇ ೬೦೦ಕ್ಕಿಂತ ಮೊದಲು. ಈತನ ಕೃತಿ ಲಕ್ಷ್ಯ–ಲಕ್ಷಣ ಸಮೀಕೃತ ವಿಧಾನದಲ್ಲಿ ರಚಿತವಾಗಿದೆ. ಇದರಲ್ಲಿ ವೈದಿಕ ಛಂದಸ್ಸು ಮತ್ತು ಲೌಕಿಕ ಛಂದಸ್ಸು ಎರಡೂ ಹೇಳಲ್ಪಟ್ಟಿದೆ. ಜಯದೇವನ ಕೃತಿಯಲ್ಲಿ ಒಟ್ಟು ೮ ಅಧ್ಯಾಯಗಳಿದ್ದು, ಇವುಗಳಲ್ಲಿ (೧) ಸಂಜ್ಞೆಗಳು (೨–೩) ವೈದಿಕ ಛಂದಸ್ಸುಗಳು (೪) ಮಾತ್ರಾವೃತ್ತಗಳು (೫) ವಿಷಮ ಮತ್ತು ಅರ್ಧಸಮ ವೃತ್ತಗಳು (೬–೭) ಸಮಚತುಷ್ಪದೀ ವರ್ಣವೃತ್ತಗಳು (೮) ಷಟ್ಪ್ರತ್ಯಯ ಇವು ಅನುಕ್ರಮವಾಗಿ ನಿರೂಪಿತವಾಗಿವೆ. ನಾಗವರ್ಮನು ಈ ಕೃತಿಯ ಕೆಲವಂಶಗಳನ್ನು ಸ್ವೀಕರಿಸಿದ್ದಾನೆ. ಛಂದೋಂಬುಧಿಯಲ್ಲಿ ಮತ್ತು ಕವಿಜನಾಶ್ರಯದಲ್ಲಿ ಜಯದೇವಾದ್ಯರ ಎಂದು ಆರಂಭವಾಗುವ ಪದ್ಯವಿದೆ. ಇದಕ್ಕೆ ಜಯದೇವ ಮತ್ತು ಇತರ ಆದ್ಯರು ಎಂದು ಅರ್ಥೈಸಬೇಕು. ಇತರ ಆದ್ಯರೆಂದರೆ ಛಂದಶ್ಶಾಸ್ತ್ರದ ಕರ್ತೃ ಪಿಂಗಳ, ನಾಟ್ಯಶಾಸ್ತ್ರಕಾರನಾದ ಭರತ, ಸ್ವಯಂಭೂ ಛಂದಸ್‌ನ ಕರ್ತೃ ಸ್ವಯಂಭು, ವೃತ್ತಜಾತಿ ಸಮುಚ್ಚಯದ ಕರ್ತೃ ವಿರಹಾಂಕ, ಜಾನಾಶ್ರಯಿ ಛಂದೋವಿಚಿತಿಯ ಕರ್ತೃ, ರತ್ನಮಂಜೂಷಾ ಕೃತಿಯ ಕರ್ತೃ ಮುಂತಾದವರು. ಜಯದೇವನ ಕೃತಿಗೆ ಮುಕುಲಭಟ್ಟನೆಂಬುವನ ಮಗ ಹರ್ಷಟ ಎಂಬ ಬ್ರಾಹ್ಮಣ ಕವಿ (ಕ್ರಿ.ಶ. ಸು ೧೧೨೪ ಮೊದಲು) ವ್ಯಾಖ್ಯಾನವನ್ನು ಬರೆದಿದ್ದಾನೆ. ಜಯದೇವನ ಕೃತಿಯನ್ನು

ಎಚ್. ಡಿ. ವೇಲಂಕರ್ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ {ನೋಡಿ : Jayadevachandas of Jayadeva-(Ed) H. D. Velankar, Jayadaman {A Collection of Ancient Texts on Sanskrit Prosody and A Classified List of Sanskrit Metres with an Alphabetical Index}, Haritosamala, No-1, Bombay-1949}

ಜಾನಾಶ್ರಯಿ ಛಂದೋವಿಚಿತಿ ಎಂಬ ಹೆಸರಿನ ಛಂದೋಗ್ರಂಥವೊಂದಿದೆ. ಇದರ ಕಾಲ ಕ್ರಿ.ಶ. ಸು ೬೫೦. ಇದರ ಕರ್ತೃ ಮತ್ತು ವೃತ್ತಿಕಾರ ಇವರಿಬ್ಬರ ವಿಷಯದಲ್ಲಿಯೂ ಅನೇಕ ಗೊಂದಲಗಳು, ಸಮಸ್ಯೆಗಳು ಇವೆ. ಈ ಛಂದೋಗ್ರಂಥದ ಮಾರ್ಗ ಸ್ವಲ್ಪಮಟ್ಟಿಗೆ ಭರತ, ಪಿಂಗಳರ ಮಾರ್ಗಗಳಿಗಿಂತ ಬೇರೆಯಾದುದು. ಛಂದೋಂಬುಧಿ ಮತ್ತು ಕವಿಜನಾಶ್ರಯಮು ಕೃತಿಗಳಲ್ಲಿನ ಅಧಿಕಾರಗಳ ವಿಂಗಡನೆ ಮತ್ತು ಹೆಸರುಗಳು ಈ ಗ್ರಂಥದ ಅಧ್ಯಾಯಗಳನ್ನು ಸ್ಥೂಲವಾಗಿ ಹೋಲುತ್ತವೆ. ಕವಿಜನಾಶ್ರಯಮು, ಜಾನಾಶ್ರಯಿ ಛಂದೋವಿಚಿತಿ ಹೆಸರುಗಳಲ್ಲಿರುವ ಜನಾಶ್ರಯ ಎಂಬುದು ಗಮನಾರ್ಹ. ಈ ಸಾಮ್ಯವು ಆಕಸ್ಮಿಕವೆಂದು ಹೇಳುವ ಹಾಗಿಲ್ಲ. ಜಾನಾಶ್ರಯಿ ಛಂದೋವಿಚಿತಿ ರಚಿತವಾದದ್ದು ಬಹುಶಃ ಇಂದಿನ ತೆಲುಗುನಾಡಿನಲ್ಲಿ ಎಂದು ಮಾತ್ರ ತಿಳಿಯಲು ಸಾಧ್ಯವಿದೆ. ಆದ ಕಾರಣ ಛಂದೋಂಬುಧಿ, ಕವಿಜನಾಶ್ರಯಮು, ಜಾನಾಶ್ರಯಿ ಛಂದೋವಿಚಿತಿ ಇವುಗಳ ತೌಲನಿಕ ವಿವೇಚನೆ ಅತ್ಯಗತ್ಯ {ಜಾನಾಶ್ರಯಿ ಛಂದೋವಿಚಿತಿಯ ಬಗೆಗೆ ಹೆಚ್ಚಿನ ಮಾಹಿತಿಗೆ ನೋಡಿ : (೧) janasrayi Chandoviciti-(Ed) P K Narayana Pillai, The University Manuscripts Library, Trivandrum-1949 (೨) Janasrayi by Janasraya-(Ed) M. Ramakrishna Kavi, Sri Venkatesvara Oriental Series, No-21, Sri Venkatesvara Oriental Institute, Tirupati-1950 (೩) ಜನಾಶ್ರಯೀ ಛಂದೋವಿಚಿತಿ (ವಿಮರ್ಶೆ)-ವಿ. ಸೀತಾರಾಮಯ್ಯ, ಸಾಹಿತ್ಯಾಲೋಕನ, ವಿ. ಸೀ ಸಂಪದ (ವಿ. ಸೀ. ಸಂಸ್ಮರಣ ವೇದಿಕೆ), ಬೆಂಗಳೂರು-೨೦೦೩, ಪುಟ ೬೫-೭೧}

ಛಂದೋಂಬುಧಿ ಮತ್ತು ಕವಿಜನಾಶ್ರಯಮು ನಡುವೆ ಅನೇಕ ಹೋಲಿಕೆಗಳಿವೆ. ಇಲ್ಲಿ ಕೆಲವನ್ನು ಮಾತ್ರ ಸಂಕ್ಷಿಪ್ತವಾಗಿ ಗಮನಿಸಬಹುದು. ಛಂದೋಂಬುಧಿ ಮತ್ತು ಕವಿಜನಾಶ್ರಯಗಳಲ್ಲಿ ಕಂಡುಬರುವ ಅಧಿಕಾರಗಳ ಹೆಸರುಗಳು, ಅವುಗಳ ಅನುಕ್ರಮ ಇತ್ಯಾದಿಗಳು ಸಣ್ಣಮಟ್ಟ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಒಂದೇ ಆಗಿದೆ. ಈ ಪ್ರತಿಯೊಂದು ಅಧಿಕಾರಗಳಲ್ಲಿ ಕಂಡುಬರುವ ವಾಕ್ಯಗಳು ಮತ್ತು ವಿಷಯಗಳು ಬಹುತೇಕವಾಗಿ ಶಬ್ದಶಃ ಸಾಮ್ಯವನ್ನು ಹೊಂದಿವೆ. ಇವುಗಳಲ್ಲಿ ಕೆಲವನ್ನು ಈಗಾಗಲೇ ಜಯಂತಿ ರಾಮಯ್ಯ ಪಂತುಲು ಅವರು, ನಿಡದವೋಲು ವೆಂಕಟರಾವು ಅವರು ತಾವು ಸಂಪಾದಿಸಿರುವ ಕವಿಜನಾಶ್ರಯದ ಪರಿಷ್ಕರಣಗಳಲ್ಲಿ ಅಲ್ಲಲ್ಲಿ ಸೂಚಿಸಿದ್ದಾರೆ. ಕೋವೆಲ ಸಂಪತ್ಕುಮಾರಾಚಾರ್ಯ ಅವರು 'ತೆಲುಗು ಛಂದೋವಿಕಾಸಮು' (ತೆಲುಗು ಅಕಾಡಮಿ, ಹೈದರಾಬಾದ್-೨೦೧೨) ಕೃತಿಯಲ್ಲಿ, ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು 'ಕನ್ನಡ ಛಂದಃಸ್ವರೂಪ' (ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು-೨೦೧೪, ಆರನೆಯ ಮುದ್ರಣ), 'ಕನ್ನಡ ಛಂದಃಕೋಶ' (ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು-೨೦೧೧) ಕೃತಿಗಳಲ್ಲಿ ಕೆಲವೊಂದು ಅಂಶಗಳನ್ನು ತೌಲನಿಕವಾಗಿ ಪರಿಶೀಲಿಸಿ ದ್ದಾರೆ. ಇವುಗಳಲ್ಲಿ ಕೆಲವನ್ನು ಮಾತ್ರ ಕೆಳಗೆ ತೋರಿಸಲಾಗಿದೆ.

ಅಧಿಕಾರ ಸಂಖ್ಯೆ	ಛಂದೋಂಬುಧಿ	ಕವಿಜನಾಶ್ರಯಮು
೧	ಸಂಜ್ಞಾಪ್ರಕರಣಂ	ಸಂಜ್ಞಾಧಿಕಾರಮು
೨	ಸಮವೃತ್ತ ಪ್ರಕರಣಂ	ವೃತ್ತಾಧಿಕಾರಮು {ಮಾಲಾವೃತ್ತಮುಲು, ದಂಡಕಮುಲು, ಅರ್ಧಸಮವೃತ್ತಮುಲು}
೩	ಮಾಲಾವೃತ್ತಾರ್ಧಸಮ ವಿಷಮಾದಿವೃತ್ತ ಪ್ರಕರಣಂ	ಜಾತ್ಯಧಿಕಾರಮು, ಕಂದಾದಿ ಮಾತ್ರಾವೃತ್ತ ಮುಲು, ತೆನುಗು ವಿಷಯ ಜಾತುಲು

೪ ಕಂದಾದಿಮಾತ್ರಾವೃತ್ತ ಪ್ರಕರಣಂ ಷಟ್ಪ್ರತ್ಯಯಾಧಿಕಾರಮು
೫ ಕರ್ಣಾಟವಿಷಯಜಾತಿವೃತ್ತ ಪ್ರಕರಣಂ ದೋಷಪ್ರಕರಣಮು
೬ ಷಟ್ಪ್ರತ್ಯಯವಿವರಣ ಪ್ರಕರಣಂ

ಮೇಲಿನ ಕೋಷ್ಟಕದ ಪ್ರಕಾರ ಛಂದೋಂಬುಧಿಯಲ್ಲಿರುವ ೨ ಮತ್ತು ೩ ಪ್ರಕರಣಗಳು ಕವಿಜನಾಶ್ರಯದಲ್ಲಿ ಒಂದೇ ಪ್ರಕರಣದೊಳಗೆ ಅಡಕವಾಗಿದೆ. ಕವಿಜನಾಶ್ರಯದ ವೃತ್ತಾಧಿಕಾರದಲ್ಲಿಯೇ ಮಾಲಾವೃತ್ತಗಳು ಇತ್ಯಾದಿಗಳ ವಿವರಗಳು ಕಂಡುಬರುತ್ತವೆ. ಸಂದರ್ಭವನ್ನು ಗಮನಿಸಿದರೆ ಇದು ವಾಸ್ತವವಾಗಿ ಪ್ರತ್ಯೇಕ ಪ್ರಕರಣವಾಗಿಯೇ ಇದ್ದಿರಬೇಕೆಂದು ತೋರುತ್ತದೆ. ಕವಿಜನಾಶ್ರಯದ ಪ್ರಕರಣಗಳ ವಿಂಗಡನೆಯಲ್ಲಿಯೂ ಪ್ರತಿಕಾರರ ಕೈವಾಡ ಬಹಳವಾಗಿದೆಯೆಂದು ಪರಿಶೀಲನೆಯಿಂದ ತಿಳಿಯುತ್ತದೆ. ದೋಷಪ್ರಕರಣವೊಂದು ಮಾತ್ರ ಕವಿಜನಾಶ್ರಯದಲ್ಲಿ ಅಧಿಕವಾಗಿದೆ. ಇದಲ್ಲದೆ ಇನ್ನೂ ಕೆಲವು ಹೋಲಿಕೆಗಳಿದ್ದು ಕೆಲವೊಂದನ್ನು ಮಾತ್ರ ಕೆಳಗೆ ಸೂಚಿಸಲಾಗಿದೆ.

೧. ಕವಿಜನಾಶ್ರಯದ ವೃತ್ತಾಧಿಕಾರದಲ್ಲಿ ಕಂಡುಬರುವ ಅನೇಕ ಸಮವೃತ್ತಗಳು ಮೊತ್ತಮೊದಲು ಛಂದೋಂಬುಧಿಯಲ್ಲಿ ಮಾತ್ರ ಕಂಡು ಬರುತ್ತದೆ. ಈಗ ಲಭ್ಯವಾಗಿರುವ ಯಾವ ಸಂಸ್ಕೃತ ಛಂದೋಗ್ರಂಥಗಳಲ್ಲಿಯೂ ಕಂಡುಬರುವುದಿಲ್ಲ. ಇಂತಹ ಅನೇಕ ವೃತ್ತಗಳು ಛಂದೋಂಬುಧಿಯ ಅನುಸರಣೆಯ ಫಲವಾಗಿ ಕವಿಜನಾಶ್ರಯದಲ್ಲಿಯೂ ಕಂಡುಬರುತ್ತವೆ. ಉದಾಹರಣೆಗೆ :

   (ಅ) ೬ ಅಕ್ಷರಗಳ ವಿಚಿತ್ರ

   (ಆ) ೯ ಅಕ್ಷರಗಳ ಉತ್ಸುಕ

   (ಇ) ೧೫ ಅಕ್ಷರಗಳ ಸುಕೇಸರ

   (ಈ) ೧೫ ಅಕ್ಷರಗಳ ಮಣಿಭೂಷಣ

   (ಉ) ೧೯ ಅಕ್ಷರಗಳ ತರಳ

   (ಊ) ೨೦ ಅಕ್ಷರಗಳ ಉತ್ಪಲಮಾಲೆ

   (ಋ) ೨೦ ಅಕ್ಷರಗಳ ಮತ್ತೇಭವಿಕ್ರೀಡಿತ

   (ಎ) ೨೧ ಅಕ್ಷರಗಳ ಚಂಪಕಮಾಲೆ

   (ಏ) ೨೨ ಅಕ್ಷರಗಳ ಮಹಾಸ್ರಗ್ಧರೆ

೨. ಸಂಸ್ಕೃತ ಛಂದೋಗ್ರಂಥಗಳಲ್ಲಿ ಬೇರೆಯೇ ಹೆಸರಿದ್ದು ನಾಗವರ್ಮನ ಛಂದೋಂಬುಧಿಯಲ್ಲಿ ಮತ್ತೊಂದು ಹೆಸರಿನಿಂದ ದಾಖಲಾಗಿರುವ ಅನೇಕ ವೃತ್ತಗಳು ಕವಿಜನಾಶ್ರಯದಲ್ಲಿಯೂ ಕಂಡುಬರುತ್ತವೆ. ಉದಾಹರಣೆಗೆ : ೧೩ ಅಕ್ಷರಗಳ ಪ್ರಭಾತ ವೃತ್ತ ; ೭ ಅಕ್ಷರಗಳ ವಿಭೂತಿ ವೃತ್ತ ಇತ್ಯಾದಿಗಳು.

೩. ಅಂಶಗಣ ಛಂದಸ್ಸಿನ ಉತ್ಸಾಹವೆಸರಿನ ಛಂದೋಬಂಧ ನಾಗವರ್ಮನಲ್ಲಿ 'ಭೂಹಿತಾರ್ಥ ಮೆನಿಸುವಜನ' ಎಂದಾರಂಭವಾಗಿದೆ. ಈ ಪದ್ಯದಲ್ಲಿ ಹ ಕಾರ ಪ್ರಾಸವಿದೆ. ಕವಿಜನಾಶ್ರಯದ ಪದ್ಯದಲ್ಲಿಯೂ ಹ ಕಾರ ಪ್ರಾಸವೇ ಇರುವುದು, ಲಕ್ಷಣ ನಿರ್ವಚನೆಯಲ್ಲಿಯೂ ಸಾಮ್ಯವಿರುವುದು ಗಮನಿಸಬೇಕಾದ ಅಂಶ.

ಮೇಲಿನ ಹೋಲಿಕೆಗಳಲ್ಲದೆ ತೆಲುಗು ಭಾಷೆಯಲ್ಲಿ ಪ್ರಚಾರ ಮತ್ತು ಬಳಕೆಯಲ್ಲಿ ಇಲ್ಲದ ತ್ರಿಪದಿ, ಷಟ್ಪದಿಗಳ ಲಕ್ಷಣವನ್ನು ಹೇಳಿರುವುದೂ ಗಮನಾರ್ಹ ಅಂಶ. ಇವುಗಳ ಲಕ್ಷಣಗಳಿಗೂ

ಛಂದೋಂಬುಧಿಯ ಲಕ್ಷಣಗಳಿಗೂ ಸಾಮ್ಯವಿದೆ. ಇವುಗಳ ಲಕ್ಷಣಗಳು ಮೊತ್ತಮೊದಲು ದೊರೆಯುವುದೇ ಛಂದೋಂಬುಧಿಯಲ್ಲಿ, ನಂತರ ಛಂದೋಂಬುಧಿಯನ್ನು ಅನುಸರಿಸಿರುವ ಜಯಕೀರ್ತಿಯ ಛಂದೋನುಶಾಸನದಲ್ಲಿ. ಜಯಕೀರ್ತಿಯ ಕಾಲ ಕ್ರಿ.ಶ. ಸು ೧೧೦೦. ಇದರಿಂದ ಕವಿಜನಾಶ್ರಯಕಾರ ಜಯದೇವನನ್ನು ನೇರವಾಗಿ ಅನುಸರಿಸದೆ ಛಂದೋಂಬುಧಿ ಯನ್ನು ಅನುಸರಿಸಿರುವುದು ಸ್ಪಷ್ಟಪಡುತ್ತದೆ. ಛಂದೋಂಬುಧಿಯಂತೆ ಕವಿಜನಾಶ್ರಯಮು ಗ್ರಂಥವು ಕೂಡ ಬಹುಪ್ರಸಿದ್ಧವಾಗಿತ್ತೆನ್ನಲು ದೊರಕಿರುವ ಹಸ್ತಪ್ರತಿಗಳು, ವಿಪುಲವಾದ ಪಾಠಭೇದಗಳೇ ಸಾಕ್ಷಿಯಾಗಿವೆ. ನಾಗವರ್ಮನು ಕನ್ನಡ ಭಾಷೆಯ ಜಾಯಮಾನಕ್ಕನುಗುಣ ವಾಗಿ ಕೃತಿಯನ್ನು ರಚಿಸಿದರೆ ಕವಿಜನಾಶ್ರಯಕಾರ ತೆಲುಗುಭಾಷೆಯ ಜಾಯಮಾನಕ್ಕನುಗುಣವಾಗಿ ತನ್ನ ಕೃತಿಯನ್ನು ರಚಿಸಿದ್ದಾನೆ. ಇದರಿಂದ ಎರಡೂ ಕೃತಿಗಳಲ್ಲಿ ಸಾಮ್ಯತೆಯೊಂದಿಗೆ ಸಹಜವಾಗಿ ಭೇದಗಳೂ ಇವೆ. ಈ ಕೃತಿಯ ಸಂಶೋಧಿತ ಆವೃತ್ತಿ ಪ್ರಕಟವಾಗುವ ವರೆಗೂ ತೌಲನಿಕ ಪರಿಶೀಲನೆ ಸಮರ್ಪಕವಾಗಿ ನಡೆಯಲು ಸಾಧ್ಯವಿಲ್ಲ. ಕವಿಜನಾಶ್ರಯದ ಪರಿಷ್ಕರಣಕ್ಕೆ ಕವಿಜನಾಶ್ರಯದ ಪ್ರಭಾವ ಮತ್ತು ನೇರವಾದ ಅನುಸರಣೆಯಿರುವ ಈಶ್ವರಕವಿಯ ಕವಿಜಿಹ್ವಾಬಂಧನ ಮತ್ತು ವೀರಭದ್ರ ಕವಿಯ (ಕ್ರಿ.ಶ. ೧೮೪೬) ನಂದಿ ಛಂದೋರ್ಣವ ಗ್ರಂಥಗಳ ಸಹಾಯವನ್ನು ಪಡೆಯಬಹುದು]-(ಅನುವಾದಕ)

೨೨. ವಡಿಯೆಂಬುದು ತೆಲುಗಿಂ ಪೇ
ಳ್ದೆಡೆಗಲ್ಲದೆ ಕನ್ನಡಕ್ಕೆ ಪೇಳಿದುದಿಲ್ಲಂ
ಮಡದಿ ನಿನಗರಿಯಪೇಳ್ವೆಂ
ಕಡುರಾಗದೊಳಾಂಧ್ರಮಾರ್ಗ ಕಾಣಿಸಿದನಿತಂ

-ಕವಿಜಿಹ್ವಾಬಂಧನ ೨-೧೮, [(ಸಂ) ಎ. ಆರ್. ಕೃಷ್ಣಶಾಸ್ತ್ರೀ, ಬೆಂಗಳೂರು-೧೯೫೭]

[ಈಶ್ವರ ಕವಿಯ (ಕ್ರಿ.ಶ.ಸು ೧೫೦೦) ಕವಿಜಿಹ್ವಾಬಂಧನದ ಬಗೆಗೆ ಹೆಚ್ಚಿನ ವಿಶ್ಲೇಷಣೆಗೆ ನೋಡಿ: ಕವಿಜಿಹ್ವಾಬಂಧನಂ-ಟಿ. ವಿ. ವೆಂಕಟಾಚಲ ಶಾಸ್ತ್ರೀ, ಕನ್ನಡ ಛಂದಸ್ಸು, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು-೨೦೧೧, ಎಂಟನೆಯ ಮುದ್ರಣ, ಪುಟ ೧೪೬-೧೬೪. ಈ ಲೇಖನವಲ್ಲಿ ಕವಿಜನಾಶ್ರಯಮು ಮತ್ತು ಕವಿಜಿಹ್ವಾಬಂಧನ ಕೃತಿಗಳಲ್ಲಿ ಕಂಡುಬರುವ ಸಾಮ್ಯ ಮತ್ತು ಭೇದಗಳನ್ನು ಹಾಗೂ ಇತರ ಅಂಶಗಳನ್ನು ವಿಸ್ತಾರವಾಗಿ ವಿವೇಚಿಸಲಾಗಿದೆ. ಈಶ್ವರಕವಿ ಭೀಮಣನ (೨-೨೦) ಹೆಸರನ್ನು ಹೇಳಿದ್ದಾನೆ. ಈ ಭೀಮಣನು ಛಂದೋಗ್ರಂಥದ ಕರ್ತೃವೇ ಆಗಿರಬೇಕು ಎನ್ನುವ ಅಂಶ ನಿರ್ವಿವಾದವಾದ್ದು]

೨೩. [ಕವಿಜನಾಶ್ರಯಮು : ಕರ್ತೃತ್ವ ಪುನಃಪರಿಶೀಲನಮು ಲೇಖನ ಪ್ರಕಟವಾದ ನಂತರ ಈ ಲೇಖನವನ್ನು ಕುರಿತು ಅನೇಕ ಖಂಡನೆ, ಮಂಡನೆಗಳು ನಡೆದಿವೆ. ಆದರೂ ಮೂಲಲೇಖಕರು ತಮ್ಮ ಮೊದಲಿನ ನಿಲುವಿಗೇ ಬದ್ಧರಾಗಿದ್ದಾರೆ. ನಮ್ಮ ಗಮನಕ್ಕೆ ಬಂದಂತೆ ಕವಿಜನಾಶ್ರಯಮು ಗ್ರಂಥ ಮತ್ತು ಕರ್ತೃವನ್ನು ಕುರಿತು ಪ್ರಕಟವಾಗಿರುವ ಕೆಲವು ಪ್ರಮುಖ ಬರಹಗಳ ಮಾಹಿತಿಯನ್ನು ಪ್ರಕಟನೆಯ ವರ್ಷಾನುಸಾರವಾಗಿ ಕೆಳಗೆ ನೀಡಲಾಗಿದೆ. ಪ್ರಕೃತ ಮೂಲ ಲೇಖನವನ್ನು ಕುರಿತು ಪ್ರಕಟವಾಗಿರುವ ಖಂಡನೆ ಮತ್ತು ಮಂಡನೆಗಳಿಗೆ ಸಂಬಂಧಪಟ್ಟ ಲೇಖನಗಳ ವಿವರಗಳನ್ನೂ ಇಲ್ಲಿ ದಾಖಲಿಸಲಾಗಿದೆ]-(ಅನುವಾದಕ)

೧) ಕವಿಜನಾಶ್ರಯಮು-ಚಿಲಕೂರಿ ನಾರಾಯಣರಾವು, ಭಾರತಿ, ಸಂಪುಟ-೨, ಸಂಚಿಕೆ-೩, ಮಾರ್ಚ್-೧೯೨೫, ಪುಟ ೪-೧೩

೨) ರೇಚನ ಭೀಮನಲ ಕಾಲಮು-ಟೇಕುಮಳ್ಳ ಕಾಮೇಶ್ವರರಾವು, ಭಾರತಿ, ಸಂಪುಟ-೩೬, ಸಂಚಿಕೆ-೯, ಸೆಪ್ಟೆಂಬರ್-೧೯೪೦, ಪುಟ ೩೪-೪೪

೩) ಕವಿಜನಾಶ್ರಯಮು (ಪ್ರಾಚೀನ ಛಂದೋಗ್ರಂಥಮು), ಭಾರತಿ, ರಜತೋತ್ಸವ ಸಂಚಿಕೆ ೧೯೨೪-೧೯೪೯, ಪುಟ ೧೪

೪) ಕವಿಜನಾಶ್ರಯ ವಿಮರ್ಶನ ಖಂಡನಮು-ಜಯಂತಿ ರಾಮಯ್ಯ, ಆಂಧ್ರಸಾಹಿತ್ಯ ಪರಿಷತ್ಪತ್ರಿಕೆ, ಕ್ರೋಧಿ ಸಂವತ್ಸರ, ೧೯೬೪, ಸಂಪುಟ-೧೪, ಸಂಚಿಕೆ-೧, ಪುಟ ೪೯-೫೮

೫) ಕವಿಜನಾಶ್ರಯಮು : ತೆನುಗು ತೊಲಿಕಾವ್ಯಮು-ದೇವರಪಲ್ಲಿ ವೆಂಕಟಕೃಷ್ಣಾರೆಡ್ಡಿ, ಭಾರತಿ, ಸಂಪುಟ-೩೬, ಸಂಚಿಕೆ-೨, ಆಗಸ್ಟ್-೧೯೫೯, ಪುಟ ೭೪-೮೦

೬) ಕವಿಜನಾಶ್ರಯಮು ಭೀಮಕವಿ ಪ್ರಚುರಣ, ಜ. ರಾಮಯ್ಯ ಸವರಣಲು- ಚಿಲಕೂರಿ ನಾರಾಯಣರಾವು, ಆಂಧ್ರಸಾಹಿತ್ಯ ಪರಿಷತ್ಪತ್ರಿಕೆ, ಕ್ರೋಧಿ ಸಂವತ್ಸರ, ೧೯೬೪, ಪುಟ ೪೫

೭) ಕವಿಜನಾಶ್ರಯ ರಚನಾಕಾಲಂ (ಭೀಮಕವಿ)-ಟೇಕುಮಳ್ಳ ಕಾಮೇಶ್ವರರಾವು, ಭಾರತಿ, ಸಂಪುಟ-೪೨, ಸಂಚಿಕೆ-೨, ಏಪ್ರಿಲ್-೧೯೬೫, ಪುಟ ೬೧-೬೪

೮) ಕವಿಜನಾಶ್ರಯಮು : ಭೀಮನ ಛಂದಮು-ರಾವೂರಿ ದೊರಸ್ವಾಮಿ, ಸಾಹಿತಿ ವಾಲ್ಲಭ್ಯಮು (ತಿಮ್ಮರಾಜುಗಾರಿ ಅಭಿನಂದನ ಸಂಪುಟಿ), ೧೯೬೮, ಪುಟ ೨೨೩-೨೨೯

೯) ಕವಿಜನಾಶ್ರಯಮು (ಸಂಗ್ರಹವ್ಯಾಖ್ಯ)-ಟಿ. ಭಾಸ್ಕರರಾವು, ಭಾರತಿ, ಸಂಪುಟ-೪೭, ಸಂಚಿಕೆ-೬, ಜೂನ್-೧೯೭೦, ಪುಟ ೮೮

೧೦) ಮಲ್ಲಿಯ ರೇಚನ-ಗುಮ್ಮಾ ಶಂಕರರಾವು, ಭಾರತಿ, ಸಂಪುಟ-೫೪, ಸಂಚಿಕೆ-೮, ಆಗಸ್ಟ್-೧೯೭೭, ಪುಟ ೪೬-೫೦

೧೧) ಕವಿಜನಾಶ್ರಯಮು ಕರ್ತೃಕಾಲಮು-ಕೊರ್ಲಪಾಟಿ ರಾಮಮೂರ್ತಿ, ಭಾರತಿ, ಸಂಪುಟ-೫೯, ಸಂಚಿಕೆ-೬, ಜೂನ್-೧೯೮೨, ಪುಟ ೫-೧೭

೧೨) ಮೊದಟಿ ತೆಲುಗು ಗ್ರಂಥ ರಚಯಿತ ಮಲ್ಲಿಯ ರೇಚನ-ಪಿ. ವಿ. ಪರಬ್ರಹ್ಮ ಶಾಸ್ತ್ರಿ, ಭಾರತಿ, ಸಂಪುಟ-೬೩, ಸಂಚಿಕೆ-೫, ಮೇ-೧೯೮೬, ಪುಟ ೬-೧೦

೧೩) ಮೊದಟಿ ತೆಲುಗು ಛಂದೋಗ್ರಂಥ ರಚಯಿತ ಮಲ್ಲಿಯರೇಚನ-ಎಂ. ರಾಮಮೋಹನಾಚಾರ್ಯುಲು, ಭಾರತಿ, ಸಂಪುಟ-೬೩, ಸಂಚಿಕೆ-೮, ಆಗಸ್ಟ್-೧೯೮೬, ಪುಟ ೭೫

೧೪) ಮಲ್ಲಿಯರೇಚನ ಮೊದಟಿ ತೆಲುಗು ಗ್ರಂಥ ರಚಯಿತಯಾ ?-ವಂತರಾಂ ರಾಮಕೃಷ್ಣಾರಾವು, ನಿಡದವೋಲು ಭಾರತಿ, ಸಂಪುಟ-೬೩, ಸಂಚಿಕೆ-೧೨, ಡಿಸೆಂಬರ್-೧೯೮೬, ಪುಟ ೬೮-೭೦

೧೫) ಜಿನವಲ್ಲಭನ ಮೇಲೆ ಹೊಸಬೆಳಕು- ಮೂಲ : ಪಿ.ವಿ. ಪರಬ್ರಹ್ಮಶಾಸ್ತ್ರಿ (ಕನ್ನಡ ಅನುವಾದ-ಆರ್. ಶೇಷಶಾಸ್ತ್ರೀ), ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೭೧-೭೨, ಸಂಚಿಕೆ ೨-೧, ಡಿಸೆಂಬರ್ ೧೯೮೬ ಮತ್ತು ಜೂನ್ ೧೯೮೭, ಪುಟ ೪೮-೫೪

೧೬) ಕವಿಜನಾಶ್ರಯ ಕರ್ತೃತ್ವ ಪರಿಶೀಲನ ವಿಷಯಮು-ಸೂರ್ಯದೇವರ ರವಿಕುಮಾರ್, ಭಾರತಿ, ಸಂಪುಟ-೬೫, ಸಂಚಿಕೆ-೧೦, ಅಕ್ಟೋಬರ್-೧೯೮೮, ಪುಟ ೨೨-೨೫

೧೭) ಕವಿಜನಾಶ್ರಯಕರ್ತ : ಪುನಃಪರಿಶೀಲನಂ ಸಂದೇಹಾಲು-ಜೊನ್ನವಿತ್ತುಲ ರಾಮಕೃಷ್ಣಶರ್ಮ, ಭಾರತಿ, ಸಂಪುಟ-೬೫, ಸಂಚಿಕೆ-೧೧, ನವೆಂಬರ್-೧೯೮೮, ಪುಟ ೫೪-೫೬

೧೮) ಕವಿಜನಾಶ್ರಯ ವಿಷಯಮು-ಆರ್. ಶೇಷಶಾಸ್ತ್ರಿ, ಜೆ. ಸದಾನಂದಂ, ಸೂರ್ಯದೇವರ ರವಿಕುಮಾರ್, ಭಾರತಿ, ಸಂಪುಟ-೬೬, ಸಂಚಿಕೆ-೧೨, ಡಿಸೆಂಬರ್-೧೯೮೯, ಪುಟ ೫೮-೫೯

೧೯) ಪ್ರಬಂಧರತ್ನಾವಳಿ–(ಸಂ) ವೇಟೂರಿ ಪ್ರಭಾಕರ ಶಾಸ್ತ್ರಿ, ಶ್ರೀ ಪ್ರಭಾಕರ ಪರಿಶೋಧಕ ಮಂಡಲಿ, ಹೈದರಾಬಾದ್–೧೯೭೬, ದ್ವಿತೀಯ ಮುದ್ರಣ, ಪೀಠಿಕೆ, ಪುಟ ೨೩–೨೮

೨೦) ಆಂಧ್ರಪ್ರದೇಶದ ಕನ್ನಡ ಶಾಸನಗಳು : ಒಂದು ಅಧ್ಯಯನ–ಕೆ.ಆರ್. ಗಣೇಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೯೯೬, ಪುಟ ೧೧೮ ; ೨೪೩–೨೪೫

೨೧) ಮಲ್ಲಿಯರೇಚನ–ಆರುದ್ರ, ಸಮಗ್ರ ಆಂಧ್ರ ಸಾಹಿತ್ಯಂ (ಪ್ರಥಮ ಸಂಪುಟ), ತೆಲುಗು ಅಕಾಡೆಮಿ, ಹೈದರಾಬಾದ್–೨೦೧೨ ರ ಪುನರ್ ಮುದ್ರಣ, ಪುಟ ೧೦೧–೧೧೭

೨೨) ಕವಿಜನಾಶ್ರಯಂ : ಸಿ.ಪಿ. ಬ್ರೌನ್ ಆಂಗ್ಲಾನುವಾದಂ–ವೈದ್ಯಂ ವೆಂಕಟೇಶ್ವರಾಚಾರ್ಯುಲು. ಮೂಸಿ {ಸಾಹಿತ್ಯ, ಸಾಂಸ್ಕೃತಿಕ, ಚಾರಿತ್ರಕ ಮಾಸಪತ್ರಿಕ}, ಜುಲೈ–೨೦೧೫, ಪುಟ ೧೯–೨೨

೨೪. [ಸಂಯುಕ್ತಾಕ್ಷರ ಯತಿ : ಒಕ ಪರಿಶೀಲನ–ಆರ್. ಶೇಷಶಾಸ್ತ್ರಿ, ಜೆ. ಸದಾನಂದಂ, Journal of Telugu Studies, Vol-1, No-4, January, 1989, pp 56-65]

೨೫. [ಪರಿಶಿಷ್ಟವಾಗಿ ನೀಡಿರುವ ಈ ಲೇಖನದ ಮೂಲ ಲೇಖಕರು ಡಾ. ಆರ್. ಶೇಷಶಾಸ್ತ್ರೀ, ಡಾ. ಜೆ. ಸದಾನಂದಂ, ಶ್ರೀ ಸೂರ್ಯದೇವರ ರವಿಕುಮಾರ್ ಅವರುಗಳು. ಈ ಲೇಖನವು 'ಕವಿಜನಾಶ್ರಯ ವಿಷಯಮು' ಎಂಬ ಶೀರ್ಷಿಕೆಯಲ್ಲಿ ಭಾರತಿ ಪತ್ರಿಕೆಯಲ್ಲಿ ಪ್ರಕಟವಾಗಿದೆ {ಸಂಪುಟ–೬೬, ಸಂಚಿಕೆ–೧೨, ಡಿಸೆಂಬರ್–೧೯೮೯, ಪುಟ ೫೮–೫೯}. ಈ ಲೇಖನವು ಕವಿಜನಾಶ್ರಯಮು ಕರ್ತೃತ್ವಮು : ಪುನಃಪರಿಶೀಲನ ಲೇಖನಕ್ಕೆ ಪೂರಕವಾಗಿ ರಚಿತವಾದುದಾಗಿದೆ. ಈ ಲೇಖನ ಪ್ರಕಟವಾದ ನಂತರ ಅನೇಕ ಚರ್ಚೆಗಳು ನಡೆದಿವೆ. ಅವುಗಳ ಬಗೆಗೆ ಮತ್ತು ಕವಿಜನಾಶ್ರಯದ ಕರ್ತೃವನ್ನು ಕುರಿತಾದ ಮೂಲ ಲೇಖಕರ ನಿಲುವು ಈ ಲೇಖನದಲ್ಲಿ ಪ್ರತಿಪಾದಿತವಾಗಿದೆ. ಆದುದರಿಂದ ಈ ಲೇಖನವನ್ನು ಅನುವಾದಿಸಿ ಪರಿಶಿಷ್ಟವಾಗಿ ನೀಡಲಾಗಿದೆ. ಇದನ್ನು ಅನುವಾದಿಸಲು ಮತ್ತು ಪ್ರಕಟಿಸಲು ಅನುಮತಿ ನೀಡಿರುವ ಡಾ. ಆರ್. ಶೇಷಶಾಸ್ತ್ರೀ, ಡಾ. ಜೆ. ಸದಾನಂದಂ, ಶ್ರೀ ಸೂರ್ಯದೇವರ ರವಿಕುಮಾರ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ]–(ಅನುವಾದಕ)

■

ಕಣ್ಮರೆಯಾದ ಅಠಾರಾ ಕಚೇರಿಯ ಚಾರಿತ್ರಿಕ ದಾಖಲೆಗಳು

◆

ಕೆಳದಿ ಗುಂಡಾಜೋಯಿಸ್

ಶಿವಮೊಗ್ಗದಲ್ಲಿರುವ ಹಳೆಯ ಜಿಲ್ಲಾಧಿಕಾರಿಗಳ ಕಟ್ಟಡ ೧೭೬೩ರ ನಂತರ ಬ್ರಿಟಿಷರು ತಮ್ಮ ಆಡಳಿತಾಂಗವಾಗಿ ಉಪಯೋಗಿಸಿಕೊಂಡ ರೋಚಕ ಸಂಗತಿಗಳು ಹಲವು ಕಾರಣಗಳಿಂದ ಕಣ್ಮರೆಯಾಗಿರುವುದು ಐತಿಹಾಸಿಕ ದುರಂತಗಳಲ್ಲೊಂದೆನಿಸಿದೆ. Letter and Despatches of Duke of Wellington ನಲ್ಲಿ ಇಂತಹ ಆಕರ ಸಾಮಗ್ರಿಗಳು ಕಂಡುಬರುತ್ತವೆ. ಜನರಲ್ ಮಾಥ್ಯೂಸ್ ಟಿಪ್ಪು, ಶೇಕ್ ಅಯಾಜ್ ಮುಂತಾದವರನ್ನು ಸೋಲಿಸಿದ ನಂತರ ಪ್ರಥಮ ಸ್ವಾತಂತ್ರ ಹೋರಾಟಗಾರರಾಗಿದ್ದ ಧೋಂಡಿಯಾ ವಾಘ್, ಕಲ್ಯಾಣಪ್ಪ ಕಾಟಕಾಯಿ, ಆರೆ ಬಸಪ್ಪಾಜಿ ಅರಸು ಮುಂತಾದವರನ್ನು ವಿಮುಖಗೊಳಿಸಲು ಬಿದನೂರಿನಲ್ಲಿದ್ದ ಕೆಳದಿ ಶಿವಪ್ಪನಾಯಕನ ಕೋಟೆ ಹಾಗೂ ಶಿವಮೊಗ್ಗದಲ್ಲಿದ್ದ ಅರಮನೆಯಲ್ಲಿ ಬ್ರಿಟಿಷರು ಬಹು ಕಾಲ ತಳವೂರಿದ್ದ ಮಾಹಿತಿಗಳು ಹಾಗೂ ಅಪೂರ್ವ ಪತ್ರಾಗಾರವು ನಗರ ದರ್ವಾಜಾ ಎಂಬ ಹೆಸರಿನಿಂದ ಕೂಡಿದ್ದ ಶಿವಮೊಗ್ಗ ಹಳೆಯ ಜಿಲ್ಲಾಧಿಕಾರಿ ಕಟ್ಟಡದಲ್ಲಿ ಸಂಗ್ರಹವಾಗಿದ್ದುದನ್ನು ಸಂಗ್ರಹಿಸಲು ಇತಿಹಾಸಾಭಿಮಾನಿಗಳಾಗಿದ್ದ ಜಿಲ್ಲಾಧಿಕಾರಿ ವಿ. ಬಾಲಸುಬ್ರಮಣಿಯನ್ ಐಎಎಸ್‌ರವರು ನನಗೆ ಪ್ರೋತ್ಸಾಹಿಸಿದ್ದರು. ಇವರ ಪ್ರೋತ್ಸಾಹದಿಂದಲೇ ಕ್ಯಾಟಲಾಗ್ ಸಿದ್ಧಪಡಿಸಿಕೊಟ್ಟಿದ್ದೆನು. ಸನಿಹದಲ್ಲಿರುವ ನಗರ ದರ್ವಾಜಾದಲ್ಲಿರುವ ಪಳೆಯುಳಿಕೆ ಪುಷ್ಕರಿಣಿಯೊಂದು (ಇದರ ಸುತ್ತಲೂ ಮನೆಗಳಿದ್ದು ಯಾರಿಗೂ ಗೋಚರಿಸದಂತಿದೆ) ನವಾಬ್ ಹೈದರ್, ಟಿಪ್ಪು ಹಾಗೂ ಬ್ರಿಟಿಷ್ ಸೇನೆಯ ಕುದುರೆಗಳಿಗೆ ನೀರು ಕುಡಿಯುವ ತಾಣವಾಗಿದ್ದುದನ್ನು ಪತ್ತೆಯ ಮೂಲಕ ಕಾಣಬಹುದು.

ಈ ಹಳೆಯ ಜಿಲ್ಲಾಧಿಕಾರಿ ಕಟ್ಟಡದಲ್ಲಿದ್ದ ಅವಶೇಷಗಳೊಂದಿಗೆ ಎಲ್ಲಾ ಪಳೆಯುಳಿಕೆಗಳನ್ನೂ ನೂತನ ಜಿಲ್ಲಾ ಕಚೇರಿ ನಿರ್ಮಿಸುವಾಗ ಮುಂದಿನ ಪೀಳಿಗೆಗೆ ಉಳಿಸಲು ಜಿಲ್ಲಾಧಿಕಾರಿ ಶ್ರೀ ಅನಿಲ್‌ಕುಮಾರ್ ಐಎಎಸ್‌ರವರು ಕೆಳದಿಗೆ ನಮ್ಮ ಮನೆಗೆ ಭೇಟಿಯಿತ್ತು ಸಹಕಾರ ನೀಡಲು ಕೇಳಿಕೊಂಡ ಮೇರೆಗೆ ನನ್ನ ಅನಾರೋಗ್ಯ

ದಲ್ಲಿಯೂ ಪ್ರಯತ್ನಪಟ್ಟು ಯೋಜನೆಯೊಂದನ್ನು ಸಿದ್ಧಪಡಿಸಿದ್ದರಿಂದ ಅವರು ಕ್ಷಿಪ್ರದಲ್ಲಿಯೇ ಇವುಗಳನ್ನು ಮುಂದಿನ ಸಂಶೋಧನೆಗೆ ಕೆಳದಿ ಮ್ಯೂಜಿಯಂನಲ್ಲಿರಿಸಲು ಏರ್ಪಾಟು ಮಾಡಿದ್ದರು. ಹಲವು ಕುತರ್ಕಗಳಿಂದ ಇದು ಕೈತಪ್ಪಿಹೋಗಿದ್ದು ಹಾಗೂ ಕಣ್ಮರೆಯಾಗಿರುವುದು, ಅಗ್ನಿಗಾಹುತಿಯಾಗಿರುವುದು ವಿದ್ವತ್ ಪ್ರಪಂಚಕ್ಕೆ ಅಪಾರ ನಷ್ಟವಾಗಿರುವುದು ದುರ್ದೈವ! ಸ್ಟೋಕ್ಸ್ ಕಾಲದಿಂದ ದಿವಾನ್ ಪೂರ್ಣಯ್ಯ ಆದಿಯಾಗಿ ಮಿರ್ಝಾ ಇಸ್ಮಾಯಿಲ್‌ವರೆಗಿನ ಅನೇಕ ಚಾರಿತ್ರಿಕ ಸಂಗತಿಗಳು, ಪ್ರಾಚೀನ ಕಡತಗಳು ಹಾಗೂ ನಾನು ಸಿದ್ಧಪಡಿಸಿಕೊಟ್ಟಿದ್ದ ಕ್ಯಾಟಲಾಗ್‌ಗಳು ಮುಂತಾದವುಗಳನ್ನು ಉಳಿಸಲು ನಡೆಸಿದ ನನ್ನ ಹೋರಾಟಗಳು ನಿಷ್ಫಲವಾಗಿದ್ದುದನ್ನು ವಿದ್ವಾಂಸರ ಮುಂದೆ ದೈನ್ಯತೆಯಿಂದ ವಿಶದೀಕರಿಸುತ್ತಾ ಈ ಕೆಳಗಿನ ಒಂದೆರಡು ಅಮೂಲ್ಯ ಚಾರಿತ್ರಿಕ ದಾಖಲೆಗಳನ್ನು ನೀಡುತ್ತಿದ್ದೇನೆ. ಇವುಗಳು ರಕ್ಷಣೆ ಮಾಡಲು ತುಂಬ ಜೀರ್ಣವಾಗಿರುವುದರಿಂದ ಇದ್ದ ಭಾಗಗಳನ್ನು ಜೋಡಿಸಿ ಪಠ್ಯಭಾಗವನ್ನು ಸಂಶೋಧನಾಸಕ್ತರಿಗಾಗಿ ನಿರೂಪಿಸಲಾಗಿದೆ. ಇವುಗಳು ಇಂಗ್ಲೀಷ್ ಮೋಡಿ ಲಿಪಿಯಲ್ಲಿ ಸುಂದರವಾದ ಲಿಪಿಯನ್ನೊಳಗೊಂಡು ಓದಬಹುದಾಗಿದೆ. ಇವುಗಳೆಲ್ಲವೂ ಅಠಾರಾ ಕಚೇರಿಯಲ್ಲಿಯ ಸಂಗ್ರಹಗಳಾಗಿವೆ.

ಪಠ್ಯಭಾಗ

In the chief court of Mysore at Bangalore Wednesday the 29th day of February 1888.

Present

T.R.A. Thumboo chetty Esquire, Judge

and

A. Ramachandra Iyer Esquire, Judge
Revision Case No. 11 of 1888

Proceedings
No. 43 dated
4th January 1888

In the matter of a reference from the District Magistrate of Shimoga in the case of Mackee Sidda accused in criminal case No. 37 of 1887 on the file of the Amildar and 3rd class Magistrate of this thirthalli.

Order

We agree with the District Magistrate in holding that the conviction in this case under section 24 of the forest rules was clearly illegal. We quash the conviciton and direct that the fine, if recovered be refunded to the accused.

"A True Copy"

Chief court
of Mysore
(Round Seal)

Sd/-
Registrar

Front side

P.N. Krishna Murthy Esq re Judge. Under ordinary circmstances, I should have hesitated to set aside on the revision side a concurrent finding of fact of the two lower courts and especially so as in this case, the evidence is not discussed strong enough to support a finding absolutely in the negative But the complainant has come to court with a great deal of falsehood. The cause he assigned for the assault and the circumstances under which he said he was beaten are both disbelieved by the Didtrict Magistrate. Having to deal with a complainant.

Back side

Who has been found by the District Magistrate to leavce tainted his case with deliberate falsehood I do not feel justified in with holding my assent to the order proposed by the learned Chief Judge.

A True copy
Sd/-
Registrar

obverse: ಮೈಸೂರು ಸರಕಾರದ ಅಧಿಕೃತ ಮುದ್ರಾಂಕಿತ ಕಾಗದದಲ್ಲಿರುವುದು.

In The Chief Court of Mysore at Bangalore Monday the 29th day of June 1891.

Present

T.R.A. Thumboo Chetty Esq off of Chief Judge

and

A. Ramachandra Iyer EsQ Judge
Revsion Case No. 236 of 1891

In the matter of a reference from the District Magistrate of Shimoga in the case of Naga and soma accusedaccused in Criminal Case No (೧/೦)11 of 1891 on the file of the Amildar and 3d class magistrate of Nagar Taluk.

Order

T.R.A. Thumboo chetty Esq : The facts of this case are briefly these : The complainants buffaloe wounded and injuned a buffaloe belonging to the accused who left the injured annimal in the complainants cattleshed and took away the complainants buffaloe - the 3d class magistrate of Nagar Taluk convicted.

Reverse:

The accused of theft under section 379 Indian Penal Code and sentenced them to 15 and 7 days rigorous imprisonment and to pay a fine of Rs 10 and 5 of each and in default to undergo 7 days addtional rigorous imprisonment.

The District Magistrate submits the proccedings, remarking that asuming the conviction to be proper, the sentence of imprisonment was, under the circumstances, very severe, and that a sentence of fine was more than sufficient.

The accused admitted that they did not obtain (permission) of the complainant for the (re-exchange) of his buffaloe for their wounded animal. The complainants buffaloe was taken away (clandestinely) without his knowledge and in his absnece. The taking was therefore wrongful and dishonest involving the intention of causing wrongful gain to the accused and wrongful loss to the complainant. If the accused thought that the complainant was responsible for the injury caused to their buffaloe by

Next Page:

by complainants buiffaloe they could have dabtained redress by proceeding against the complainant either civily or criminally but they were wrong in having taken the law into their own hands.

Taking into consideration, the fact that the accused were in police custody for a week before their conviction and that they had undergone the imprisonment awarded to them, I think the fines may be remitted and refunded.

A. Ramachandra Iyer Esq: I concur in remitting the fines.

Round Seal
Chief Court of
Mysore

A True copy
Sd/-
Registrar

No 12510
596

Office of the Dewan of Mysore Bangalore 11/13 February 1891. From the Chief Secretary to the Dewan of Mysore.

To

The Assistant to the Resident in Mysore.

With reference to your letter No. 2595/172-90 of the 12th August 1890 I am directed to forward for information copy of a statement of the number of Licenced dealers in firearms and of the arms sold and in stock at present in the town of Shimoga.

The number of licenced dealers in arms at present in the District of Shimoga is given on the margin and the Deputy Commissioner considers that the number in the tour of Shimoga may be reduced to 4 and that at Thirthahalli to 3. The Deputy Commissioner has been directed to reduce the number of Licence holders at the first opportuniity.

I have the

Sd/- P. Ananda Rao

Chief Secretary

Copy forwarded to the Deputy Comminssioner Shimoga Distsrict for information and guidance with refernce to his No. 371/347 Dated 9th September 1890.

ಈ ಕಾಲದ ದಿವಾನರುಗಳು

Dewans of Mysore

My. R.S. Purnaiah	1799
My. Balaji Rao	1811
My. Babu Rao	1812
My. Siddaraje urs	1817
My. Babu Rao	1818
My. Lingaraj urs	1821
My. Babu Rao	1822
My. Venkate urs	1827
My. C. Rangacharlu	1881
Sir K. Sheshadri Iyer	1883
Mr. T.R.A. Thambu Chethiyar	1900

(Mr. T.R.A. Thamboo Chettiar was acting Dewan five times from 1890-1901)

Sir P.N. Krishna Murthy	1901
Sir V.P. Madhava Rao	1906
Mr. T. Ananda Rao	1909
Sir M. Viswesaraya	1913
Sirdar Sri M. Kantaraj urs	1918
Sir Albian Banerji	1922
Amin Ul Mukh Sir Mirza M. Ismail	1926

ಲೇಖನ ವಿಸ್ತಾರ ಭಯದಿಂದ ತಂಬೂಚೆಟ್ಟಿಯಾರ್ ಮತ್ತು ವಿ.ಎಸ್. ಕೃಷ್ಣಮೂರ್ತಿರವರ ಕಾಲದಲ್ಲಿದ್ದ ಬ್ರಿಟಿಷ್ ರೆಸಿಡೆಂಟ್‌ನ ಹೆಸರನ್ನು ಮಾತ್ರ ನೀಡಲಾಗಿದೆ.

ಜನರಲ್ ಸರ್ ಹ್ಯಾರಿ ಪ್ರೆಂಡೆರ್‌ಗಾಸ್ಟ್ ವಿ.ಸಿ. ೧೮೮೭–೮೯ ಮತ್ತು ೧೮೯೧–೯೨.

ಉಪಸಂಹಾರ

ದಿ॥ ನಿಟ್ಟೂರು ಶ್ರೀನಿವಾಸರಾಯರು ಬ್ರಿಟಿಷರ ಕಾಲದಲ್ಲಿದ್ದ ಅನೇಕ ಅಠಾರಾ ಕಚೇರಿಯ ಪತ್ರಗಳನ್ನು ಪರಿಶೀಲನೆಗಾಗಿ ಅವರ ಸ್ವಾಧೀನದಲ್ಲಿದ್ದ ಶಿವಮೊಗ್ಗ ಹಳೆಯ ಜಿಲ್ಲಾಧಿಕಾರಿ ಪತ್ರಾಗಾರದಲ್ಲಿ ಶೇಖರವಾಗಿದ್ದುದನ್ನು ತಿಳಿಸಿದ್ದರು. ಇಲ್ಲಿ ವಿವರಿಸಿದ ಹಲವಾರು ದಾಖಲೆಗಳು ಇದನ್ನು ಸಮರ್ಥಿಸುತ್ತವೆ. ಕಣ್ಮರೆಯಾದ ಇಂತಹ ಅಮೂಲ್ಯ ಸಂಗ್ರಹಗಳು ಸ್ವಾತಂತ್ರ್ಯ ಪೂರ್ವ ಇತಿಹಾಸ ರಚನೆಗೆ ಅವಕಾಶವಿಲ್ಲದಂತೆ ನಾಶವಾಗಿರುವುದು ದುರ್ದೈವ. ಅಠಾರಾ ಕಚೇರಿಯಲ್ಲಿರುವ ಸ್ವಾತಂತ್ರ್ಯ ಪೂರ್ವದ ಪತ್ರಾಗಾರ ಅವಲೋಕನೆಗೆ ಸರಕಾರದ ಚಾರಿತ್ರಿಕ ದಾಖಲಾನ್ವೇಷಣಾ ಉನ್ನತ ಸಮಿತಿಯ ಸದಸ್ಯನಾಗಿದ್ದ ನನಗೆ ದಿ॥ ನಿಟ್ಟೂರು ಶ್ರೀನಿವಾಸರಾಯರು ಹಾಗೂ ದಿ॥ ನಾರಾಯಣ ಪೈರವರಿಂದ ಪ್ರೋತ್ಸಾಹ ಲಭಿಸಿತ್ತು. ಏಕೋ ಏನೋ ಇದು ಮುಂದುವರಿಯ ದಂತಾಯಿತು! ರಾಜ್ಯ ಪತ್ರಾಗಾರ ಸ್ಥಾಪನೆಗೆ ಮುಂಚೆ ಬ್ರಿಟಿಷರ ಕಾಲದ ವೈವಿಧ್ಯಮಯ ಪತ್ರಗಳು ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಂಗ್ರಹಿಸಿ ತನ್ಮೂಲಕ ಲಂಡನ್‌ಗೆ ಸಾಗಿಸಿದ್ದ ಮಾಹಿತಿಗಳೂ ಉಪಲಬ್ದವಿವೆ. ಹಲವಾರು ಅಮೂಲ್ಯ ಸಂಗ್ರಹಗಳು ಬಂಗಾಳ ಸರಕಾರದ ರಾಜ್ಯಪಾಲನಾಗಿದ್ದ ಡೆವರೋಕ್ಸ್ ಮುಖಾಂತರ ವಿವಿಧೆಡೆಗಳಿಗೆ ವರ್ಗಾಯಿಸಿರುವುದೂ ಕಂಡುಬರುತ್ತದೆ. ಬುಕನನ್ ಸಂಗ್ರಹಿಸಿದ ಅನೇಕ ಶಾಸನಗಳೂ ಬಂಗಾಳಾ ಸರಕಾರಕ್ಕೆ ದಿವಾನ್ ಪೂರ್ಣಯ್ಯನು ರವಾನಿಸಿದ್ದು ಬುಕನನ್ ಪ್ರವಾಸಿ ಕಥನದಲ್ಲಿ ಉಲ್ಲೇಖಗಳು ಕಂಡುಬಂದಿವೆ. ಈವರೆಗೂ ಇವುಗಳ ಸಂಶೋಧನಾ ಸಾಮಗ್ರಿಗಳು ಕನ್ನಡಿಗರಿಗೆ ಉಪಲಬ್ಧವಿಲ್ಲದೆ ಕರ್ನಾಟಕ ಚರಿತ್ರೆ ರಚನೆಗೆ ಅಪಾರ ನಷ್ಟವುಂಟಾಗಿದೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿ ಶ್ರೀ ಅನಿಲ್‌ಕುಮಾರ್‌ರವರು ಸ್ವತಹ ಆಸಕ್ತಿ ತಾಳಿ ಕೊನೆಯ ಪಕ್ಷ ದಾಖಲೆಯಾಗಿರಲೆಂಬ ದೃಷ್ಟಿಯಿಂದ ನನ್ನನ್ನು ಮುಂದಿರಿಸಿಕೊಂಡು ನಿರ್ವಹಿಸಿದ ಸಿ.ಡಿ.ಯು ಈಗಲೂ ನನ್ನಲ್ಲಿದೆ ಸದ್ಯಕ್ಕೆ ಇಷ್ಟು ಸಾಕೆನಿಸಿದ್ದು ವಿದ್ವಾಂಸರ ಗಮನಕ್ಕೆ ಇದನ್ನು ಸಲ್ಲಿಸಿದ್ದೇನೆ.

■

ರಾಘವಾಂಕನ 'ಹರಿಶ್ಚಂದ್ರ ಕಾವ್ಯ': ಸತ್ಯ–ತರ್ಕಗಳ ಮುಖಾಮುಖಿ

◆

ಡಾ. ಎಚ್.ಎಸ್. ಮುರಳೀಧರ

ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ಚರ್ಚಿತವಾಗಿರುವ ಕಾವ್ಯಗಳಲ್ಲೊಂದು. ಕಾವ್ಯಪರಂಪರೆಯಲ್ಲಿ ತಂದ ಒಂದು ಸ್ಥಿತ್ಯಂತರದಿಂದಾಗಿ ರಾಘವಾಂಕನು ವಿಶೇಷವಾಗಿ ಗಮನವನ್ನು ಸೆಳೆಯುವ ಒಬ್ಬ ಕವಿಯಾಗಿರುವುದು ಇದಕ್ಕೆ ಒಂದು ಕಾರಣವಾದರೆ, ಅವನು ಅಭಿವ್ಯಕ್ತಿಸಿದ ಹರಿಶ್ಚಂದ್ರನ ಕಥೆಯ ವಸ್ತುವಿನ್ಯಾಸ ಇಂದಿಗೂ ಹಲವು ಬಗೆಯ ಚರ್ಚೆಗಳಿಗೆ ಎಡೆಮಾಡಿ ಕೊಟ್ಟಿರುವುದು ಇನ್ನೊಂದು ಕಾರಣ. ಈ ಹಿನ್ನೆಲೆಯಲ್ಲಿ 'ಹರಿಶ್ಚಂದ್ರಕಾವ್ಯದ' ಕೆಲವು ಮಗ್ಗಲುಗಳನ್ನು ಪರಿಶೀಲಿಸುವುದು ಪ್ರಸ್ತುತ ವಿವೇಚನೆಯ ಉದ್ದೇಶ.

ಈ ನಿಟ್ಟಿನಲ್ಲಿ ಹೇಳಬೇಕಾದ ಮೊದಲ ಮಾತೆಂದರೆ ಈ ಕಾವ್ಯದ ಕಥಾಭಿತ್ತಿಯೇ ವಿಶೇಷವಾದುದೆನ್ನುವುದು. ಹರಿಶ್ಚಂದ್ರ ಭೂಲೋಕದ ರಾಜನೆನ್ನುವುದು ನಿಜ. ಅವನದು ಮಾನುಷ ಅಸ್ತಿತ್ವವೆನ್ನುವುದೂ ನಿಜ. ಆದರೆ ಅವನ ಕಥನದ ಪ್ರಾರಂಭದ ಬಿಂದು ದೇವಲೋಕದಲ್ಲಿರುವುದೂ ಅಷ್ಟೇ ನಿಜ. ಅಲ್ಲದೆ ಕಥೆಯ ಶಿಖರ ಕೈಲಾಸವನ್ನೂ ಆಹ್ವಾನಿಸುತ್ತದೆ. ಪುರಾಣವನ್ನೂ ಇತಿಹಾಸದ ಲೌಕಿಕತೆಯನ್ನೂ ಪಾಕವೊಂದರಲ್ಲಿ ಮೇಳೈಸುವ ಒಂದು ವಿಧಾನವಾಗಿ ಇದು ಕಂಡುಬರುತ್ತದೆ. ಇದರಿಂದ ಕವಿಯ ಅಭಿವ್ಯಕ್ತಿ ಹಲವು ಅನುಕೂಲಗಳನ್ನು ಪಡೆದಿರುವುದೂ ನಿಜ. ಒಂದೆಡೆ ಪೌರಾಣಿಕತೆಯನ್ನು ಲೋಕದ ವಾಸ್ತವ ವಿವರಗಳೆಂಬಂತೆ ಪ್ರಸ್ತುತ ಪಡಿಸಲು ಇದರಿಂದ ಸಾಧ್ಯವಾಗಿರುವುದಾದರೆ ಇನ್ನೊಂದೆಡೆ ಲೌಕಿಕವನ್ನು ಅಲೌಕಿಕದ ಹರಹುಗಳಿಗೆ ವಿಸ್ತರಿಸಲು ಕೂಡ ಇದರಿಂದ ಸಾಧ್ಯವಾಗಿದೆ. ಕಾವ್ಯದ ಅಭಿವ್ಯಕ್ತಿ ತನ್ನ ವಿವರಗಳಲ್ಲಿ ಇದನ್ನು ಸಾಧಿಸಿರುವ ರೀತಿಯ ಬಗೆಗೆ ಒಂದೆರಡು ಅಂಶಗಳನ್ನು ಗಮನಿಸಬಹುದು.

ಕವಿಯೇ ಹೇಳುವಂತೆ 'ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು, ಎರಡಿಲ್ಲವೆಂದು ಶ್ರುತಿ ಸಾರುತಿರಲಾ ವಾಕ್ಯವರೆರೆ ನಿರುತವ ಮಾಡಿ ಮೂಜಗಕೆ ತೋಜಿದ ಹರಿಶ್ಚಂದ್ರಕಥೆ' (೧೪.೩೩) ಈ ಕಾವ್ಯ. ಎಂದರೆ ಸತ್ಯದ ಸ್ಥಾಪನೆಯೇ ಈ

ಕೃತಿಯ ಕೇಂದ್ರವೆಂದಂತಾಯಿತು. ಹೀಗಿರುವಾಗ ಈ ಕೃತಿಯ ವಿನ್ಯಾಸಕ್ಕೂ ಈ ಕೃತಿಯಿಂದ ಹೊರಪಡುವ ಸತ್ಯದ ವಿನ್ಯಾಸಕ್ಕೂ ಏರ್ಪಡುವ ಸಂಬಂಧವನ್ನು ಗ್ರಹಿಸುವುದು ಹೇಗೆ ಎಂಬ ಪ್ರಶ್ನೆ ಎದುರಾಗುತ್ತದೆ. ಸತ್ಯವೆಂಬ ಮೌಲ್ಯದ ಬಗೆಗೆ ಇಷ್ಟೊಂದು ಕಾಳಜಿಯನ್ನು ಹೊಂದಿರುವ ಕೃತಿಕಾರ ಅದನ್ನು ಕೇವಲ ತನ್ನ ಕಾವ್ಯವಸ್ತುವಿನ ಆಶಯವಾಗಿ ಮಾತ್ರ ಕಂಡಿದ್ದಾನೆಯೇ ಅಥವಾ ತನ್ನ ಅಭಿವ್ಯಕ್ತಿಯ ಆಕೃತಿಯ ವಿವರಗಳಲ್ಲೂ ವಾಸ್ತವವಾಗಿಸಲು ಪ್ರಯತ್ನಿಸಿದ್ದಾನೆಯೇ ಎಂಬ ಸಂಗತಿ ಕೆಲಮಟ್ಟಿಗಾದರೂ ಪ್ರಸ್ತುತವಾಗುವುದೆಂದು ತೋರುತ್ತದೆ. ಅಥವಾ ಅಂದಿನ ಕಾವ್ಯಸಂದರ್ಭದಲ್ಲಿ ಇಂಥದೊಂದು ಪ್ರಶ್ನೆಯೇ ಅಪ್ರಸ್ತುತವೆಂದು ತೋರಲೂ ಸಾಧ್ಯವಿದೆ. ಒಟ್ಟು ಅಭಿವ್ಯಕ್ತಿಯ ಸ್ವರೂಪವೇ ಸಂಪ್ರದಾಯವೊಂದರಿಂದ ಯಾಂತ್ರಿಕವಾಗಿ ಸ್ವೀಕೃತವಾದದ್ದು ಎಂದು ಭಾವಿಸುವುದಾದರೆ ಆಗ ಈ ನಿಲುವು ಅನಿವಾರ್ಯವಾಗುತ್ತದೆ.

ಗ್ರಹಿಕೆಯ ಅನುಕೂಲಕ್ಕಾಗಿ ಪ್ರಸ್ತುತ ಕಥನದ ನಿರೂಪಣೆಯನ್ನು ಇಮ್ಮುಖವಾದ ಆಯಾಮದಲ್ಲಿ ನೋಡಬಹುದೆಂದು ತೋರುತ್ತದೆ. ಒಂದು ಲೋಕದ ಆಯಾಮವಾದರೆ ಇನ್ನೊಂದು ಲೋಕೋತ್ತರದ ಆಯಾಮ. 'ಹರಿಶ್ಚಂದ್ರ ಕಾವ್ಯದ' ಕಥನಾಕ ಲೋಕದಿಂದ ಲೋಕೋತ್ತರಕ್ಕೂ ಲೋಕೋತ್ತರದಿಂದ ಲೋಕಕ್ಕೂ ಜೀಕುವ ಸ್ವರೂಪವುಳ್ಳದ್ದು. ಇವೆರಡರ ನಡುವೆ ಇಲ್ಲಿನ ಭಾಷಿಕ ಆಕೃತಿ ಯಾವ ಗುಣಾತ್ಮಕವಾದ ವ್ಯತ್ಯಾಸವನ್ನು ಮಾಡುವುದಿಲ್ಲ. ವಾರ್ಧಕ ಷಟ್ಪದಿಯ ರಾಚನಿಕ ವಿನ್ಯಾಸವೂ ಕೂಡ ಇದಕ್ಕೆ ಸಹಕಾರಿಯಾಗಿ ಒದಗಿಬಂದಿರುವುದನ್ನು ನೋಡಬಹುದು. ಸ್ವರೂಪತಃ ವಾರ್ಧಕದಲ್ಲಿ ಕ್ಷಿಪ್ರಗತಿಯ ಏರಿಳಿತಗಳಿಲ್ಲ. ಅಲ್ಲದೆ ಗದ್ಯದ ಮುಕ್ತತೆಯನ್ನು ಷಟ್ಪದಿಯ ರಚನೆ ಒಳಗೊಂಡಿರುವದನ್ನು ಈಗಾಗಲೇ ಗುರುತಿಸಲಾಗಿದೆ.[೧] ಹೀಗಾಗಿ ಅಸಾಮಾನ್ಯವಾದುದನ್ನು ಸಾಮಾನ್ಯೀಕರಿಸುವ ಸೌಲಭ್ಯ ಈ ಅಭಿವ್ಯಕ್ತಿಯಲ್ಲೇ ಅಂತರ್ಗತವಾಗಿದೆ. 'ಹರಿಶ್ಚಂದ್ರ ಕಾವ್ಯದ' ಅಭಿವ್ಯಕ್ತಿ ಈ ಸೌಲಭ್ಯವನ್ನು ಬಳಸಿಕೊಂಡಿದೆ. ಇದು ಲೋಕಸತ್ಯವನ್ನು – ಬಹಳಷ್ಟು ಸಲ 'ಅಲೋಕಸತ್ಯವನ್ನು ಕೂಡ– ಕಾವ್ಯಸತ್ಯವಾಗಿಸಲು ಅಭಿವ್ಯಕ್ತಿ ಕಂಡುಕೊಂಡ ವಿಧಾನ. ಈ ಮಾತಿನ ಮುಂದುವರಿಕೆಯಾಗಿ ಗಮನಿಸಬೇಕಾದ ಸಂಗತಿಯೊಂದಿದೆ. ಅದು ಕಾವ್ಯದ ಕಥನಕ್ರಮದಲ್ಲೇ ಅಂತರ್ಗತವಾಗಿರುವ ಅಭಿವ್ಯಕ್ತಿಯ ಸತ್ಯವನ್ನು ಕುರಿತದ್ದು. ಈ ಅಭಿವ್ಯಕ್ತಿ ಸತ್ಯವಾಗುವ ವಿಧಾನವೆಂದರೆ ಕಥನವನ್ನು 'ಇಲ್ಲಿ ಮತ್ತು ಈಗ' ('here and now') ಎಂಬ ವಿನ್ಯಾಸಕ್ಕೆ ಅಳವಡಿಸುವುದು. ಕಥನದ ಕಾಲವನ್ನು ಓದುಗನ ಅಥವಾ ಕೇಳುಗನ ಕಾಲದೊಂದಿಗೆ ಸಂಧಿಸುವಂತೆ ಮಾಡುವುದು. ಇದು ಇನ್ನೊಂದು ರೀತಿಯಲ್ಲಿ ನಂಬಿಸುವ ಒಂದು ವಿಧಾನವಾಗಿಯೂ ಕೆಲಸ ಮಾಡುತ್ತದೆ. ಕಾವ್ಯದಲ್ಲಿ ಬರುವ ಸುದೀರ್ಘವಾದ ವರ್ಣನೆಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಕಥನದ ಈ ತಂತ್ರಕ್ಕೆ ಪೂರಕವಾಗಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ನಾಟಕೀಯ ಸಂವಾದಗಳ ಬಳಕೆ. ವಸ್ತುವಿನ ವಾಸ್ತವೀಕರಣಕ್ಕೆ ಪೂರಕವಾಗಿ ಈ ಸಂವಾದಗಳು ಕೆಲಸ ಮಾಡುವುದನ್ನು ಗಮನಿಸಬಹುದಾಗಿದೆ.

ಹರಿಶ್ಚಂದ್ರನು ಭೂಮಿಯ ಮೇಲಿನ ರಾಜನಾದರೂ ಅವನ ಏಳುಬೀಳುಗಳ ಮೂಲವಿರುವುದು ಸ್ವರ್ಗದಲ್ಲಿ. ಇನ್ನು ವಸಿಷ್ಠ-ವಿಶ್ವಾಮಿತ್ರರು ಎಲ್ಲಿ ಬೇಕಾದರೂ ಇರಬಲ್ಲವರು. ಹರಿಶ್ಚಂದ್ರನ ವಿಷಯ ಭೂಮಿಯ ವಿಷಯವಾದರೂ ಅದು ಸ್ವರ್ಗದಲ್ಲೂ ತಾಪ-ತಲ್ಲಣಗಳನ್ನು ಉಂಟುಮಾಡಬಲ್ಲದು. ಹೀಗಾಗಿ ಇಲ್ಲಿ ದೇಶದ ನಿರ್ದಿಷ್ಟತೆ ನಿರಾಕರಣೆಗೆ ಒಳಗಾಗುತ್ತದೆ. ಇನ್ನು ಇಲ್ಲಿನ ಕಾಲದ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕು. ಇಲ್ಲಿನ ಹರಿಶ್ಚಂದ್ರ ಕಾಲ ಯಾವುದು? ಇಲ್ಲಿನ ಕಥನದಲ್ಲಿ ಭೂಮಿಯ ಮೇಲಿನ ಹರಿಶ್ಚಂದ್ರನಿಗೆ ಒಂದು ಕಾಲಾನುಕ್ರಮಣಿಕೆಯಿದೆ. ಅದನ್ನು ಅನುಸರಿಸಿಯೇ ಕಾವ್ಯದಲ್ಲಿ ಘಟನೆಗಳು ಜರುಗುತ್ತವೆ. ಆದರೆ ಸ್ವರ್ಗದಲ್ಲಿ ನಡೆಯುವ ವಸಿಷ್ಠ-ವಿಶ್ವಾಮಿತ್ರರ ಸಂವಾದದಲ್ಲಿ ವಿಶ್ವಾಮಿತ್ರನು ವೇದದಲ್ಲಿ ಬರುವ ಹರಿಶ್ಚಂದ್ರನ ಕಥೆಯನ್ನು ಪ್ರಸ್ತಾವಿಸುತ್ತಾನೆ. ಅದು ಶುನಃಶೇಫನ ಪ್ರಸಂಗ. ಹರಿಶ್ಚಂದ್ರನು ಸುಳ್ಳುಗಾರನೆಂಬುದನ್ನು ಸಾಬೀತುಪಡಿಸಲು ಅವನು ಈ ಪ್ರಸಂಗವನ್ನು ಉಲ್ಲೇಖಿಸುತ್ತಾನೆ. ಇಲ್ಲಿ ವಿಶ್ವಾಮಿತ್ರನು ಹರಿಶ್ಚಂದ್ರನ ಭೂತದ ಬಗೆಗೆ ಉದ್ದೇಶಪೂರ್ವಕವಾಗಿಯೇ ಮಾತನಾಡುತ್ತಾನೆ. ಆದರೆ ವಸಿಷ್ಠನು ಹರಿಶ್ಚಂದ್ರನ ಭೂತದ ಬಗೆಗೆ ಎಂಬಂತೆ ಮೌನವಾಗಿದ್ದಾನೆ. ಅವನಿಗೆ ಹರಿಶ್ಚಂದ್ರನ ವರ್ತಮಾನ ಭವಿಷ್ಯಗಳು ಮುಖ್ಯವಾಗುತ್ತದೆ. 'ಹಲವು ಮಾತೇಕೆ? ಆ ಹರಿಶ್ಚಂದ್ರ ಭೂನಾಥನೊಳಗೆ ಅಸತ್ಯವನ್ನು ಕಾಣಿಸಲು ಬಲ್ಲರು ಧಾತ್ರಿಯೊಳು ಮುನ್ನ ಹುಟ್ಟಿದವರಿಲ್ಲ, ಇನ್ನು ಹುಟ್ಟುವರ ಕಾಣೆನು; ಆನಿದ ಬಲ್ಲೆನು, ಉಳಿದವರ ಹವಣಾವುದು?' ಎಂಬ ವಸಿಷ್ಠನ ಪ್ರತಿಕ್ರಿಯೆಯಲ್ಲಿ (೨.೨೦) ಹರಿಶ್ಚಂದ್ರನನ್ನು ಭೂತದಿಂದ ಪಾರುಮಾಡುವ ಪ್ರಯತ್ನವೂ ಪರೋಕ್ಷವಾಗಿರುವುದನ್ನು ಗಮನಿಸದಿರುವಂತಿಲ್ಲ. ಇದೇನೇ ಇರಲಿ; ಇಲ್ಲಿನ ಹರಿಶ್ಚಂದ್ರನ ಅಸ್ತಿತ್ವ ಮಾತ್ರ ಭೂತ-ವರ್ತಮಾನಗಳಲ್ಲಿ ವಿಭಜನೆಗೊಂಡಿರುವುದೆಂದೇ ಭಾವಿಸಬೇಕಾಗುತ್ತದೆ. ಹರಿಶ್ಚಂದ್ರನ ಭೂತದ ಬಗೆಗಿನ ವಸಿಷ್ಠನ ಮೌನದಲ್ಲಿ ಕವಿಯ ಮೌನವೂ ಸೇರಿದೆಯೇ? ಕವಿ ಕಟ್ಟಿಕೊಡುವ ಕಾಲದ ಚೌಕಟ್ಟು ಯಾವುದು? ಈ ಬಗೆಗಿನ ಸಂದಿಗ್ಧತೆ ಉಳಿದುಕೊಳ್ಳುತ್ತದೆ. ಇಷ್ಟರ ಮೇಲೆ ಕವಿ ಕಟ್ಟಿಕೊಡುವ ಹರಿಶ್ಚಂದ್ರನ ವ್ಯಕ್ತಿತ್ವ ಮಾತ್ರ ವಿಶ್ವಾಮಿತ್ರನು ಉಲ್ಲೇಖಿಸುವ ವೇದದ ಕಥೆಯ ಹರಿಶ್ಚಂದ್ರನನ್ನು ನಿರಾಕರಿಸುವಂತೆಯೇ ಇದೆ. ಇದನ್ನು ಕಾಲಕ್ಕೆ ಸಂಬಂಧಿಸಿದಂತೆ ಕಾವ್ಯವು ಪ್ರಕಟಿಸುವ ಸೀಳು ಎಂದು ಪರಿಗಣಿಸಬೇಕೆ ಎಂಬ ಪ್ರಶ್ನೆ ಉಳಿಯುತ್ತದೆ.

ಇನ್ನು ಹರಿಶ್ಚಂದ್ರನ ಸತ್ತ್ವಪರೀಕ್ಷೆ ಅಥವಾ ಸತ್ಯಪರೀಕ್ಷೆ ಕಾವ್ಯದ ಪ್ರಧಾನ ಭಿತ್ತಿಯಾಗಿದೆ. ಆದರೆ ಈ ಪರೀಕ್ಷೆ ಕೇವಲ ಹರಿಶ್ಚಂದ್ರನೊಬ್ಬನ ಪರೀಕ್ಷೆಯಾಗುವುದಿಲ್ಲ. ಅದು ಅಷ್ಟೇ ಪ್ರಮಾಣದಲ್ಲಿ ವಿಶ್ವಾಮಿತ್ರನ ಪರೀಕ್ಷೆಯೂ ಆಗುತ್ತದೆ ಮತ್ತು ಒಂದು ತಾಟಸ್ಥ್ಯದ ನೆಲೆಯಲ್ಲಿದ್ದರೂ ವಸಿಷ್ಠನ ಪರೀಕ್ಷೆಯೂ ಆಗುತ್ತದೆ. ಈ ಪರೀಕ್ಷೆಗಳ ಹೆಣಿಗೆಗಳನ್ನು ಕೆಲಮಟ್ಟಿಗೆ ವಿಚಾರ ಮಾಡಬೇಕಾದ ಅಗತ್ಯವಿದೆ. ಕಥಾಭಿತ್ತಿಯಲ್ಲಿ ಪ್ರಧಾನವಾಗಿ ಜರುಗುವುದು ಹರಿಶ್ಚಂದ್ರನ ಸತ್ಯದ ಪರೀಕ್ಷೆಯಾದರೂ ಇಲ್ಲಿರುವುದು ವಾಸ್ತವವಾಗಿ ಸತ್ಯಗಳ ನಡುವಣ ತಾಕಲಾಟ. ಇಲ್ಲಿ ಒಂದೆಡೆ ವಿಶ್ವಾಮಿತ್ರನ ಸತ್ಯವಿದೆ. ಇನ್ನೊಂದೆಡೆ ವಸಿಷ್ಠನ ಸತ್ಯವೂ ಇದೆ. ವಿಚಿತ್ರವೆಂದರೆ ಇವೆಲ್ಲ ಅವಲಂಬಿತ ಸತ್ಯಗಳಾಗಿವೆಯೇ

ಹೊರತು ಸ್ವತಂತ್ರ ಸತ್ಯಗಳಾಗಿಲ್ಲ. ವಿಶ್ವಾಮಿತ್ರನ ಸತ್ಯ ಉಳಿಯಬೇಕಾದರೆ ಹರಿಶ್ಚಂದ್ರನ ಸತ್ಯ ಅಳಿಯಬೇಕು. ಹರಿಶ್ಚಂದ್ರನ ಸತ್ಯ ಅಳಿದರೆ ವಸಿಷ್ಠನ ಸತ್ಯವೂ ಅಳಿಯುತ್ತದೆ. ಹೀಗಾಗಿ ಇಲ್ಲಿ ಸತ್ಯಗಳ ನಡುವಿನ ಸ್ಪರ್ಧೆಯೆಂದು ತೋರುವುದು ಪರೋಕ್ಷವಾಗಿ ಅಹಂಕಾರಗಳ ನಡುವಿನ ಸ್ಪರ್ಧೆಯೂ ಆಗಿದೆ. ಕಾವ್ಯದಲ್ಲಿ ಇದರ ಸೂಚನೆ ಸ್ಪಷ್ಟವಾಗಿಯೇ ಇದೆ. ವಿಶ್ವಾಮಿತ್ರನು ವಸಿಷ್ಠನನ್ನು ವಿರೋಧಿಸಲು ಕಾರಣ–ಅದನ್ನು ಕಾರಣವೆನ್ನಬಹುದಾದರೆ– ಇದು:

> 'ಶೀವಿದೊಡ್ಡೋಲಗದ ನಡುವೆ ತನ್ನಂ ಮೊದಲೊಳೋವಿ ನುಡಿಸದ ಕೋಪವೊಂದು
> ವಸಿಷ್ಠ ಮುನಿ ಯಾವುದಂ ಪೇಳ್ದಡದನಲ್ಲೆಂಬ ಭಾಷೆಯೆರಡು,
> ಅಖಿಳ ಜೀವಾವಳಿಯಲಿ ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ ಮುಪ್ಪುರಿಗೊಂಡು.....' (೨.೮)

ಹೀಗಾಗಿ ಇಲ್ಲಿ ಸತ್ಯಕ್ಕಿಂತಲೂ ಅಹಂಕಾರ ಹೆಚ್ಚು ಮುಖ್ಯವಾಗುತ್ತದೆ. ಸತ್ಯಕ್ಕೆ ಸೋಲಿನ ಭಯವಿಲ್ಲ; ಆದರೆ ಅಹಂಕಾರ ಸೋಲಿನ ಭಯವಿಲ್ಲದೆ ಎಡೆಯಿಲ್ಲ. ಈ ಭಯ, ಸಹಜವಾಗಿಯೇ, ಆಕ್ರಮಣಕ್ಕೆ ಎಡೆಮಾಡಿಕೊಡುತ್ತದೆ. ಈ ಕಥನದ ಉದ್ದಕ್ಕೂ ನಾವು ಕಾಣುವುದು ಆಕ್ರಮಣವನ್ನೆ. ವಿಪರ್ಯಾಸವೆಂದರೆ, ಆಕ್ರಮಣದ ಏಕೈಕ ಹಂಬಲ ಗೆಲುವಿನ ಪ್ರತಿಷ್ಠೆಯಾಗಿರುವುದರಿಂದ ಅದು ಸುಳ್ಳನ್ನು ಕೂಡ ಒಂದು ಅಸ್ತ್ರವಾಗಿಸಿಕೊಳ್ಳಲು ಹಿಂಜರಿಯುವುದಿಲ್ಲ. ಇದು ಅಹಂಕಾರದ ಸತ್ಯದ ಶೋಚನೀಯ ಮುಖವೂ ಹೌದು.

ಇಲ್ಲಿಂದ ಮುಂದೆ ಹರಿಶ್ಚಂದ್ರನ ಸತ್ಯದ ಪರೀಕ್ಷೆಯಾಗುವುದೆಂದು ಹೇಳಲಾಗಿದೆಯಷ್ಟೆ ಈ ಪರೀಕ್ಷೆಯ ಆಯಾಮಗಳನ್ನು ಪರಿಶೀಲಿಸಬೇಕಾದ ಅಗತ್ಯವಿದೆ. ಆಕ್ರಮಣವು ಯಾವಾಗಲೂ ಚಿಂತಿತ ನೆಲೆಯದು; ಯೋಜನೆಗಳನ್ನು ರೂಪಿಸುವುದು, ತಂತ್ರಗಾರಿಕೆ ಅದರ ಪ್ರಧಾನ ಲಕ್ಷಣ. ಅದು ಕ್ಷಣಕ್ಷಣಕ್ಕೂ ಬದಲಾಗುತ್ತಿರಬೇಕಾಗುತ್ತದೆ. ಆದರೆ ಸತ್ಯ ಚಿಂತಿತ ನೆಲೆಯದಲ್ಲ; ಅದು ಸ್ವಭಾವ; ಅದು ಅಸ್ತಿತ್ವ. ಇವೆರಡರ ನಡುವಣ ವೈದೃಶ್ಯ ನಮಗೆ ಕಥನದುದ್ದಕ್ಕೂ ಎದುರಾಗುತ್ತದೆ. ಈ ದೃಷ್ಟಿಯಿಂದ ಈ ಕಥೆಯ ಬೆಳವಣಿಗೆಯಿರುವುದೇ ಸ್ಥಾಯಿಯೊಂದಿಗೆ ಅಸ್ಥಾಯಿಯೂ ಅಚಿಂತಿತದೊಂದಿಗೆ. ಚಿಂತತವಾದುದೂ ನಡೆಸುವ ಸಂಘರ್ಷದಲ್ಲಿ ಎನ್ನಬಹುದು.[೨]

ಈ ಸಂಘರ್ಷಕ್ಕೆ ಕಥನದಲ್ಲಿ ಒಂದು ಮೂರ್ತವಾದ ಆಯಾಮವೂ ಇರುವುದನ್ನು ನೋಡಬಹುದು. ಸತ್ಯ ನಿರುಪಾಧಿಕ; ಅದು ತನ್ನಷ್ಟಕ್ಕೇ ಇರುವಂಥದು. ಇಂತಹ ಸತ್ಯವನ್ನು ಗೆಲ್ಲುವುದು ಎಂದರೇನು? ಈ ಪ್ರಯತ್ನದಲ್ಲಿ ಕೇವಲ ಅಸ್ತಿತ್ವವಾಗಿರುವ ಸತ್ಯವು ಕ್ರಿಯೆಯಾಗಬೇಕು. ಆಗ ಅದಕ್ಕೆ ಪ್ರತಿಕ್ರಿಯಿಸಲು ಸಾಧ್ಯ. ಇದಕ್ಕೆ ಸಮಾನಾಂತರವಾಗಿ ನೋಡುವುದಾದರೆ ಭಾವವು ಅಭಿವ್ಯಕ್ತಿಯಾಗಬೇಕು. ಮುಂದುವರಿದು ಹೇಳುವುದಾದರೆ ಅಭಿವ್ಯಕ್ತಿ ತರ್ಕವಾಗಬೇಕು. ಭಾಷೆಯನ್ನು ತರ್ಕದ ಅವನತಿಗೆ ಎಳೆದುತರುವುದು ಸತ್ಯದೊಂದಿಗೆ ಹೋರಾಡುವೆನೆಂಬ ಭ್ರಮೆಯ ಒಂದು ವ್ಯಾವಹಾರಿಕ ತಂತ್ರವೂ ಹೌದು

ಹರಿಶ್ಚಂದ್ರನ ಕಥನದ ಉದ್ದಕ್ಕೂ ತರ್ಕದ ಸರಣಿಗಳ ಆಧಿಕ್ಯವಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ವಸಿಷ್ಠ-ವಿಶ್ವಾಮಿತ್ರರ ಸಂವಾದ, ಹರಿಶ್ಚಂದ್ರ-ಹೊಲತಿಯರ ಸಂವಾದ, ಹರಿಶ್ಚಂದ್ರ-ವಿಶ್ವಾಮಿತ್ರರ ಸಂವಾದ- ಹೀಗೆ ಹಲವು ನೆಲೆಗಳಲ್ಲಿ ತರ್ಕದ ಅನಾವರಣವಾಗುತ್ತದೆ. ಸತ್ಯದ ಸಾಧನವಾಗಬೇಕಾದ ತರ್ಕ ಇಲ್ಲಿ ಆಕ್ರಮಣದ ಉಪಕರಣವಾಗುತ್ತದೆ. ಈ ತರ್ಕದ ದತ್ತಾಂಶವನ್ನು ಕಟ್ಟಿಕೊಡುವವನು ವಿಶ್ವಾಮಿತ್ರ. ಈ ಕಟ್ಟುವಿಕೆಯಲ್ಲಿ ಒಂದು ಜಾಣ್ಮೆಯಿದೆ. ಚದುರಂಗದ ಆಟದಲ್ಲಿ ಎದುರಾಳಿಯ ನಡೆಗಳನ್ನು ಒತ್ತಾಯಿಸುವಂತೆ ಮಾಡುವ ನಡೆಗಳಂತೆ ಈ ಕಟ್ಟುವಿಕೆ; ಎದುರಾಳಿಯು ತನ್ನ ಕೈಗಳಿಂದಲೇ ತನ್ನನ್ನು ಕಟ್ಟಿಕೊಳ್ಳುವಂತೆ ಮಾಡುವ ತಂತ್ರ. ಅಲ್ಲದೆ ಈ ತರ್ಕವನ್ನು ಎರಡು ಆಯಾಮಗಳಲ್ಲಿ ಗ್ರಹಿಸಲು ಸಾಧ್ಯವಿದೆ. ಒಂದು, ಭಾಷಿಕ ಆಯಾಮ; ಇನ್ನೊಂದು, ಕ್ರಿಯೆಯ ಆಯಾಮ. ಭಾಷಿಕ ಆಯಾಮದಲ್ಲಿ ಇದು ಸಂವಾದಗಳ ರೂಪದಲ್ಲಿ ವ್ಯಕ್ತವಾದರೆ ಕ್ರಿಯೆಯ ಆಯಾಮದಲ್ಲಿ ಇದು ಸಂಚುಗಳ ರೂಪವನ್ನು ತಾಳುತ್ತದೆ. ಅದು ಆನೆಯ ಮೇಲೆ ನಿಂತು ಕವಡೆಯನ್ನು ಚಿಮ್ಮುವುದಾಗಬಹುದು, ಆಕ್ರಮಣಕ್ಕಾಗಿ ಪಶುಪಕ್ಷಿಗಳನ್ನು ಕಳಿಸುವುದಾಗಬಹುದು, ಹೊಲತಿಯರನ್ನು ಸೃಷ್ಟಿಸುವ ಅಥವಾ ಕಾಳ್ಗಿಚ್ಚನ್ನು ಹಬ್ಬಿಸುವ ಸನ್ನಿವೇಶವೂ ಆಗಬಹುದು. ಈ ದೃಷ್ಟಿಯಿಂದ ಈ ಕಥಾನಕದ ಭಿತ್ತಿಯನ್ನು ಸತ್ಯ ಹಾಗೂ ತರ್ಕಗಳ ನಡುವಣ ಸಂಘರ್ಷಗಳ ನೆಲೆಯಲ್ಲಿಯೇ ಗ್ರಹಿಸಲು ಸಾಧ್ಯವಿದೆ. ಈ ಮಾತನ್ನು ಹೇಳಲು ಇನ್ನೊಂದು ಕಾರಣವಿದೆ. ತರ್ಕದ ಸ್ತರದಲ್ಲಿ ಸೋಲುಗೆಲುವುಗಳ ನಿರ್ಣಯ ಸುಲಭ. ಏಕೆಂದರೆ ಅದು ಮೂರ್ತ. ಆದರೆ ಸತ್ಯದ ಸ್ತರದಲ್ಲಿ ಹಾಗಲ್ಲ. ಅದು ಅಮೂರ್ತ. ಹರಿಶ್ಚಂದ್ರನಿಗೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಬಹುತೇಕ ಚರ್ಚೆಗಳು ತರ್ಕದ ಸ್ತರದಲ್ಲಿ ನಡೆದಿರುವ ಚರ್ಚೆಗಳೆಂದು ಹೇಳಬೇಕಾಗುತ್ತದೆ. ಹೊಲತಿಯರ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಹರಿಶ್ಚಂದ್ರನ ನಿಲುವು ಸರಿಯೋ ತಪ್ಪೋ ಎಂಬ ಬಗೆಗೆ ನಡೆದಿರುವ ಚರ್ಚೆಗಳು ಇದಕ್ಕೊಂದು ಉದಾಹರಣೆ. ಈ ಬಗೆಯ ಚರ್ಚೆಯ ಅಗತ್ಯವನ್ನು ಒಂದು ಹಂತದವರೆಗೆ ಒಪ್ಪಿಕೊಂಡೂ ಹೇಳಬೇಕಾದ ಒಂದು ಮಾತಿದೆ. ಅದೆಂದರೆ ಈ ಕಥನದ ಆಕೃತಿ ತನ್ನ ಆಶಯದ ಆಳದ ಸ್ತರದಲ್ಲಿ ಹರಿಶ್ಚಂದ್ರನನ್ನು ಸತ್ಯದ ಪ್ರತಿನಿಧಿಯಾಗಿಯೂ ವಿಶ್ವಾಮಿತ್ರನನ್ನು ತರ್ಕದ ಪ್ರತಿನಿಧಿಯಾಗಿಯೂ ಈಗಾಗಲೇ ಸ್ಥಾಪಿಸಿಬಿಟ್ಟಿದೆ ಎನ್ನುವುದು. ಸತ್ಯದ ಸ್ಥಾನವನ್ನು ತರ್ಕವು ಪಲ್ಲಟಿಸುವುದನ್ನು ಅದು ಒಪ್ಪುವುದಿಲ್ಲ. ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ರಾಜ್ಯವನ್ನು ಒಪ್ಪಿಸಿಕೊಡುವ ಸಂದರ್ಭದಲ್ಲಿ ಪ್ರಜೆಗಳು ಆಡುವ ಮಾತುಗಳು ಈ ಆಶಯದ ರೂಪಕದಂತಿವೆ.

೧. ಹರಿಶ್ಚಂದ್ರನನ್ನು ಉದ್ದೇಶಿಸಿ ಆಡುವ ಮಾತು :

ದಂತಿಯಿಂದಿಳಿದು ನಡೆದಜೆಯದವ ಬಱುಗಾಲೊಳೆಂತಡಿಯನಿಡುವೆ
ಹಾಸಿನೊಳು ಪವಡಿಸುವಾತನೆಂತು ಕಲುನೆಲದೊಳೊಱಗುವೆ?
ಸಿತಚ್ಛತ್ರ ತಂಪಿನೊಳು ಬಪ್ಪಾತ ನೀನು ಎಂತು ಬಱಬಿಸಿಲನಾನುವೆ

ಪುರದೊಳಿಪ್ಪಾತನೆಂತರಣ್ಯದೊಳಿಪ್ಪೆ?
ಜನವನಗಲ್ದಱಿಯದವನೆಂತು ಪೇಳೇಕಾಕಿಯಾಗಿಪ್ಪೆ?-
ಎಂದು ಮೊಱೆಯಿಟ್ಟುದು ಸಮಸ್ತ ಜನವು (೯.೬)

೨. ವಿಶ್ವಾಮಿತ್ರನನ್ನು ಉದ್ದೇಶಿಸಿ ಆಡುವ ಮಾತು :
ಜಡೆಗಳೆಂದು ಮಕುಟಮಂ, ನಾರಸೀರೆಯನು ತೊಱೆದುಡಿಗೆಯಂ,
ರುದ್ರಾಕ್ಷಮಾಲೆಯಂ ಕಳೆದು ಮಣಿದೊಡಿಗೆಯಂ,
ಕಂದಮೂಲವನು ಬಿಟ್ಟೂಟವಂ, ದರ್ಭೆಯಂ ಬಿಟ್ಟಸಿಯನು,
ಅಡವಿಯಂ ಬಿಟ್ಟು ನಗರಿಯ, ಭಸಿತವಂ ಬಿಟ್ಟು ಕಡು ಸುಗಂಧಂಗಳ
ಜಿತೇಂದ್ರಿಯತ್ವವ ಬಿಟ್ಟು ಮಡದಿಯರ ಜಗವಱಿಯೆ ಕೂಡಲು
ವ್ರತಕ್ಕೆ ಮುಪ್ಪಾಯ್ತೆ ಮುಪ್ಪಿನೊಳು ಎಂದರು (೯.೮)

ಮಲೆತು ಬೆನ್ನಟ್ಟುವ ಮಹಾರಿಷಡ್ವರ್ಗವಂ ಗೆಲಲಱಿಯದವನಾವ
ಹಗೆಗಳಂ ಗೆಲುವೆ?
ನಿನ್ನೊಳಗೆ ಕರಣವ ಸಂತವಿಡಲಱಿಯದವನಾದ ದೇಶಮಂ ಸಂತವಿಡುವೆ?
ಸಲೆ ತಪಸ್ತೇಜದಿಂ ಪುರುಷಾರ್ಥಕೋಶಮಂ ಬಳಸಲಱಿಯದವನಾವ
ತೇಜದಿಂ ಕೋಶಮಂ ಬಳಸಿದಪೆ?
ಕಂಗೆಟ್ಟು ಕಡುಪಾಪಿ ಮೂರ್ಖ ಕೌಶಿಕ ಕೇಳು ಕೇಳೆಂದರು (೯.೯)

ಹರಿಶ್ಚಂದ್ರನು ಅಡವಿಗೆ ನಡೆಯುತ್ತಿರುವುದನ್ನು 'ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ' (೯.೧೦) ಎಂದರಂತೆ ಜನ. ಹಾಗಾದರೆ ಬರುತ್ತಿರುವುದೇನು ಎನ್ನುವುದು ಸ್ಪಷ್ಟವಾಗಿಯೇ ಇದೆ. ಈ ಗಮನಿಕೆಯ ಉದ್ದೇಶ ಕಪ್ಪುಬಿಳುಪುಗಳ ಸರಳ ವಿಭಜನೆಯಲ್ಲಿ ಕಾವ್ಯದ ಆಶಯವನ್ನು ಹಿಡಿದಿಡುವುದಲ್ಲ. ಬದಲಿಗೆ ಕೇವಲ ಆಂಶಿಕ ಪರಿಗಣನೆಗಳ ಮೇಲೆ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ ಎನ್ನುವುದನ್ನು ಗಮನಿಸುವುದು ಮಾತ್ರವೇ ಆಗಿದೆ.

ಕಥನದಲ್ಲಿ ಸತ್ಯ ತರ್ಕಗಳ ನಡುವಿನ ಸಂಘರ್ಷಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಇನ್ನೊಂದು ಸಂಗತಿಯಿದೆ. ತರ್ಕವು ಸ್ವಭಾವತಃ ಆಕ್ರಮಣಕಾರಿಯೆಂಬುದನ್ನು ನೋಡಿದ್ದೇವೆ. ತರ್ಕಕ್ಕೆ ಸತ್ಯವು ಪ್ರತಿಕ್ರಿಯಿಸುವುದು ಪ್ರತಿಯಾದ ಆಕ್ರಮಣದ ಮೂಲಕ ಅಲ್ಲ; ಬದಲಾಗಿ ಬಿಟ್ಟುಕೊಡುವುದರ ಮೂಲಕ. ಆದರೆ ತರ್ಕದ ಪಾಲಿಗೆ ಈ ಬಿಟ್ಟುಕೊಡುವಿಕೆಯೂ ಪ್ರತ್ಯಸ್ತ್ರವಾಗಿಯೇ ಪರಿಣಮಿಸುತ್ತದೆ. ರಾಜ್ಯತ್ಯಾಗದಿಂದ ಮೊದಲುಗೊಂಡು ಎಲ್ಲ ಸನ್ನಿವೇಶಗಳಲ್ಲಿ ಇದನ್ನು ಕಾಣಬಹುದು. ಹರಿಶ್ಚಂದ್ರನಿಂದ ಮೊದಲುಗೊಂಡು ತಮ್ಮನ್ನು ತಾವು ಇಲ್ಲವಾಗಿಸಿಕೊಳ್ಳುವುದರ ಮೂಲಕವೇ ಇಲ್ಲಿನ ಪಾತ್ರಗಳು ಸತ್ಯವನ್ನು ತಮ್ಮಲ್ಲಿ ಆವಾಹಿಸಿಕೊಳ್ಳುತ್ತವೆ. 'ಸತ್ಯವೆಂಬುದೆ ಹರನು' ಎಂಬ ಸಂದೇಶಕ್ಕೆ ಇದು ಪೂರ್ವಭಾವಿಯಾದ ಸಿದ್ಧತೆಯಾಗುತ್ತದೆ. ಹೀಗೆ ತರ್ಕವನ್ನು ತರ್ಕದಿಂದಲ್ಲದೆ ಬಲಿದಾನದಿಂದ ಮೀರುವ ವಿನ್ಯಾಸ ಇಲ್ಲಿದೆ. ಇದರ ಮುಂದುವರಿಕೆಯಾಗಿ

ಹರನು ಸತ್ಯವಾಗುವುದರಲ್ಲಿ ತರ್ಕವಿಲ್ಲ, ಕೇವಲ ಕಾಣ್ಕೆಯಿದೆ. ಹರನು 'ಹೊಡೆದ ಕಡುಗದ ಬಾಯ ಕಡೆಯ ಹೊಡೆಗುಳನಾಂತು ಮಡದಿಯೆಡೆಗೊರಳ ನಡುವಡಸಿ ಮೂಡಿದನು' ಎನ್ನುವಲ್ಲಿ ಒಂದು ಪ್ರತಿಮೆಯಿದೆ. ಹರನು 'ಹೊರಗೆ' ವ್ಯಕ್ತವಾಗದೆ ಒಳಗಿನಿಂದ ಕಾಣಿಸಿಕೊಂಡಿದ್ದರಲ್ಲಿ ಇದರ ಔಚಿತ್ಯವನ್ನು ಗುರುತಿಸಬಹುದು. ಈ ಮೂಲಕವೂ ಸತ್ಯದೊಂದಿಗೆ ಹರನ ಸಮೀಕರಣ ಸಾಧಿತವಾಗಿದೆ.

ಸತ್ಯವನ್ನು ಹರನೊಂದಿಗೆ ಸಮೀಕರಿಸಿರುವುದು ನಮ್ಮನ್ನು ಇನ್ನೂ ಒಂದಿಷ್ಟು ಮುಂದಕ್ಕೆ ತೆಗೆದುಕೊಂಡು ಹೋಗುವಂತೆ ತೋರುತ್ತದೆ. ಆಗ ಸತ್ಯವೆನ್ನುವುದು ಕೇವಲ ನೀತಿಯಾಗದೆ ತಪಸ್ಸಾಗುತ್ತದೆ. ಆಗ ಸತ್ಯವಂತನು ತಪಸ್ವಿಯಾಗುತ್ತಾನೆ. ಈ ದೃಷ್ಟಿಯಿಂದ ಈ ಮಾತು ತಪಸ್ಸು ಹಾಗೂ ತಪಸ್ವಿಯ ಪರಿಕಲ್ಪನೆಗಳನ್ನು ವಿಸ್ತರಿಸುವಂತೆ ತೋರುತ್ತದೆ. ಕಾವ್ಯದ ಕೊನೆಯಲ್ಲಿ ಬರುವ 'ಅತಿ ಹುಸಿವ ಯತಿ ಹೊಲೆಯ, ಹುಸಿಯದಿಹ ಹೊಲೆಯನು ಉನ್ನತ ಯತಿವರನು' (೧೪.೯) ಎಂಬ ಮಾತು ಇದಕ್ಕೆ ಪೂರಕವಾಗಿದೆ. ಇನ್ನೊಂದು ಕಡೆಯಿಂದ ಈ ಮಾತು ಸತ್ಯವನ್ನಿಟ್ಟುಕೊಂಡು ಹೊಲೆತನವನ್ನು ಮರುವ್ಯಾಖ್ಯಾನ ಮಾಡುವ ಪ್ರಯತ್ನವಾಗಿದೆಯೇ ಎಂಬುದನ್ನು ವಿಚಾರ ಮಾಡಬಹುದು. ಇದಕ್ಕೆ ಸಂಬಂಧಿಸಿದಂತೆ ಕೆಲವು ಸೂಚನೆಗಳು ಕಾವ್ಯದಲ್ಲಿ ಸಿಗುತ್ತವೆ. ವಿಶ್ವಾಮಿತ್ರನ ಕೋಪದಿಂದ ಹುಟ್ಟಿದ ಸ್ತ್ರೀಯರು ಹೊಲತಿಯರಾದುದು ವಿಶ್ವಾಮಿತ್ರನ ಬಗೆಗಿನ ತೀರ್ಪು ಕೂಡ ಆಗುತ್ತದೆ. ಇನ್ನೊಂದು ಕಡೆ ಅವರನ್ನು ಹೊಲತಿಯರೆಂದು ಜರಿದ ಹರಿಶ್ಚಂದ್ರನಲ್ಲಿ ತನ್ನ ಕುಲದ ಬಗೆಗಿನ ಅಭಿಮಾನ ತಲೆಯೆತ್ತಿರಬಹುದಾದ ಸಾಧ್ಯತೆ ಕೂಡ ವ್ಯಕ್ತವಾಗುತ್ತದೆ. ಹಾಗಿದ್ದಲ್ಲಿ ಸತ್ಯವು ಆ ಅಭಿಮಾನದಿಂದ ತನ್ನನ್ನು ಕಳಚಿಕೊಳ್ಳಬೇಕು. ಇದರ ಮುಂದುವರಿಕೆಯೋ ಎಂಬಂತೆ ಹರಿಶ್ಚಂದ್ರನು ಹೊಲೆಯನ ಆಳಾಗಬೇಕಾಗುತ್ತದೆ. ಆದರೆ ಈ ಆಳ್ತನವನ್ನು ಹರನ ಮಾತುಗಳಲ್ಲಿ ಕಾವ್ಯವು ಮರುವ್ಯಾಖ್ಯಾನಿಸುತ್ತದೆ. ಹರನ ಮಾತು ಎನ್ನುವಲ್ಲಿ ಸತ್ಯದ ಮಾತು ಎನ್ನುವ ಸೂಚನೆಯೂ ಅಡಕವಾಗಿದೆಯಷ್ಟೆ? ಆ ಪದ್ಯ ಹೀಗಿದೆ :

ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲೆಯನ ಸೇವೆ ಗುರುಸೇವೆ
ಹೊತ್ತ ಹೊಲೆವೇಷ ಪಾವನ ಪುಣ್ಯವೇಷ,
ಸುಡುಗಾಡ ರಕ್ಷಿಸುವಿರವು ತಾ ಯಜ್ಞರಕ್ಷೆಯಿರವು,
ಅನುದಿನಂ ಭುಂಜಿಸಿದ ಶವದ ಶಿರದಕ್ಕಿಯಲ್ಲ ಅನಪೇಯ ಚಾಂದ್ರಾಯಣ
ಪುತ್ರನಳಿವು ಜನ್ಮನಿಕಾಯದಳಿವು,
ಅಂಗನಾಹನನ ಮಾಯಾಹನನ ಅಂಜಬೇಡೆಂದನು (೧೪.೬)

ಇದರ ಪ್ರಕಾರ ಯಾವುದು ಉನ್ನತ ತಪವೋ ಅದು ತಪವಲ್ಲದಿರಬಹುದು ; ಯಾವುದು ತಪವೆನ್ನಲು ಬಾರದ ಹೀನ ಕ್ರಿಯೆಯೆಂದು ತೋರುವುದೋ ಅದು ತಪವಾಗಿರಬಹುದು. ಈ ದೃಷ್ಟಿಯಿಂದ 'ಅತಿ ಹುಸಿವ ಯತಿ ಹೊಲೆಯ' ಎಂಬ ಮಾತು ಯಾರನ್ನು ಸಂಬೋಧಿಸುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ತಕ್ಷಣಕ್ಕಂತೂ

ವಿಶ್ವಾಮಿತ್ರನತ್ತಲೇ ನಮ್ಮ ದೃಷ್ಟಿ ಹರಿಯುವಂತಾಗುತ್ತದೆ.[೨] ಇದು ಈ ಸಂಗತಿಯ ಒಂದು ನೆಲೆ. ಆದರೆ ಇದನ್ನು ಮೀರಿದ ಇನ್ನೂ ಸಾಮಾನ್ಯವಾದ ಇನ್ನೊಂದು ನೆಲೆಯಲ್ಲಿ ಕೇವಲ ಜನ್ಮಾಧಾರಿತ ವರ್ಣಪದ್ಧತಿಯನ್ನು ಈ ಕಥನವು ವಿಮರ್ಶಿಸುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

ಸಾಮಾನ್ಯವಾಗಿ ವಾಚಿಕದ ನೆಲೆಗೆ ಸೀಮಿತಗೊಂಡಂತೆ ಪರಿಭಾವಿಸಲಾಗುವ ಸತ್ಯವನ್ನು ಅಸ್ತಿತ್ವದ ಆಗುಹೋಗುಗಳೊಂದಿಗೆ ಬೆಸೆದದ್ದು ಹರಿಶ್ಚಂದ್ರ ಕಾವ್ಯದ ವಿಶೇಷತೆಯಾಗಿದೆ ಎನ್ನಬೇಕು. ಈ ಬೆಸೆಯುವಿಕೆ ಭಾಷಿಕ ಅಭಿವ್ಯಕ್ತಿ ಹಾಗೂ ಕ್ರಿಯೆಗಳ ಸಂಯೋಜನೆ ಈ ಎರಡೂ ನೆಲೆಗಳಲ್ಲಿ ಸಾಧಿತವಾಗಿದೆ. ಈ ಹಿನ್ನೆಲೆಯಲ್ಲಿ ತನ್ನ ಆಶಯವನ್ನು ಸತ್ಯವಾಗಿಸಲು ಹೊಸ ಮಾರ್ಗವನ್ನು ಅನ್ವೇಷಿಸಿದ ಕವಿಯಾಗಿ ರಾಘವಾಂಕ ಎಂದಿಗೂ ಮುಖ್ಯನಾಗುತ್ತಾನೆ.

ಉಲ್ಲೇಖ, ಟಿಪ್ಪಣಿಗಳು

೧. ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಗಾತಿ, (ಹಂಪಿ : ಕನ್ನಡ ವಿಶ್ವವಿದ್ಯಾಲಯ, ೧೯೯೭) ಪುಟ ೧೭೩

೨. ಕಥನದ ಉದ್ದಕ್ಕೂ ಇದಕ್ಕೆ ನಿದರ್ಶನಗಳು ಸಿಗುತ್ತವೆಯಾದರೂ ಕೇವಲ ಮಾದರಿಗಾಗಿ ಇಲ್ಲಿ ಪದ್ಯವೊಂದನ್ನು ಉದಾಹರಿಸಿದೆ (೮.೬೬) ವಿಶ್ವಾಮಿತ್ರ-ಹರಿಶ್ಚಂದ್ರರ ನಡುವಿನ ಈ ಸಂಭಾಷಣೆ ವಿಶ್ವಾಮಿತ್ರನ ಪ್ರತ್ಯುತ್ಪನ್ನಮತಿಯನ್ನೂ ಹರಿಶ್ಚಂದ್ರನ ಪ್ರತಿಕ್ರಿಯೆಯ 'ಅಚಿಂತಿತ' ಸ್ಥಿತಿಯನ್ನೂ ಏಕಕಾಲಕ್ಕೆ ಹಿಡಿದಿಡುತ್ತವೆ. ಇಲ್ಲಿನ ಮಾತುಗಳ ಪ್ರಸ್ತುತೆ ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅಭಿನೀತಗೊಳಿಸಿದೆ. ಸಂಧಿಯನ್ನು ಒಡೆಯದೆ ಈ ಪದ್ಯವನ್ನು ಹಾಗೇ ಓದಿಕೊಂಡಾಗ ಆಗುವ ಉಸಿರುಕಟ್ಟುವ ಅನುಭವವೂ ಸನ್ನಿವೇಶದ ಸಾಂದ್ರತೆಯನ್ನು ಹಿಡಿದಿಡುವಂತಿದೆ.

ನಡೆ ರಥವನೇಜಿಕೊಳ್ಳೊಲ್ಲೆನೇಕೊಲ್ಲೆ ಪರ
ರೊಡವೆಯನಗಾಗದೇಕಾಗದಾನಿತ್ತೆನಿ
ತ್ತಡೆ ಕೊಳಲು ಬಾರದೇಂ ಕಾರಣಂ ಬಾರದೆಮಗಂ ಪ್ರತಿಗ್ರಹ ಸಲ್ಲದು
ಕಡೆಗೆ ನಿನ್ನೊಡವೆಯಲ್ಲವೆಯಲ್ಲವೇಕಲ್ಲ
ಕೊಡದ ಮುನ್ನೆನ್ನೊಡವೆ ಕೊಟ್ಟ ಬಳಿಕೆನಗೆಲ್ಲಿ
ಯೊಡವೆಯೆಂದರರೆ ದಾನಿಗಳ ಬಲ್ಲಹನು ಮುನಿಯೊಡನೆ ಸೂಳ್ನುಡಿಗೊಟ್ಟನು ॥

೩. ವಿಶ್ವಾಮಿತ್ರನು ಕೊನೆಯಲ್ಲಿ ಹರಿಶ್ಚಂದ್ರನಿಗೆ 'ಸತ್ಯಸಂಧಾನಮಂ ನೋಡಲೆಂದು ಉಳ್ಳುದೆಲ್ಲವ ಕೊಂಡಡೆ ಏನಂಬನೋ ಎಂದು ಕುಡಿನೋಡಿದೆನ್ನೈಸೆ' (೧೪.೧೨) ಎನ್ನುತ್ತಾನೆ. ಆದರೆ ಮೊದಲಿನಿಂದ ಎಲ್ಲಿಯೂ, ಅವನ ಸ್ವಗತದಲ್ಲಿ ಕೂಡ, ಈ ಮಾತು ಬರುವುದಿಲ್ಲವಾಗಿ ಈ ಹೇಳಿಕೆ ಒಟ್ಟು ಕಾವ್ಯತಂತ್ರದಲ್ಲಿ ನಿಯೋಗಾತ್ಮಕವಾಗುವುದಿಲ್ಲ; ಅವನ ಇನ್ನುಳಿದ ಸ್ವಗತಗಳೊಂದಿಗೆ ತಾಳೆಯಾಗುವುದಿಲ್ಲ.

ಪ್ರಭುಲಿಂಗಲೀಲೆಯ ಸಂದೇಶ

◆

ಡಾ. ಎಸ್.ಆರ್. ಲಲಿತಾಂಬ

ಯಾವುದೇ ಒಂದು ಮಹಾಕೃತಿ ಸಾರ್ವಕಾಲಿಕವಾಗಿ ತನ್ನ ಪ್ರಸ್ತುತತೆಯನ್ನು ಹೇಗೆ ಉಳಿಸಿಕೊಂಡಿದೆ ಎನ್ನುವುದರ ಮೇಲೆ ಅದರ ಶ್ರೇಷ್ಠತೆಯಿರುತ್ತದೆ. ತಾನು ಸೃಷ್ಟಿಯಾದ ಕಾಲದ ತುಡಿತ ಮಿಡಿತಗಳನ್ನು ಒಳಗೊಳ್ಳುವುದರ ಜೊತೆಗೆ ಓದುಗನ ಕಾಲದ ಸಾಂಸ್ಕೃತಿಕ ಒತ್ತಡಗಳು, ವಿಧ್ಯಮಾನಗಳು ವಿಭಿನ್ನ ಅಗತ್ಯಕ್ಕೆ ತಕ್ಕಂತೆ ಹೇಗೆ ಮತ್ತೆ ಮತ್ತೆ ಅನುಸಂಧಾನಕ್ಕೆ ಒಳಗಾಗಿದೆ ಎಂಬುದನ್ನು ತಿಳಿಯುವುದು ಅತ್ಯವಶ್ಯಕ. ಈ ಹೊತ್ತಿನಲ್ಲಿ ಪ್ರಭುಲಿಂಗಲೀಲೆ ನಮ್ಮ ಅನುಭವಗಳಿಗೆ ಹೇಗೆ ದಕ್ಕುತ್ತಿದೆ? ಏನಾದರೂ ಸಂದೇಶವನ್ನು ನೀಡುತ್ತಿದೆಯೇ? ಎಂಬ ಪ್ರಶ್ನೆಗೆ ಹೌದು, ಪ್ರಭುಲಿಂಗಲೀಲೆಯ ಸಂದೇಶಗಳು ಇವತ್ತು ಅತ್ಯಂತ ಪ್ರಸ್ತುತವಾಗಿವೆ ಎಂದು ಹೇಳಬಹುದು. ಬಹುಶಃ ಭಾರತೀಯ ಸಂಸ್ಕೃತಿಯಲ್ಲಿ ಹಿಂದೆಂದೂ ಕಾಣದಿದ್ದ ತೀವ್ರವಾದ ಸ್ವಮೋಹ ಮತ್ತು ಭೋಗಜೀವನದಲ್ಲಿ ಇವತ್ತು ನಾವು ಮುಳುಗಿಹೋಗಿದ್ದೇವೆ.

"ಕಾಯಬಲಿದರೆ ಮಾಯಬಲಿವುದು, ಮಾಯೆಬಲಿದರೆ ಛಾಯೆ ಬಲಿವುದು
ಕಾಯ ಮಾಯಾ ಛಾಯೆ ಬಲಿದರೆ ಸಿದ್ಧತನವಲ್ಲ
ಕಾಯ ಮಾಯಾಛಾಯದಾಗಿನ, ದಾಯವನು ಕಳೆದುಳಿದನಾದೊಡೆ
ರಾಯನಾತನು ಸಿದ್ಧರಲಿ......". (ಪ್ರ.ಲಿಂ.ಗತಿ.೧೯) (ದೇಹ ಬಲಿಷ್ಠಗೊಂಡರೆ ಮಾಯೆಯೂ ಬಲಿಯುತ್ತದೆ. ಮಾಯೆ ಪ್ರಬಲಗೊಂಡರೆ ಪ್ರಾಪಂಚಿಕ ನೆರಳೂ ದಟ್ಟಗೊಳ್ಳುತ್ತದೆ. ಆಗ ದೇಹ ಸಿದ್ಧಿಯಾಗದು) ಇಂತಹ ಮಾಯೆಯನ್ನು ಭೇದಿಸಿದ ಸಿದ್ಧ ಅಲ್ಲಮನ ತತ್ವಗಳನ್ನು ಪ್ರಭುಲಿಂಗಲೀಲೆ ಬೋಧಿಸುತ್ತದೆ.

ಸಿದ್ಧ ಅಲ್ಲಮನನ್ನು ಕುರಿತಂತೆ ಹರಿಹರನಿಂದ ಆರಂಭಿಸಿ ಕೋಡೆಕಲ್ಲು ರಾಚಪ್ಪನ ವರೆಗೆ ಅನೇಕ ಕಾವ್ಯಗಳು ಹುಟ್ಟಿಕೊಂಡಿವೆ.[೧] ಮತ್ತು ಇತರ ಅನೇಕ ಶೈವ ಪುರಾಣಗಳಲ್ಲೂ ಅಲ್ಲಮನು ಕಾಣಿಸಿಕೊಂಡಿದ್ದಾನೆ.[೨] ಒಂದಲ್ಲಾ ಒಂದು ರೀತಿಯಲ್ಲಿ ಇತರ ಶರಣರು ಅಲ್ಲಮನ 'ಸ್ಪರ್ಶ'ಕ್ಕೆ ಒಳಗಾಗಲೇ ಬೇಕಾದ ಅನಿವಾರ್ಯತೆಯೊಂದು ಸೃಷ್ಟಿಯಾಗಿರುವುದನ್ನು

ಗಮನಿಸಿದಾಗ ಮಧ್ಯಯುಗೀನ ಕನ್ನಡ ದಾರ್ಶನಿಕ ಲೋಕದಲ್ಲಿ 'ಅಲ್ಲಮತನ' ಎಷ್ಟು ಪ್ರಭಾವಿಯಾಗಿತ್ತು ಮತ್ತು ಅನನ್ಯವಾಗಿತ್ತೆಂಬುದನ್ನು ಊಹಿಸಬಹುದಾಗಿದೆ.

ಅಲ್ಲಮನ ವಚನಗಳು ಮತ್ತು ಕಾವ್ಯಗಳು ಆಧುನಿಕ ಪೂರ್ವದಲ್ಲೇ ತೆಲುಗು, ಸಂಸ್ಕೃತ, ಮರಾಠಿ, ತಮಿಳು ಭಾಷೆಗಳಿಗೆ ಅನುವಾದಗೊಂಡಿವೆ.[೩] ಇದು ಅಲ್ಲಮನ ದಾರ್ಶನಿಕತೆ ಹೇಗೆ ತಾನು ಹುಟ್ಟಿದ ನೆಲ, ಭಾಷೆ, ಸಂಸ್ಕೃತಿಯನ್ನು ಮೀರಿ ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ ಸಲ್ಲುವ ವಿಶಿಷ್ಟತೆಯನ್ನು, ಗಟ್ಟಿತನವನ್ನು ಹೊಂದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಶಿಷ್ಟ ಅಕ್ಷರ ಲೋಕ, ಧಾರ್ಮಿಕ ವಾತಾವರಣದಲ್ಲಷ್ಟೇ ಅಲ್ಲದೆ ಕನ್ನಡದ ಲಾವಣಿಗಳು, ಡೊಳ್ಳಿನ ಪದಗಳು ಸಣ್ಣಾಟ, ಯಕ್ಷಗಾನ ಹರಿಕತೆ, ಮೌಖಿಕ ಜಾನಪದ ಮಹಾಕಾವ್ಯಗಳು ಅಲ್ಲಮನನ್ನು ವಿಭಿನ್ನವಾಗಿ ಕಂಡುಕೊಂಡಿವೆ, ಪಡೆದುಕೊಂಡಿವೆ.[೪] ಸಮಕಾಲೀನ ಚಿಂತಕರು, ಸಾಹಿತಿಗಳನ್ನೂ ಅಲ್ಲಮ ಕಾಡುತ್ತಿದ್ದು, ಅನೇಕ ರಚನೆಗಳಿಗೆ ಕಾರಣವಾಗಿದ್ದಾನೆ.[೫] ಹೀಗೆ ಒಂದು ಸಂಸ್ಕೃತಿ ಒಬ್ಬ ದಾರ್ಶನಿಕನನ್ನು ದಕ್ಕಿಸಿಕೊಳ್ಳಲು ಪದೇಪದೇ ಪ್ರಯತ್ನಿಸುತ್ತಿರುವುದು ತನತನಗೆ ಅವಶ್ಯವೆನಿಸಿದ ತಾತ್ವಿಕತೆಗೆ, ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ಅವನೊಂದಿಗೆ ಅನುಸಂಧಾನಗೊಳ್ಳುತ್ತಿರುವುದು, ಬಗ್ಗಿಸಿಕೊಳ್ಳುತ್ತ, ಒಗ್ಗಿಸಿಕೊಳ್ಳುತ್ತ ಮುರಿದು ಕಟ್ಟುತ್ತಿರುವುದನ್ನು ಗಮನಿಸಿದಾಗ 'ಅಲ್ಲಮ' ಒಂದು ವ್ಯಕ್ತಿಯಾಗದೆ ಒಂದು 'ಚಿಂತನಧಾರೆ'ಯಾಗಿದ್ದಾನೆ, ಒಂದು 'ಪಂಥವೇ' ಆಗಿದ್ದಾನೆಂದರೆ ಆಶ್ಚರ್ಯವಲ್ಲ. ಚಾಮರಸ 'ಅಲ್ಲಮಪ್ರಭು ಸಂಪ್ರದಾಯ'ವೆಂದು ಅದನ್ನು ಕರೆದಿದ್ದಾನೆ. ಇಷ್ಟಾದರೂ ಆ ಅಸೀಮ ಜ್ಞಾನಿಯನ್ನು ನಾವು ಪೂರ್ಣವಾಗಿ ದಕ್ಕಿಸಿಕೊಳ್ಳಲಾಗು ತ್ತಿಲ್ಲವೆಂಬುದೇ ಅವನ ಜ್ಞಾನದ ವಿರಾಟ್ ಸ್ವರೂಪಕ್ಕೆ ಸಾಕ್ಷಿ. ಇಂತಹ ಒಬ್ಬ ಅನಂತ ಜ್ಞಾನಿಯನ್ನು, ದಾರ್ಶನಿಕನನ್ನು ಚಾಮರಸ ತನ್ನ ಕೃತಿಯಲ್ಲಿ ಹೇಗೆ ಕಟ್ಟಿಕೊಟ್ಟಿದ್ದಾನೆ ಮತ್ತು ಆ ಮೂಲಕ ಯಾವ ಸಂದೇಶಗಳನ್ನು ನಮಗೆ ತಲುಪಿಸಿದ್ದಾನೆ ಎನ್ನುವುದನ್ನು ನೋಡೋಣ

ಅಲ್ಲಮನೇ ಯಾಕೆ?

ಕಲ್ಯಾಣಕ್ರಾಂತಿಯ ನಂತರ ದಕ್ಷಿಣಕರ್ನಾಟಕದಲ್ಲಿ ಹರಿಹರ, ರಾಘವಾಂಕ ಚಾಮರಸ, ಭೀಮಕವಿ ಮೊದಲಾದ ಕವಿಗಳೂ, ಶೂನ್ಯಸಂಪಾದನಾಕಾರರು, ತತ್ವಪದ ಕಾರರು ಮೊದಲಾದವರು ವಚನಗಳು ಹಾಗೂ ಶರಣರ ಬದುಕನ್ನು ಲಿಖಿತ ಸಾಹಿತ್ಯ ರೂಪಕ್ಕೆ ತಂದರು. ಶರಣರ ವಚನಗಳು, ಅವರ ಬದುಕಿನ ಮಾದರಿಗಳು ಮತ್ತು ಕಲ್ಯಾಣ ಕ್ರಾಂತಿಯು ಸಾಹಿತ್ಯಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಕನ್ನಡ ಸಂಸ್ಕೃತಿಯಲ್ಲಿ ಮಹತ್ತರವಾದ ಸಂಚಲನವನ್ನು ಉಂಟುಮಾಡಿತ್ತು. ಸಾಹಿತ್ಯದ ಆಶಯ-ಆಕೃತಿ, ಎಲ್ಲವೂ ಹೊಸದಾಗಿಬಿಟ್ಟಿತ್ತು. ಪ್ರಭುತ್ವದ ಸ್ಥಾನವನ್ನು ಭಗವಂತನೂ ಭಕ್ತರೂ ತುಂಬತೊಡಗಿದ್ದರು. ಕ್ಷಾತ್ರಮೌಲ್ಯಗಳು ಭಕ್ತಿಗೆ ಸ್ಥಾನವನ್ನು ತೆರವು ಮಾಡಲೇಬೇಕಾಗಿತ್ತು. ಶರಣರು ಕಾವ್ಯದ ನಾಯಕರಾಗತೊಡಗಿದರು. ಮೊದಲಿಗೆ ಕ್ರಾಂತಿಕವಿ ಹರಿಹರ ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟನು. ಅಲ್ಲಮಪ್ರಭುವಿನ ಬದುಕು ಬರಹವು ಅವನನ್ನು ತೀವ್ರವಾಗಿ ತಟ್ಟಿತ್ತು

'ಪ್ರಭುದೇವರರಗಳೆ' ಸೃಷ್ಟಿಯಾಯಿತು. ಈ ದಾರಿಯಲ್ಲಿಯೇ ಸಾಗಿದ ರಾಘವಾಂಕಾದಿ ಕವಿಗಳು ಶರಣರನ್ನೇ ತಮ್ಮ ಪುರಾಣಗಳ, ಚರಿತೆಗಳ, ಕಾವ್ಯದ ನಾಯಕರನ್ನಾಗಿ ಮಾಡಿಕೊಂಡರು.

ತನ್ನ ಕೃತಿಗೆ ನಾಯಕನನ್ನು ಆಯ್ಕೆ ಮಾಡಿಕೊಳ್ಳುವುದು, ಅವರ ಪಾತ್ರ ಪೋಷಣೆ ಮಾಡುವುದು, ನಿರೂಪಣಾ ಆಕೃತಿಯ ಆಯ್ಕೆಮಾಡಿಕೊಳ್ಳುವುದು ಯಾವುದೇ ಕವಿಗೆ ಒಂದು ಸವಾಲಿನ ವಿಷಯವೇಸರಿ. ಹರಿದುಬರುತ್ತಿರುವ ಆ ಸಾಹಿತ್ಯಪರಂಪರೆಯ ಸೆಳೆವುಗಳು ಒಂದು ರೀತಿಯಿದ್ದರೆ, ತನ್ನ ಕಾಲದ ಸಾಂಸ್ಕೃತಿಕ ಬಿಕ್ಕಟ್ಟುಗಳು, ಸೆಳೆವುಗಳು ಇನ್ನೊಂದು ತೆರನಾಗಿರುತ್ತವೆ. ತನ್ನ 'ಧರ್ಮ' ಹಾಗೂ ಮನೋಧರ್ಮವೂ ಕೂಡ ನಾನಾ ಬಗೆಯಲ್ಲಿ ನಿಯಂತ್ರಣವನ್ನು ಒಡ್ಡುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ನೂರೊಂದು ವಿರಕ್ತರಲ್ಲಿ ಒಬ್ಬನಾಗಿದ್ದ ಚಾಮರಸ 'ಲಿಂಗಲೀಲೆ'ಯನ್ನು ಬೋಧಿಸಲು ಅಲ್ಲಮಪ್ರಭುವನ್ನೇ ಆರಿಸಿಕೊಂಡದ್ದೇಕೆ? ಎಂಬ ಪ್ರಶ್ನೆಗೆ ಅವನ ಕಾಲದ ತುಡಿತಗಳೇನಾಗಿದ್ದವು ಎಂಬುದನ್ನು ಗಮನಿಸಿದರೆ ಉತ್ತರಿಸಬಹುದು.

ಚಾಮರಸನ ಕಾಲಕ್ಕಾಗಲೇ ಭಕ್ತಿ ಮತ್ತು ವೈರಾಗ್ಯಗಳು ಮುಂಚೂಣಿಗೆ ಬಂದಿದ್ದವು. ಮಾಯೆಯನ್ನು ಭೇದಿಸಿ 'ಆತ್ಮನ ನಿಜದ ನಿಲುವ'ನ್ನು ಅರಿಯುವುದು, ಕೈವಲ್ಯ, ವೈಕುಂಟ, ಕೈಲಾಸದಲ್ಲಿ ಪರಮ ಪದವನ್ನು ಪಡೆಯುವುದು ಜೀವಿಯ ಆತ್ಯಂತಿಕ ಗುರಿ ಎಂಬುದು ದಟ್ಟವಾಗಿ ಬದುಕನ್ನು ಪ್ರಭಾವಿಸತೊಡಗಿತ್ತು. ಮತ್ತೊಂದು ಕಡೆ ರಾಜತ್ವ ತನ್ನೆಲ್ಲ ಹಮ್ಮು-ವೈಭವಗಳೊಂದಿಗೆ ಚಾಲನೆಗೊಳ್ಳುತ್ತಿತ್ತು. ಧರ್ಮದ ನೆಲೆಗಳಾದ ದೇವಾಲಯಗಳು ಸಾಂಸ್ಥೀಕರಣಗೊಂಡು ವೈಭವದ ಉತ್ಸವಗಳು, ಆಚರಣಾದಿಗಳಲ್ಲಿ ಮುಳುಗಿಹೋಗಿದ್ದವು. ಮಠಮಾನ್ಯಗಳು ಸಂಪತ್ತು ಮತ್ತು ಅಧಿಕಾರಗಳ ಕಡೆ ದೃಷ್ಟಿನೆಟ್ಟಿದ್ದವು. ವಿಭಿನ್ನ ದಾರ್ಶನಿಕರು, ತಾತ್ವಿಕ ಪಂಥ-ಪಂಗಡಗಳ ಮೇಲಾಟ ತೀವ್ರವಾಗಿದ್ದ ಕಾಲಮಾನವದು.

ತನ್ನ ಸುತ್ತ ಹೀಗೆ ಹಲವಂದವಾಗಿ ಸಾಗುತ್ತಿರುವ ಬದುಕಿನಲ್ಲಿ ಭಕ್ತಿ ಎಂದರೆ ಏನು, ಸಾಧನೆ, ಅರಿವು ಎಂದರೆ ಏನು ಎನ್ನುವುದೇ ಅಪಕಲ್ಪನೆಗೆ ಒಳಗಾಗಿದೆ, ಅದನ್ನು ಸರಿಯಾಗಿ ತಿಳಿಸಿಕೊಡಬೇಕು ಎನ್ನುವ ಒತ್ತಡ ಚಾಮರಸನಗಿದ್ದಂತೆ ತೋರುತ್ತದೆ. ಇಂತಹ ಸಂದರ್ಭದಲ್ಲಿ ಚಾಮರಸನಿಗೆ ತನ್ನ ಧರ್ಮ ಮತ್ತು ತತ್ವಗಳನ್ನು, ತಾನು ನಂಬಿದ ಮೌಲ್ಯಗಳನ್ನು ಪ್ರತಿಪಾದಿಸಲು, ಅಲ್ಲಮನಗಿಂತ ಮತ್ತೊಬ್ಬ ಶ್ರೇಷ್ಠವ್ಯಕ್ತಿ ಕಾಣಲಿಲ್ಲ. ಧರ್ಮ ಪ್ರಸರಣಕ್ಕೂ, ತನ್ನ ಮನೋಧರ್ಮಕ್ಕೂ, ಯುಗಧರ್ಮಕ್ಕೂ ಚೆನ್ನಾಗಿ ಹೊಂದಿಕೊಳ್ಳಬಹುದಾದ ಒಂದೇ ಒಂದು ಪಾತ್ರ ಅದು. ಆ ಹೊತ್ತಿಗಾಗಲೇ ಶೂನ್ಯ ಸಿಂಹಾಸನಾಧಿಪತಿಯಾಗಿ, ಶಿವಸ್ವರೂಪಿಯಂತೆ ಶರಣರ ಮನದಲ್ಲಿ ನೆಲೆನಿಂತಿದ್ದ ಅಲ್ಲಮನನ್ನು ತನ್ನ ಕಾವ್ಯದ ನಾಯಕನನ್ನಾಗಿ ಅವನು ಮಾಡಿಕೊಂಡದ್ದು ಸರಿಯಾದ ಆಯ್ಕೆಯೇ ಆಗಿದೆ. ಆದರೆ ಅದರಲ್ಲೊಂದು ಸಣ್ಣ ತೊಡಕಿತ್ತು. ಅದು ಅಲ್ಲಮನ ವ್ಯಕ್ತಿತ್ವಕ್ಕೆ ಅಂಟಿಕೊಂಡಂತಿದ್ದ ಅವನ ಪೂರ್ವ ವೃತ್ತಾಂತ.

ನಟ್ಟುವ ಜನಾಂಗದಲ್ಲಿ ಹುಟ್ಟಿ ಅದ್ಭುತ ಮದ್ದಲಿಗನಾಗಿ ಕಾಮಲತೆಯ ಪ್ರೇಮದಲ್ಲಿ ಬಿದ್ದು, ಅವಳ ವಿಯೋಗದ ಉರಿಯಲ್ಲಿ ಸಿಲುಕಿ ಬೆಂದು, ಅನಿಮಿಷಯ್ಯನು ತೋರಿದ ದಾರಿಯಲ್ಲಿ ಸಾಗಿ ಮಾಗಿದವನು ಅಲ್ಲಮ. ಅಲ್ಲಮನಜೀವ ಹೀಗೆ ಮಾಗುವ–ಆಗುವ ಪ್ರಕ್ರಿಯೆಗೆ ಒಳಗಾಯಿತೆಂಬುದು 'ಧರ್ಮನಿಷ್ಠರಿಗೆ' ತೊಡಕಿನಂತೆ ಕಾಣತೊಡಗಿತು. ಜೊತೆಗೆ ಅನ್ಯ ಮತ ಪಂಥಗಳವರು ಅಲ್ಲಮನ ವ್ಯಕ್ತಿತ್ವವನ್ನು ಕುರಿತು ಲಘುವಾಗಿ ಮಾತನಾಡುವುದು, 'ನಿಮ್ಮ ಹರಹರೇಶ್ವರ ಕವಿಯೇ ಬರೆದಿದ್ದಾನಲ್ಲ' ಎಂದು ವ್ಯಂಗ್ಯವಾಡುವುದೂ ತೀವ್ರ ಅವಮಾನವೆನಿಸತೊಡಗಿತ್ತು. ಆ ಕಳಂಕವನ್ನು ತೊಡೆದುಹಾಕಿ ಅನ್ಯ ಧರ್ಮೀಯರ ಕುಹಕಕ್ಕೆ ಉತ್ತರ ನೀಡಬೇಕಾಗಿತ್ತು. ಅಲ್ಲಮನ 'ನಿಜಪ್ರಕಾಶ'ವು ಬೆಳಗುವಂತೆ ಮಾಡಬೇಕೆಂದು ಆ ಕರ್ತವ್ಯವನ್ನು ಚಾಮರಸನಿಗೆ ವಹಿಸಿಕೊಡಲಾಯಿತು. ಅಲ್ಲಮನನ್ನು ಜನ ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬ ಕೊರಗೂ ಕವಿಗೂ ಇತ್ತೆನಿಸುತ್ತದೆ. ಅಲ್ಲಮನು ಕಾಮಲತೆಯಂತಹ ಹೆಣ್ಣೊಬ್ಬಳನ್ನು ಒಂದೊಮ್ಮೆ ಒಲಿದಿದ್ದು, ಅವಳ ಸಾವಿನಿಂದ ತೀವ್ರವಾಗಿ ಆಘಾತಗೊಂಡು ಆನಂತರದಲ್ಲಿ ಬದುಕಿನ ಮಹತ್ತರ ತಿರುವುಪಡೆದು ವಿರಕ್ತನಾದನೆನ್ನುವ ಸಹಜ ಸಾಮಾನ್ಯ ಮಾನವಲೋಕದ ಗುಣ ತನ್ನ ಪ್ರಭುವಿಗೆ ಸೋಕದಂತೆ ಅ ಕಥೆಯನ್ನು ಚೆನ್ನಾಗಿ ಚಾಮರಸ ಕಾವ್ಯದಲ್ಲಿ ಮುಚ್ಚಿಹಾಕಿದ್ದಾನೆ. ಇದು ಚಾಮರಸನೊಬ್ಬನ ಇಚ್ಚೆಯಾಗದೇ ಸಾಂಸ್ಥೀಕರಣಗೊಂಡ ವೀರಶೈವಧರ್ಮದ ಅನುಮೋದನೆಯನ್ನು ಅಗತ್ಯವಾಗಿ ಪಡೆದಿತ್ತು ಎಂಬುದು ಅಷ್ಟೇ ನಿಜ.

ಲೋಕವೆಲ್ಲವೂ ನಾನಾ ಬಗೆಯ ಮಾಯೆಯಿಂದ ಆವೃತವಾಗಿ ಹೊರಬಾರದ ಹಲ್ಲಣವನ್ನು ಹೊತ್ತುಕೊಂಡು ತೊಳುತ್ತಿರುವಂತೆ ವಿರಕ್ತನಾದ ಚಾಮರಸನಿಗೆ ಅನ್ನಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಅಲ್ಲಮನ ವಚನಗಳನ್ನು ಅಧ್ಯಯನ ಮಾಡಿ ಜೀರ್ಣಿಸಿ ಕೊಂಡಿರಬಹುದಾದ ಚಾಮರಸನಿಗೆ 'ಅಲ್ಲಮದಾರ್ಶನಿಕತೆ' ಚೆನ್ನಾಗಿಯೇ ಅರ್ಥವಾಗಿತ್ತು. ನಿಜವಾದ ಅರಿವನ್ನು ಹಾಗೂ ಮಾಯೆಯನ್ನು ಕುರಿತ ಅಲ್ಲಮನ ಎಲ್ಲ ವಚನಗಳೂ ಅವನ ಮೇಲೆ ತೀವ್ರವಾಗಿ ಪ್ರಭಾವ ಬೀರಿದ್ದರಿಂದ ಆ ವಚನಗಳನ್ನೇ ಅಡಿಪಾಯ ವಾಗಿಟ್ಟುಕೊಂಡು ಬದುಕಿನ ಸಂಕಷ್ಟದಲ್ಲಿ ಬೆಂದು ಮಾಗಿದ ಸಿದ್ಧಅಲ್ಲಮನನ್ನು ಮಾಯಾ ಕೋಲಾಹಲನಾಗಿ ರೂಪಿಸಿ, 'ಪ್ರಭುಲಿಂಗನ' ಗಟ್ಟಿವ್ಯಕ್ತಿತ್ವವೊಂದನ್ನು ಕಟ್ಟಿಕೊಡುವ ಪ್ರಯತ್ನ ವನ್ನವನು ಮಾಡಿದ್ದಾನೆ. ಅಲ್ಲದೆ ಅಲ್ಲಮನ ಯಾವ ತತ್ವಗಳನ್ನು ತಾನು ಜನಸಾಮಾನ್ಯರಿಗೆ ಸರಳವಾಗಿ ತಿಳಿಸಿಕೊಡಬೇಕೆಂದು ಬಯಸಿದನೋ ಅದನ್ನು ಸಾಕಾರಗೊಳಿಸಲು ನೂರಾರು ಶರಣರಲ್ಲಿ ಕೆಲವರನ್ನು ಮಾತ್ರವೇ ಆರಿಸಿಕೊಂಡಿರುವುದರಲ್ಲೂ ಚಾಮರಸನ ಜಾಣ್ಮೆಯಿದೆ. ಇಂದು ನಾವು ಶರಣರನ್ನು, ವಚನಗಳನ್ನು ಅರ್ಥೈಸುತ್ತಿರುವುದು ನಮ್ಮ ಇಂದಿನ ತಿಳುವಳಿಕೆಯ ಹಿನ್ನೆಲೆಯಲ್ಲಿ. ಆದರೆ ಇಡೀ ವಚನ ಸಾಹಿತ್ಯವನ್ನು, ಶರಣರನ್ನು ಆ ವೀರಶೈವ ಪರಂಪರೆ ಅಥವಾ ಸಂಪ್ರದಾಯವು ಕಾಲಕಾಲಕ್ಕೆ ಹೇಗೆ ಅರ್ಥೈಸಿಕೊಂಡಿದೆ, ಹೇಗೆ ಪ್ರತಿಕ್ರಿಯಿಸಿದೆ ಮತ್ತು ಇತರ ಸಂಪ್ರದಾಯಗಳು ಈ ಶರಣರನ್ನು ಹೇಗೆ ಕಂಡಿವೆ ಮತ್ತು ಹಾಗೇಕೆ ಎಂಬುದನ್ನು ನಾವು ಸರಿಯಾಗಿ ಗಮನಿಸಬೇಕಾಗಿದೆ. ಹರಿಹರನ ಶರಣರ ಆಯ್ಕೆಯ ಮಾನದಂಡ ಬೇರೆ. ಜಾತಿ ವರ್ಗ ಲಿಂಗವನ್ನು ಮೀರಿ ಭಕ್ತಿಯನ್ನು

ಅವನು ಮುಖ್ಯವಾಗಿ ಪರಿಗಣಿಸಿದ. ಅವನಿಗೆ ಯಾವ ತಾತ್ವಿಕ ಜಿಜ್ಞಾಸೆಯ ಅಪೇಕೆಯಿಲ್ಲ. ಆದರೆ ಚಾಮರಸನ ಮಾನದಂಡ ಬೇರೆ. (ರಾಘವಾಂಕನ ಆಯ್ಕೆ ಇವರಿಬ್ಬರಿಗಿಂತ ಭಿನ್ನವಾದದ್ದು) ಚಾಮರಸನು ಆರಿಸಿಕೊಂಡಿರುವ ಒಂದೊಂದು ಪಾತ್ರವೂ ಒಂದೊಂದು ಬಗೆಯ ಜೀವನ ದೃಷ್ಟಿ, ತಾತ್ವಿಕತೆಯನ್ನು ಹೊಂದಿರುವಂಥವು. ಅವೆಲ್ಲವುಗಳಿಗೆ ಚಾಮರಸ 'ಅಲ್ಲಮದರ್ಶನ'ದ ಮೂಲಕ ಮುಖಾಮುಖಿಯಾಗುತ್ತಾನೆ. ಈ ಮುಖಾಮುಖಿಗೆ ಹೊಂದುವಂತೆ ಕಾವ್ಯವನ್ನು ವಿನ್ಯಾಸಗೊಳಿಸಿಕೊಂಡಿದ್ದಾನೆ.

ಕಥಾ ವಸ್ತು-ಉದ್ದೇಶ

ತನ್ನ ಕೃತಿಯನ್ನು ಚಾಮರಸ "ಸತ್ತವರಕಥೆಯಲ್ಲ........ಕರ್ಮದ ಕತ್ತಲೆಗೆ ಸಿಲುಕುವರ ಸೀಮೆಯ ಹೊಲಬು ತಾನಲ್ಲ.....ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು" (ಪ್ರ.ಲೀ.ಗತಿ೧ಪದ್ಯ೧೩) "ಅಲ್ಲಮಪ್ರಭು ಸಂಪ್ರದಾಯದ ಸಲ್ಲಲಿತ ಸನ್ಮಾರ್ಗವನು ನಾನೆಲ್ಲರರಿವಂದದಲಿ ಪೇಳುವೆ" (ಅದೇ ಪದ್ಯ ೮) ಎಂದು ಅರಿಕೆಮಾಡಿಕೊಂಡಿದ್ದಾನೆ. ಅಂದರೆ ಲೌಕಿಕದ ಕುತ್ತದಲ್ಲಿ ಕುದಿಯುತ್ತಿರುವ, ನಾನಾಬಗೆಯ ಸಂಸಾರಜಂಜಡಗಳಲ್ಲಿ ಸಿಕ್ಕಿ ತೊಳಲುತ್ತಿರುವ ಜನರನ್ನು ಉದ್ಧರಿಸುವ ಸಲುವಾಗಿ ರಚಿತವಾದದ್ದು ಈ ಕೃತಿ.

ಲೌಕಿಕದ ಜಂಜಡ ಬಿಡಬೇಕಾದರೆ, ಸಂಸಾರವನ್ನು ಬಿಡಬೇಕು ಸಂಸಾರವೆಂದರೆ ಕುಟುಂಬವಷ್ಟೇ ಅಲ್ಲ ಈ ಮಣ್ಣಿಗೆ ಮತ್ತೆ ಮತ್ತೆ ನಮ್ಮನ್ನು ಅಂಟಿಸುವ ಯಾವುದೇ ಲೌಕಿಕ ಚಟುವಟಿಕೆ. ಅದು ಕುಟುಂಬವನ್ನು ಹೊಂದುವುದು, ಮಠವನ್ನು ಕಟ್ಟುವುದು, ಶಿಷ್ಯರ ಬಳಗವನ್ನು ಹುಟ್ಟುಹಾಕಿ ಬೆಳೆಸುವುದು, ವ್ಯಾಪಾರ-ಸಾಪಾರ, ಅಡವು-ಆಸ್ತಿ ಮಾಡುವುದು, ಗುಡಿ-ಗೋಪುರ ಕಟ್ಟುವುದು, ಸಮಾಜಸೇವಾ ದುರಂಧರ, ಧರ್ಮರತ್ನಾಕರ ಎಂಬ ಬಿರುದಾಂಕಿತರಾಗುವ, ಕೀರ್ತಿ-ಸಾಧನೆಯ ಹೆಗ್ಗಳಿಕೆಗೆ ಬಿದ್ದು ಮಾಡುವ ಯಾವುದೇ ಕಾರ್ಯ ಇರಬಹುದು, ಅದು ಎಷ್ಟೇ ದೊಡ್ಡದಿದ್ದರೂ ಅದು ಸಂಸಾರವೇ. ಅದು ಸಂಕೋಲೆಯೇ. ಅದು ಆತ್ಮೋದ್ಧಾರದ ಪಥದಲ್ಲಿ ತೊಡಕು ಎಂಬುದು ಅಲ್ಲಮನ ನಿಲುವಾಗಿತ್ತು. ಚಾಮರಸನ ನಿಲುವೂ ಆಗಿತ್ತು.

ಅದನ್ನು ಅವನು ತನ್ನ ಕಾವ್ಯದಲ್ಲಿ ಎರಡು ಭಾಗಗಳನ್ನು ಮಾಡಿಕೊಂಡು ಚೆನ್ನಾಗಿ ಪ್ರತಿಪಾದಿಸಿದ್ದಾನೆ. ವೈಯಕ್ತಿಕವಾಗಿ ಕಾಡುವ 'ತಾಮಸಿಕಮಾಯೆ'ಯನ್ನು ಜಯಿಸುವುದು ಮೊದಲ ಭಾಗವಾದರೆ, ತನ್ನ ಸಂಪರ್ಕಕ್ಕೆ ಬರುವ ಯಾವುದೇ ಭಕ್ತ/ಸಾಧಕನಲ್ಲಿದ್ದ ವಿಶೇಷತೆಯನ್ನು ಗುರುತಿಸುವುದರೊಂದಿಗೆ ಅವರ ಸಾಧನೆಯ ಸಾಫಲ್ಯಕ್ಕೆ ಅಡ್ಡವಾಗಿದ್ದ ತೊಡಕುಗಳನ್ನು ಸೂಕ್ಷ್ಮವಾಗಿ ಅರಿತು, ಅದನ್ನು ಮೀರುವ ದಾರಿಯನ್ನು ತೋರಿಸಿಕೊಟ್ಟು ಸಾಧಕರನ್ನು, ಭಕ್ತರನ್ನು ಗುರುವಾಗಿ ಉದ್ಧರಿಸುವುದು ಎರಡನೆಯ ಭಾಗದಲ್ಲಿದೆ.

ಗೊಗ್ಗಯ್ಯನಿಗೆ ಕೃಷಿ ಅಡವು ಆಸ್ತಿಯಮೋಹ, ಮುಕ್ತಾಯಕ್ಕನಿಗೆ ಗುರುವಾಗಿದ್ದ ತನ್ನ ಅಣ್ಣನ ಮೇಲಿದ್ದ ಅತೀವ ಮೋಹ, ಸಿದ್ಧರಾಮನನ್ನು ಕಾಡುತ್ತಿದ್ದ ಸಮಾಜಸೇವೆ, ಹೆಸರುಮಾಡುವ ಮೋಹ, ಗೋರಕ್ಷನನ್ನು ಕಾಡುತ್ತಿದ್ದ ತನ್ನ ಸಾಧನೆ, ತಾಂತ್ರಿಕ ಶಕ್ತಿಯ ನೈಪುಣ್ಯದ ಅಹಂ, ಬಸವನನ್ನೂ ಬಿಡದೆ ದಾಸೋಹದ ಮೋಹ ಮುಚ್ಚಿಕೊಂಡಿತ್ತು.

ಅಂತಹ ಮಹಾನ್ ಸಾಧಕರನ್ನೂ ಬಿಡದೆ 'ಮಾಯೆ' ಕಾಡುತ್ತಿದ್ದಾಗ ಅವರ ಈ ಭ್ರಮೆಗಳನ್ನು ಸರಿಸಿ ನಿಜಾತ್ಮನನ್ನು ಕಂಡುಕೊಳ್ಳುವ, ನಿರ್ಲೇಪತನದಿಂದ ಯೋಗಿಯಾಗುವ ದಾರಿಯನ್ನು ತೋರಿಕೊಟ್ಟ ಅಲ್ಲಮನ ಬದುಕಿನ ಲೀಲೆಯೇ ಚಾಮರಸನ ಕಥಾವಸ್ತು.

ಈ ವಸ್ತುವನ್ನಿಟ್ಟುಕೊಂಡು."ನಾಮ ರೂಪ ಕ್ರಿಯೆಗಳನ್ನು ಗೆಲ್ಲ ಬಲ್ಲವರಿಗೆ ಮಾತ್ರ ನಿತ್ಯ ಸುಖ" ಭಕ್ತರಾದಮಾತ್ರಕ್ಕೆ ನಿತ್ಯಸುಖಿಗಳಾಗುವುದು ಸಾಧ್ಯವಿಲ್ಲ" ಎಂಬ ಮುಖ್ಯ ಸಂದೇಶವನ್ನು ಚಾಮರಸ ನೀಡಿದ್ದಾನೆ. 'ನಿತ್ಯಸುಖ' ಯಾರಿಗೆ ದೊರೆಯುತ್ತದೆಂಬ ವಿಚಾರ ಕುರಿತು ಕೈಲಾಸದಲ್ಲಿ ಪಾರ್ವತಿ ಪರಮೇಶ್ವರರಲ್ಲಿ ಚರ್ಚೆ ಏರ್ಪಟ್ಟಿದೆ. "ಶಿವನ ಒಡ್ಡೋಲಗದ ಘನಮಹಿಮರೇ ಆಗಿದ್ದರೂ ಭೂಮಿಯಲ್ಲಿ ಜನಿಸಿ ಸಾಧನೆಮಾಡಿ ಸತ್ಯವನ್ನರಿಯಬೇಕಾದ್ದು ಅನಿವಾರ್ಯ" ಎಂಬುದನ್ನು ಶಿವ ತಿಳಿಸುತ್ತಾನೆ. ಅಲ್ಲದೆ ಈ ತನ್ನ 'ನಿತ್ಯಸುಖಿ'ಯಾಗುವ ತತ್ವವನ್ನು ಭೂಮಿಯಲ್ಲಿ ಬೋಧಿಸುವ ಸಲುವಾಗಿಯೇ ತನ್ನಂಶವಾದ ಅಲ್ಲಮನನ್ನು ಕಳುಹಿಸಿಕೊಡುತ್ತಾನೆ. ಅಂದರೆ 'ನಾಮ ರೂಪ ಕ್ರಿಯೆ'ಗಳನ್ನು ಮೀರುವ ಬದುಕಿನ ಪರಿಯನ್ನು ಬೋಧಿಸುವುದೇ ಪ್ರಭುಲಿಂಗಲೀಲೆಯ ಉದ್ದೇಶವಾಗಿದೆ. ಈ 'ನಾಮ ರೂಪ ಕ್ರಿಯೆ'ಯನ್ನು ಮೀರುವ ಹಂಬಲ, ಮೀರಲಾಗದ ತಲ್ಲಣ ಯಾವಕಾಲಕ್ಕೂ ಸಾಧಕನನ್ನು ಕಾಡುವಂತದ್ದೇ.'ಅಲ್ಲಮ ದರ್ಶನ'ದಲ್ಲಿ ಇದಕ್ಕೆ ಉತ್ತರವಿದೆ.

ಆದರೆ ಅದನ್ನು ಸಾಧಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಈ 'ನಾಮ ರೂಪ ಕ್ರಿಯೆ'ಗಳು ಮಾಯೆಯಿಂದ ಮುಸುಕಿರುತ್ತವೆ. ಹಾಗಾಗಿ ಮೊದಲು ಮಾಯೆಯನ್ನು ಜಯಿಸಬೇಕು. ಅದಕ್ಕೆ ಮಾಯಾಕೋಲಾಹಲನ ಜನನವಾಗಬೇಕು 'ಎಲ್ಲವನ್ನು ಇಲ್ಲವಾಗಿಸುವ, ಅಲ್ಲವಾಗಿಸುವ' (ಅದು? ನಾನಲ್ಲ ಇದು? ನಾನಲ್ಲ)ಅಲ್ಲಮನ ಜನನವಾಗಬೇಕು.

ಇಲ್ಲಿ ಮಾಯೆ 'ತಮೋಗುಣ'ದ ಸಂಕೇತವಾದರೆ ಅಲ್ಲಮ 'ನಿಜದ ನೆಲೆ'ಯ ಸಂಕೇತವಾಗಿದ್ದಾನೆ ಆ ನಿಜದ ನೆಲೆಯನ್ನು ಮುಸುಕುವುದಕ್ಕೆ ಮಾಯೆ ಕಾದಿದ್ದರೆ, ಮಾಯೆಯನ್ನು ಭೇದಿಸಲು ಮಾಯಾಹೋಲಾಹಲನ ಜನನವಾಗಿದೆ. "ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮಣ್ಣು ಮಾಯೆಯಲ್ಲ......ಮನದ ಮುಂದಣ ಆಸೆಯೇ ಮಾಯೆ". ಎಂದು ಅಲ್ಲಮನೇ ತನ್ನ ವಚನವೊಂದರಲ್ಲಿ ಹೇಳಿದ್ದಾನೆ. ಭೌತಿಕ ಶರೀರಮೂಲವಾದ ಪಂಚೇಂದ್ರಿಯಗಳ ಒಡೆತನವನ್ನು ಹೊಂದಿ ಮಣ್ಣ ಹೆಂಟೆಯಂತೆ ನಮ್ಮ ಅಸ್ತಿತ್ವವನ್ನೇ ಹುಡಿಗೊಳಿಸುವಂತದ್ದು ಮಾಯೆ! ಆ ತಾಮಸಿಕ ಶಕ್ತಿಯನ್ನೇ ಅವನು ಮತ್ತೊಂದು ವಚನದಲ್ಲಿ ಮೂರುದಾರಿ ಕೂಡುವಲ್ಲಿ ಸಾಧನೆಗಾಗಿ ಹೊರಟವರನ್ನು ನುಂಗುಲು ನಿಂತಿರುವ 'ಹೆಮ್ಮಾರಿ' ಎಂದು ಕರೆದಿದ್ದಾನೆ. ಆ ಮಾರಿಯಬಾಯಲ್ಲಿ ದಾಟಲಾಗದ ಹೆಣ್ಣು ಹೊನ್ನು ಮಣ್ಣುಗಳೆಂಬ ಮೂರು ಘಟ್ಟಗಳಿವೆ. ವಿಷಯ ಭೋಗಲಾಲಸೆಗಳ ನಂಜಿನ ಸೋನೆಯಲ್ಲಿ ಅವು ತುಂಬಿ ಹೋಗಿವೆ. ಅವುಗಳಲ್ಲಿ ನಾವು ಮುಳುಗಿಹೋಗುತ್ತೇವೆ. ಅವಳೊಂದಿಗಿರುವ ಅಜ್ಞಾನವೆಂಬ 'ಕಾಡುಕೋಣನ (ಅನ್ನೇಮ್ಡ್ ಅನಿಮಲ್) ಕತ್ತಲೆ' ಏನನ್ನೂ ಕಾಣಗೊಡುವುದಿಲ್ಲ. ಪಂಚೇಂದ್ರಿಯಗಳೆಂಬ

ಐದು ಬಾಯ ಹುಲಿಯು ಅವಳ ದಾಸನಾಗಿ ಬಿದ್ದುಕೊಂಡು ಆಕಳಿಸುತ್ತಿರುತ್ತದೆ. ಯಾವಾಗ ಕೆರಳಿ ಸಾಧಕನನ್ನು ಮುರಿದಿಕ್ಕುವುದೋ ತಿಳಿಯದು. ಇವೆಲ್ಲವನ್ನು ಗೆದ್ದಲ್ಲದೆ ಗುಹೇಶ್ವರನನ್ನು ಕಾಣಲಾಗದೆಂದು ಅಲ್ಲಮ ಹೇಳಿದ್ದಾನೆ. ಮಾಯೆಗೆ ಒಳಗಾದವನು 'ಹರಕೆಕುರಿ'ಯಾಗುತ್ತಾನೆ. ಈ ಆತ್ಮಘಾತಕ್ಕೆ ಮೂಲವಾದ 'ಆಸೆ'ಯನ್ನು ಅಳಿದವನೇ 'ನಿತ್ಯ'ನು (ಪ್ರಲೀ. ಗತಿ ೨೪ ಪದ್ಯ೧೨) ಎನ್ನುತ್ತಾನೆ ಚಾಮರಸ.

ಈ ಮಾಯೆಯನ್ನು ಗೆಲ್ಲುವುದು ಎಂದರೆ ಇಂದ್ರಿಯ ಮೂಲವಾದ ಎಲ್ಲ ಸೆಳೆತಗಳನ್ನೂ ಕಳೆದುಕೊಳ್ಳುವುದು. ಮಹಾದೇವಿ, ಮುಕ್ತಾಯಿ, ಗೊಗ್ಗಯ್ಯ, ಸಿದ್ಧರಾಮ, ಗೋರಕ್ಷ, ಬಸವಾದಿಗಳನ್ನು 'ನಾಮರೂಪಕ್ರಿಯೆ'ಗಳ ವೇಷದಲ್ಲಿ ಮಾಯೆ ಕಾಡುತ್ತಿದೆ, ಎಲ್ಲರ ಬದುಕಿನಲ್ಲು ಮುಕ್ತಿಯನ್ನು ಕಂಡುಕೊಳ್ಳುವುದಕ್ಕೆ ಇದು ಕಿಂಚಿತ್ತು ಊನಮಾಡಿದೆ ಎಂದು ಭಾವಿಸುವ ಅಲ್ಲಮ ಅವರೆಲ್ಲರಿಗೂ ತಿಳುವಳಿಕೆಯನ್ನು ಬೋಧಿಸುತ್ತಾನೆ. ಅವರೆಲ್ಲರೂ ಸಾಮಾನ್ಯರೇನಲ್ಲ! ಸಾಧಕರೇ. ಈಗಾಗಲೇ ತಾಪತ್ರಯಗಳನ್ನು ನೀಗಿಕೊಂಡವರೇ ಆದರೂ ಅವರನ್ನೂ ಬಿಡದೆ ಕಾಡುವ ಮಾಯಾಪೊರೆಯನ್ನು ಕಳಚಿಸಬೇಕಾಗಿದೆ. ಅದು ಅಲ್ಲಮನಂಥವನಿಂದ ಮಾತ್ರ ಸಾಧ್ಯವಾಗುವ ಕೆಲಸವಾಗಿದೆ.

ಪ್ರಭುಲಿಂಗಲೀಲೆ, ಇಡೀ ಕಾವ್ಯವೇ ಸಂಕೇತಿಕವಾದದ್ದು, 'ದರ್ಶನ ಧ್ವನಿರೂಪಕ' ವೆಂದು ವಿದ್ವಾಂಸರು ಗುರುತಿಸಿದ್ದಾರೆ.[೬] ಎಲ್ಲ ಪಾತ್ರಗಳು ಒಂದೊಂದು ತತ್ವಕ್ಕೆ ಸಂಕೇತವಾಗಿವೆ. 'ಮಾಯೆ' ತಾಮಸಿಕಕ್ಕೆ ಮತ್ತು 'ಮಹಾದೇವಿಯಕ್ಕ' ಸಾತ್ವಿಕತೆಗೆ ಸಂಕೇತವಾಗಿದ್ದಾರೆ. 'ಮಾಯೆ' ಇಲ್ಲಿ ಬರೀ ಹೆಣ್ಣಾಗದೆ ಅವಳು 'ತಮೋಸ್ವರೂಪಿ ಮಾಯೆ'ಯ ಛಾಯೆಯಾದ ಕಾರಣ ಅವಳಿಗೆ 'ನಿರಾಳ', 'ನಿತ್ಯಸುಖಿ' ಅಲ್ಲಮ ದಕ್ಕಲಾರನೆಂಬುದನ್ನು ಖಡಾಖಂಡಿತವಾಗಿ ಚಾಮರಸ ತಿಳಿಸಿದ್ದಾನೆ. ಅಂಟಿಯೂ ಅಂಟದಂತೆ ಮುಟ್ಟಿಯೂ ಮುಟ್ಟದಂತಿರುವ ಮಾಟ ಅಲ್ಲಮನದು. ಅದು ಶುದ್ಧ ಲೌಕಿಕಳಾದ ಮಾಯೆಗೆ ಸಂತೃಪ್ತಿ ನೀಡಲಾರದ ಸಾಮೀಪ್ಯ. ಮಹಾದೇವಿಯಕ್ಕನ 'ಆತ್ಮ ಸಂಗಾತದ' ಅನುಭಾವ ಇವಳಿಗೆ ಸಾಧ್ಯವಿಲ್ಲ. "ಮಾಯೆಯಗಲಿದ ಬಳಿಕ ಭಾವಿಸೆ ಕಾಯವುಂಟೆ ಪ್ರಾಣವಾಗಿಹ ವಾಯು ನಡೆವುದೆ ಕಾಲು ಕೈ ಕಣ್ಣುಗಳು ಮಿಡುಕುವುದೇ" (ಗತಿ.೫ಪದ್ಯ೭೦) ಎಂಬ ಅಲ್ಲಮನ ಬೆಡಗಿನ ಮಾತುಗಳು ಮಯೆಗಾಗಲಿ ಅವಳ ಸಖಿಯರಿಗಾಗಲೀ ಅರ್ಥವಾಗಲು ಸಾಧ್ಯವಿಲ್ಲ. ದೇಹಮೂಲ ಸೆಳೆತದಿಂದ ಅಲ್ಲಮನನ್ನು ದಕ್ಕಿಸಿಕೊಳ್ಳಲು ಪ್ರಯತ್ನಿಸಿ ಸೋಲುತ್ತಾಳೆ ಮಾಯೆ. ಅಲ್ಲಮನ ಅಧ್ಯಾತ್ಮ ಒಂದಿಷ್ಟಾದರೂ ದಕ್ಕಬೇಕಾದರೆ ನಮ್ಮಲ್ಲೂ ಒಂದಿಷ್ಟು ಯೋಗ್ಯತೆಯಿರಬೇಕು. ಅಲ್ಲಮನಂತಹ ಸ್ಪರ್ಷಮಣಿಯ ಸಾಮೀಪ್ಯದಲ್ಲೂ, ಮಾಯೆಯಲ್ಲಿ ಪರಿವರ್ತನೆ ಬರಲಿಲ್ಲ, ಕಬ್ಬಿಣವಾಗಿದ್ದರೆ ಸ್ಪರ್ಷಮಣಿಯಿಂದ ಚಿನ್ನವಾಗಬಹುದಿತ್ತು. ಆದರೆ. ಅವಳು ಮಣ್ಣಿನ ಹೆಂಚಿನಂತೆ! ಉದ್ಧಾರಕ್ಕೆ ಅವಕಾಶವೇ ಇಲ್ಲದ್ದರಿಂದ 'ತರಣಿಗೂ ತಮಕ್ಕೂ ಒಡನಾಟ ಸಾಧ್ಯವಿಲ್ಲ'ವೆಂಬುದು ಚಾಮರಸನ ತೀರ್ಮಾನ.

"ಭಕ್ತಿಯ ಗೂಡಾಗಿದ್ದ ಮಾಹಾದೇವಿಯ ನಿರ್ಮಲ ಭಕ್ತಿ, ಕಾಮವನ್ನು ಗೆದ್ದಿರುವ ಅವಳ ನಿರ್ಮೋಹ ಸ್ಥಿತಿ, ರೂಹನ್ನು ಕುರುಹನ್ನು ಕಳೆದುಕೊಂಡು ನಿಂತ" ಅವಳ ನಿಲುವು ಅಲ್ಲಮನನ್ನು ಗೆದ್ದಿತು. ಸಮಾಜದಲ್ಲಿ ನಮ್ಮ ನಾನಾ ಬಗೆಯ ಕುರುಹುಗಳಿರುತ್ತವೆ ಅದು ಧರ್ಮ, ಜಾತಿ, ವರ್ಗ, ಭಾಷೆ, ಲಿಂಗ ಇತ್ಯಾದಿ. ಇವುಗಳಿಂದಲೇ ನಮ್ಮ ವ್ಯಕ್ತಿತ್ವವೆನ್ನುವಷ್ಟರಮಟ್ಟಿಗೆ ನಮ್ಮನ್ನು ಇವು ಕುರುಹಿಗೆ ಕಟ್ಟಿಹಾಕಿರುತ್ತವೆ. ಇವುಗಳನ್ನು ಮೀರುವುದು ಅಷ್ಟು ಸುಲಭವಲ್ಲ ಏನನ್ನು ಬೇಕಾದರೂ ಮೀರಬಹುದೇನೋ ಆದರೆ ಗಂಡು ಹೆಣ್ಣೆಂಬ ಭಾವವನ್ನು ಕಳಚಿಕೊಳ್ಳುವುದು ಸುಲಭವಲ್ಲ. ಅಕ್ಕ ಅದನ್ನು ಸಾಧಿಸಿಕೊಂಡವಳು, ಗಂಡು ಹೆಣ್ಣೆಂಬ ತನುವಿನ ಹಂಗನ್ನೇ ತೊರೆದವಳು. 'ನಿರೂಪು ರೂಪಿನ ಮೇಳವಿಲ್ಲದ ಮಹಿಮನಲಿ ಸಮ್ಮೇಳ'ವನ್ನು ಬಯಸಿ ಹಂಬಲಿಸುತ್ತಿರುವ ಅವಳಿಗೆ ಶಿವಜ್ಞಾನವನ್ನು ಅಲ್ಲಮ ಉಪದೇಶಿಸುತ್ತಾನೆ. (ಗತಿ.೧೭) ಇಲ್ಲಿ ಮಹಾದೇವಿಯ ಪಾತ್ರವನ್ನು ಮಾಯೆಯ ಪಾತ್ರದ ವಿರುದ್ಧದಿಕ್ಕಿನಲ್ಲಿ ನಿಲ್ಲಿಸಿ ಕಪ್ಪು ಬಿಳುಪಿನ ದ್ವಿಮಾನದಲ್ಲಿ ಸಾತ್ವಿಕ ಮತ್ತು ತಾಮಸಿಕ ಶಕ್ತಿಗಳ, ಗೆಲುವು ಸೋಲುಗಳ ರೂಪಕಗಳನ್ನಾಗಿ ಮಾಡಿದ್ದಾನೆ ಕವಿ.

ಚಾಮರಸ ಆರಿಸಿಕೊಂಡ ಮತ್ತೊಬ್ಬ ಹೆಣ್ಣು ಮುಕ್ತಾಯಕ್ಕ. ಈಕೆ ಶರಣೆಯರಲ್ಲೇ ವಿಭಿನ್ನತೂಕ ಉಳ್ಳವಳು. ಅವಳದು 'ಪ್ರತ್ಯಕ್ಷ ಪ್ರಮಾಣ' ವಾದ. ಇದು 'ಇರುವಿಕೆ'ಯನ್ನು ಸಮರ್ಥಿಸಿಕೊಳುವುದರತ್ತ ತುಡಿದರೆ ಅಲ್ಲಮನದು 'ಆಗುವಿಕೆಯ' ಕಡೆಗೆ ತುಡಿಯುವ ಅನುಭಾವ. ಮುಕ್ತಿಗೆ ಗುರು ಒಬ್ಬಬೇಕೆಂಬ ನಂಬಿಕೆಹೊಂದಿದ್ದ ಹಾಗೂ ಕ್ರಿಯೆಗಳ ಸೆರೆಯಲ್ಲಿ ಸಿಕ್ಕಿದ್ದ ಮುಕ್ತಾಯಿಗೆ 'ಅರಿವಿಲ್ಲದ ಕ್ರಿಯೆಯ ಕೊರತೆಗಳನ್ನು' ತಿಳಿಸಿ, ಅಲ್ಲಿ ಅರಿವಿನ ಗುರುತತ್ವವನ್ನು ನೆಲೆಗೊಳಿಸುತ್ತಾನೆ "ಅಂಗವಿಡಿದು ಅರಿವ ಅರಿವು ಅರಿವಲ್ಲದೆ ಗುರುವಿಡಿದು ಅರಿವ ಅರಿವು ಅರಿವಲ್ಲ" ಎಂದು ಮನದಟ್ಟು ಮಾಡಿಸುತ್ತಾನೆ.

ಕಾಯವಿಲ್ಲದೆ ಏನೂ ಸಾಧ್ಯವಿಲ್ಲವೆಂಬುದು ನಿಜ. ಆದರೆ ಕಾಯವನ್ನು ಈ ಮಣ್ಣಿಗಂಟಿಸುವ ಎಲ್ಲ ಅದರ ಮೂಲ ಗುಣಗಳನ್ನು ಕಳೆದುಕೊಂಡು ಆ ಕಾಯದ ಮೂಲಕವೇ ಬದುಕಿರುವಾಗಲೇ ಸಾಧನೆ ಮಾಡಬೇಕು. ಅದು ಆತ್ಮ ಸಾಧನೆಯ ಒಳಮುಖ ಪಯಣ. "ಹೊಳೆಯನ್ನು ದಾಟುವವರು ಹರಿಗೋಲನ್ನು ಸಿದ್ಧಪಡಿಸಿ ಕೊಳ್ಳುವಂತೆ ಲಿಂಗನನ್ನು ತಿಳಿಯಬಯಸುವವರು ಕರ್ಮೇಂದ್ರಿಯಗಳನ್ನು ಮೆಲ್ಲನೆ ಪಕ್ಕಕ್ಕೆ ಸರಿಸಿ ಹೊರಗಿನ ಕ್ರಿಯೆಗಳನ್ನು ತ್ಯಜಿಸಿ ಒಳಮಾರ್ಗವೊಂದನ್ನೇ ಅನುಸರಿಸಬೇಕೆಂದು ಹೇಳುತ್ತಾನೆ. ಆತ್ಮ ಸಾಧನೆಯಲ್ಲಿ ಒಳಮುಖ ಪಯಣಮಾಡುವವನು ನಿಜವಾದ ಜ್ಞಾನಿಯಾಗುತ್ತಾನೆ "ಮನವ ಬಹಿರಂಗದಲಿ ಚಲಿಸುವ ಮನುಜನವನಜ್ಞಾನಿ ಮತ್ತಾ ಮನವನಂತರ್ಮುಖದಲಿ ಆಚರಿಸಿದೊಡೆ ಸರ್ವಜ್ಞ" (ಗತಿ.೨೪.ಪದ್ಯ ೧೦) ಎಂದು ಆಚರಣೆಗಿಂತ ಆತ್ಮ ಸಾಧನೆ ಮುಖ್ಯವೆಂಬ ಅಲ್ಲಮನ ವಿಚಾರವನ್ನು ಚಾಮರಸ ಪ್ರತಿಪಾದಿಸಿದ್ದಾನೆ.

"ದೇಹಿಗಳು ಕರ್ಮೇಂದ್ರಿಯವ ಜರಿದಡೆ ಜೀವವು ಆವ ಆಶ್ರಯದಲಿಹುದು. ಮನಸು ಪಟುವಾಗಿ ಬಯಲು ತಾನಹ ಪರಿಯಾವುದು" ಎಂದು ಮುಕ್ತಾಯಿ

ಸಂದೇಹಿಸಿದಾಗ "ಶಿಶುಗಳಿಗೆ ತಾಯಮೊಲೆಹಾಲು ಜೀವನವಾದರೂ ಮೇಲುಹಾಲನ್ನು ಹಾಕುತ್ತಾ ನಿಧಾನವಾಗಿ ತಾಯಹಾಲನ್ನು ಮರೆಸಿ ಆಹಾರದ ಅಭ್ಯಾಸ ಮಾಡಿಸಿ ಬಾಲಕರನ್ನು ಪಟುಮಾಡುವಂತೆ ಹೊರಗೆ ಮರೆದು ನಿರಾಳದಲಿ ನಿಲ್ಲಲು ಅರಿಯಬೇಕು" ಎಂದು ಸಂದೇಹವನ್ನು ನೀಗುತ್ತಾನೆ.

"ದೇಹವನ್ನು ಬಯಲಾಗಿಸಬೇಕೆಂದು ಪರತತ್ವವನ್ನು ಬೋಧಿಸುತ್ತಿರುವ ನನಗೇ ವಾಕ್ ಕಾಯ ಕರ್ಮಗಳಿವೆ ಎಂದಮೇಲೆ ಕಾಯವು ಬಯಲಾಗುವುದೆಂದರೇನು" ಎಂದು ಅವಳು ಸವಾಲು ಹಾಕುತ್ತಾಳೆ. ಸುಟ್ಟುಹೋದ ನೂಲು ಅದರ ಆಕಾರದಲ್ಲಿಯೇ ಇದೆ ಎಂದಮಾತ್ರಕ್ಕೆ ಅದು ಮಗ್ಗದವರ ಕೆಲಸಕ್ಕೆ ಬರುವುದೇ, ಅದೇರೀತಿ ಲಿಂಗಜ್ಞಾನವೆಂಬ ಬೆಂಕಿಯಲ್ಲಿ ಬೆಂದು ಹೋದ ದೇಹವುಳ್ಳವನು ನಿಜವಾದ ಬಯಲದೇಹಿಯಾಗಿರುತ್ತಾನೆ" ಎಂದು ಸರಳವಾಗಿ ತಿಳಿಹೇಳುತ್ತಾನೆ. ಅಲ್ಲಮನ 'ಅಂಗವಿದ್ದೂ ಅಂಗವಳಿಯುವ ಅರಿವಿನ ಅಂತರ್ಮುಖಿ ಚಲನೆ'ಯ ಮಹತ್ತಾದ ವಿಷಯವನ್ನು ನಾಟಕೀಯ ಸಂಭಾಷಣಾ ಚಾತುರ್ಯದಲ್ಲಿ ಅತ್ಯಂತ ಹೃದ್ಯವಾಗಿ, ಸರಳವಾಗಿ ಚಾಮರಸ ತಿಳಿಸಿಕೊಟ್ಟಿದ್ದಾನೆ.(ಗತಿ.೧೨)

ಸಿದ್ಧರಾಮರಾಮನೊಂದಿಗಿನ ಮುಖಾಮುಖಿಯಲ್ಲಿ "ನೂಲಸಂಕಲೆಗಡಿದು ಕನಕದ ಕೋಳವನು ಕಾಲಿಂಗೆ ಕೀಲಿಪ ಕಾಳು ಮತಿಯಾಗಿ....... ಬೋಳುಮಂಡೆಯ ಕೀರ್ತಿಗೋಸುಗ ಕೋಳುಹೋದನೆ ರಾಮ" "ಚಿಕ್ಕ ಸಂಸಾರವನು ಸಡಿಲಿಸಿ ಹೊಕ್ಕನಲ್ಲಾ ಹಿರಿಯ ಸಂಸಾರಕ್ಕಕಟ ವಿಖ್ಯಾತಿ, ಪೂಜಾ ಲಾಭದ ಇಚ್ಛೆಯಲ್ಲಿ ಸಿಕ್ಕಿಬಿದ್ದನು ಸಿದ್ಧರಾಮ" ಎನ್ನುತ್ತ ಅಲ್ಲಮ ಅವನ ಬಗೆಗೆ ಅನುಕಂಪ ತೋರುತ್ತಾನೆ. ಇಲ್ಲಿ ಅಂದಿನ ಮಠಗಳು ಮುನಿಗಳ ಸೂಕ್ಷ್ಮವಾದ ವಿಡಂಬನೆವ್ಯಕ್ತವಾಗಿದ್ದು, ಅದು ಇಂದಿನ ಮಠಮಾನ್ಯಗಳ, ಲೌಕಿಕವ್ಯವಹಾರಗಳಲ್ಲಿ ಸಿಕ್ಕಿಕೊಂಡಿರುವ ಕಾವಿದಾರಿಗಳಿಗೂ ಹೊಂದುತ್ತದೆ.

ಸ್ಥಾವರಲಿಂಗಪೂಜೆಯನ್ನು ಅಲ್ಲಮ ವಿರೋಧಿಸುತ್ತಾನಷ್ಟೇ ಅಲ್ಲ ಯಾವುದೇ ಕುರುಹನ್ನು ಮೀರಬೇಕೆನ್ನುತ್ತಾನೆ. "ಸಕಲ ಕಲ್ಲನು ಕಡಿದು ಕಲ್ಲಿಗೆ ಶಿಖರ ದೇಗುಲವೆಂದು ಮಾಡಿಸಿ ಮಕರಿಸುವವರೊಡ್ಡರಲ್ಲದೆ ಸಿದ್ಧರಲ್ಲ" ಎಂದು ರಾಮನನ್ನು ಜರಿಯುತ್ತಾನೆ. "ಈಸುಕೋಪಾಟೋಪ ರೋಷಾವೇಶವೇತಕೆ" "ಹಿರಿಯರನು ಸತ್ಕರಿಸಿ ಮಿಕ್ಕವರನು ಧಿಕ್ಕರಿಸುವುದು, ಉತ್ತಮ ಅಧಮ ಪಕ್ಷಪಾತ ಭ್ರಮೆಗಳನ್ನು ಇಟ್ಟುಕೊಳ್ಳುವುದು ಯೋಗೀಶ್ವರರಿಗೆ ಅನುಚಿತ. 'ಹಿರಿತನವೆಂಬುದು ಅರಿತುಕೊಳ್ಳಬೇಕಾದ ಸಂಗತಿಯೇ ವಿನಃ ಅನುಸರಿಸಬೇಕಾದ ಸಂಗತಿಯಲ್ಲ. ಅನುಸರಿಸಬೇಕಾದುದು ಏನಿದೆಯೋ ಅದು ಪ್ರತಿಯೊಬ್ಬರೂ ಕಂಡುಕೊಳ್ಳಬೇಕಾದ ಸಂಗತಿಯಾಗಿದೆ ಎಂದು ಸಿದ್ಧರಾಮನಿಗೆ ಕೊಟ್ಟ ಉಪದೇಶವು ಎಲ್ಲ ಕಾಲದ ಯೋಗೀಶ್ವರೂ ದೊಡ್ಡವರೆನಿಸಿಕೊಂಡವರೂ ತಿಳಿದುಕೊಳ್ಳಬೇಕಾದದ್ದೇ ಆಗಿದೆ.

ಗೊಗ್ಗಯ್ಯ, ಸಿದ್ಧರಾಮ ಮತ್ತು ಬಸವಣ್ಣನ ಸಂದರ್ಭಗಳಲ್ಲಿ ಶರಣರನ್ನು, ಕಾಳಾಮುಖ ಶೈವರನ್ನು ಹೆಚ್ಚು ಸಮಾಜ ಮುಖಿಯಾಗಿ ಮಾಡಿದ್ದ ಸಾಮಾಜಿಕ ಸೇವೆ, ಪರಿವರ್ತನೆ, ಧರ್ಮದೊಂದಿದೆ ಬೆರೆತ ಕಾಯಕ ತತ್ವ, ದಾಸೋಹ ಮುಂತಾದ

ಪರಿಕಲ್ಪನೆಗಳ ನಿರಾಕರಣೆಗಳನ್ನು ವಿರಕ್ತನಾದ ಚಾಮರಸನಲ್ಲಿ ಕಾಣುತ್ತೇವೆ. "ಸಂಸಾರ ಸುಖ ಆಸೆಪಾಶಗಳನ್ನು ನೀಗಿಕೊಂಡು ಯೋಗಿಯಾಗಿ ಜನಕೆ ಬೇಡಿದುದನ್ನು ನೀಡುವುದರಿಂದ ನಿಜಪದದೊರಕದೇ? ಕೆರೆಬಾವಿ, ಅರವೆ, ದೇಗುಲಗಳನ್ನು ನಿರ್ಮಿಸಿ ಪುಣ್ಯವನ್ನು ಆರ್ಜಿಸುವುದರಿಂದ ನಿಜಪದದೊರಕುವುದಿಲ್ಲವೆಂದರೆ ಮತ್ತಾವ ದಾರಿಯಿದೆ" ಎಂಬ ಸಿದ್ಧರಾಮನ ಪ್ರಶ್ನೆಗೆ "ಕರ್ಮ ಕಾರ್ಯಗಳಲ್ಲಿ ಅಂತರಂಗವು ಹಾಳುಬಿದ್ದಿರುವುದರಿಂದ ಅಲ್ಲಿ ಮಾರಿ ಮನೆಮಾಡಿಕೊಳ್ಳುತ್ತಾಳೆ ಹಸನು ಮಾಡಿದ ಹೊಲದಲ್ಲಿ ಕಸವನ್ನು ಬಿತ್ತುವ ಮರುಳನಂತಾಗದೆ ಅಲ್ಲಿ ಜೋತಿರ್ಲಿಂಗವನ್ನು ಸ್ಥಾಪಿಸಿಕೊಳ್ಳುವಂತೆ ಹೇಳಿ, ಮುಕ್ತಿಗೆ ಅಗತ್ಯವಾಗಿರುವ ಆತ್ಮಜ್ಞಾನವನ್ನು ಸಿದ್ಧರಾಮನಿಗೆ ಬೋಧಿಸುತ್ತಾನಂತೆ ಅಲ್ಲಮ!

'ಎಣ್ಣೆಬೇರೆ ಬತ್ತಿ ಬೇರೆ ಯಾದರೂ ಎರಡೂ ಕೂಡಿ ಸೊಡರಾಗುವಂತೆ' ದೇಹ ಆತ್ಮಗಳು ಒಂದಾಗಿ ಪ್ರಜ್ವಲಿಸಬೇಕು. 'ಅಂಗದ ಅವಸ್ಥೆಯಿಲ್ಲದೆ ಸಾಧನೆ ಸಾಧ್ಯವಿಲ್ಲವಾದರೂ ಅಂಗವೇ ಸರ್ವಸ್ವವೆಂಬ 'ದೇಹಮೀಮಾಂಸೆಯ' ನಿರಾಕರಣೆ ಹಾಗೂ ಕಾಯದ ಮಾಯೆ ಬಲಿಯಲು ಅವಕಾಶ ಕೊಡದೆ ಮಾಯಾ ಕಾಯಗಳೆರಡನ್ನೂ ಮನಸ್ಸಿನಲ್ಲೇ ಶೂನ್ಯಗೊಳಿಸ ಬೇಕೆಂಬ ವಿಚಾರವು ಅಲ್ಲಮ ಗೋರಕ್ಷರ ಸಂಘರ್ಷದಲ್ಲಿ ಅಭಿವ್ಯಕ್ತವಾಗಿದೆ. (ಗತಿ.೧೯)

ಬಸವನಂತಹ ಶ್ರೇಷ್ಠವ್ಯಕ್ತಿಯನ್ನು ಬಿಡದೆ ಕಾಡುವ 'ತಾನು ಶ್ರೇಷ್ಠ ದಾಸೋಹಿ' ಎಂಬ ಭಾವವನ್ನು ಬಿಡಿಸಿ ತಿದ್ದಿ ಬುದ್ದಿ ಹೇಳಬಹುದಾದ ಜ್ಞಾನಿ ಅಲ್ಲಮ ಮಾತ್ರ ಬಸವನನ್ನು ಪರೀಕಿಸಿ, ಅವನ ಬ್ರಮೆಯಿಳಿಯುವಂತೆ ಮಾಡಿ "ನಿನ್ನ ಮನದಲಿ ಮಾಟಕೂಟದ ಬುದ್ಧಿ ಮಮಕರಿಸೆ ನನ್ನ ಹಸು ಹುರಿದುಂಡಿತು", "ಹಸಿದು ಬಂದವನಲ್ಲ ನಾ ನಿನ್ನ ಹಸರಿಸಿದ ದಾಸೋಹತನವನು ಸಸಿನೆ ನೋಡಲು ಬಂದವನು" ಎಂದು ತಿಳಿಹೇಳಿ ತಿದ್ದುತ್ತಾನೆ.(ಗತಿ.೨೩)

ಭಕ್ತಿಯಾಗಲೀ ಆಧ್ಯಾತ್ಮವಾಗಲೀ ಸಿದ್ಧವಾದ ಸಂಗತಿಯಲ್ಲ. ತನ್ನನ್ನು ತಾನು ಅರಿಯುವುದರ ಮೂಲಕ ಕಂಡುಕೊಳ್ಳಬೇಕಾದ ಸ್ಥಿತಿ ಎಂಬುದನ್ನು ಪ್ರಭುಲಿಂಗಲೀಲೆ ನಮಗೆ ಬೋಧಿಸಿದೆ. "ಮರಣವಿಲ್ಲದ ಜನನವಿಲ್ಲದ ಕರಣವಿಲ್ಲದ ಕರ್ಮವಿಲ್ಲದ ಯಿಹಪರಂಗಳೊಳು ಒಡಲ ಬಿಟ್ಟಿಯಹೊರೆಗಳನು ಹೊರದ ನಿರುಪಮದ ನಿಶ್ಚಿಂತ ನಶ್ಚಲ ಪರಮ ನಿತ್ಯಾನಂದ ಪದವಿ" (ಅದೇ ಪದ್ಯ ೨೬)ಯನ್ನು ಕುರಿತು ಶರಣರಿಗೆ, ಸಾಧಕರಿಗೆ ಬೋಧಿಸುವ 'ಅಲ್ಲಮ ಮೀಮಾಂಸೆ'ಯನ್ನು ಚಾಮರಸ ಬಹಳ ಸರಳವಾಗಿ ಅಚ್ಚುಕಟ್ಟಾಗಿ ನಮಗೆ ಉಣಬಡಿಸುತ್ತಾನೆ. ಅಸೀಮ ಜ್ಞಾನದ ಸಿದ್ಧನ ತತ್ವವನ್ನು ಪ್ರತಿಪಾದಿಸಲು ಚಾಮರಸ ಪ್ರಯತ್ನಿಸಿದ್ದಾನಾದರೂ ತನ್ನ ಧರ್ಮದ ಸಿದ್ಧಚೌಕಟ್ಟಿನಲ್ಲಿ ಪೂರ್ಣವಾಗಿ ಕಟ್ಟಿಕೊಡಲು ಸಾಧ್ಯವಾಗಿಲ್ಲವೆಂಬುದು ಅಲ್ಲಮನ ಮೂಲ ವಚನಗಳನ್ನು ಓದಿದ ಯಾರಿಗೇ ಆದರೂ ಅನಸದೇ ಇರದು. ಆದರೂ ಅಲ್ಲಮನ ಅನಂತ ಜ್ಞಾನದ ಕಿಂಚಿತ್ತನ್ನಾದರೂ ಅರಿಯಲು ಪ್ರಭುಲಿಂಗಲೀಲೆ ಒಂದು ಪ್ರವೇಶವನ್ನು ಒದಗಿಸುತ್ತದೆ.

"ಕ್ರಿಯೆಯಲ್ಲಿ ದೀಕ್ಷೆಯ ಮಾಡಬಹುದಲ್ಲದೆ ಭಕ್ತಿಯ ಮಾಡಬಹುದೇ ಅಯ್ಯ?" ಎಂಬ ಅಲ್ಲಮನ ಪ್ರಶ್ನೆಗಳ ಹಿಂದೆ ಅಡಗಿರುವ ಕುರುಹನ್ನು ಆಚರಣೆಗಳನ್ನು ಮೀರುವ

ಆ ಆತ್ಮತತ್ವ ಬಹಳ ದೊಡ್ಡದು, ಎಲ್ಲ ಧರ್ಮದ ಎಲ್ಲೆಯನ್ನು ಮೀರಿನಿಲ್ಲುವಂತದ್ದು. ಈ ಹೊತ್ತಿನ ಅಧ್ಯಾತ್ಮವು ಅರುಹು ಕುರುಹುಗಳ ಜಂಜಡದಲ್ಲಿ ಸಿಕ್ಕಿರುವುದನ್ನು ನಾವು ನೋಡುತ್ತೇವೆ. ಲಾಂಚನಗಳು, ಐಕಾನುಗಳು ಪ್ರಾಮುಖ್ಯತೆ ಪಡೆಯುತ್ತಿವೆ. ಒಳಮುಖ ಚಲನೆಯಿಂದ "ಗುಹೇಶ್ವರನನರಿದ ಶರಣಂಗೆ ಆವ ಫಲವು ಇಲ್ಲೆಂಬ" ಅಲ್ಲಮನ ನಿಲುವು ಎಲ್ಲದರಲ್ಲೂ ಫಲಾಕಾಂಕ್ಷೆಯ ದೃಷ್ಟಿಯುಳ್ಳ, ಬಾಹ್ಯ ಆಡಂಬರದ ನಮ್ಮ ಕಾಲಕ್ಕೆ ಅರ್ಥವಾಗುವುದೇ?

ಅಡಿ ಟಿಪ್ಪಣಿಗಳು

೧. ಹರಿಹರನ ಪ್ರಭುದೇವರ ರಗಳೆ, ಚಾಮರಸನ ಪ್ರಭುಲಿಂಗಲೀಲೆ, ಎಳಂದೂರು ಹರೀಶ್ವರನ-ಪ್ರಭುದೇವರ ಪುರಾಣ, ಮಗ್ಗೆಯ ಮಾಯಿದೇವನ ಮಹದೈಪುರೀಶ್ವರ ಶತಕ, ಮುರಿಗೆ ಶಾಂತವೀರನ-ಪ್ರಭುಲಿಂಗ ಕಂದ, ಮೆಯಿರಾಜ ಭಟ್ಟದೇವನ ಪ್ರಭುನಟನ ತಾರಾವಳಿ, ರುದ್ರಕವಿಯ ಪ್ರಭುವಚನ ತಾರಾವಳಿ, ಪರ್ವತೇಶ ಕವಿಯ ಪ್ರಭುದೇವರ ಸಾಂಗತ್ಯ ಕೋಡೇಕಲ್ಲ ರಾಚಪ್ಪಯ್ಯನ ಮಾಯಾಸಾಂಗತ್ಯ ಮತ್ತುಪ್ರಭುಚರಿತೆ].

೨. [ಸಿಂಗಿರಾಜನ ಅಮಲಬಸವಚಾರಿತ್ರ್ಯ, ರಾಘವಾಂಕನ ಸಿದ್ಧರಾಮಚಾರಿತ್ರ್ಯ, ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಪುರಾಣ, ಪಾಲ್ಕುರಿಕೆ ಸೋಮನಾಥನ ಬಸವಪುರಾಣ, ಭೀಮಕವಿಯ ಬಸವಪುರಾಣ, ಸಿದ್ಧ ನಂಜೇಶನ ಗುರುರಾಜ ಚರಿತ್ರ, ಮಹದೇವಯೋಗಿಯ ವೀರಶೈವ ಚಿಂತಾಮಣಿ, ಉತ್ತರದೇಶದ ಬಸವಲಿಂಗನ ಬಸವೇಶ್ವರಪುರಾಣ ಕಥಾಸಾಗರ, ಚೆನ್ನಪ್ಪ ಕವಿಯ ಶರಣಲೀಲಾಮೃತ].

೩. ಮಗ್ಗೆಯ ಮಾಯಿದೇವನ 'ಪ್ರಭುವಚನ'-ಸಂಸ್ಕೃತ, ರೇವಣಸಿದ್ಧ ಕವಿಯ 'ಪ್ರಭುದೇವ ವಾಕ್ಯಮು'-ತೆಲುಗು, ಪಿಸಿ ಬ್ರೌನ್ ಪ್ರಭುಲಿಂಗಲೀಲೆಯ ಸಂಗ್ರಹಾನುವಾದ-ಕ್ರಿ.ಶ. ೧೮೪೦, ಇಂಗ್ಲಿಷ್. ಕುಮಾರ ಶಾಸ್ತ್ರಿಯವರ ಚಾಮರಸನ ಪ್ರಭುಲಿಂಗಲೀಲೆಯ ಅನುವಾದ- ಸಂಸ್ಕೃತ ; ತುರೈಯಾರ್ ಶಿವಪ್ರಕಾಶ ಸ್ವಾಮಿಯವರ- ಪ್ರಭುಲಿಂಗಲೀಲೆಯ ಅನುವಾದ-ತಮಿಳು, ಪಿಡುಪರ್ತಿ ಬಸವ ಮತ್ತು ಸೋಮನಾರಾಧ್ಯರ ಪ್ರಭುಲಿಂಗಲೀಲೆಯ ಅನುವಾದ- ತೆಲುಗು, ಬ್ರಹ್ಮದಾಸರ ಪ್ರಭುಲಿಂಗಲೀಲೆಯ 'ವಿಶ್ವಂಬರಾ' ಹೆಸರಿನಲ್ಲಿ ಅನುವಾದ- ಮರಾಠಿ].

೪. ಚೆನ್ನಪ್ಪ ಕವಿಯ ಬಸವಪುರಾಣ ಯಕ್ಷಗಾನ, ಶಿವಾನಂದ ಕವಿಯ ಅಲ್ಲಮಪ್ರಭುದೇವರ ಬಯಲಾಟ, ಸಕ್ಕರಿ ಶಾಂತಕವಿಯ ಪ್ರಭುನಾಟಕ, ಮಂಟೇಸ್ವಾಮಿ ಮೌಖಿಕ ಜಾನಪದ ಮಹಾಕಾವ್ಯ].

೫. ಬಿ ಪುಟ್ಟಸ್ವಾಮಯ್ಯ, ಡಿ.ಆರ್. ನಾಗರಾಜ, ನಾಗನೂರು ಶಿವಬಸವಸ್ವಾಮಿ, ಎಲ್. ಬಸವರಾಜು, ಚಂದ್ರಶೇಖರ ತಾಳ್ಯ, ಲಕ್ಷ್ಮೀಪತಿ ಕೋಲಾರ, ನಟರಾಜ ಬೂದಾಳು.

೬. *[ಕೆ. ಮರುಳಸಿದ್ಧಪ್ಪ. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ. ಬೆಂ.ವಿ.ವಿ. ಪ್ರಸಾರಾಂಗ. ಪು. ೧೧೩]

ಪರಾಮರ್ಶನ ಗ್ರಂಥಗಳು

೧. ಚಾಮರಸನ ಪ್ರಭುಲಿಂಗಲೀಲೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೮೫.

೨. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಪ್ರಸಾರಾಂಗ, ಬೆಂ. ವಿ.ವಿ. ೧೯೭೭.

೩. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಷಟ್ಪದಿ ಕಾವ್ಯ, ಪ್ರಸಾರಾಂಗ, ಬೆಂ.ವಿವಿ. ೧೯೭೫.

೪. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಮೈ.ವಿವಿ. ೨೦೦೮.

೫. ಅಲ್ಲಮಪ್ರಭು ವಚನಗಳು ಸಾಂಸ್ಕೃತಿಕ ಮುಖಾಮುಖಿ (ಸಂ). ಅಮರೇಶ ನುಗಡೋಣಿ. ಪ್ರಸಾರಾಂಗ, ಕವಿವಿ, ಹಂಪಿ, ೨೦೧೦.

೬ ವಚನ ಸಾಹಿತ್ಯ ವೈಚಾರಿಕ ಅಧ್ಯಯನ, ಎಚ್. ತಿಪ್ಪೇರುದ್ರಸ್ವಾಮಿ, ೧೯೯೨.

೭. ಅಲ್ಲಮನ ವಚನಗಳು (ಸಂ). ಡಾ. ಎಲ್. ಬಸವರಾಜು, ೧೯೬೯.

೮. ಶೂನ್ಯ ಸಂಪಾದನೆಯ ಪರಾಮರ್ಶೆ, (ಸಂ). ಶಿ. ಭೂಸನೂರಮಠ, ೧೯೬೯.

೯. ಅಲ್ಲಮ ಪ್ರಭು ಮತ್ತು ಶೈವಪ್ರತಿಭೆ, ಡಾ. ಡಿ.ಆರ್. ನಾಗರಾಜ್, ೧೯೯೯.

೧೦. ಮಂಟೇಸ್ವಾಮಿ ಕಾವ್ಯ, (ಸಂ). ಪ್ರೊ. ಹಿ.ಚಿ. ಬೋರಲಿಂಗಯ್ಯ, ೧೯೯೭.

■

ಕಾವ್ಯಗಳು ಉಲ್ಲೇಖಿಸುವ ಚಾಮರಾಜನಗರ ಜಿಲ್ಲೆಯ ಪುಣ್ಯಕ್ಷೇತ್ರಗಳು

◆

ಸಂಧ್ಯಾ. ಎ.

ಚಾಮರಾಜನಗರ ಜಿಲ್ಲೆಯು ಸುಂದರ ಗಿರಿಪಂಕ್ತಿ, ಅರಣ್ಯ ಪ್ರದೇಶ, ಹಲವಾರು ಜೀವನದಿಗಳಿಂದ ಶೋಭಿತವಾಗಿ, ಅನೇಕ ಸುಪ್ರಸಿದ್ಧ ತಾಣಗಳನ್ನೊಳಗೊಂಡಿದೆ. ಪ್ರಾಕೃತಿಕ ಸೌಂದರ್ಯವನ್ನಷ್ಟೇ ಅಲ್ಲದೆ ಅನೇಕ ಧಾರ್ಮಿಕ ಪುಣ್ಯಕ್ಷೇತ್ರಗಳೂ ಇಲ್ಲಿವೆ. ಈ ಧಾರ್ಮಿಕ ಕ್ಷೇತ್ರಗಳಲ್ಲಿ ಕೆಲವು ಶಾಸನಗಳಲ್ಲಿ ಉಲ್ಲೇಖಗೊಂಡರೆ ಮತ್ತೆ ಕೆಲವು ಪುರಾಣಗಳಲ್ಲಿ ಉಕ್ತವಾಗಿವೆ. ಇಲ್ಲಿನ ಕ್ಷೇತ್ರಗಳನ್ನು ಕುರಿತು ಕನ್ನಡದಲ್ಲಿ ಕಾವ್ಯಗಳೂ ರಚಿತವಾಗಿವೆ. ಈ ಕೆಲವು ಕಾವ್ಯಗಳ ಕುರಿತಾದ ಕಿರುಸಮೀಕ್ಷೆಯನ್ನು ಈ ಲೇಖನದಲ್ಲಿ ನಡೆಸಲಾಗಿದೆ.

ಪೌರಾಣಿಕ ಉಲ್ಲೇಖ: ಪೌರಾಣಿಕವಾಗಿ ಚಾಮರಾಜನಗರವನ್ನು 'ಮಣಿಪುರ' ಎಂದು ಕರೆಯಲಾಗಿದೆ.[೧] ಅಲ್ಲದೆ ಇಲ್ಲಿನ ಮರಡಿ ಕ್ಷೇತ್ರದ ವಿಚಾರ ಶಿವಪುರಾಣದಲ್ಲಿ ಉಲ್ಲೇಖಗೊಂಡಿದೆ.[೨] ಇದೇ ಜಿಲ್ಲೆಯ ಇಂದಿನ ಗುಂಡ್ಲುಪೇಟೆ ತಾಲ್ಲೂಕಿನ ಹಿಮವದ್ಗೋಪಾಲ ಪರ್ವತದಲ್ಲಿ ಅಗಸ್ತ್ಯ, ಕೌಂಡಿಣ್ಯ ಮೊದಲಾದ ಋಷಿಗಳು ವಾಸಿಸುತ್ತಿದ್ದರೆಂದು ಪುರಾಣಗಳಲ್ಲಿ ಉಲ್ಲೇಖವಿದೆ[೩]. ಈ ಜಿಲ್ಲೆಯ ಮಲೆಮಹದೇಶ್ವರ ಬಹಳ ಪ್ರಸಿದ್ಧವಾದ ಕ್ಷೇತ್ರವಾಗಿದೆ. ಈ ಸುತ್ತಮುತ್ತಲಿನ ಭಾಗದಲ್ಲಿ ಮಲೆಮಹದೇಶ್ವರ ಇದ್ದನೆಂದು ಹೇಳಿಕೆ ಇದೆ. ಮೊದಲು ಮಹದೇಶ್ವರನು ಸುತ್ತೂರು, ಕುಂತೂರು ಬೆಟ್ಟ, ಪ್ರಭುಲಿಂಗ ಬೆಟ್ಟ, ಕೊಳ್ಳೇಗಾಲದ ಮರಡಿ ಗುಡ್ಡದ ಬೆಟ್ಟದ ಮೇಲೆ ಮಂಡಿಯೂರಿ ನಂತರ ಕೌದಳ್ಳಿ ಕಣಿವೆಯ ಮಾರ್ಗವಾಗಿ ಮಾದೇಶ್ವರನ ಬೆಟ್ಟಕ್ಕೆ ಹೋದನೆಂದು ಈ ಕುರಿತಾದ ಕಾವ್ಯಗಳಲ್ಲಿ ಹೇಳಲಾಗುತ್ತದೆ[೪]. ಕಾವ್ಯಗಳು ಮಲೆಮಹದೇಶ್ವರನನ್ನು ಶಿವನ ಅವತಾರವೆಂದೇ ಬಣ್ಣಿಸಿವೆ.

ಕಾವ್ಯಗಳಲ್ಲಿ ವರ್ಣಿತವಾಗಿರುವ ಎರಡು ಕ್ಷೇತ್ರಗಳು: ಚಾಮರಾಜನಗರ ಜಿಲ್ಲೆಯಲ್ಲಿ ಪ್ರಸಿದ್ಧವಾಗಿರುವ ಅನೇಕ ಕ್ಷೇತ್ರಗಳಲ್ಲಿ ಕಮಲಾಚಲವೆಂಬ ಪ್ರಾಚೀನ ಹೆಸರನ್ನು ಹೊಂದಿರುವ ಹಿಮವದ್ಗೋಪಾಲಸ್ವಾಮಿ ಹಾಗು ಮಲೆ ಮಹದೇಶ್ವರ ಕ್ಷೇತ್ರಗಳನ್ನು ಕುರಿತಂತೆ ಕೆಲವು ಕಾವ್ಯಗಳು ರಚಿತವಾಗಿವೆ. ಇವುಗಳಲ್ಲಿ ಒಂದು ಶಿವಪಾರಮ್ಯ ವನ್ನು ಸಾರುವ ಕಾವ್ಯವಾದರೆ ಮತ್ತೊಂದು ಅಷ್ಟಾದಶಪುರಾಣಗಳಲ್ಲೊಂದಾದ ಭವಿಷ್ಯೋತ್ತರ ಪುರಾಣದಲ್ಲಿ ಉಕ್ತವಾಗಿದೆ ಎನ್ನಲಾದ ವಿಷ್ಣುಮಹಿಮೆಯನ್ನು ಕೊಂಡಾಡುವ ಕಾವ್ಯವಾಗಿದೆ. ಈ ಕಾವ್ಯಗಳಲ್ಲಿ ಒಂದು ಶಿಷ್ಟ ಪುರಾಣವಾಗಿದ್ದರೆ ಮತ್ತೊಂದು ಜನಪದ ಪುರಾಣವಾಗಿದೆ.

ಕಮಲಾಚಲ: ಇತ್ತೀಚಿನ ದಿನಗಳಲ್ಲಿ ಹಿಮವದ್ಗೋಪಾಲಸ್ವಾಮಿ ಬೆಟ್ಟವೆಂದು ಪ್ರಸಿದ್ಧಿಪಡೆದಿರುವ ಈ ಬೆಟ್ಟವನ್ನು ಹಿಂದೆ ಕಮಲಾಚಲ, ಗೋವರ್ಧನಗಿರಿ, ಬೆಟ್ಟದ ಕೋಟೆ, ಬೇಹರಕೋಟೆ[೫] ಎಂಬ ಹೆಸರುಗಳಿಂದಲ್ಲದೆ ಕಮಲಾಚಲದ ಸಮಾನರೂಪಗಳಾದ ಕಂಜಾದ್ರಿ, ವಾರಿಜಾಚಲ[೬] ಮೊದಲಾದ ಹೆಸರು ಗಳಿಂದಲೂ ಕರೆಯಲಾಗುತ್ತಿತ್ತು. ಸಮುದ್ರ ಮಟ್ಟದಿಂದ ಸುಮಾರು ೧೪೪೬ ಮೀ ಎತ್ತರ ಇರುವ ಈ ಪ್ರದೇಶವು ವರ್ಷದ ೩೬೫ ದಿನವೂ ಹಿಮಾವೃತವಾಗಿರುತ್ತದೆ. ಹಿಮದ ನೀರು ಇಲ್ಲಿನ ಗೋಪಾಲಕೃಷ್ಣನ ಮೂರ್ತಿಯ ಮೇಲೆ ಬೀಳುವುದರಿಂದ ಹಿಮವದ್ಗೋಪಾಲ ಸ್ವಾಮಿ ಎಂದೇ ಇಲ್ಲಿನ ಕೃಷ್ಣ ಪ್ರಸಿದ್ಧವಾಗಿದ್ದಾನೆ. ಜೊತೆಗೆ ಈ ದೇವಾಲಯದ ಕಾರಣದಿಂದ ಈ ಬೆಟ್ಟವೂ ಕೂಡ ಹಿಮವದ್ಗೋಪಾಲಸ್ವಾಮಿ ಬೆಟ್ಟವೆಂದೇ ಪ್ರಸಿದ್ಧಿ ಪಡೆದಿದೆ.

ಪೌರಾಣಿಕ ಹಿನ್ನೆಲೆ: ಹಿಮವಂತನ ಪುತ್ರಿ ಪಾರ್ವತಿಯನ್ನು ಶಿವನು ವರಿಸಿದ ಸಂದರ್ಭದಲ್ಲಿ ಸಮಸ್ತ ದೇವತೆಗಳೂ ಅಲ್ಲಿ ನೆರೆದಿರುತ್ತಾರೆ. ಇದರಿಂದಾಗಿ ಭೂಮಿಯ ಒಂದು ಭಾಗದ ಮೇಲಿನ ಭಾರ ಹೆಚ್ಚಾಗಿ ಭೂಮಿಯ ಸಮತೋಲನ ತಪ್ಪುತ್ತದೆ. ಇದನ್ನೇ ಮುಖ್ಯ ಕಾರಣವನ್ನಾಗಿಸಿಕೊಂಡು ಬ್ರಹ್ಮ ಮೊದಲಾದ ದೇವತೆಗಳು, ಅಗಸ್ತ್ಯರನ್ನು ದಕ್ಷಿಣದೇಶಕ್ಕೆ ಹೋಗಬೇಕೆಂದು ಪ್ರಾರ್ಥಿಸುತ್ತಾರೆ. ಈ ಮೂಲಕ ದೇವತೆಗಳ ಮತ್ತೊಂದು ಬಯಕೆಯೂ ಈಡೇರುವಂತಾಗುತ್ತದೆ ಅದೇನೆಂದರೆ ಅಗಸ್ತ್ಯರ ಶಿಷ್ಯನಾದ ವಿಂಧ್ಯನೆಂಬ ಹೆಸರಿನ ಪರ್ವತರಾಜನು ತಾನೂ ಮೇರುವಿನ ಸಮಾನನೆಂದು ತೋರಿಸುವ ತವಕದಲ್ಲಿ ಆಕಾಶದೆತ್ತರ ಬೆಳೆದು ದಕ್ಷಿಣ ಭಾಗದಲ್ಲಿ ಕತ್ತಲೆ ಆವರಿಸಲು ಕಾರಣನಾಗಿರುತ್ತಾನೆ. ಇದನ್ನು ನಿವಾರಣೆ ಮಾಡುವ ಶಕ್ತಿ ಕೇವಲ ಅಗಸ್ತ್ಯರಿಗಿದೆ ಎನ್ನುವುದನ್ನು ಮನಗಂಡಿದ್ದ ದೇವತೆಗಳು ಅಗಸ್ತ್ಯರು ದಕ್ಷಿಣಕ್ಕೆ ಪ್ರಯಾಣಬೆಳೆಸುವುದನ್ನು ಬಯಸುತ್ತಾರೆ. ದೇವತೆಗಳ ಅಪೇಕ್ಷೆಯಂತೆ ದಕ್ಷಿಣಕ್ಕೆ ಪ್ರಯಾಣ ಹೊರಟ ಅಗಸ್ತ್ಯರನ್ನು ಕಂಡ ವಿಂಧ್ಯ ಸಾಷ್ಟಾಂಗ ಪ್ರಣಾಮ ಮಾಡಲು, "ನಾನು ಮರಳಿ ಬರುವವರೆಗೂ ನೀನು ಹೀಗೆಯೇ ಬಗ್ಗಿರು" ಎಂದು ಹೇಳಿ ಅಗಸ್ತ್ಯರು ಪ್ರಯಾಣ ಮುಂದುವರೆಸಿ ದಕ್ಷಿಣಭಾರತಕ್ಕೆ ಬರುತ್ತಾರೆ.

ಅಗಸ್ತ್ಯರು ದಕ್ಷಿಣಕ್ಕೆ ಬರುವ ಮುನ್ನ ಉತ್ತರ ಗೋವರ್ಧನಗಿರಿಯಲ್ಲಿ ವಿಷ್ಣುವನ್ನು ಪ್ರಾರ್ಥಿಸುತ್ತಾರೆ. ಅವರ ಪ್ರಾರ್ಥನೆಗೆ ಒಲಿದ ವಿಷ್ಣು ಅವರನ್ನು, ದಕ್ಷಿಣ ಗೋವರ್ಧನಗಿರಿಯೆಂದು ಪ್ರಖ್ಯಾತವಾದ ಕಮಲಾಚಲಕ್ಕೆ ಹೋಗಬೇಕೆಂದೂ, ತಾನು ಸಹ ಅಲ್ಲಿ ಕೃಷ್ಣನ ರೂಪದಲ್ಲಿ ಬಂದು ನೆಲೆಸುವುದಾಗಿ ವರವನ್ನು ನೀಡುತ್ತಾನೆ.

ಅಗಸ್ತ್ಯರ ಕೋರಿಕೆಯಂತೆ ಈ ಕಮಲಾಚಲದಲ್ಲಿ ಕೃಷ್ಣನು ರುಕ್ಮಿಣಿ ಸತ್ಯಭಾಮೆಯ ರೊಡನೆ ನೆಲಸಿದ್ದಾನೆ. ಇಲ್ಲಿ ಕೌಂಡಿನ್ಯ ಮುನಿಗಳು ಕೃಷ್ಣನನ್ನು ಪೂಜಿಸುತ್ತಿದ್ದರೆಂದು ಹೇಳಲಾಗುತ್ತದೆ. ಇವರ ಮಹಿಮೆಯಿಂದ ಇಲ್ಲಿ ಹುಟ್ಟಿದ ನದಿಯನ್ನು ಕೌಂಡಿನ್ಯ ನದಿಯೆಂದೇ ಕರೆಯಲಾಗುತ್ತದೆ. ಈ ಕ್ಷೇತ್ರದಲ್ಲಿ ಸುಮಾರು ೭೭ ತೀರ್ಥಗಳಿವೆ ಎಂಬ ಪ್ರತೀತಿ ಇದೆ. ಇವುಗಳಲ್ಲಿ ಕೆಲವನ್ನು ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಣಬಹುದು. ಇಲ್ಲಿನ ಮತ್ತೊಂದು ಅಚ್ಚರಿ ಎಂದರೆ ಈ ಪ್ರದೇಶದಲ್ಲಿ ಕಾಗೆಗಳು ಕಾಣಸಿಗುವುದಿಲ್ಲ. ಕಾಗೆಗಳು ಇಲ್ಲಿರುವ ತೀರ್ಥಸ್ಥಳಗಳಲ್ಲಿ ಮಿಂದು ಹಂಸಗಳಾಗಿ ಹಾರಿ ಹೋದವು ಎಂದು ಇಲ್ಲಿನ ಐತಿಹ್ಯ ತಿಳಿಸುತ್ತದೆ. ಅಂತೆಯೇ ಇಲ್ಲಿನ ತೀರ್ಥವನ್ನು ಹಂಸತೀರ್ಥವೆಂದೂ ಕರೆಯಲಾಗುತ್ತಿತ್ತೆಂದು ತಿಳಿದುಬರುತ್ತದೆ. ಹಂಸವೆಂದರೆ ಆತ್ಮದ ಸಂಕೇತ. ಆಧ್ಯಾತ್ಮದ ಸಾಧನೆಗೆ ಸೂಕ್ತ ಸ್ಥಳ, ಎಲ್ಲ ಪಾಪಗಳಿಂದ ಮುಕ್ತಿಗೊಳಿಸುವ ತೀರ್ಥವಿದೆನ್ನುವ ಸಾಂಕೇತಿಕ ಅರ್ಥವನ್ನು ಈ ಕ್ಷೇತ್ರ ಪಡೆದಿದೆ.

ಈ ಪರ್ವತವು ಕಮಲಾಕಾರವಾದ ಅಷ್ಟದಳದಿಂದ ಇರುವುದರಿಂದ ಇದನ್ನು ಕಮಲಾಚಲವೆಂದು ಕರೆಯಲಾಗಿದೆ. ಇಲ್ಲಿಯ ಅಷ್ಟದಳಗಳೆಂದರೆ ಪೂರ್ವದಲ್ಲಿ ತ್ರಿಯಂಬಕಾದ್ರಿಯೆಂಬದಳ, ಈ ದಳವು ಶೇಷಾಕಾರವಾಗಿದೆ. ಈ ಶೇಷನ ಶಿರಸ್ಸಿನ ಪ್ರದೇಶಲ್ಲಿ ವೆಂಕಟರಮಣಸ್ವಾಮಿ ಪಾಂಡವರಿಗೆ ಪ್ರತ್ಯಕ್ಷವಾದಂಥ ಸ್ಥಳ, ಶೇಷನ ನಾಭಿಯ ಸ್ಥಳದಲ್ಲಿ ವಿಘ್ನೇಶ್ವರನೂ, ಪ್ರಥಮಭಾಗದಲ್ಲಿ ಪಾರ್ವತಿಯೊಂದಿಗೆ ಸೋಮೇಶ್ವರನೂ ನೆಲೆಸಿದ್ದಾರೆ. ಆಗ್ನೇಯ ಭಾಗದಲ್ಲಿ ಕುಮುದಾದ್ರಿಯೆಂಬ ದಳವಿದೆ, ದಕ್ಷಿಣಭಾಗದಲ್ಲಿ ಶಂಬರಾದ್ರಿಯೆಂಬ ದಳವಿದೆ, ನೈಋತ್ಯಭಾಗದಲ್ಲಿ ಗರುಡಾದ್ರಿಯೆಂಬ ದಳವಿದೆ, ವರುಣಭಾಗದಲ್ಲಿ ನೀಲಾದ್ರಿಯೆಂಬ ದಳವಿದೆ. ವಾಯವ್ಯ ಭಾಗದಲ್ಲಿ ಪಲ್ಲವಾದ್ರಿಯೆಂಬ ದಳವಿದೆ. ಕುಬೇರದಿಗ್ಭಾಗದಲ್ಲಿ ಮಂಗಳಾದ್ರಿಯೆಂಬ ದಳವಿದೆ. ಈಶಾನ್ಯಭಾಗದಲ್ಲಿ ತುಂಗಾದ್ರಿಯೆಂಬ ದಳವಿದೆ ಎಂದು ಕಾವ್ಯಗಳಲ್ಲಿ ಈ ಪರ್ವತವು ವರ್ಣಿಸಲ್ಪಟ್ಟಿದೆ.

ಇತಿಹಾಸ: ಪೆರುಮಾಳೆದೇವನ ಮಗ ಮಾಧವ ದಣ್ಣಾಯಕ ಎಂಬುವವನು ತೆರಕಣಾಂಬಿಯನ್ನು ಹದಿನಾಲ್ಕು ನಾಡನ್ನು (ಹದಿನಾಡನ್ನು) ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಶಾಸನಗಳಲ್ಲಿ ಒಂದರ ಕಾಲ ಕ್ರಿ.ಶ. ೧೩೧೦. ಈ ಮಾಧವ ದಣ್ಣಾಯಕ ೧೩೧೦ರಲ್ಲಿ ಗೋವರ್ಧನ ಗಿರಿಯಲ್ಲಿ ಪ್ರತಿಷ್ಠೆ ಮಾಡಿಸಿದ ಗೋಪೀನಾಥ ದೇವರ ಅಂಗರಂಗಭೋಗ ಮತ್ತಿತರ ಸೇವೆಗೆಂದು ಕಣ್ಣಗಾಲ ಎಂಬ ಗ್ರಾಮವನ್ನು ನೀಡಿದ.

ಮಾಧವ ದಣ್ಣಾಯಕನ ಮಗ ಭರತಜೀಯ ದಣ್ಣಾಯಕ ಇದೇ ಪ್ರದೇಶವನ್ನಾಳುತ್ತಿದ್ದ. ಇವನ ಸೋದರ ಮಹಾಪ್ರಧಾನ ಕೇತಯದಣ್ಣಾಯಕ ಹೊಯ್ಸಳ ಮುಮ್ಮಡಿ ಬಲ್ಲಾಳನಿಂದ ಕುಡಗುನಾಡಿನ ಗೊಮ್ಮಟಹಳ್ಳಿ ಹಾಗೂ ಕಾಚಗೌಡನ ಮಾದಯ್ಯಹಳ್ಳಿ ಎಂಬೆರಡು ಗ್ರಾಮಗಳನ್ನು ಪಡೆದು ಅರಮನೆಯ ಶ್ರೀಕರಣದ ರಾಘವದೇವನ ಮಗ ನಾರಣದೇವಣ್ಣನಿಗೆ ತನ್ನ ತಂದೆಯ ಹೆಸರಿನಲ್ಲಿ ಅಗ್ರಹಾರವಾಗಿ ಪರಿವರ್ತಿಸಲು ನೀಡಿದ.

ಶಾಸನವಿರುವ ಗ್ರಾಮದ ಹೆಸರು ಈಗಲೂ ರಾಘವಾಪುರ ಎಂದಿರುವುದು ಗಮನಿಸಬೇಕಾದ ಅಂಶ[೭]. ಈ ಮಾಹಿತಿಯ ಪ್ರಕಾರ ಹಿಮವದ್ಗೋಪಾಲ ಸ್ವಾಮಿಯನ್ನು ಗೋಪೀನಾಥ ದೇವರೆಂದೂ, ಬೆಟ್ಟವನ್ನು ಗೋವರ್ಧನ ಗಿರಿಯೆಂದೂ ಕರೆಯಲಾಗುತ್ತಿತ್ತೆಂದು ತಿಳಿದುಬರುತ್ತದೆ. ಇದು ಹಿಮವದ್ಗೋಪಾಲನ ಕುರಿತಾಗಿ ದೊರಕುವ ಮೊದಲನೆಯ ಶಾಸನದ ಉಲ್ಲೇಖವಾಗಿದೆ. ಕೈಫಿಯತ್ತುಗಳಲ್ಲಿ ಈ ಪ್ರದೇಶದ ಕೆಲವು ಐತಿಹಾಸಿಕ ವಿವರಗಳು ದಾಖಲಾಗಿವೆ. ಇಲ್ಲಿನ ದೇವಾಲಯ, ಕೋಟೆ, ಕೊಳಗಳ ನಿರ್ಮಾಣದ ವಿಚಾರಗಳು, ಇಲ್ಲಿ ಆಳ್ವಿಕೆ ನಡೆಸಿದ ರಾಜರ ವಿವರಗಳು ದೊರಕುತ್ತವೆಯಾದರೂ ಅದರಲ್ಲಿ ನಮೂದಿಸಲಾಗಿರುವ ಹೆಸರು, ಕಾಲ ಮೊದಲಾದ ವಿಚಾರಗಳಿಗೆ ಸೂಕ್ತ ಆಧಾರಗಳ ಅವಶ್ಯಕತೆ ಇದೆ.

ಕಮಲಾಚಲ ಮಹಾತ್ಮೆಯನ್ನು ಬಣ್ಣಿಸುವ ಕಾವ್ಯಗಳು: ಸಂಸ್ಕೃತ ಪುರಾಣಗಳಲ್ಲಿ ಉಕ್ತವಾಗಿರುವ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಕ್ಷೇತ್ರಪುರಾಣವನ್ನು ಕನ್ನಡಿಗರೆಲ್ಲರೂ ಅರಿಯುವ ಹಾಗೆ ಕೆಲವು ಕನ್ನಡ ಕವಿಗಳು ಸುಲಲಿತ ಆಡು ಭಾಷೆಯಲ್ಲಿ ರಚಿಸಿದ್ದಾರೆ. ಈ ಕವಿಗಳು ತಮ್ಮ ನೆಚ್ಚಿನ ದೈವ ಗೋಪಾಲಸ್ವಾಮಿಯ ಮಹಿಮೆಯನ್ನು ಚಂಪೂ, ಗದ್ಯ, ಪ್ರಬಂಧರೂಪಗಳಲ್ಲಿ ರಚಿಸಿ ಪ್ರಚುರಪಡಿಸಿರುವುದನ್ನು ಕಾಣುತ್ತೇವೆ.

ವೆಂಕ ಕವಿಯ 'ವೆಂಕಟೇಶ್ವರ ಪ್ರಬಂಧ': ಈ ಕ್ಷೇತ್ರವನ್ನು ಕುರಿತಂತೆ ಕ್ರಿ.ಶ. ಸುಮಾರು ೧೬೫೦ ರಲ್ಲಿದ್ದ ವೆಂಕಕವಿ 'ವೆಂಕಟೇಶ್ವರ ಪ್ರಬಂಧ' ವೆಂಬ ಕೃತಿಯನ್ನು ರಚಿಸಿದ್ದಾನೆ. ಆಶ್ವಾಸಗಳ ಅಂತ್ಯದಲ್ಲಿ "ಹರಿ ಕೋಟೆ ಬೆಟ್ಟದೊಳೆನಿಂದಂ ಕೋಟೆರಾಯಾಖ್ಯೆಯಿಂ" ಎಂದು ತಿಳಿಸಿರುವಲ್ಲಿ ಹಿಮವದ್ಗೋಪಾಲ ಸ್ವಾಮಿಯನ್ನು ಬೆಟ್ಟದ ಕೋಟೆರಾಯನೆಂದೂ ಕರೆಯಲಾಗುತ್ತಿತ್ತೆನ್ನುವುದು ತಿಳಿದು ಬರುತ್ತದೆ. ಬೆಟ್ಟದ ಕೋಟೆ ಎನ್ನುವುದು ಈ ಪ್ರಾಂತ್ಯದ ಪೂರ್ವದ ಹೆಸರಾಗಿದೆ. ಕವಿಯು ಇದೇ ಸ್ಥಳದ ಸಿಂಗಪಭಟ್ಟನ ಮಗ ಎನ್ನುವುದನ್ನು ತನ್ನ ಕೃತಿಯಲ್ಲಿ ತಿಳಿಸಿದ್ದಾನೆ.

ಈ 'ವೆಂಕಟೇಶ್ವರ ಪ್ರಬಂಧ' ವೆಂಬ ಕೃತಿಯನ್ನು ಆರ್. ನರಸಿಂಹಾಚಾರ್ಯರು ತಮ್ಮ ಕರ್ಣಾಟಕ ಕವಿಚರಿತೆಯಲ್ಲಿ ಪರಿಚಯಿಸಿದ್ದಾರೆ[೮]. ಆದರೆ ಅವರಿಗೆ ದೊರೆತಿರುವುದು ಅಸಮಗ್ರ ಪ್ರತಿ. ಚಂಪೂ ಪ್ರಕಾರದಲ್ಲಿ ರಚಿಸಿರುವ ಈ ಕೃತಿಯ ಆಶ್ವಾಸಗಳ ಕೊನೆಯಲ್ಲಿ "ಇದು ಸಕಲಸುರನಿಕರ ಮಕುಟಘಟಿತ ಮಣಿಗಣಕಿರಣ ಪಟಲ ದೀಪಿತ ಚರಣ ಕಮಲ ಲಕ್ಷ್ಮೀವಲ್ಲಭ ಪಾದ ಭಕ್ತಿಯುಕ್ತ ಸುಕವಿ ವೆಂಕಟೇಶ ಪ್ರಬಂಧಮೊಳ್" ಎಂದು ಕವಿ ಹೇಳಿದ್ದಾನೆ. ಪ್ರಸ್ತುತ, ಆರ್. ನರಸಿಂಹಾಚಾರ್ಯರು ಗಮನಿಸಿರುವ ಈ ಕೃತಿಯ ಅಸಮಗ್ರ ಹಸ್ತಪ್ರತಿಯು ಪ್ರಾಯಶಃ ಮದ್ರಾಸಿನ ಹಸ್ತಪ್ರತಿ ಭಂಡಾರದಲ್ಲಿದೆ[೯].

ವೆಂಕಟರಮಣ 'ಬೆಟ್ಟದಸ್ಥಳ ಪುರಾಣ': ಅಪ್ರಕಟಿತವಾದ ಈ ಕೃತಿಯ ಹಸ್ತಪ್ರತಿಯು ಮೊದಲು ಮದ್ರಾಸಿನ ಹಸ್ತಪ್ರತಿಭಂಡಾರದಲ್ಲಿದ್ದು[೧೦], ಪ್ರಸ್ತುತ ಮೈಸೂರಿನ ಕುವೆಂಪು ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರಕ್ಕೆ ಸ್ಥಳಾಂತರಗೊಂಡಿದೆ. ಈ ಕೃತಿಯನ್ನು ಕುರಿತಾದ ವಿವರ ಮೈಸೂರಿನ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿ

ಉಲ್ಲೇಖವಾಗಿದೆ[೧೧]. ಇದರ ಕರ್ತೃವಿವರ ತಿಳಿದು ಬಂದಿಲ್ಲ. ಕೆಲವು ಭಕ್ತರು ಹಿಮವದ್ಗೋಪಾಲ ಸ್ವಾಮಿಯನ್ನು ತಮ್ಮ ನೆಚ್ಚಿನ ದೈವ ವೆಂಕಟರಮಣಸ್ವಾಮಿ ಎಂದೇ ಕರೆದು ಭಜಿಸಿರುವ ಹಿನ್ನೆಲೆಯಲ್ಲಿ ಹಾಗೂ ಹಿಮವದ್ಗೋಪಾಲಸ್ವಾಮಿ ಬೆಟ್ಟವನ್ನು ಬೆಟ್ಟದಪುರ, ಬೆಟ್ಟದ ಸ್ಥಳ ಮೊದಲಾಗಿ ಕರೆದಿರುವುದರಿಂದ ಈ ಕೃತಿಯು ಹಿಮವದ್ಗೋಪಾಲಸ್ವಾಮಿ ಬೆಟ್ಟದ ಕುರಿತಾಗಿಯೇ ರಚಿಸಲಾಗಿರುವ ಕೃತಿಯೆಂಬುದಾಗಿ ತಿಳಿದು ಬಂದಿದೆ. ಆದರೂ ಇದರ ವಿಷಯದಲ್ಲಿ ಹೆಚ್ಚಿನ ಸ್ಪಷ್ಟತೆಯ ಅಗತ್ಯವಿದೆ.

ಪುರಾಣದ ಧಾಟಿಯಲ್ಲಿಯೇ ರಚಿತವಾದ ಈ ಕೃತಿಯಲ್ಲಿ ನೈಮಿಷಾರಣ್ಯದ ಸೂತಪುರಾಣಿಕರು ಹಾಗೂ ಇತರ ಋಷಿಗಳು ಸೂತರನ್ನು ಕುರಿತು ವೆಂಕಟಾದ್ರಿ ಮೊದಲಾದ ಸ್ಥಳಮಹಾತ್ಮೆಯನ್ನು ತಿಳಿಸಿ ಹೇಳಿರುವ ತಾವು ಬೆಟ್ಟದ ಪುರಾಣವನ್ನು ತಿಳಿಸಬೇಕೆಂದು ಕೇಳಿಕೊಳ್ಳಲು, ಇವರ ಅಪೇಕ್ಷೆಯಂತೆ ಸೂತರು ಈ ಸ್ಥಳ ಪುರಾಣವನ್ನು ತಿಳಿಸುತ್ತಾರೆ.

ಈ ಕೃತಿಯು ಕೇವಲ ಪುರಾಣವನ್ನಷ್ಟೇ ಅಲ್ಲದೆ ಇಲ್ಲಿನ ಕೆಲವು ಐತಿಹಾಸಿಕ ವಿಚಾರಗಳನ್ನೂ ತಿಳಿಸುತ್ತದೆ. ಇಲ್ಲಿನ ಪಾತಾಳ ಮಂಟಪವನ್ನು ತೆರಕಣಾಂಬಿ ಚೆನ್ನಯ್ಯಶೆಟ್ಟಿ ಎಂಬುವನು ಶಾ.ಶ. ೧೬೧೦ ರಲ್ಲಿ ಕಟ್ಟಿಸಿದನು, ಮೈಸೂರು ನಗರದ ಚಿಕ್ಕದೇವರಾಜ ಒಡೆಯರ ಪುಣ್ಯಸ್ತ್ರೀ ದೊಡ್ಡಮುದ್ದಮ್ಮನವರು ಕೋಟೆ ಹಾಕಿಸಿ ಪ್ರಕಾರ ಮಾಡಿಸಿದರು, ಕೃಷ್ಣರಾಜ ಒಡೆಯರ್ ಹೆಗ್ಗವಾಡಿಗ್ರಾಮವನ್ನು ದೇವರಿಗೆ ಅರ್ಪಿಸಿದರು. ಎಂಬ ಮೊದಲಾದ ವಿಚಾರಗಳು ಈ ಕೃತಿಯಿಂದ ತಿಳಿದುಬರುತ್ತದೆ.

ಚಿಕ್ಕುಪಾಧ್ಯಾಯನ 'ಕಮಲಾಚಲಮಹಾತ್ಮ್ಯೆ': ಮೈಸೂರು ದೊರೆ ಚಿಕ್ಕದೇವರಾಜನ (೧೬೭೩–೧೭೦೪) ಮಂತ್ರಿಯಾಗಿದ್ದ ಚಿಕ್ಕುಪಾಧ್ಯಾಯ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಹಿಮವದ್ಗೋಪಾಲಸ್ವಾಮಿ ಕ್ಷೇತ್ರ ಮಹಾತ್ಮ್ಯ ಕುರಿತಾದ 'ಕಮಲಾಚಲಮಹಾತ್ಮ್ಯೆ'ಯು ಚಂಪೂ ಪ್ರಕಾರದಲ್ಲಿ ರಚಿಸಿರುವ ಗ್ರಂಥ. ೧೬ ಆಶ್ವಾಸಗಳ ಈ ಕೃತಿಯು ೨೫೯೧ ಕಂದಪದ್ಯ, ೧೧೬೧ ವೃತ್ತ, ೨೭೯ ವಚನಗಳಿಂದ ಕೂಡಿದೆ.

ಶ್ರೀ ಲಲನಾಮುಖಪಂಕಜ
ರೋಲಂಬಂ ರಿಪುಮಹೀಂದ್ರ ಶಂಬಂ ಮುದಮಂ
ಲೀಲಾ ವಿಗ್ರಹನಂಬುದ
ನೀಲಂ ಕುಡುಗೆಮಗೆ ಕಮಲಗಿರಿಗೋಪಾಲಂ॥ ಎಂದು ಕವಿಯು ಹಿಮವದ್ಗೋಪಾಲ ಸ್ವಾಮಿಯನ್ನು ಭಜಿಸುತ್ತಾ, ಈ ಕಮಲಾಚಲ ಮಹಾತ್ಮೆಯನ್ನು ಆರಂಭಿಸಿದ್ದಾನೆ.

ಕವಿಯ "ಕನ್ನಡಿಸುವೆಂ ಕಂಜಾದ್ರಿ ಮಹಾತ್ಮ್ಯಮಂ" ಎಂಬ ಹೇಳಿಕೆಯಲ್ಲಿ ಕಮಲಾಚಲ ಮಹಾತ್ಮೆ ಕೃತಿಯು ಅನ್ಯಭಾಷೆಯ (ಸಂಸ್ಕೃತದ) ಭಾಷಾಂತರವೆಂಬುದು ಸ್ಪಷ್ಟವಾಗುತ್ತದೆ. ಕವಿ ತಿಳಿಸಿರುವಂತೆ ಇದು ಭವಿಷ್ಯೋತ್ತರ ಪುರಾಣದ ತೀರ್ಥಕಾಂಡದಲ್ಲಿ ಉಕ್ತವಾಗಿರುವ ಕಥೆ. ಅಪ್ರಕಟಿತವಾದ ಈ ಕೃತಿಯ ಕೆ.ಬಿ. ೩೮ ಹಾಗೂ ಕೆ.ಬಿ.೪೨

ಸಂಖ್ಯೆಯ ಎರಡು ಕಾಗದದ ಹಸ್ತಪ್ರತಿಗಳು ಮೈಸೂರಿನ ಕುವೆಂಪು ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಲಭ್ಯವಿದೆ.

ಗೋಪಾಲರಾಜನ 'ಕಮಲಾಚಲ ಮಹಾತ್ಮ್ಯ': ಕ್ರಿ.ಶ. ಸುಮಾರು ೧೭೪೦ರಲ್ಲಿದ್ದ ಈ ಗೋಪಾಲರಾಜನು, ಬೆಟ್ಟದ ಕೋಟೆಯ ಅರಸು ವಂಶದವನು. ಕೆಲವು ಕಾಲ ಬೆಂಗಳೂರಿನಲ್ಲಿ ಅಧಿಕಾರಿಯಾಗಿದ್ದನು[೧೨]. ಈತ ಮೈಸೂರು ಅರಸು ಮನೆತನದ ನಿಕಟಸಂಬಂಧಿ. ಅಲ್ಲದೆ ಇದೇ ವಂಶದ ಮುಂದಿನ ತಲೆಮಾರಿನಲ್ಲಿ ಬಂದ ಕೋಟೆ ಗೋಪಾಲರಾಜ ಅರಸು ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಮುಮ್ಮಡಿ ಕೃಷ್ಣಭೂಪಾಲರಿಗೆ ಕೊಟ್ಟು ಮದುವೆ ಮಾಡಿದನು. ಈ ಕೋಟೆ ಗೋಪಾಲರಾಜನ ಮೊಮ್ಮಗನ ಮಗ ಚಿಕ್ಕಕೃಷ್ಣೇ ಅರಸು[೧೩]. ಇವನ ಮೂರನೆಯ ಮಗನೇ ದತ್ತುಪುತ್ರನಾಗಿ ಸ್ವೀಕರಿಸಲ್ಪಟ್ಟು, ಮೈಸೂರು ಸಿಂಹಾಸನದ ಉತ್ತರಾಧಿಕಾರಿಯಾದ ಚಾಮರಾಜ ಒಡೆಯರ್ (೧೮೬೩–೧೭೯೪). ಇವನ ಮಗನೇ ಅಭಿನವ ಭೋಜನೆಂದು ಖ್ಯಾತಿಪಡೆದ ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೪–೧೮೬೮). ಮುಮ್ಮಡಿ ಕೃಷ್ಣರಾಜರ ತಾಯಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಕೂಡ ಇದೇ ಮನೆತನದ ಹೆಣ್ಣುಮಗಳು.

ಮುಮ್ಮಡಿ ಕೃಷ್ಣರಾಜರು ತಮ್ಮ ತಂದೆಯ ಸ್ಮರಣೆಗಾಗಿ ಅವರು ಜನಿಸಿದ ಸ್ಥಳವಾದ ಅರಿಕುಠಾರವೆಂಬ ಊರನ್ನು ಚಾಮರಾಜನಗರವೆಂದು ಮರುನಾಮಕರಣ ಮಾಡಿ. ಅಲ್ಲಿ ಚಾಮರಾಜೇಶ್ವರ ದೇವಾಲಯವನ್ನೂ ನಿರ್ಮಿಸಿದರು.

ಗೋಪಾಲರಾಜನು ಗದ್ಯರೂಪದಲ್ಲಿ ಬರೆದಿರುವ ಕಮಲಾಚಲ ಮಹಾತ್ಮ್ಯ ಕೃತಿಯನ್ನು 'ಗೋಪಾಲ ಭೂಪಾಲೋಕ್ತಿವಿಲಾಸ' ಎಂಬ ಹೆಸರಿನಿಂದಲೂ ಕರೆಯಲಾಗುವುದು. ೧೦ ಅಧ್ಯಾಯಗಳಲ್ಲಿ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಹಾತ್ಮ್ಯವನ್ನು ಹೇಳಲಾಗಿದೆ. ಈ ಕೃತಿಗೆ ಆಕರ ಭವಿಷ್ಯೋತ್ತರ ಪುರಾಣವಾಗಿದೆ. ಗ್ರಂಥದ ಕಡೆಯಲ್ಲಿ "ಇಂತು ತ್ರಿತಸಕಲವಿದ್ವಜ್ಜನ ಮನಃ ಪಾರಾವಾರ ಪೂರ್ಣ ಸುಧಾಕರ ಶ್ರೀ ಗೋಪಾಲ ಭೂಪಾಲೋಕ್ತಿವಿಲಾಸರೂಪ ಕರ್ಣಾಟ ಭಾಷಾಯಂ ಭವಿಷ್ಯೋತ್ತರಪುರಾಣೋಕ್ತ ಕಮಲಾಚಲ ಮಹಾತ್ಮ್ಯ ಕಥಾಪ್ರಸಂಗೇ" ಎಂದು ಮುಗಿಸಿರುವ ಈ ಕೃತಿಯನ್ನು ಪುರಾಣದ ಧಾಟಿಯಲ್ಲಿ ನೈಮಿಷಾರಣ್ಯ ವಾಸಿಗಳಾದ ಶೌನಕಾದಿಗಳನ್ನು ಕುರಿತು ಸೂತಋಷಿಯು ಹೇಳಿದ ಆಖ್ಯಾಯಿಕೆ ಎಂದೇ ನಿರೂಪಿಸಲಾಗಿದೆ[೧೪].

ಕೈಫಿಯತ್ತುಗಳಲ್ಲಿನ ಉಲ್ಲೇಖ: ಕಾವ್ಯಗಳಷ್ಟೇ ಅಲ್ಲದೆ ಕೈಫಿಯತ್ತುಗಳಲ್ಲಿ ಕೂಡ ಹಿಮವದ್ಗೋಪಾಲಸ್ವಾಮಿ ಬೆಟ್ಟವನ್ನು ಕುರಿತಾದ ಚರಿತ್ರೆ, ಮಹಾತ್ಮೆಗಳು ಉಲ್ಲೇಖವಾಗಿವೆ. ಅವುಗಳಲ್ಲಿ 'ನಗರಸೀಮೆ ಕೈಫಿಯತ್ತು' ಇಲ್ಲಿನ ಗೋಪಾಲಕೃಷ್ಣನ ಭಕ್ತರ ಕುರಿತಾದ ವಿಚಾರ ತಿಳಿಸಿದರೆ, 'ಬೆಟ್ಟದ ಕೋಟೆ ಕೈಫಿಯತ್ತು' ಕಮಲಾಚಲ ಮಹಾತ್ಮೆ ಯೊಂದಿಗೆ ಇಲ್ಲಿನ ರಾಜಕೀಯ ಇತಿಹಾಸವನ್ನೂ ತಿಳಿಸುತ್ತದೆ. ಮೆಕೆಂಝಿಯ ಸಂಗ್ರಹದಲ್ಲಿರುವ ಈ 'ಬೆಟ್ಟದ ಕೋಟೆ ಕೈಫಿಯತ್ತನ್ನು ತಿರುಮಲಯ್ಯ ಎಂಬುವರು ಶ್ಯಾನುಭಾಗ ಸೂರ್ಯನಾರಾಯಣಯ್ಯ ನವರಿಂದ ಬರೆಸಿದ್ದಾರೆ[೧೫]. ಈ 'ಬೆಟ್ಟದಕೋಟೆ ಕೈಫಿಯತ್ತು'

ಮೈಸೂರು ವಿವಿಯ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯಲ್ಲಿ 'ಕಮಲಾಚಲ ಮಹಾತ್ಮ್ಯ' ಎಂಬ ಹೆಸರಿನಡಿಯಲ್ಲಿ ದಾಖಲಾಗಿದೆ[೬]. ಇಲ್ಲಿ ನಮೂದಿಸಲಾಗಿರುವ ಆದಿಪತ್ರದ ವಿಚಾರದಲ್ಲಿ ಬೆಟ್ಟದಕೋಟೆ ಕೈಫಿಯತ್ತು ಎಂಬ ಶೀರ್ಷಿಕೆ ಹಾಗೂ ಇದನ್ನು ಬರೆದವರು ಶ್ಯಾನುಭೋಗ ಸೂರ್ಯನಾರಾಯಣಯ್ಯ ಎಂಬ ಉಲ್ಲೇಖವಿದೆಯಾದರೂ ಇದರ ಕರ್ತೃವನ್ನು ತಿರುಮಲಯ್ಯ ಇತರರು ಎಂದು ತಿಳಿಸಲಾಗಿದೆ. ಇಲ್ಲಿ ತಿರುಮಲಯ್ಯ ಅವರು ಕೈಫಿಯತ್ತಿನ ಕರ್ತೃವೇ ಅಥವಾ ನಿರೂಪಣ ಕಾರರೆ ಎಂಬುದು ಸ್ಪಷ್ಟವಿಲ್ಲ.

ಮಲೆಮಹದೇಶ್ವರ ಬೆಟ್ಟ: ಕೊಳ್ಳೇಗಾಲಕ್ಕೆ ೮೦ ಕಿ.ಮೀ ದೂರದಲ್ಲಿರುವ ಬೆಟ್ಟ ಶ್ರೇಣಿಯೇ ಮಹದೇಶ್ವರ ಬೆಟ್ಟ, ಈ ವಿಶಾಲ ಬೆಟ್ಟದಮೇಲೆ ಮಹದೇಶ್ವರ ಸ್ವಾಮಿ ದೇವಾಲಯವಿದೆ. ಬೆಟ್ಟ ಹತ್ತಲು ಸರ್ಪನದಾರಿ, ಬಸವನದಾರಿ ಎಂಬ ಎರಡು ಮಾರ್ಗಗಳಿವೆ. ಬೆಟ್ಟಗಳಿಂದಲೇ ಸುತ್ತುವರೆದ ಈ ಪ್ರದೇಶದಲ್ಲಿರುವ ದೇವಾಲಯವು ಸುಮಾರು ೧೫೦ ಎಕರೆಗಳಷ್ಟು ವಿಸ್ತೀರ್ಣವಾದ ಪ್ರದೇಶಕ್ಕೆ ವ್ಯಾಪಿಸಿದೆ.

ಸ್ಥಳಪುರಾಣದ ಪ್ರಕಾರ ಈ ಬೆಟ್ಟಕ್ಕೆ ಸೇರಿದಂತೆ ಆನೆಮಲೆ, ಜೇನುಮಲೆ, ಕಾನುಮಲೆ, ಪಚ್ಚೆಮಲೆ, ಪವಳಮಲೆ, ಪೊನ್ನಾಚಿಮಲೆ, ಕೊಂಗುಮಲೆ ಎಂಬ ೭ ಬೆಟ್ಟಗಳಿವೆ.

ಕುರುಬ ಗೌಡರು ಅಥವಾ ಹಾಲುಮತ ಗೌಡರ, ಗಿರಿಜನರ, ಸೋಲಿಗರ ಹಾಗೂ ಇಲ್ಲಿನ ಸುತ್ತಮುತ್ತಲಿನ ಪ್ರದೇಶದ ಹಲವಾರು ಮನೆತನಗಳ ಕುಲದೈವ ಈ ಮಹದೇಶ್ವರ. ಮಹದೇಶ್ವರ ಐತಿಹಾಸಿಕ ವ್ಯಕ್ತಿ. ಈತ ೧೫ನೆಯ ಶತಮಾನದಲ್ಲಿ ಜೀವಿಸಿದ್ದ. ಉತ್ತರದ ಕಡೆಯಿಂದ ಬಂದ ಈತ ಬೆಟ್ಟದಲ್ಲಿ ನೆಲೆಸಿ ದೀರ್ಘಕಾಲ ತಪಸ್ಸನ್ನಾಚರಿಸಿ ಲೋಕಕಲ್ಯಾಣಾರ್ಥ ದೇಶ ಸಂಚಾರ ಮಾಡಿ, ತನ್ನ ತಪಃ ಪ್ರಭಾವದಿಂದ ಹಲವರ ಸಂಕಷ್ಟ ಪರಿಹರಿಸಿ ಪವಾಡಪುರುಷ ಎನಿಸಿದ್ದ. ಹರದನಹಳ್ಳಿ ಮಠದ ಮೂರನೆಯ ಮಠಾಧೀಶನೂ ಆಗಿದ್ದನೆಂದು ತಿಳಿದು ಬರುತ್ತದೆ. ಈತನ ಭಕ್ತರಲ್ಲೊಬ್ಬನಾದ ಜುಂಜೇಗೌಡನೆಂಬ ಶ್ರೀಮಂತ ಕುರುಬ ಗೌಡ, ಮಹದೇಶ್ವರ ಬೆಟ್ಟದ ಮೇಲಿನ ದೇವಾಲಯವನ್ನು ಕಟ್ಟಿಸಿದ್ದಾನೆ.

ಇಂದಿಗೂ ಇಲ್ಲಿ ಮಹದೇಶ್ವರ ಲಿಂಗರೂಪದಲ್ಲಿ ನೆಲೆಸಿದ್ದಾನೆಂಬುದು ಈ ಜನರ ನಂಬಿಕೆ. ಈತ ಹುಲಿಯ ಬೆನ್ನೇರಿ ಸವಾರಿ ಮಾಡುತ್ತಿದ್ದ, ಪವಾಡಪುರುಷ ಎಂದೆಲ್ಲಾ ಕಾವ್ಯಗಳಲ್ಲಿ ವರ್ಣಿತನಾಗಿದ್ದಾನೆ. ಈತನಲ್ಲಿ ಅಸಾಮಾನ್ಯವಾದ ಅಲೌಕಿಕ ಶಕ್ತಿಯಿತ್ತು. ತನ್ನ ಶಕ್ತಿಯಿಂದ ಸಮಾಜದ ಉದ್ಧಾರಕ್ಕೆ ಶ್ರಮಿಸಿದ ಮಹದೇಶ್ವರ ಇಂದಿಗೂ ಭಕ್ತರನ್ನು ಹರಸುತ್ತಿದ್ದಾನೆಂಬುದು ಇಲ್ಲಿನ ಜನರ ನಂಬಿಕೆ. ಹೈದರಲಿಯ ಕಾಲದ ಕ್ರಿ.ಶ. ೧೭೬೧ರ ಒಂದು ಶಾಸನದಲ್ಲಿ ಮಹದೇಶ್ವರನ ಉಲ್ಲೇಖವಿದೆ.

ಮಲೆಮಾದೇಶ್ವರ ಕಾವ್ಯ: ಮಲೆಮಾದೇಶ್ವರ ಕಾವ್ಯವು ಮೌಕಿಕ ಪರಂಪರೆಯಲ್ಲಿ ಬೆಳೆದು ಬಂದಿರುವ ಕಾವ್ಯವಾಗಿದೆ. ಜಾತ್ರೆಯ ಸಮಯದಲ್ಲಿ ಮಾದೇಶ್ವರನ ಭಕ್ತರು ಈ ಕಾವ್ಯವನ್ನು ಹಾಡುತ್ತಾ ದರ್ಶನಕ್ಕೆ ಬರುವುದು ವಾಡಿಕೆ. ಕಂಸಾಳೆ ಮೊದಲಾದ

ಪದಗಳಲ್ಲಿ ಮಾದೇಶ್ವರನ ಕುರಿತಾದ ಮಹಿಮೆ, ಪವಾಡಗಳು ಕೇಳಿಬರುತ್ತದೆ. ಈ ಕಾವ್ಯವನ್ನು ಹಾಡುವವರನ್ನು ದೇವರ ಗುಡ್ಡರು ಎಂದು ಕರೆಯಲಾಗುತ್ತದೆ.

ಲಿಖಿತ ದಾಖಲೆಗೆ ಒಳಗಾಗದ ಈ ಕಾವ್ಯವು ಶತಮಾನಗಳಿಂದ ಅನೇಕ ಜನಪದರ ಬಾಯಲ್ಲಿ ಕೆಲವು ಭಿನ್ನ ಸಂಪ್ರದಾಯದಲ್ಲಿ ಕೇಳಿಬರುತ್ತದೆ. ಮೌಕಿಕ ಪರಂಪರೆಯಲ್ಲಿನ ಈ ಕಾವ್ಯವನ್ನು ಕ್ರಮಬದ್ಧವಾಗಿ ಸಂಪಾದಿಸುವ ಕಾರ್ಯ ಕಳೆದ ೪೦ ದಶಕಗಳಲ್ಲಿ ನಡೆದಿದೆ.

ಈ ಕಾವ್ಯವನ್ನು ಮೊದಲು ಸಂಪಾದಿಸಿದ ಪಿ.ಕೆ.ರಾಜಶೇಖರ ಅವರು ವಿಭಿನ್ನ ಗಾಯಕರ ವಿವಿಧ ಸಂಪ್ರ ದಾಯಗಳಲ್ಲಿನ ಈ ಕಾವ್ಯವನ್ನು ಸಂಗ್ರಹಿಸಿ, ಅವುಗಳಲ್ಲಿನ ಉತ್ತಮ ಭಾಗಗಳನ್ನು ಆರಿಸಿ ಕ್ರಮಬದ್ಧವಾಗಿ ಸಂಯೋಜಿಸಿ ಸಂಪಾದಿಸಿದ್ದಾರೆ. ೩೦೦೦೦ ಪಂಕ್ತಿಗಳ ಈ ಕೃತಿಯು ೧೯೭೨ರಲ್ಲಿ ಎರಡು ಸಂಪುಟಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿ ಹೊರಬಂದಿದೆ[೧೬].

ಇತ್ತೀಚೆಗೆ ಕೇಶವನ್ ಪ್ರಸಾದ್ ಅವರು ಮಾದೇಶ್ವರ ಕಾವ್ಯದ ಪ್ರಸಿದ್ಧ ಗಾಯಕರಾದ ಹೆಬ್ಬಣಿ ಮಾದಯ್ಯನ ಗಾಯನ ಪದ್ಧತಿಯ ಕಾವ್ಯವನ್ನು ಸಂಪಾದಿಸಿದ್ದಾರೆ. ೧೯೯೭ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟ ವಾದ ಈ ಕೃತಿಯು ೨೦೦೦೦ ಪಂಕ್ತಿಗಳಿಂದ ಕೂಡಿದೆ.

ಮಲೆಮಹದೇಶ್ವರ ಕೃತಿಯ ಸಾರಾಂಶ: ರಾಕ್ಷಸೀ ಪ್ರವೃತ್ತಿಯ ರಾಜನೆನಿಸಿದ ಶ್ರವಣಾಸುರನನ್ನು ಸಂಹರಿಸಲು ಶಿವ, ಮಾದೇಶ್ವರನಾಗಿ ಅವತರಿಸುತ್ತಾನೆ. ಈ ವೃತ್ತಾಂತವನ್ನೊಳಗೊಂಡ ಕಾವ್ಯವು ಏಳು ಸಾಲು ಅಥವಾ ಅಧ್ಯಾಯಗಳಲ್ಲಿದೆ. ಮೊದಲನೆಯ ಅಧ್ಯಾಯದಲ್ಲಿ ಮಾದೇಶ್ವರನ ಜನನ, ಬಾಲ್ಯ ವಿದ್ಯಾಭ್ಯಾಸ ಮೊದ ಲಾದ ವಿಚಾರವಿದೆ. ಎರಡನೆಯ ಭಾಗದಲ್ಲಿ ಜುಂಜೇಗೌಡನ ಭೇಟಿ, ಅವನು ಮಾದೇಶ್ವರನ ಭಕ್ತನಾಗುವುದು ಹಾಗೂ ಮಾದೇಶ್ವರನ ದೇವಾಲಯ ನಿರ್ಮಿಸುವ ವಿಚಾರವಿದೆ. ಮೂರನೆಯ ಭಾಗದಲ್ಲಿ ಶ್ರವಣಾಸುರನ ಸಂಹಾರ, ನಾಲ್ಕನೆಯ ಸುದೀರ್ಘ ಭಾಗವು ಸಂಕಮ್ಮಳ ವಿಚಾರವನ್ನು ವರ್ಣಿಸುತ್ತದೆ. ಪತಿವ್ರತೆ ಸಂಕಮ್ಮ ಮಾದೇಶ್ವರನ ವಾಕ್ಯವನ್ನು ಮೀರದೆ ಭಕ್ತಿಯನ್ನು ಪ್ರಕಟಿಸುತ್ತಾಳೆ. ಐದನೆಯ ಭಾಗವು ಬೇವಿನಟ್ಟಿ ಕಾಳಮ್ಮಳ ವಿಚಾರವಾಗಿದೆ. ಆರನೆಯ ಭಾಗವು ಮೂಗಯ್ಯ, ಆತನ ಹೆಂಡತಿ ಮತ್ತು ಇತರ ಭಕ್ತರ ಕತೆಗಳನ್ನೊಳಗೊಂಡಿದೆ. ಫಲಶ್ರುತಿ ಹೇಳುವ ಕಡೆಯ ಭಾಗವು ಇಡೀ ಕಾವ್ಯದ ಸಾರಾಂಶ ವನ್ನೊಳಗೊಂಡಿದೆ[೧೮].

ಗುರುಸಿದ್ಧಪ್ಪನ 'ಮಾದೇಶ್ವರ ಸಾಂಗತ್ಯ': ಮಾದೇಶ್ವರನ ಕಾವ್ಯವನ್ನು ಕೇವಲ ಮೌಖಿಕ ಪರಂಪರೆಯಲ್ಲಷ್ಟೇ ಅಲ್ಲದೆ ಶಿಷ್ಟರೂಪದಲ್ಲಿಯೂ ಕಾಣಬಹುದು. ಗುರುಸಿದ್ಧಪ್ಪನೆಂಬ ಕವಿ ಮಾದೇಶ್ವರನ ಮಹಿಮೆಯನ್ನು ಸಾಂಗತ್ಯದಲ್ಲಿ ರಚಿಸಿದ್ದಾನೆ. ಕವಿಯು ಒಂದೆರಡು ಪದ್ಯಗಳಲ್ಲಿ ತನ್ನ ಕುರಿತಾಗಿ ಕೆಲವು ವಿಚಾರಗಳನ್ನು ತಿಳಿಸಿದ್ದಾನೆ.

ಹಲಗೂರ ಅಕ್ಕಸಾಲೆಯ ದೇಪಂಣನ
ಸಲೆಸುತ ಗುರುಸಿದ್ಧನಿಗೆ
ವೊಲಿದು ವರವ ಕೊಟ್ಟನು
ಮಾದೇಶ್ವರ ನಲಿದು ಪೇಳಿದೆನೀ ಕೃತಿಯ॥

ಸತ್ಯಮಂಗಲದ ಭೂಪತಿಯ ಸಿಂಹಾಸನ
ಗುತ್ಯಾಲೂರ ವತ್ತಿನೊಳು
ಮತ್ತೆಸೆವ ಮಿಂಣದಲಿ ಗುರುಸಿದ್ಧನು
ವಿಸ್ತರಿಸಿದೆನೀ ಕೃತಿಯ॥[೧೯]

ವಾಟಾಳಮಠದ ಯತಿ ಬಸವಲಿಂಗನ ಶಿಷ್ಯನಾದ ಈ ಕವಿ ಗುರುಸಿದ್ದಪ್ಪನ ತಂದೆ ಹಲಗೂರಿನ ಅಕ್ಕಸಾಲೆ ದೇಪಣ್ಣ ಎಂದು ತಿಳಿದು ಬರುತ್ತದೆ. ೩ ಸಂಧಿ ಹಾಗೂ ೩೬೫ ಪದ್ಯಗಳಲ್ಲಿ "ಕಸ್ತೂರಿ ಪುನಗು ಜವಾದಿಯಗಿಲುಗಂಧ ವಿಸ್ತರಿಸುವ ಪರಿಯಂತೆ ಉತ್ತಮ ಸವಿನುಡಿಯಂತೆ ಈ ಕಥೆಯನು ಬಿತ್ತರಿಸುವೆನರ್ಥಿಯಲಿ" ಎಂದು ಪೊನ್ನಾಚಿ ಬೆಟ್ಟದ ಬಳಿ ಇರುವ ನಡುಮಲೆಯ ಮಾದೇಶ್ವರದೇವರ ವೈಭವವನ್ನು ವರ್ಣಿಸಿದ್ದಾನೆ[೨೦].

ಕವಿಯು ತಾನು ರಚಿಸಿರುವ ಗ್ರಂಥದ ಅಧ್ಯಾಯ ಹಾಗೂ ಪದ್ಯದ ಸಂಖ್ಯೆಗಳನ್ನೂ ಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ. ಅಂತು ಅಧ್ಯಾಯ ೩ಕಂ ಪದನೂ ೩೬೫ಕಂ ಜಯಮಂಗಳ ಮಹಾ ಶ್ರೀ ಶ್ರೀ ಮಾದೇಶ್ವರನ ಸಂಗೀತ ಎಂದು ಈ ಕೃತಿ ಮುಕ್ತಾಯವಾಗಿದೆ. ಈ ಕಾವ್ಯದ ಪ್ರತಿಗಳು ಮಾದೇಶ್ವರ ಸಾಂಗತ್ಯ, ಮಹದೇಶ್ವರ ಸಾಂಗತ್ಯ ಎಂಬ ವಿಭಿನ್ನ ಹೆಸರಿನಲ್ಲಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದಲ್ಲಿ ಕಾಣಸಿಗುತ್ತವೆ.

ಮಹದೇಶ್ವರನ ಕುರಿತಾದ ಅನೇಕ ಜನಪದ ಗೀತೆಗಳಿವೆ. ಇವುಗಳಲ್ಲಿ ಕೆಲವು ಭಕ್ತಿಗೀತೆಗಳಾದರೆ, ಮತ್ತೆ ಕೆಲವು ಅವನ ಕಥೆಯನ್ನು ಸಂಕ್ಷಿಪ್ತವಾಗಿ ಬಣ್ಣಿಸುವ ಗೀತೆಗಳಾಗಿವೆ. 'ಚೆಲ್ಲಿದರು ಮಲ್ಲಿಗೆಯಾ' ಎಂಬುದು ಸುಪ್ರಸಿದ್ಧ ಜನಪದಗೀತೆಯಾಗಿದೆ. ಅಜ್ಞಾತ ಕವಿಯ ಮಲೆ ಮಾದೇಶ್ವರನ ಅಷ್ಟಕ ಎಂಬ ಕೃತಿಯು ಎಂಟು ಪಂಕ್ತಿಗಳಲ್ಲಿ ರಚಿತವಾದ ಸ್ತೋತ್ರ, ವಿಭಿನ್ನ ವೃತ್ತಗಳಲ್ಲಿ ರಚಿಸಲ್ಪಟ್ಟ ಈ ಅಷ್ಟಕದ ಪ್ರತಿ ಪಂಕ್ತಿಯು 'ಮಲೆಯ ಮಾದ ಕೃಪಾನಧೀ' ಎಂದು ಅಂತ್ಯವಾಗುತ್ತದೆ.

ನಂಬಿ ಚಾಮರನೊಲಿದ ದೇವನೆ ತುಂಬರ ನಾರದ ಪ್ರೀಯನೇ
ನಂಬಿದೆನು ನಾ ನಿಂಮ್ಮ ಪಾದವ ಶಂಕರ ಶಾಶ್ವತಾ
ಅಂಬಿಕಾ ಸಹ ಗಂಗೆ ಪಾರ್ವತಿ ವಂದಿತಾ ಪ್ರಿಯ ನಿರ್ಭಯಾ
ಅಂಬರಾಕೇಶ ಮಹೇಶ ಶ್ರೀ ಗುರು ಮಲೆಯ ಮಾದ ಕೃಪಾನಿಧೀ[೨೧]॥

ಹಿಮವದ್ಗೋಪಾಲಸ್ವಾಮಿ ಹಾಗೂ ಮಲೆಮಹದೇಶ್ವರ ಈ ಎರಡೂ ಕ್ಷೇತ್ರಗಳ ಮಹಿಮೆಯನ್ನು ಬಣ್ಣಿಸುವ ನಾನಾ ಪ್ರಕಾರದ ಕಾವ್ಯಗಳು ಇಲ್ಲಿನ ಪೌರಾಣಿಕ, ಐತಿಹಾಸಿಕ

ಮಹತ್ವಗಳನ್ನು ಸಾರುತ್ತಿವೆ. ಈ ಎರಡೂ ಕಾವ್ಯಗಳಲ್ಲಿ ಒಂದು ಶಿಷ್ಟ ಸಂಪ್ರದಾಯದ್ದಾದರೆ ಮತ್ತೊಂದು ಜನಪದ ಮೂಲದಿಂದ ಬೆಳೆದು ಬಂದಿದೆ. ಗೋಪಾಲಸ್ವಾಮಿಯನ್ನು ಶ್ರೀವೈಷ್ಣವ ಪಂಥೀಯರು ಹಾಡಿ ಹೊಗಳಿದರೆ, ಮಾದೇಶ್ವರನನ್ನು ವೀರಶೈವರು, ಕುರುಬರು, ಸೋಲಿಗರು, ಗಿರಿಜನರು ಹಾಡಿ ನರ್ತಿಸುತ್ತಾರೆ. ಕಮಲಾಚಲದಲ್ಲಿ ಅಗಸ್ತ್ಯರು ದೈವರೂಪಿ ಕೃಷ್ಣನನ್ನು ಸಾಕ್ಷಾತ್ಕರಿಸಿಕೊಂಡು ನೆಲೆನಿಲ್ಲುವಂತೆ ಮಾಡಿದರೆ, ಮನುಷ್ಯರೂಪಿ ಮಾದೇಶ್ವರನನ್ನು ಅವನ ಭಕ್ತರು ದೈವತ್ವಕ್ಕೇರಿಸಿ ದೇವಾಲಯ ನಿರ್ಮಿಸಿದ್ದಾರೆ.

ಕಮಲಾಚಲ ಮತ್ತು ಮಲೆ ಮಹದೇಶ್ವರ ಈ ಎರಡೂ ಕ್ಷೇತ್ರಗಳು ನಿಸರ್ಗದ ಮಡಿಲಲ್ಲಿ ಸುಂದರ ತಾಣದಲ್ಲಿ, ಬೆಟ್ಟದ ಮೇಲೆ ನಿರ್ಮಿತವಾಗಿದೆ. ಅಷ್ಟೇಅಲ್ಲ ಈ ಎರಡೂ ಕ್ಷೇತ್ರಗಳನ್ನು ಬಣ್ಣಿಸುವ ಕೃತಿಗಳು ೧೫ನೆಯ ಶತಮಾನದ ನಂತರ ಸರಿಸುಮಾರು ಒಂದೇ ಕಾಲದಲ್ಲಿ ರಚಿತವಾದ ವಿಭಿನ್ನ ಪ್ರಕಾರದ ಕೃತಿಗಳಾಗಿವೆ. ಜನಪದ ಗಾಯಕರಿಂದ ಸಂಪಾದಿಸಲಾದ ಮಲೆಮಹದೇಶ್ವರ ಕಾವ್ಯಕೃತಿಯೊಂದನ್ನುಳಿದು ಮೇಲೆ ಉಲ್ಲೇಖಿಸಿರುವ ಯಾವ ಕೃತಿಯೂ ಪ್ರಕಟವಾಗಿಲ್ಲ. ಈ ಅಪ್ರಕಟಿತ ಕೃತಿಗಳು ಪ್ರಕಟವಾದಲ್ಲಿ ಈ ಪ್ರದೇಶದ ಐತಿಹಾಸಿಕ, ಧಾರ್ಮಿಕ ವಿಚಾರಗಳು ವಿವರವಾಗಿ ದೊರಕುವಂತಾಗುತ್ತದೆ. ಮೇಲೆ ಉಲ್ಲೇಖಿಸಿರುವ ವೆಂಕ ಕವಿಯ ವೆಂಕಟೇಶ ಪ್ರಬಂಧ, ಮಣಿಪುರ ಕೈಫಿಯತ್ತು, ವೆಂಕಟೇಶ್ವರ ಬೆಟ್ಟದ ಪುರಾಣ ಕೃತಿಗಳ ಹಸ್ತಪ್ರತಿಗಳು ಮೊದಲು ಮದ್ರಾಸ್ ಹಸ್ತಪ್ರತಿ ಭಂಡಾರದಲ್ಲಿದ್ದು ಆನಂತರ ವೆಂಕಕವಿಯ ಕೃತಿಯೊಂದನ್ನುಳಿದು ಇನ್ನೆರಡು ಮೈಸೂರಿನ ಕುವೆಂಪು ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರಕ್ಕೆ ಸ್ಥಳಾಂತರಗೊಂಡಿವೆ. ಆದರೆ ಮೈಸೂರು ಹಸ್ತಪ್ರತಿ ಸೂಚಿಯಲ್ಲಿ ಈ ಕುರಿತಾದ ಮಾಹಿತಿ ದೊರಕುವುದಿಲ್ಲ. ಈ ಕಾರಣದಿಂದಾಗಿ ಈ ಹಸ್ತಪ್ರತಿಗಳು ಎರಡೂ ಗ್ರಂಥ ಭಂಡಾರಗಳ ಸೂಚಿಗಳಲ್ಲಿಯೂ ನಮೂದಾಗಿ ಗೊಂದಲವನ್ನುಂಟುಮಾಡುತ್ತಿವೆ.

ಈ ಲೇಖನದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿರುವ ಕೇವಲ ಎರಡು ಧಾರ್ಮಿಕ ಮತ್ತು ಐತಿಹಾಸಿಕ ಮಹತ್ವ ಉಳ್ಳ ಕ್ಷೇತ್ರಗಳನ್ನು ಕುರಿತಾದ ಕಾವ್ಯಗಳ ಕಿರುಸಮೀಕ್ಷೆಯನ್ನು ನಡೆಸಲಾಗಿದೆ. ಕಾವ್ಯ, ಪುರಾಣ, ಕೈಫಿಯತ್ತುಗಳೊಂದಿಗೆ ಶಾಸನ ಹಾಗೂ ಪ್ರಚಲಿತ ಐತಿಹ್ಯಗಳನ್ನು ಪೂರಕವಾಗಿ ಬಳಸಿಕೊಂಡು, ಇವುಗಳಲ್ಲಿ ಉಲ್ಲೇಖ ವಾಗಿರುವ ಈ ಜಿಲ್ಲೆಯ ಇತರ ಕ್ಷೇತ್ರಗಳನ್ನು ಕುರಿತಾದ ಸಮಗ್ರ ಅಧ್ಯಯನವನ್ನು ನಡೆಸುವ ಅಗತ್ಯವಿದೆ[೨].

ಆಧಾರಸೂಚಿ ಮತ್ತು ಟಿಪ್ಪಣಿಗಳು:

೧. ಬಿ.ಬಸವರಾಜು ತರಗಪುರ, ಐತಿಹ್ಯ ದರ್ಶನ, ಸುನಿಲ್ ಪ್ರಕಾಶನ, ಮೈಸೂರು-೨೦೦೮; ಮಣಿಪುರದ ಕೈಫಿಯತ್ತು, An Alphabetical Index of Kanarese Manuscripts In the Government Oriental Manuscripts Library Madras, ಮೆಕೆಂಝೀ ಸಂಗ್ರಹ (ಸಂ) ಟಿ. ಚಂದ್ರಶೇಖರನ್, 1952. P. 34. [ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣಾನಾತ್ಮಕ ಸೂಚೀ ಸಂ. ೮, ಪು. ೧೪೮ರಲ್ಲಿ ವೆಂಕಟರಮಣ ಬೆಟ್ಟದ ಸ್ಥಳಪುರಾಣದ ವಿವರಣೆ ನೀಡಿ ಅದರೊಂದಿಗೆ

'೬ ಪಂಕ್ತಿಗಳ ಮಣಿಪುರದ ಕೈಫಿಯತ್ತು ಇದೆ' ಎಂದು ಉಲ್ಲೇಖಿಸಿದೆ, ಆದರೆ ಮೈವಿವಿಯ ಒಟ್ಟು ೯ ಸಂಪುಟಗಳಲ್ಲಿನ ಯಾವ ಹಸ್ತಪ್ರತಿ ಸೂಚಿಯಲ್ಲಿಯೂ ಇದರ ಉಲ್ಲೇಖವೇ ಮತ್ತೆಲ್ಲೂ ಇಲ್ಲ. ಆದರೆ ಮೈವಿವಿಯ ಹಸ್ತಪ್ರತಿ ಭಂಡಾರದಲ್ಲಿ ಈ ಹಸ್ತಪ್ರತಿಯ ಇರುವಿಕೆ ಸಂ. ೮ ರಲ್ಲಿನ ಉಲ್ಲೇಖದಿಂದ ಖಚಿತಪಟ್ಟಿದೆ. ಆರು ಪಂಕ್ತಿಗಳ ಈ ಕೈಫಿಯತ್ತು ಅಸಮಗ್ರವಾಗಿದ್ದು ಎಂ. ಎಂ. ಕಲಬುರ್ಗಿ ಅವರು ಸಂಪಾದಿಸಿರುವ ಕರ್ನಾಟಕದ ಕೈಫಿಯತ್ತುಗಳು ಗ್ರಂಥದಲ್ಲಿ ಪ್ರಕಟವಾಗಿದೆ.]

೨. ಬಿ. ಬಸವರಾಜು ತರಗಪುರ, ಐತಿಹ್ಯ ದರ್ಶನ, ಸುನಿಲ್ ಪ್ರಕಾಶನ, ಮೈಸೂರು-೨೦೦೮,ಪು ೫.

೩. (ಸಂ) ಎಂ.ಎಂ. ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೪.

೪. ಕೆ. ಕೇಶವನ್ ಪ್ರಸಾದ್, ಮಲೆಮಾದೇಶ್ವರ ಕಾವ್ಯ, ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ., ಹಂಪಿ-೧೯೯೭.

೫. ಬೆಟ್ಟದ ಕೋಟೆ ಕೈಫಿಯತ್ತು, (ಸಂ) ಎಂ.ಎಂ.ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು.

೬ ಕಮಲಾಚಲಮಾಹಾತ್ಮ್ಯ, ಚಿಕ್ಕುಪಾಧ್ಯಾಯ. "ದೇವತಾಪತಿಯೊರಲ್ದನೀ ಲಸದ್ವಾರಿಜಾಚಲ ಮಹಾತ್ಮ್ಯ...."

೭. ಗುಂಡ್ಲುಪೇಟೆ ತಾಲ್ಲೂಕಿನ ಶಾಸನಗಳು, ಎಚ್.ಎಮ್. ನಾಗರಾಜರಾವ್, ಶಿವಶೋಧ, ರಚನಾ ಪ್ರಕಾಶನ, ಕುವೆಂಪು ನಗರ ಮೈಸೂರು ೨೦೦೮, ಪು ೧೬೦-೧೬೧.

೮. ಆರ್. ನರಸಿಂಹಾಚಾರ್ಯ, ಕರ್ಣಾಟಕ ಕವಿಚರಿತೆ, ದ್ವಿತೀಯ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೦೫, ಪು ೩೫೯.

೯. An Alphabetical Index of Kanarese Manuscripts In the Government Oriental Manuscripts Library Madras (ed) S.Kuppuswami Sastri, 1929. P. 62.

೧೦. ಪೂರ್ವೋಕ್ತ, ಮೆಕೆಂಝೀ ಸಂಗ್ರಹ (ಸಂ) ಟಿ. ಚಂದ್ರಶೇಖರನ್ 1952. P. 41.

೧೧. ಕಾಗದದ ಹಸ್ತಪ್ರತಿ ಸಂಖ್ಯೆ ಕೆ.ಎ. ೫೬೭/೧, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಸಂ. ೮, ಪು ೧೪೮, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೨. ಆರ್. ನರಸಿಂಹಾಚಾರ್ಯ, ಕರ್ಣಾಟಕ ಕವಿಚರಿತೆ, ತೃತೀಯ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೫, ಪು ೫೨.

೧೩. ಆರ್. ಸತ್ಯನಾರಾಯಣ, ಮೈಸೂರಿನ ನಾಲ್ವರು ಸಂಗೀತರಾಜರು, ಬ್ರಹ್ಮವಿದ್ಯಾ (ರಿ), ಶ್ರೀವಿದ್ಯಾಪ್ರತಿಷ್ಠಾನ, ಮೈಸೂರು-೨೦೦೬ ಪು ೫೦

೧೪. ಓಲೆಗರಿ ಹಸ್ತಪ್ರತಿ ಸಂಖ್ಯೆ. ಕೆ. ೨೭೯, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಸಂ. ೧ ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೫. ಬೆಟ್ಟದ ಕೋಟೆ ಕೈಫಿಯತ್ತು, (ಸಂ) ಎಂ.ಎಂ. ಕಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ಪು ೮೭.

೧೬ ಕಾಗದದ ಹಸ್ತಪ್ರತಿ ಸಂಖ್ಯೆ. ಕೆ.ಎ. ೪೮೫/೧, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಸಂ. ೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು ೨೭೪.

೧೭. (ಸಂ) ಪಿ.ಕೆ. ರಾಜಶೇಖರ, ಮಲೆಮಹದೇಶ್ವರ ಕಾವ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೧೯೭೨.

೧೮. (ಸಂ) ಕೆ. ಕೇಶವನ್ ಪ್ರಸಾದ್, ಮಲೆಮಾದೇಶ್ವರ ಕಾವ್ಯ.

೧೯. ಓಲೆಗರಿ ಹಸ್ತಪ್ರತಿ ಸಂಖ್ಯೆ ಕೆ. ೧೭೭೦, ಕೆ. ೧೭೭೧, ಕೆ. ೧೬೨೭/೧, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಸಂ.೭, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು ೩೬೩-೫, ೩೯೬

೨೦. ಆರ್. ನರಸಿಂಹಾಚಾರ್ಯ, ಕರ್ಣಾಟಕ ಕವಿಚರಿತೆ, ತೃತೀಯ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೦೫, ಪು ೯೭

೨೧. ಓಲೆಗರಿ ಹಸ್ತಪ್ರತಿ ಸಂಖ್ಯೆ ಕೆ. ೯೩೭/೯, ಕಾಗದದ ಹಸ್ತಪ್ರತಿ ಕೆ.ಎ.೫೬೮/೨೪, ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಸಂ. ೭, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು ೩೫೨-೪.

೨೨. ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸಹಾಯ ಮಾಡಿದ ಎಸ್. ಕಾರ್ತಿಕ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

■

ನವೋದಯ ಕಾಲಘಟ್ಟದ ಮಹಿಳಾ ಸಾಹಿತ್ಯ–ಒಂದು ಅವಲೋಕನ

◆

ಪಿ. ವನಜ

"ಕಳೆದ ಇಪ್ಪತ್ತು ವರ್ಷಗಳ ಮಹಿಳಾ ಚಳುವಳಿ ನನ್ನನ್ನೂ ನನ್ನ ಬರಹಗಳನ್ನೂ ವಿಭಿನ್ನ ವಿಷಯ, ಕ್ಷೇತ್ರಗಳಿಗೆ ಒಯ್ದಿದೆ. ನನಗೆ ಸಾಮಾನ್ಯ ಪರಿಚಯವಿರುವ ನೆಲೆಗಳಿಂದಲೂ ಮಹಿಳಾ ದೃಷ್ಟಿಕೋನದಿಂದ, ಉಭಯಲಿಂಗ ಪ್ರಧಾನ ವ್ಯವಸ್ಥೆಗಾಗಿ ನನ್ನನ್ನು ಮಾತಾಡಹಚ್ಚಿದೆ, ಶೋಧನೆಗೆ ತೊಡಗಿಸಿದೆ. ಸ್ತ್ರೀವಾದ ರೂಪು ಪಡೆಯುವುದು ಇಂಥ ಸಾವಿರಾರು ಶೋಧನೆಗಳಿಂದ, ವಿಶ್ಲೇಷಣೆಗಳಿಂದ, ಪ್ರಯತ್ನಗಳಿಂದ. ಹೆಚ್ಚುತ್ತಿರುವ ಈ ದಿಶೆಯ ಕ್ರಿಯಾಶೀಲತೆಯ ಒಟ್ಟು ಫಲವಾಗಿ ಭಾರತೀಯ ಸ್ತ್ರೀವಾದ ಎಂಬುದು ಆಕಾರ ಪಡೆಯಬೇಕಾಗಿದೆ"[೧]

ಈ ಮಾತುಗಳು ೧೯೭೦ರ ನಂತರ ಸ್ತ್ರೀವಾದೀ ದೃಷ್ಟಿಕೋನವೊಂದು ರೂಪುಗೊಳ್ಳುತ್ತಾ ಬಂತು ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಇಂಥಹ ದೃಷ್ಟಿಕೋನದ ಪರಿಣಾಮವಾಗಿಯೇ ಮೂಡಿದ ಹೊಸ ಎಚ್ಚರದಿಂದ ಎಲ್ಲ ವ್ಯವಸ್ಥೆಗಳನ್ನೂ ಪುನರಾವಲೋಕನಕ್ಕೆ ಒಳಗು ಮಾಡಲಾಯಿತು. ಹಾಗೆ ಇದುವರೆಗಿನ ಸಾಹಿತ್ಯವನ್ನು ಅವಲೋಕಿಸುವಂಥಹ ಸಂದರ್ಭದಲ್ಲಿ ಸಾಹಿತ್ಯದಲ್ಲಿ ಮಹಿಳೆ ತನ್ನ ನಿಜದ ಚಹರೆಗಳಿಂದ ಹೊರತಾಗಿ ಚಿತ್ರಿಸಲ್ಪಟ್ಟಿರುವುದು ಹಾಗೆಯೇ ಬಹಳಷ್ಟು ಬಾರಿ ಅಲ್ಲಿ ಮಹಿಳೆಯ ಚರಿತ್ರೆಯೇ ಕಾಣೆಯಾಗಿರುವುದರ ಅರಿವಾಯಿತು. ಆಗ ಸಾಹಿತ್ಯ ಚರಿತ್ರೆಯಲ್ಲಿ ಕಾಣೆಯಾದ ಅಥವಾ ಕಾಣೆ ಮಾಡಲ್ಪಟ್ಟ ಮಹಿಳೆಯರ ಬಗ್ಗೆ ಅರಿಯುವ ಗಂಭಿರವಾದ ಪ್ರಯತ್ನಗಳು ಪ್ರಾರಂಭವಾದವು. ಅಂಥಹ ಪ್ರಯತ್ನಗಳಲ್ಲಿ ೧೯೯೩ರಲ್ಲಿ ಪ್ರಕಟಗೊಂಡ ನಂಜನಗೂಡು ತಿರುಮಲಾಂಬ ಅವರ ಬದುಕು ಬರಹಗಳನ್ನು ಒಳಗೊಂಡ ಹಿತೈಷಿಣಿಯ ಹೆಜ್ಜೆಗಳು ಮೊದಲ ಕೃತಿ. ಸ್ತ್ರೀವಾದ ಹಾಗೂ ಸ್ತ್ರೀವಾದಿ ವಿಮರ್ಶೆಯನ್ನು ರೂಪಿಸುವಲ್ಲಿ ವಿಜಯಾ ದಬ್ಬೆಯವರದು ಮುಖ್ಯವಾದ ಹೆಜ್ಜೆಯಾಗಿದೆ. ವಿಜಯಾ ದಬ್ಬೆಯವರು ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆಯ ಸ್ವರೂಪವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಪ್ರಕಾರ ಸ್ತ್ರೀ ವಾದಕ್ಕಿರುವ ಮುಖ್ಯ ಕಾಳಜಿ ಮಹಿಳೆಯ ಶೋಧ ಮತ್ತು ಪುನಾರಚನೆ

ಹಾಗೂ ಸ್ತ್ರೀವಾದಿ ವಿಮರ್ಶೆಯ ಆಸಕ್ತಿ ಮಹಿಳಾ ಸಾಹಿತ್ಯ ಪರಂಪರೆಯನ್ನು ಕಟ್ಟಿಕೊಳ್ಳುವುದು.

ಹೀಗಾಗಿ ಈ ಕಾಲಘಟ್ಟದಲ್ಲಿ ಹಲವಾರು ಲೇಖಕಿಯರ ಬಗ್ಗೆ ಗಂಭೀರವಾದ ಅಧ್ಯಯನಗಳು ನಡೆದವು. ತಿರುಮಲಾಂಬ, ಆರ್ ಕಲ್ಯಾಣಮ್ಮ, ಶ್ಯಾಮಲಾದೇವಿ ಬೆಳಗಾಂವಕರ, ಸರಸ್ವತಿಬಾಯಿ ರಾಜವಾಡೆ ಮುಂತಾದವರ ಬಗ್ಗೆ ತಿಳಿಯಲು ಸಾಧ್ಯವಾಯಿತು. ಅಂದು ಪ್ರಾರಂಭಗೊಂಡ ಸ್ತ್ರೀವಾದಿ ಅಧ್ಯಯನಗಳು ಇಂದು ಹಲವು ಆಯಾಮಗಳನ್ನು ಪಡೆದಿವೆ. ಈ ಅಧ್ಯಯನಗಳು ನಮಗೆ ಕಳೆದುಹೋಗಿದ್ದ ಸಾಹಿತ್ಯ ಚರಿತ್ರೆಯ ಮುಖ್ಯಕೊಂಡಿಗಳನ್ನು ಅರಿತುಕೊಳ್ಳಲು ಮತ್ತು ಸಾಹಿತ್ಯ ಕೃತಿಯ ಅಧ್ಯಯನದ ಮೂಲಕ ಮಹಿಳೆಯ ಚರಿತ್ರೆಯನ್ನು ಕಟ್ಟಿಕೊಳ್ಳಲು ಸಹಾಯ ಮಾಡಿವೆ. ಸಾಹಿತ್ಯ ಕೃತಿಗಳ ಸ್ತ್ರೀವಾದಿ ಅಧ್ಯಯನದ ಮೂಲಕ ಸ್ತ್ರೀ ತನ್ನ ಅಸ್ಮಿತೆಗಾಗಿ ನಡೆಸಿದ ಹೋರಾಟದ ಸ್ವರೂಪವನ್ನು ಅರಿಯುವ ಹಾಗೂ ಕಾಣೆಯಾಗಿದ್ದ ಮಹಿಳೆಯ ಚರಿತ್ರೆಯನ್ನು ಕಟ್ಟುವ ಪ್ರಯತ್ನಗಳು ನಿರಂತರವಾಗಿ ನಡೆದಿವೆ.

ಮೊದಲ ಘಟ್ಟದ ಸ್ತ್ರೀವಾದಿ ವಿಮರ್ಶೆ ಆಧುನಿಕ ಸಂದರ್ಭದ ಎಂದರೆ ೨೦ನೇ ಶತಮಾನದ ಮೊದಲ ಐದು ದಶಕಗಳಲ್ಲಿ ಇದ್ದ ಆದರೆ ಬಹುಪಾಲು ಮರೆತುಹೋದ, ಹೂಳಲ್ಪಟ್ಟ, ನಿರ್ಲಕ್ಷ್ಯಕ್ಕೆ ಒಳಗಾದ ಲೇಖಕಿಯರನ್ನು ಅವರ ಬದುಕು ಬರಹಗಳ ವಿವರಗಳೊಂದಿಗೆ ಕಟ್ಟಿಕೊಟ್ಟಿದೆ. ಜೊತೆಗೆ ಹೀಗೆ ನಿರ್ಲಕ್ಷ್ಯಕ್ಕೆ ಒಳಗಾಗಲು ಪುರುಷ ಪ್ರಧಾನ ವ್ಯವಸ್ಥೆಯ ಸಾಹಿತ್ಯ ರಾಜಕಾರಣವೇ ಮುಖ್ಯ ಕಾರಣ ಎಂದು ಗುರುತಿಸಿದೆ. ಈ ಕುರಿತು ಡಾ. ಎಂ. ಉಷಾ ಅವರು ಹೀಗೆ ಹೇಳುತ್ತಾರೆ. "ಈ ಹಂತದ ಕನ್ನಡದಲ್ಲಿನ ಮಹಿಳಾ ಸಾಹಿತ್ಯ ಪರಂಪರೆಯ ಶೋಧದ ಕೆಲಸವು ಪ್ರಧಾನವಾಗಿ ಬದುಕು-ಬರಹದ ವೈಧಾನಿಕತೆಯಲ್ಲಿ ಪ್ರಸ್ತುತಗೊಂಡುದಾಗಿದೆ. ಮಹಿಳೆಯೊಬ್ಬಳ ಸಾಹತ್ಯಾಸಕ್ತಿಯ ಹಿಂದಿನ ಸಾಮಾಜಿಕ ಪ್ರೇರಣೆ, ಪ್ರಭಾವ ಹಾಗೂ ಒತ್ತಡಗಳನ್ನು ಗುರುತಿಸುವ ಮೂಲಕ ಅವಳ ಸಾಹಿತ್ಯವನ್ನು ವಿವರಿಸಲು ಸಾಧ್ಯ ಎನ್ನುವ ಪ್ರಮೇಯದೊಂದಿಗೆ ಈ ಮಾದರಿ ತಳುಕು ಹಾಕಿಕೊಂಡಿದೆ. ಮಹಿಳೆಯರ ಸಾಮಾಜಿಕ ಸ್ಥಾನಮಾನ ಹಾಗೂ ಅವಳ ಸಾಹಿತ್ತಿಕ ಚಟುವಟಿಕೆಯ ನಡುವೆ ನೇರ ಸಂಬಂಧವಿದೆ. ಹಾಗಾಗಿ ಲೇಖಕಿಯೊಬ್ಬಳ ವೈಯಕ್ತಿಕ ಬದುಕಿನ ವಿವರಗಳು ಸಾಹಿತ್ಯ ಕೃಷಿಯಷ್ಟೇ ಮುಖ್ಯವಾದುದು ..."[೨]

ಸ್ತ್ರೀವಾದದ ಪ್ರಕಾರ ಮಹಿಳೆ ಎಂಬುದು ಒಂದು ಜೈವಿಕ ಘಟಕವಾಗಿರುವಂತೆ ಸಾಮಾಜಿಕ ಘಟಕವೂ ಹೌದು. ಹಾಗಾಗಿ ಈ ಘಟಕವನ್ನು ಸಮಾಜದ ಇನ್ನಿತರ ಎಲ್ಲ ಘಟಕಗಳು, ಸಂಸ್ಥೆಗಳು ಪ್ರಭಾವಿಸುತ್ತಿರುತ್ತವೆ. ಈ ಎಲ್ಲದರ ಸಂಸರ್ಗದಲ್ಲಿ ಮಹಿಳೆಯ ಸ್ವರೂಪವು ವ್ಯಾಖ್ಯಾನಗೊಳ್ಳುತ್ತಿರುತ್ತದೆ. ಸ್ತ್ರೀವಾದವು ಸಾಹಿತ್ಯವನ್ನೊಂದು ಚಾರಿತ್ರಿಕ ನಿರ್ಮಿತಿಯಾಗಿ, ಸಾಂಸ್ಕೃತಿಕ ಉತ್ಪಾದನೆಯಾಗಿ ಪರಿಭಾವಿಸುತ್ತದೆ. ಮಹಿಳೆ ಮತ್ತು ಸಾಹಿತ್ಯ ಕುರಿತ ಸ್ತ್ರೀವಾದದ ಈ ಎರಡು ನಿಲುವುಗಳು ಕಲೆತು ಅಂತಿಮವಾಗಿ ಲೇಖಕಿ ಹಾಗೂ ಅವಳ ಲೇಖನ ಚಟುವಟಿಕೆಯನ್ನು ಸಾಮಾಜಿಕ ಉತ್ಪನ್ನವಾಗಿ ವ್ಯಾಖ್ಯಾನಿಸುತ್ತದೆ.

ಅಂತಹ ಸಾಮಾಜಿಕ ಉತ್ಪಾದನೆಯ ವಿಶ್ಲೇಷಣೆಗೆ ಸಾಮಾಜಿಕ ಪರಿಕರಗಳು ಅತ್ಯಗತ್ಯವೆಂದು ಭಾವಿಸುತ್ತವೆ. ಲೇಖಕಿಯ ಸಾಮಾಜಿಕ ಸಂದರ್ಭ, ವೈಯಕ್ತಿಕ ಬದುಕು ಹಾಗೂ ಅವಳ ಬರಹದ ಕುರಿತ ಪ್ರತಿಕ್ರಿಯೆ ಇತ್ಯಾದಿಗಳೆಲ್ಲವೂ ಅವಳ ಬರಹವನ್ನು ಪ್ರಭಾವಿಸುತ್ತಿರುತ್ತವೆ ಎನ್ನುವ ಆಲೋಚನೆಯೊಂದಿಗೆ ಸ್ತ್ರೀವಾದ ತನ್ನ ಸಾಂಸ್ಕೃತಿಕ ವಿಮರ್ಶೆಯ ಪರಿಕರಗಳನ್ನು ರೂಪಿಸಿಕೊಳ್ಳುತ್ತದೆ.

ಪ್ರಧಾನ ಧಾರೆಯ ವಿಮರ್ಶೆ ಪ್ರತಿಭೆ, ಸೃಜನಶೀಲತೆ, ವ್ಯುತ್ಪತ್ತಿ ಮುಂತಾದವುಗಳನ್ನು ಶ್ರೇಷ್ಠತೆಯ ಮಾನದಂಡಗಳನ್ನಾಗಿ ಬಳಸುತ್ತದೆ. ಆದರೆ ಮಹಿಳೆಯ ಸಾಹಿತ್ಯದಲ್ಲಿ ಇವುಗಳನ್ನು ಮಾತ್ರ ಶ್ರೇಷ್ಠತೆಯ ಮಾನದಂಡಗಳನ್ನಾಗಿಸಲು ಸಾಧ್ಯವಿಲ್ಲ. ಏಕೆಂದರೆ ಲಿಂಗ ಅಸಮಾನತೆಯ ಈ ಸಮಾಜದಲ್ಲಿ ಆ ಕಾಲಘಟ್ಟದಲ್ಲಿ ಮಹಿಳೆ ಬರೆಯಲು ತೊಡಗಿದ್ದೇ ಒಂದು ಸಾಧನೆ. ಆದ್ದರಿಂದ ಪ್ರಧಾನ ಧಾರೆಯ ವಿಮರ್ಶೆಯ ಪರಿಕರಗಳನ್ನು ತಿರಸ್ಕರಿಸಿ ತನ್ನದೇ ಆದ ಸಾಂಸ್ಕೃತಿಕ ವಿಮರ್ಶಾ ಪರಿಕರಗಳನ್ನು ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ರೂಪಿಸಿಕೊಂಡಿತು. ಈ ತಾತ್ವಿಕತೆಯ ನೆಲೆಯಲ್ಲಿಯೇ ಆಧುನಿಕ ಕನ್ನಡ ಮಹಿಳಾ ಸಾಹಿತ್ಯವನ್ನು ಸ್ತ್ರೀವಾದಿ ವಿಮರ್ಶೆ ಚರ್ಚಿಸಿದೆ.

ನವೋದಯ ಕಾಲಘಟ್ಟದ ಸಾಹಿತ್ಯ ಪ್ರಕಾರಗಳು

ಇಪ್ಪತ್ತನೇ ಶತಮಾನದ ಎರಡು, ಮೂರು ಮತ್ತು ನಾಲ್ಕನೇ ದಶಕಗಳ ಸಾಹಿತ್ಯವನ್ನು ಇಲ್ಲಿ ನವೋದಯ ಸಾಹಿತ್ಯ ಕಾಲಘಟ್ಟ ಎಂದು ಗುರುತಿಸಿಕೊಳ್ಳಲಾಗಿದೆ. ಈ ಕಾಲಘಟ್ಟವನ್ನು ತಿರುಮಲಾಂಬ ಅವರಿಂದ ಗುರುತಿಸಿಕೊಳ್ಳಬಹುದು. ಇವರಿಂದ ಪ್ರಾರಂಭವಾದ ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಆರ್. ಕಲ್ಯಾಣಮ್ಮ, ಬೆಳಗೆರೆ ಜಾನಕಮ್ಮ, ವಾಸಂತಿಬಾಯಿ ಪಡುಕೋಣೆ, ಸರಸ್ವತಿಬಾಯಿ ರಾಜವಾಡೆ, ತಿರುಮಲೆ ರಾಜಮ್ಮ, ಕೊಡಗಿನ ಗೌರಮ್ಮ ಮುಂತಾದ ಲೇಖಕಿಯರನ್ನು ಒಳಗೊಂಡಿದೆ. ಇವರಲ್ಲಿ ಕೆಲವರು ಈ ಕಾಲಘಟ್ಟದಲ್ಲಿ ಕೃತಿಗಳನ್ನು ರಚಿಸಲು ಪ್ರಾರಂಭಿಸಿ ಮುಂದಿನ ಕೆಲವು ದಶಕಗಳು ತಮ್ಮ ಸಾಹಿತ್ಯ ಕೃಷಿಯನ್ನು ಮುಂದುವರೆಸಿದವರು ಇದ್ದಾರೆ. ಈ ಕಾಲಘಟ್ಟದಲ್ಲಿ ಬರೆದ ಬಹಳಷ್ಟು ಲೇಖಕಿಯರು ಬದುಕಿನಲ್ಲಿ ನೊಂದವರು. ನಂಜನಗೂಡು ತಿರುಮಲಾಂಬ, ಆರ್. ಕಲ್ಯಾಣಮ್ಮ ಮುಂತಾದವರು ಸಣ್ಣ ವಯಸ್ಸಿನಲ್ಲೇ ವಿಧವೆಯರಾದವರು. ಸರಸ್ವತಿಬಾಯಿ ರಾಜವಾಡೆಯವರು ತಮಗಿಂತ ವಯಸ್ಸಿನಲ್ಲಿ ತುಂಬಾ ಹಿರಿಯರನ್ನು ಮದುವೆಯಾಗಿ ಗಂಡನ ಅನುಮಾನಗಳಿಗೆ ಗುರಿಯಾಗಿ ಬದುಕನ್ನು ಕಳೆದರೂ ಈ ಅನಾನುಕೂಲ ವಾತಾವರಣವನ್ನೇ ತಮ್ಮ ಸಾಹಿತ್ಯ ಅಭಿರುಚಿ ಬೆಳೆಯಲು ಪೂರಕವಾಗುವಂತೆ ಬಳಸಿಕೊಂಡವರು. ಇನ್ನು ತಿರುಮಲೆ ರಾಜಮ್ಮನಂಥವರು ಪತಿಯ ಪ್ರೋತ್ಸಾಹ, ಮನೆಯಲ್ಲಿದ್ದ ಸಾಹಿತ್ಯಿಕ ವಾತಾವರಣದಿಂದಲೇ ಬರೆದವರು. ಆದರೆ ಇವರೆಲ್ಲರಲ್ಲೂ ಸಮಾನವಾಗಿದ್ದ ಅಂಶವೆಂದರೆ ಈ ಲೇಖಕಿಯರು ಬ್ರಾಹ್ಮಣ ಕುಟುಂಬದಿಂದಲೇ ಬಂದವರಾಗಿದ್ದರು. ಹೀಗಾಗಿ ಮೇಲ್ಜಾತಿಯ ಹೆಣ್ಣಿನ ಸಮಸ್ಯೆಗಳನ್ನೇ ಇವರು ಚಿತ್ರಿಸಿದ್ದಾರೆ.

ಈ ಕಾಲಘಟ್ಟದ ಮಹಿಳೆಯರು ಸಾಹಿತ್ಯದ ವಿವಿಧ ಪ್ರಕಾರಗಳನ್ನು ರೂಪಿಸುವಲ್ಲಿ ಶ್ರಮಿಸಿದ್ದಾರೆ. ಕಾದಂಬರಿ, ಸಣ್ಣಕತೆ, ವಿಚಾರ ಸಾಹಿತ್ಯ, ಕಾವ್ಯ ಹೀಗೆ ವಿವಿಧ ಪ್ರಕಾರಗಳನ್ನು ಪ್ರಯೋಗಿಸಿದ್ದಾರೆ. ಈ ಕಾಲಘಟ್ಟ ಹಳೆಯ ಸಾಹಿತ್ಯ ಮಾದರಿಗಳನ್ನು ಬಿಟ್ಟು ಹೊಸ ಪ್ರಕಾರಗಳನ್ನು ಕಟ್ಟಿಕೊಳ್ಳುತ್ತಿದ್ದ ಕಾಲಘಟ್ಟ. ಹೀಗಾಗಿ ಈ ಪ್ರಕಾರಗಳು ರೂಪುಗೊಳ್ಳುವಲ್ಲಿ ಲೇಖಕಿಯರ ಕೊಡುಗೆಯನ್ನು ಕಡೆಗಣಿಸಲು ಸಾಧ್ಯವಿಲ್ಲ.

ಕಾದಂಬರಿ

೧೯೦೮ರ ವೇಳೆಗೆ ಶಾಂತಾಬಾಯಿ ನೀಲಗಾರ ಅವರ ಸದ್ಗುಣಿ ಕೃಷ್ಣಾಬಾಯಿ ಎಂಬ ಕಾದಂಬರಿ ಮೊದಲಿಗೆ ದೊರೆಯುತ್ತದೆ. ಆದರೆ ಈ ಪ್ರಕಾರ ಸ್ಪಷ್ಟ ರೂಪು ತಳೆದದ್ದು ತಿರುಮಲಾಂಬ ಅವರಿಂದ. ಇವರು ಕತೆಯ ನಿರೂಪಣೆ ಹಾಗೂ ನಾಟಕದ ಸಂಭಾಷಣೆಗಳನ್ನು ಬಳಸಿಕೊಂಡು ಕಾದಂಬರಿಯನ್ನು ರಚಿಸುವ ಪ್ರಯೋಗವನ್ನು ಮಾಡಿದ್ದಾರೆ. ೧೯೧೩ರಿಂದ ಅವರ ಕಾದಂಬರಿಗಳು ಪ್ರಕಟಗೊಂಡಿವೆ. ಅವರ ನಭಾ, ವಿದ್ಯುಲ್ಲತಾ, ವಿರಾಗಿಣಿ, ಸುಶೀಲೆ ಮುಂತಾದ ಕಾದಂಬರಿಗಳು ಕಾದಂಬರಿ ಪ್ರಕಾರ ಕನ್ನಡದಲ್ಲಿ ರೂಪುಗೊಂಡ ಸಂದರ್ಭವನ್ನು ಅರಿಯಲು ಹಾಗೂ ಈ ಪ್ರಕಾರ ಪಡೆದ ಸ್ವರೂಪ ಅದರ ಪಲ್ಲಟಗಳನ್ನು ಅರಿಯಲು ಬಹಳ ಮುಖ್ಯ ಆಕರಗಳಾಗಿವೆ. ಕನ್ನಡದ ಪ್ರಧಾನ ಧಾರೆಯ ವಿಮರ್ಶೆ ಇದನ್ನೊಂದು ಗಮನಾರ್ಹವಾದ ವಿಷಯವೆಂದು ಪರಿಗಣಿಸಲಿಲ್ಲ. ಡಾ. ಅನುಪಮಾ ನಿರಂಜನ ಅವರು ಗುರುತಿಸುವಂತೆ ತಿರುಮಲಾಂಬ ಅವರು ಬರಹಕ್ಕೆ ತೊಡಗಿದ ಸಂದರ್ಭದಲ್ಲಿ ಕನ್ನಡದಲ್ಲಿ ಪ್ರಕಟವಾಗಿದ್ದ ಕಾದಂಬರಿಗಳು ಬೋಳಾರ ಬಾಬುರಾಯರ ಇಂದಿರಾಬಾಯಿ, ಗುಲ್ವಾಡಿ ವೆಂಕಟರಾಯರ ವಾಗ್ದೇವಿ, ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹರಾಯ ಮುಂತಾದವು. ಈ ಲೇಖಕರೆಲ್ಲಾ ಇಂಗ್ಲಿಷ್ ಸಾಹಿತ್ಯವನ್ನು ಓದಿಕೊಂಡವರು. ಅಲ್ಲಿನ ಕಾದಂಬರಿ ಪರಂಪರೆಯನ್ನು ಇವರು ಕನ್ನಡಕ್ಕೆ ತಂದರು. ಆದರೆ ಅದೇ ಸಮಯಕ್ಕೆ ಬರೆಯಲು ಆರಂಭಿಸಿದ ತಿರುಮಲಾಂಬ ಇವರ ಯಾವ ಕೃತಿಗಳನ್ನೂ ಓದಿರಲಿಲ್ಲ. ಇವರಿಗೆ ಪ್ರೇರಣೆ ದೊರೆತದ್ದು ಬಂಕಿಂ ಚಂದ್ರರ ಕಾದಂಬರಿಗಳಿಂದ ಎಂದೂ ಅನುಪಮಾ ನಿರಂಜನ ಗುರುತಿಸುತ್ತಾರೆ[೩]. ಹೀಗಾಗಿ ಇವರು ತಮ್ಮ ಕಾದಂಬರಿಗಳಿಗೆ ತಮ್ಮದೇ ಆಕೃತಿಯನ್ನು ನೀಡಬೇಕಾಗಿತ್ತು. ಸಣ್ಣಕತೆ ಮತ್ತು ನಾಟಕ ಪ್ರಕಾರಗಳನ್ನು ಸೇರಿಸಿ ಕಾದಂಬರಿ ಪ್ರಕಾರವನ್ನು ಕಟ್ಟುವ ಪ್ರಯತ್ನ ತಿರುಮಲಾಂಬ ಅವರದ್ದು. ಹೀಗೆ ಹಲವಾರು ಹೊಸತುಗಳ ನಡುವೆ, ಹಲವು ಹೋರಾಟಗಳ ದಟ್ಟವಾದ ಪ್ರಭಾವಗಳ ನಡುವೆ, ತಿರುಮಲಾಂಬ ಅವರು ಸಾಹಿತ್ಯವನ್ನು ರಚಿಸಿದ್ದಾರೆ. ಕಾದಂಬರಿ ಪ್ರಕಾರವೊಂದು ರೂಪು ತಳೆಯುತ್ತಿದ್ದ ಸಂದರ್ಭದಲ್ಲಿ ಅದು ಎದುರಿಸಿದ ಸವಾಲುಗಳು, ಅದು ಪಡೆದ ಸ್ಥಿತ್ಯಂತರಗಳಿಗೆ ತಿರುಮಲಾಂಬ ಅವರ ಕಾದಂಬರಿಗಳು ಮುಖ್ಯ ಆಕರಗಳಾಗುತ್ತವೆ.

ಸಣ್ಣಕತೆ

ಈ ಕಾಲಘಟ್ಟದಲ್ಲಿ ರೂಪುಗೊಂಡ ಇನ್ನೊಂದು ಮುಖ್ಯವಾದ ಪ್ರಕಾರ ಸಣ್ಣಕತೆ. "ತಿರುಮಲಾಂಬ ಅವರು ಸಣ್ಣಕತೆಗಳನ್ನು ಬರೆದರೂ ಆ ಕತೆಗಳೆಲ್ಲ ಪೌರಾಣಿಕವಾಗಿದ್ದವು. ಪೌರಾಣಿಕ ವಸ್ತುವು ಸಣ್ಣಕತೆಯ ವಸ್ತುವಾಗಬಲ್ಲುದಾದರೂ ತಿರುಮಲಾಂಬ ಅವರನ್ನು ಸಣ್ಣ ಕತೆಗಳ ಜನನಿ ಎಂದು ಹೇಳುವಷ್ಟು ಇವರ ಸಣ್ಣಕತಾ ಪ್ರಯೋಗ ಯಶಸ್ವಿಯಾಗಲಿಲ್ಲ"[೪] ಎಂದು ಜಿ.ಎಸ್. ಆಮೂರ ಹೇಳಿದ್ದಾರೆ "೨೦ನೇ ಶತಮಾನದ ೩ನೇ ದಶಕ ಸ್ತ್ರೀ ಲೋಕದ ಕತೆಗಳು ಆ ವರೆಗಿನ ಜಡತೆಯನ್ನು ಕೊಡವಿ ಹೊಸಹುಟ್ಟು ಪಡೆಯುತ್ತಿದ್ದ ದಶಕ"[೫] ಎಂದು ವೈದೇಹಿಯವರು ಗುರುತಿಸುತ್ತಾರೆ. ಸರಸ್ವತಿ ಬಾಯಿ ರಾಜವಾಡೆ, ಶ್ಯಾಮಲಾ ಬೆಳಗಾಂಕರ್, ಕೊಡಗಿನ ಗೌರಮ್ಮ ಈ ಮೂವರು ಕನ್ನಡ ಮಹಿಳಾ ಕಥಾ ಸಾಹಿತ್ಯದ ಮೊದಲ ತಲೆಮಾರಿನ ಪ್ರಮುಖ ಲೇಖಕಿಯರಾಗಿ ಹೊಮ್ಮಿದ್ದಾರೆ. "ಭವ-ಭಾವಲೋಕದ ಬದುಕನ್ನು ಕೌಟುಂಬಿಕ ಸಾಮಾಜಿಕ ನೋವು ನಲಿವು ಸಮಸ್ಯೆಯನ್ನು ಕಥಾ ರೂಪದಲ್ಲಿ ಕಾಣಿಸಿದ ಹೆಚ್ಚು ಇಹಪರವಾಗಿಸಿದ ಅವಧಿ ಅದು" ಎಂದು ವೈದೇಹಿ ಗುರುತಿಸುತ್ತಾರೆ. ಬಾಲ್ಯ ವಿವಾಹ, ವಿಧವಾ ವಿವಾಹ, ವರದಕ್ಷಿಣೆ, ಹೆಣ್ಣಿನ ಪರಾವಲಂಬನೆ ಇವೇ ಮೊದಲಾದ ಸ್ತ್ರೀ ವಿರೋಧಿಯಾದ ಸಮಾಜ ವ್ಯವಸ್ಥೆಯ ವಿಶ್ಲೇಷಣೆ ಇಲ್ಲಿದೆ. ಆರಂಭಕಾಲದ ಈ ಬರಹಗಾರ್ತಿಯರ ವಿಶೇಷವೆಂದರೆ ಸಾಹಿತ್ಯ ರಚನೆ ಇವರಿಗೆ ಅನಿವಾರ್ಯವೆನಿಸಿ ಆದದ್ದು. ಕೇವಲ ಕಾಲ ಕಳೆಯಲು ರಚನೆಗೊಂಡವುಗಳಲ್ಲ. ಬಹುಮಟ್ಟಿಗೆ ಇವರ ಬರವಣಿಗೆಗಳಲ್ಲಿ ಸಮಾಜದಲ್ಲಿರುವ ಸ್ತ್ರೀ ವಿರೋಧಿ ದುಷ್ಟ ಪದ್ಧತಿಗಳನ್ನು ತೋರಿ ಟೀಕಿಸುವ ಕೆಲಸ ನಡೆದಿದೆ. ಆಗಿನ ಮುಖ್ಯ ಪತ್ರಿಕೆಗಳಾದ ರಾಷ್ಟ್ರ ಬಂಧು, ಪ್ರಜಾಮತ, ಜಯ ಕರ್ನಾಟಕ, ಜಯಂತಿ, ಕೇಸರಿ ಜೀವನ, ಕಥಾವಳಿ ಮುಂತಾದ ಪತ್ರಿಕೆಗಳಲ್ಲಿ ಹಲವಾರು ಲೇಖಕಿಯರ ಕತೆಗಳು ಪ್ರಕಟಗೊಳ್ಳುತ್ತಿದ್ದವು. ಹೀಗಾಗಿ ಸಣ್ಣಕತೆಗಳ ಬೆಳವಣಿಗೆಗೆ ಈ ಪತ್ರಿಕೆಗಳ ಕೊಡುಗೆಯನ್ನು ನೆನೆಯಲೇಬೇಕಾಗುತ್ತದೆ.

ಕೊಡಗಿನ ಗೌರಮ್ಮ ಅವರು ಸಣ್ಣಕತೆಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದವರಾಗಿದ್ದಾರೆ. ಸಮಗ್ರ ಸಮಕೋನ ದೃಷ್ಟಿ, ಮಹಿಳೆ ಮತ್ತು ಅವಳ ಸಮಸ್ಯೆಯ ಜೊತೆಗೆ ಅದರ ಸುತ್ತಣ ಸಮಾಜ ಮತ್ತು ಕಾರ್ಯಕಾರಣ ಸಂಬಂಧಗಳನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿದವರು ಇವರು. ನಿರೂಪಣೆಯ ದೃಷ್ಟಿಯಿಂದಲೂ ಹಲವು ಪ್ರಯೋಗಗಳನ್ನು ಮಾಡಿದವರು ಇವರು. ಪತ್ರಗಳ ಮೂಲಕವೇ ಕತೆಯನ್ನು ಹೇಳುವ ತಂತ್ರವನ್ನು ಯಶಸ್ವಿಯಾಗಿ ಪ್ರಯೋಗಿಸಿದವರು ಗೌರಮ್ಮ. ಈ ಕಾಲಘಟ್ಟದಲ್ಲಿ ಮಹಿಳೆಯರಿಂದಲೇ ಪ್ರಾರಂಭವಾದ ಹಲವಾರು ಪತ್ರಿಕೆಗಳು ಸಣ್ಣಕತಾ ಸಾಹಿತ್ಯಕ್ಕೆ ಉತ್ತಮವಾದ ಪ್ರೋತ್ಸಾಹವನ್ನು ಒದಗಿಸಿದೆ. ಕುಮಾರಿ ರತ್ನಮ್ಮ, ಪದ್ಮಾವತಿ, ಎಸ್. ಕಮಲಾದೇವಿ, ಸುಭದ್ರಾಬಾಯಿ ಜೋಶಿ ಮುಂತಾದ ಸಣ್ಣಕತಾ ಲೇಖಕಿಯರು ಪತ್ರಿಕೆಗಳ ಮೂಲಕವೇ ಸಾಹಿತ್ಯ ಕೃಷಿ ಮಾಡಿದ್ದಾರೆ.

ಈ ಕಾಲಘಟ್ಟದ ಇನ್ನೊಂದು ಬಹಳ ಮುಖ್ಯವಾದ ಪ್ರಕಾರ ವಿಚಾರ ಸಾಹಿತ್ಯ ಮಹಿಳೆಯರೇ ಪ್ರಾರಂಭ ಮಾಡಿದ ಪತ್ರಿಕೆಗಳಲ್ಲಿ ಮಹಿಳೆಯರಿಗೆ ಬರೆಯುವ ಅವಕಾಶವನ್ನು ಒದಗಿಸಲಾಯಿತು. ತಿರುಮಲಾಂಬ ಅವರ ಕರ್ನಾಟಕ ನಂದಿನಿ ಮಹಿಳೆಯರಿಗಾಗಿ ಮಹಿಳೆಯರಿಂದಲೇ ರೂಪುಗೊಳ್ಳುತ್ತಿದ್ದ ಪತ್ರಿಕೆಯಾಗಿತ್ತು. ಕಲ್ಯಾಣಮ್ಮನವರ "ಸರಸ್ವತಿ", ರಾಜವಾಡೆಯವರ "ಸುಪ್ರಭಾತ" ಮುಂತಾದವು ಮಹಿಳೆಯರಿಗೆ ಬರೆಯುವ ನಿಟ್ಟಿನಲ್ಲಿ ಪ್ರೋತ್ಸಾಹವನ್ನು ನೀಡಿದೆ. ಹೆಣ್ಣಿಗೆ ಶಿಕ್ಷಣದ ಅಗತ್ಯವನ್ನು ಈ ಕಾಲಘಟ್ಟದಲ್ಲಿ ಒತ್ತಿ ಹೇಳಲಾಯಿತು. ಆದರೆ ಈ ಶಿಕ್ಷಣ ಉದ್ಯೋಗವನ್ನು ಪಡೆಯಲಿಕ್ಕಾಗಿ ಅಲ್ಲ ಅಥವಾ ಸ್ವಂತ ಬದುಕನ್ನು ಕಟ್ಟಿಕೊಳ್ಳಲು ಅಲ್ಲ. ಬದಲಿಗೆ ಗೃಹಿಣಿಯಾಗಿ ಉತ್ತಮವಾದ ರೀತಿಯಲ್ಲಿ ಸಂಸಾರವನ್ನು ನಿಭಾಯಿಸಲು ಶಿಕ್ಷಣದ ಅಗತ್ಯವನ್ನು ಹೇಳಲಾಗಿದೆ. ಸಾಂಪ್ರದಾಯಿಕವಾದ ಸ್ತ್ರೀ ಮಾದರಿಗಳನ್ನು ರೂಪಿಸಲು, ಸಾಮಾಜಿಕ ಸುಧಾರಣೆಗಳು ಪರಿಣಾಮಕಾರಿಯಾಗಲು ಸ್ತ್ರೀ ಶಿಕ್ಷಣ ಅಗತ್ಯ ಎಂಬ ಕಾರಣಗಳನ್ನು ನೀಡಿ ಈ ಹಂತದ ಲೇಖಕಿಯರು ಸ್ತ್ರೀ ಶಿಕ್ಷಣವನ್ನು ಪ್ರತಿಪಾದಿಸಿದರು. ಇದನ್ನು ಈ ಮಹಿಳೆಯರ ಮಿತಿ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಈ ಮಹಿಳೆಯರು ಪಿತೃ ಪ್ರಧಾನ ಮೌಲ್ಯ ವ್ಯವಸ್ಥೆಯಲ್ಲಿ ಬಂಧಿಗಳಾಗಿದ್ದವರು. ಅವರಿಗೆ ಅಲ್ಪಸ್ವಲ್ಪ ವಿದ್ಯೆ ಪಡೆಯುವ ಅವಕಾಶ ದೊರೆತು ಓದಿ ಬರೆಯುವಂತಾದುದೇ ಒಂದು ದೊಡ್ಡ ಹೆಗ್ಗಳಿಕೆ. ತಾವು ಪತ್ರಿಕೆಗಳ ಮೂಲಕ ವ್ಯಕ್ತಪಡಿಸಿದ ವಿಚಾರಗಳು ಪಿತೃ ವ್ಯವಸ್ಥೆಯ ಮೌಲ್ಯಗಳು ಎಂಬ ಅರಿವು ಅವರಿಗೆ ಇರಲಿಲ್ಲ. ಆದ್ದರಿಂದ ಗೃಹ ಸಂಬಂಧಿ ವಿಚಾರಗಳಿಗೆ ಇಲ್ಲಿ ಮಹತ್ವ ದೊರೆತಿದೆ. "ಪತಿ ಸೇವೆಯೇ ಪ್ರಧಾನವಾಗಿರುವ ಗೃಹರಾಜ್ಯಕ್ಕೊಳಪಟ್ಟ ಗೃಹಿಣೀ ಕರ್ತವ್ಯದ ಸಮಸ್ತ ಭಾರವನ್ನೂ ನಿರ್ವಹಿಸುವಂತಹ ಪ್ರೌಢ ಶಿಕ್ಷಣವನ್ನು ಹೆಣ್ಣು ಮಕ್ಕಳು ಹೊಂದಲಿ" ತಿರುಮಲಾಂಬ ಅವರ ಈ ವಾಕ್ಯಗಳನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಈ ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ ವಿವರಗಳನ್ನು ಅರಿಯಲು ಈ ಪತ್ರಿಕೆಗಳು ಮುಖ್ಯ ಆಕರಗಳು, ಪರಿಕರಗಳಾಗಬಲ್ಲವು.

ಕಾವ್ಯ

ಈ ಕಾಲಘಟ್ಟದಲ್ಲಿ ಕಾವ್ಯ ಪರಂಪರೆಯೂ ಪ್ರಾರಂಭಗೊಂಡಿದೆ. ಭಕ್ತಿ ಕಾವ್ಯ ಅಲ್ಲದೆ ಪ್ರಕೃತಿಗೀತೆ, ಭಾವಗೀತೆ, ಶೋಕಗೀತೆ, ಕಥನಕವನ, ದೇಶಭಕ್ತಿಗೀತೆ, ನಾಡಗೀತೆ ಇತ್ಯಾದಿ ಪದ್ಯಗಳು ರಚನೆಗೊಂಡಿವೆ. ನವೋದಯ ಕಾಲದ ರಮ್ಯತೆ, ಭಾವುಕತೆ, ಆದರ್ಶ ಇತ್ಯಾದಿ ಭಾವಗಳನ್ನು ಕೆಲವು ಕವಿತೆಗಳಾದರೂ ನವೋದಯದ ಲಯದಲ್ಲಿ ಕಟ್ಟಿಕೊಡಲು ಯತ್ನಿಸಿವೆ.

ನೋಡಲ್ಲಿ ಶಿರವೆತ್ತಿ ಆಗಸವ ನೀನೊಮ್ಮೆ
ನೋಡಿದೆಯ ಆ ಸಿರಿಯ? ನಿಷ್ಕಲ್ಮಷದ ಪರಿಯ
ಬಾಳು ಸಾಕೆಂದಳುವ ಹೇಡಿಗಳ ಕಣ್ಣೊರೆಸಿ
ಅಭಯವನು ನೀಡುತಿಹ ಹಸ್ತದಂತಿದೆ ನಭವು

ಕೊನೆಯಿಲ್ಲ ಮೊದಲಿಲ್ಲ ಆಶೆಪಾಶೆಗಳಿಲ್ಲ
ಹರುಕಿಲ್ಲ ಮುರುಕಿಲ್ಲ ತಗ್ಗುದಿಣ್ಣೆಗಳಿಲ್ಲ
ಮಬ್ಬಿಲ್ಲ ಮುಸುಕಿಲ್ಲ ನರಕಯಾತನೆಯಿಲ್ಲ
ಚಿರಶಾಂತಿಯಿಂ ತುಂಬಿ ತುಳುಕುತಿದೆ ಮುಗಿಲು- ಬೆಳಗೆರೆ ಜಾನಕಮ್ಮ

ನವೋದಯದ ವಸ್ತುವನ್ನು ಈ ಕಾಲಘಟ್ಟದ ಕಾವ್ಯ ಒಳಗೊಂಡಿದ್ದರೂ ಮಹಿಳಾ ಸಂವೇದನೆಯನ್ನು ಒಳಗೊಂಡ ಪದ್ಯಗಳು ಇಲ್ಲಿವೆ. ಜಾನಕಮ್ಮನವರ ಗಂಡ ಪದ್ಯವನ್ನೇ ಇಲ್ಲಿ ಉದಾಹರಿಸಬಹುದು-

ಗಂಡನ ಮನೆ ಸಗ್ಗ ನಿನಗೆ- ಮುನಿಯೆ ಗಂಡನೆ ಯಮರಾಯ ಕೊನೆಗೆ
ನಿನ್ನ ಮುಳುಗಿಪ ತೇಲಿಪ ಶಕ್ತಿಯುಂಟಾತಗೆ
ನೀನೊಂದು ವಿಕ್ರಯದೊಸ್ತುವು ಪುರುಷಗೆ!

ಎಂದು ಪುರುಷನ ಪ್ರಧಾನತೆಯನ್ನು ಸ್ತ್ರೀಯ ಅಧೀನ ಸ್ಥಾನವನ್ನು ಗುರುತಿಸುವ ಜಾನಕಮ್ಮ ಕೊನೆಗೆ ನಿರ್ಮಲವಾಗಿರಲಿ ಮನಸು-ಪತಿಯ ಚಿತ್ತವ ನೀನನುಸರಿಸು ಎಂದು ಗೃಹಿಣೀ ಧರ್ಮವನ್ನೇ ಪ್ರತಿಪಾದಿಸುತ್ತಾರೆ. ಈ ಕಾಲಘಟ್ಟದ ಮಹಿಳೆಯ ಮೌಲ್ಯಗಳ ಸ್ಥಿತ್ಯಂತರದ ತೊಳಲಾಟ ಮತ್ತು ತಲ್ಲಣಗಳ ನೆಲೆಯಲ್ಲೂ ಈ ಕಾಲಘಟ್ಟದ ಕಾವ್ಯ ಅಭ್ಯಾಸಯೋಗ್ಯವಾಗಿದೆ.

ನವೋದಯ ಘಟ್ಟದ ಸಾಹಿತ್ಯವನ್ನು ಪ್ರಭಾವಿಸಿದ ಚಿಂತನೆಗಳು

೧. ಸ್ತ್ರೀ ಜಾಗೃತಿಯ ತಾತ್ವಿಕ ವಿಚಾರಗಳು ಅಥವಾ ಸ್ತ್ರೀ ಸುಧಾರಣಾ ಚಳುವಳಿ-

ಸ್ತ್ರೀ ಸುಧಾರಣಾ ಚಳುವಳಿ ಹತ್ತೊಂಬತ್ತು ಇಪ್ಪತ್ತನೇ ಶತಮಾನಗಳಲ್ಲಿ ನಡೆಯಿತು. ಈ ಚಳುವಳಿಯಿಂದಾಗಿ ಸ್ತ್ರೀಯನ್ನು ಕುರಿತು ಆಲೋಚಿಸುವ ಹೊಸ ಎಚ್ಚರವೊಂದು ಸಮಾಜದಲ್ಲಿ ಮೂಡಿತು. ಈ ಚಳುವಳಿಗೆ ಎರಡು ವಿಭಿನ್ನ ಮುಖಗಳಿದ್ದವೆಂದು ಡಾ. ಬಿ.ಎನ್. ಸುಮಿತ್ರಾಬಾಯಿ ಅವರು ಗುರುತಿಸುತ್ತಾರೆ. ಒಂದು ಪಾಶ್ಚಾತ್ಯ ವಿದ್ಯಾಭ್ಯಾಸದ ಪರಿಣಾಮವಾಗಿ ಹುಟ್ಟಿದ ಕಳಕಳಿ. ಭಾರತದ ಮೇಲು ಜಾತಿಯ ಪುರುಷರು ಪಾಶ್ಚಾತ್ಯ ಸಂಸ್ಕೃತಿಗೆ ವಿಶಿಷ್ಟವಾಗಿದ್ದ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಗಳಂಥ ತತ್ವಗಳಿಂದ ಪ್ರೇರಿತರಾಗಿ ಆ ದೇಶಗಳ ಸಾಂಸ್ಕೃತಿಕ ಮೇಲ್ಮೆಯನ್ನು ಹಾಗೂ ಭಾರತದ ಅವನತಿಯನ್ನು ವಿಮರ್ಶಿಸಿ, ದೇಶದ ಸ್ಥಿತಿಗತಿಗಳನ್ನು ಸುಧಾರಿಸದಿದ್ದರೆ ನಾವು ಸಾಂಸ್ಕೃತಿಕವಾಗಿ ಮೇಲೆದ್ದು ನಿಲ್ಲುವುದು ಅಸಾಧ್ಯವೆಂದು ತಿಳಿದು ರಾಜಾರಾಂ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ್ ಮುಂತಾದವರು ಸ್ತ್ರೀಯರ ಉದ್ಧಾರಕ್ಕಾಗಿ ಶ್ರಮಿಸಿದರು. ಈ ಚಳುವಳಿ ದೇಶಾದ್ಯಂತ ನಡೆಯಿತು.

ಈ ಚಳುವಳಿಯ ಇನ್ನೊಂದು ಮುಖವೆಂದರೆ ವೇದಯುಗದ ಆರ್ಯ ಸಂಸ್ಕೃತಿಯ ಸುವರ್ಣಯುಗದ ಪರಿಕಲ್ಪನೆಯನ್ನು ಮುನ್ನಲೆಗೆ ತಂದು ಅದನ್ನೇ ಒಂದು ವಿಚಾರಧಾರೆಯನ್ನಾಗಿ ಮಾಡಿ ದೇಶೀಯ ಸಂಸ್ಕೃತಿಯನ್ನು ಎತ್ತಿಹಿಡಿಯುವುದು. ದೇಶೀಯ

ಚಿಂತಕರು, ಬುದ್ಧಿಜೀವಿಗಳು, ಸಂಸ್ಕೃತ ವಿದ್ವಾಂಸರು ಮುಂತಾದವರು ಈ ವಿಚಾರಧಾರೆಯನ್ನು ಉಳ್ಳವರಾಗಿದ್ದರು. ಹೀಗಾಗಿ ಆರ್ಯ ಸಂಸ್ಕೃತಿಯ ಪ್ರತಿಪಾದನೆಗಾಗಿ ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ ಮುಂತಾದ ಕೃತಿಗಳಲ್ಲಿನ ಪ್ರಸಿದ್ಧ ಸ್ತ್ರೀ ಪಾತ್ರಗಳನ್ನು ಆರ್ಯ ಸಂಸ್ಕೃತಿಯ ಪ್ರತೀಕಗಳೆಂಬಂತೆ ಎತ್ತಿ ಹಿಡಿಯಲಾಯಿತು. ಶೀಲ, ಪಾತಿವ್ರತ್ಯ, ತ್ಯಾಗ, ಸೇವೆ, ದಯೆ, ಕ್ಷಮೆ ಇತ್ಯಾದಿ ಗುಣಗಳನ್ನು ವಿಜೃಂಭಿಸಲಾಯಿತು. ಈ ಪುರಾಣ ಪಾತ್ರಗಳನ್ನೇ ಅಂದಿನ ಸಮಾಜದ ಮಾದರಿ ಸ್ತ್ರೀ ಮಾದರಿಯಾಗಿ ಪ್ರತಿಪಾದಿಸಲಾಯಿತು.

ಇಂತಹ ಚಳುವಳಿಯ ನೆಲೆಯಲ್ಲಿ, ಪ್ರಭಾವದಲ್ಲಿ ಬರೆದ ಆ ತಲೆಮಾರಿನ ಲೇಖಕಿಯರ ಬರಹಗಳಲ್ಲೂ ಸಹಜವಾಗಿಯೇ ಈ ಆದರ್ಶಗಳು ವಿಜೃಂಭಿಸಿವೆ. ಸ್ತ್ರೀ ಸುಧಾರಣಾ ಚಳುವಳಿಯ ಸಂದರ್ಭದಲ್ಲಿ ಮಹಿಳೆಯರ ಶಿಕ್ಷಣಕ್ಕೂ ಒತ್ತು ಕೊಡಲಾಯಿತು. ಹೀಗಾಗಿ ಸ್ವಲ್ಪ ಮಟ್ಟಿಗಾದರೂ ಓದು ಬರಹ ಬರುತ್ತಿದ್ದ ಮಹಿಳೆಯರು ತಮ್ಮ ಬರವಣಿಗೆಯ ಮೂಲಕ ಸ್ತ್ರೀಗೆ ಅಗತ್ಯವಾಗಿದ್ದ ಶಿಕ್ಷಣ, ಸ್ತ್ರೀ ಪಾಲಿಸಬೇಕಾಗಿದ್ದ ಪಿತೃ ವ್ಯವಸ್ಥೆಯ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದರು.

೨. ರಾಷ್ಟ್ರೀಯತಾ ಚಳುವಳಿ

ಸ್ತ್ರೀ ಸುಧಾರಣಾ ಚಳುವಳಿಗಳ ತೀವ್ರತೆ ಕಡಿಮೆಯಾಗಿ ದೇಶದ ಸ್ವಾತಂತ್ರ್ಯದ ಕೂಗು ಎಲ್ಲಾ ಕಡೆಗಳಲ್ಲೂ ಕೇಳಿಬರತೊಡಗಿದಾಗ ದೇಶಕ್ಕಾಗಿ ಎಂಥಹ ತ್ಯಾಗಕ್ಕೂ ಸಿದ್ಧವಾಗುವ ಧೈರ್ಯ, ಸಾಹಸ, ಪಾತಿವ್ರತ್ಯ ಮುಂತಾದ ಆದರ್ಶಗಳನ್ನುಳ್ಳ ಆದರ್ಶ ನಾರಿಯನ್ನು ಭಾರತೀಯ ನಾರಿಯ ಪ್ರತೀಕವಾಗಿಸಿತು. ಪರಂಪರಾಗತವಾದ ಧಾರ್ಮಿಕ ಮೌಲ್ಯಗಳಾದ ಉಪವಾಸ, ಬ್ರಹ್ಮಚರ್ಯ, ತ್ಯಾಗ, ಬಲಿದಾನ, ಸೇವೆಗಳನ್ನು ರಾಜಕೀಯ ಹೋರಾಟದ ತತ್ವಗಳನ್ನಾಗಿ ಮಾಡಿ ತೋರಿಸಿದ ಗಾಂಧೀಜಿಯವರು ಭಾರತೀಯ ಸ್ತ್ರೀಯರಲ್ಲಿ ಪರಂಪರಾಗತವಾಗಿ ಅಂತರ್ಗತವಾಗಿದ್ದ ಮೌಲ್ಯಗಳನ್ನೇ ಉಜ್ವಲೀಕರಿಸಿ ಪ್ರತಿಪಾದಿಸಿದರು. ದೇಶಸೇವಾ ಕಾರ್ಯದಲ್ಲಿ ಮಹಿಳೆಯರೂ ತೊಡಗಬೇಕೆಂದು ಕರೆ ನೀಡಿದರು.

ರಾಷ್ಟ್ರೀಯತಾ ಹೋರಾಟ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಮೊದಲ ಘಟ್ಟದ ಲೇಖಕಿಯರು ಬರೆಯಲು ಪ್ರಾರಂಭಿಸಿದರು. ಹೀಗಾಗಿ ಸಹಜವಾಗಿ ಈ ಘಟ್ಟದ ಸಾಹಿತ್ಯವನ್ನು ಮೇಲಿನ ಎರಡು ಚಳುವಳಿಗಳ ಹಿನ್ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಕನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ನವೋದಯದ ಸಂದರ್ಭ ಮಹಿಳಾ ಬರವಣಿಗೆಗೆ ಒಂದು ವಿಶಿಷ್ಟವಾದ ಸಂದರ್ಭವಾಗಿದೆ. ಸ್ತ್ರೀ ಸುಧಾರಣಾ ಚಳುವಳಿ, ಉದಾರವಾದದ ಪರಿಣಾಮವಾಗಿ ಅವಳು ಭೌತಿಕವಾಗಿ ಮನೆಯಿಂದ ಹೊರಗೆ ಬಂದರೂ ಅವಳ ಮನಸ್ಸು ಮನೆಯಂಗಳದಿಂದ ಹೊರ ಬಂದಿರಲಿಲ್ಲ. ಆದ್ದರಿಂದಲೇ ಅವರು ತಮ್ಮ ಬರವಣಿಗೆಯ ವಸ್ತುವನ್ನು ಕೌಟುಂಬಿಕ ವಲಯದಿಂದಾಚೆ

ಸ್ಥಿತ್ಯಂತರಗೊಳಿಸಲಿಲ್ಲ. ಮಹಿಳೆಯ ಈ ಭೌತಿಕ ಹೊರಬರುವಿಕೆಗೆ, ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟದ ಲೇಖಕರಾದ ಗುಲ್ವಾಡಿ ವೆಂಕಟರಾಯರು, ಬೋಳಾರಬಾಬುರಾಯರು ಮುಂತಾದ ಲೇಖಕರು ಕಾರಣರಾದರು. ಈ ಲೇಖಕರಿಗೆ ಹೆಣ್ಣಿನ ಸಾಮರ್ಥ್ಯ, ಸಾಧ್ಯತೆಗಳನ್ನು ಗೌರವಿಸುವ ಮನಸ್ಸಿದ್ದರೂ ಇದುವರೆಗೆ ಅವಳನ್ನು ಕಂಡರಿಸಿದ ಮಾದರಿಗಳಿಗಿಂತ ಭಿನ್ನವಾಗಿ ಕಾಣಲು ಸಾಧ್ಯವಾಗುವುದಿಲ್ಲ. ಸ್ತ್ರೀಯರು ಸಾಂಸ್ಕೃತಿಕ ಇತಿಹಾಸದಲ್ಲಿ ಯಾವ ಮೌಲ್ಯಗಳು ತಮ್ಮ ಬಂಧನಕ್ಕೆ ಕಾರಣವಾಯಿತು ಎಂದು ಭಾವಿಸಿದರೋ, ಈ ಲೇಖಕರು ಅದೇ ನಮ್ಮ ದೇಶದ ಹೆಣ್ಣಿನ ಮೌಲ್ಯಗಳು ಎಂದೇ ಭಾವಿಸಿದರು. ಮುಖ್ಯವಾಗಿ ಇವರ ಕೃತಿಗಳಲ್ಲಿ ಸತೀತ್ವ, ಶೀಲ. ಪಾತಿವ್ರತ್ಯ, ತಾಯ್ತನ-ಇವು ಮತ್ತೆ ಮತ್ತೆ ಚರ್ಚೆಗೊಳಗಾಗುತ್ತಾ ಹೆಣ್ಣನ್ನು ಹೆಣ್ಣೆಂದು ಗುರುತಿಸಲು ಇವು ಬಹಳ ಅಗತ್ಯ ಎಂದೇ ಭಾವಿಸಿದರು. ಇವರು ಸ್ತ್ರೀ ಸುಧಾರಣೆಯ ಕಡೆಗೆ ಕಣ್ಣಿರಿಸಿಕೊಂಡಿದ್ದರೂ ಅದು ನಮ್ಮ ಸಂಸ್ಕೃತಿಯ ಸಾಂಪ್ರದಾಯಿಕ ನಂಬಿಕೆಗಳಿಗೆ, ಭಾವನೆಗಳಿಗೆ ಪೆಟ್ಟು ಕೊಡದಂತಹ ಸುಧಾರಣೆಯ ನೆಲೆಗಳಾಗಿದ್ದವು. ಈ ಕಾಲ ಘಟ್ಟದ ಲೇಖಕಿಯರ ಮೇಲೆ ಈ ಆರ್ಯ ಸ್ತ್ರೀ ಮಾದರಿ ಹೆಚ್ಚಿನ ಪ್ರಭಾವ ಬೀರಿದೆ. ಹೀಗಾಗಿ ಸ್ತ್ರೀಗೆ ಶೀಲ, ಪಾತಿವ್ರತ್ಯ, ತ್ಯಾಗ, ಔದಾರ್ಯ ಮುಂತಾದ ಮೌಲ್ಯಗಳನ್ನೇ ಇಲ್ಲಿ ಆದರ್ಶಗಳನ್ನಾಗಿ ಬೋಧಿಸಲಾಗಿದೆ. ತಿರುಮಲಾಂಬಾ, ಕಲ್ಯಾಣಮ್ಮ, ಶಾಂತಾದೇವಿ ನೀಲಗಾರ ಮೊದಲಾದವರ ಕೃತಿಗಳಲ್ಲೂ ಇದೇ ಮೌಲ್ಯಗಳ ಪ್ರತಿಪಾದನೆಯನ್ನು ಕಾಣುತ್ತೇವೆ.

ಸಾಂಪ್ರದಾಯಿಕತೆಯಿಂದ ಆಧುನಿಕತೆಯತ್ತ ಒಂದು ಹೆಜ್ಜೆ

ತಿರುಮಲಾಂಬ ಅವರಿಂದ ಕೊಡಗಿನ ಗೌರಮ್ಮನವರವರೆಗೆ ನವೋದಯ ಕಾಲಘಟ್ಟ ಎಂದು ಗುರುತಿಸಲಾಗಿದೆ. ಈ ಕಾಲಘಟ್ಟದಲ್ಲಿ ಬಂದ ಹಲವು ಲೇಖಕಿಯರ ಕೃತಿಗಳನ್ನು ಗಮನಿಸಿದಾಗ ವಸ್ತು, ಅದರ ನಿರ್ವಹಣೆ, ಕಥನ ತಂತ್ರ ಇತ್ಯಾದಿಗಳಲ್ಲಿ ಹಲವು ಸ್ಥಿತ್ಯಂತರಗಳನ್ನು ಗಮನಿಸಬಹುದು. ನವೋದಯ ಸಾಹಿತ್ಯದ ಮೊದಲ ವಾಹಿನಿ ತಿರುಮಲಾಂಬ ಅವರಾದರೆ ಕೊನೆಯ ವಾಹಿನಿ ಕೊಡಗಿನ ಗೌರಮ್ಮ ಎನ್ನಬಹುದು. ಇವರಿಬ್ಬರ ನಡುವೆ ಸರಸ್ವತಿ ಬಾಯಿ ರಾಜವಾಡೆ, ವಾಸಂತಿಬಾಯಿ ಪಡುಕೋಣೆ ಮುಂತಾದ ಲೇಖಕಿಯರು ಬಂದಿದ್ದಾರೆ. ತಿರುಮಲಾಂಬ ಅವರ ಸಾಹಿತ್ಯದಲ್ಲಿ ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ನಡುವಿನ ತಾಕಲಾಟ ಹೆಚ್ಚಾಗಿಲ್ಲ. ಆದರೆ ಮುಂದೆ ಬಂದ ಹಲವಾರು ಲೇಖಕಿಯರು ಸಂಪ್ರದಾಯವನ್ನು ಮೀರುವ ಒಂದು ಸಣ್ಣ ಪ್ರಯತ್ನವನ್ನು ನಡೆಸುತ್ತಾರೆ. ಈ ಕಾಲಘಟ್ಟದ ಲೇಖಕಿಯರು ಸ್ತ್ರೀ ಕೇಂದ್ರಿತ ವಿಷಯಗಳನ್ನು ನಿರ್ವಹಿಸಿದ ರೀತಿಯಲ್ಲಿರುವ ವ್ಯತ್ಯಾಸವನ್ನುಅರಿತುಕೊಳ್ಳಲು ತಿರುಮಲಾಂಬ ಮತ್ತು ಕೊಡಗಿನ ಗೌರಮ್ಮನವರ ಸಾಹಿತ್ಯವನ್ನು ಇಲ್ಲಿ ಗಮನಿಸಬಹುದು. ಇವರಿಬ್ಬರ ಸಾಹಿತ್ಯ ರಚನೆಯ ಕಾಲದಲ್ಲಿ ಆಗಿರುವ ೩೦ ವರ್ಷಗಳ ಅಂತರ ಈ ಸ್ಥಿತ್ಯಂತರಕ್ಕೆ ಮುಖ್ಯ ಕಾರಣ ಎನ್ನಬಹುದು. ಇದಲ್ಲದೆ ಅವರಿಬ್ಬರ ಶೈಕ್ಷಣಿಕ ಹಿನ್ನಲೆ, ಮನೆಯ ವಾತಾವರಣ ಇತ್ಯಾದಿಗಳು ಕಾರಣವಾಗಿವೆ. ಈ ಕಾಲಘಟ್ಟದ ಮಹಿಳಾ

ಸಾಹಿತ್ಯದಲ್ಲಿ ಚರ್ಚಿಸಲಾಗಿರುವ ಬಹು ಮುಖ್ಯ ವಸ್ತು ವೈಧವ್ಯ ಸಮಸ್ಯೆ. ಈ ಸಮಸ್ಯೆಯನ್ನು ಇವರಿಬ್ಬರೂ ನಿರ್ವಹಿಸಿರುವ ರೀತಿಯನ್ನು ಗಮನಿಸಿದಾಗ ಮೇಲೆ ಹೇಳಿದ ವ್ಯತ್ಯಾಸಗಳು ಅರಿವಿಗೆ ಬರುತ್ತದೆ.

ತಿರುಮಲಾಂಬಾ ಅವರ ಕೃತಿಗಳ ಬಹು ಮುಖ್ಯವಾದ ವಸ್ತು ವಿಧವಾ ಸಮಸ್ಯೆ.ವಿಧವೆಯ ಕೇಶ ಮುಂಡನವನ್ನು ವಿರೋಧಿಸುವ ವಿಚಾರವಾದಿ ಇವರಾಗಿದ್ದರೂ ವಿಧವೆಯ ಪುನರ್ ವಿವಾಹವನ್ನು ಸಂಪೂರ್ಣವಾಗಿ ವಿರೋಧಿಸಿದ್ದಾರೆ. ಇವರು ಬ್ರಹ್ಮಚರ್ಯ ಪಾಲನೆ ವಿಧವೆಯರ ಆದ್ಯ ಕರ್ತವ್ಯ ಎನ್ನುವ ಆಲೋಚನೆಯ ಮೂಲಕ ವಿಧವೆಯರ ಮರುಮದುವೆಯ ಪ್ರಸ್ತಾಪವನ್ನೇ ಸಾರಾ ಸಗಟಾಗಿ ವಿರೋಧಿಸುತ್ತಾರೆ. ಇದು ಮುಕ್ತತೆಗೆ ಅವಕಾಶವಿಲ್ಲದ ಸಾಮಾಜಿಕ ಸಂದರ್ಭ ಹಾಗು ಪಿತೃ ಸಂಸ್ಕೃತಿಯ ಬಿಗಿ ಹಿಡಿತಗಳಿಂದ ಬಿಡಿಸಿಕೊಳ್ಳಲಾಗದ ಆ ಕಾಲಘಟ್ಟದ ಸ್ತ್ರೀ ಚರಿತ್ರೆಯಾಗಿದೆ. ಈ ಕಾಲಘಟ್ಟದ ಸಾಹಿತ್ಯದಲ್ಲಿ ಸ್ತ್ರೀ ಕೇಂದ್ರಬಿಂದುವಾಗಿದ್ದಾಳೆ ಎಂಬುದೇನೋ ಸರಿ. ಆದರೆ ಸ್ತ್ರೀ ಧ್ವನಿ ಇವತ್ತು ಅಪೇಕ್ಷಿಸುತ್ತಿರುವ ನೆಲೆಯಲ್ಲಿ ಇಲ್ಲದಿರಬಹುದು. ಈ ಕೃತಿಗಳು ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿದ್ದರೂ, ಅವಳ ವ್ಯಕ್ತಿತ್ವವನ್ನು ಕಟ್ಟಲು ಪ್ರಯತ್ನಿಸಿದ್ದರೂ ಇಲ್ಲಿ ಕಟ್ಟಲಾಗಿರುವ ವ್ಯಕ್ತಿತ್ವ ಪಿತೃ ಸಮಾಜದ ಮೌಲ್ಯಗಳ ಪ್ರತಿರೂಪವೇ ಆಗಿದೆ. ತಿರುಮಲಾಂಬಾ ಅವರು ಕಟ್ಟಿದ ಸ್ತ್ರೀ ಪಾತ್ರಗಳಿಗೆ ಬೇರೆ ಆಯ್ಕೆಗಳು ಈ ಸಂದರ್ಭದಲ್ಲಿ ಇರಲಿಲ್ಲ ಎಂಬುದನ್ನು ನಾವು ಮರೆಯುವಂತಿಲ್ಲ. ಏಕೆಂದರೆ ಆರ್ಯ ಸಮಾಜದ ಮೌಲ್ಯಗಳು ದಟ್ಟವಾಗಿ ಪ್ರಭಾವಿಸುತ್ತಿದ್ದ ಕಾಲ ಅದು. ಪುರುಷ ಮತ್ತು ಸ್ತ್ರೀ ಇಬ್ಬರಿಗೂ ಬ್ರಹ್ಮಚರ್ಯ ಪಾಲನೆ ಆದರ್ಶವಾಗಿದ್ದ ಕಾಲವದು. ಈ ಹಿನ್ನಲೆಯಲ್ಲಿ ತಿರುಮಲಾಂಬ ಅವರ ನಭಾ, ವಿದ್ಯುಲ್ಲತಾ, ಗಿರಿಜಾಬಾಯಿ ಕಾದಂಬರಿಗಳನ್ನು ಗುರುತಿಸಬಹುದು.

ಆದರೆ ಇದೇ ನವೋದಯ ಸಾಹಿತ್ಯದ ಇನ್ನೊಂದು ಕೊಂಡಿಯಾದ ಕೊಡಗಿನ ಗೌರಮ್ಮನವರು ವಿಧವಾ ಸಮಸ್ಯೆಯನ್ನು ಹೆಚ್ಚು ಜೀವಪರವಾಗಿಯೂ ಪ್ರಗತಿಪರವಾಗಿಯೂ ನಿರ್ವಹಿಸಿದ್ದಾರೆ. ಇದಕ್ಕೆ ಇವರ ಬಹು ಚರ್ಚಿತ ವಾಣಿಯ ಸಮಸ್ಯೆ ಕತೆಯನ್ನು ಗಮನಿಸಬಹುದು. ವಾಣಿಯ ಸಮಸ್ಯೆ ಕತೆಯ ವಿಧವೆ ಇಂದುವಿನ ಮನಸ್ಸಿನ ಹೋರಾಟಗಳು, ಅವಳ ತಲ್ಲಣಗಳು, ಸಹಜವಾದ ಮನೋ ದೈಹಿಕ ಬಯಕೆಗಳನ್ನು ಗೌರಮ್ಮ ದಾಖಲಿಸುತ್ತಾರೆ. ಆದರೆ ತನ್ನಿಂದಾಗಿ ವಾಣಿಯ ಸಂಸಾರ ಹಾಳಾಗಬಾರದೆಂಬ ನೈತಿಕ ಎಚ್ಚರ ಅವಳನ್ನು ಗಟ್ಟಿಗೊಳಿಸುತ್ತದೆ. ವಾಣಿಯ ಬದುಕಿನಿಂದ ದೂರ ಹೋಗುವುದು ಅವಳ ಸ್ವಂತ ನಿರ್ಧಾರವಾಗುತ್ತದೆ."ಫಕ್ಕನೆ ಜೀವ ವಿರೋಧಿಯಾಗಿ ಕಾಣಲೂಬಲ್ಲ, ಆದರೆ ಒಳ ತಿರುಳಿನಲ್ಲಿ ಒಂಟಿ ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯುವ ಮೈ ಮರೆವ ಕ್ಷಣದಲ್ಲೂ ಮುಂದಿನ ಪರಿಣಾಮವನ್ನು ಮರೆಯದೆ ಸಂಯಮ ಧರಿಸುವ ಪಕ್ವ ಸ್ತ್ರೀ ಮನದ ಕತೆಯಿದು" ಎಂದು ವಾಣಿಯ ಸಮಸ್ಯೆ ಕತೆಯನ್ನು ವೈದೇಹಿ ವ್ಯಾಖ್ಯಾನಿಸುತ್ತಾರೆ.

ಗೌರಮ್ಮನವರ ಪುಟ್ಟಚಿತ್ರದಲ್ಲಿ ಸುಶಿಕ್ಷಿತ ಬಾಲವಿಧವೆಯೇ ನಾಯಕಿ. ಬಾಲವಿಧವೆಗೆ ಅತ್ತಿಗೆಯ ಅಣ್ಣನಲ್ಲಿ ಪ್ರೇಮಾಂಕುರವಾಗುತ್ತದೆ. ಆತನ ಪ್ರೀತಿಯಲ್ಲಿ, ನಡವಳಿಕೆಯಲ್ಲಿ ಕುಟಿಲತೆಯನ್ನು ಕಾಣದೆ, ಮೋಹದ ಮಾತುಗಳನ್ನು ನಂಬಿ ಆತನಿಗೆ ದೇಹವನ್ನು ಒಪ್ಪಿಸಿ ಗರ್ಭಿಣಿಯಾಗುತ್ತಾಳೆ. ಮದುವೆಯಾಗುತ್ತೇನೆಂದು ಆಕೆಯನ್ನು ಬಲವಾಗಿ ನಂಬಿಸಿದ್ದ ಆತ ಆ ಹಂತದಲ್ಲಿ ಆಕೆಯ ಕೈ ಬಿಡುತ್ತಾನೆ. ನಿರಾಧಾರಳಾದ ಆ ಹೆಣ್ಣು ಸಂಪ್ರದಾಯ ಸಮಾಜದಲ್ಲಿ ತಲೆ ಎತ್ತಿ ನಿಲ್ಲುವ ಧೈರ್ಯವಿಲ್ಲದೆ ಆತ್ಮಹತ್ಯೆಗೆ ಶರಣಾಗುತ್ತಾಳೆ. ಬಾಲ ವಿಧವೆ ನಿಸರ್ಗಸಹಜವಾದ ಬಯಕೆಗಳಿಗೆ ಓಗೊಟ್ಟು ಸಂಪ್ರದಾಯ, ನೀತಿಯ ಗೆರೆಗಳನ್ನು ಮೀರಲು ಹೆಣ್ಣು ಪ್ರಯತ್ನಿಸಿದರೆ ಅವಳಿಗೆ ಆತ್ಮಹತ್ಯೆಯಲ್ಲದೆ ಬೇರೆ ದಾರಿಯಿಲ್ಲ ಎಂಬ ಸಂದೇಶವನ್ನೇ ಸಾರುವಂತಿದೆ. ಪುನರ್ವಿವಾಹ ಕತೆಯಲ್ಲಿ ವಿಧುರರಿಗೆ ಒಂದು ನೀತಿ ವಿಧವೆಯರಿಗೆ ಒಂದುನೀತಿಯೇ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಆ ಕಾಲಘಟ್ಟದ ಲೇಖಕಿಯರು ಸಾಂಪ್ರದಾಯಿಕತೆಯಿಂದ ಆಧುನಿಕತೆಯತ್ತ ಒಂದು ಹೆಜ್ಜೆ ಇಟ್ಟರೂ ಕೆಲವು ಕತೆಗಳಲ್ಲಿ ಮತ್ತೆ ಸಾಂಪ್ರದಾಯಿಕತೆಗೆ ಶರಣಾಗುತ್ತಾರೆ. ಆದ್ದರಿಂದ ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ನಡುವಿನ ತಾಕಲಾಟಕ್ಕೆ ಇವರ ಕತೆಗಳು ಸಾಕ್ಷಿಗಳಾಗುತ್ತವೆ.

ಈ ಮಾತಿಗೆ ಪೂರಕವಾಗಿ ಸರಸ್ವತಿಬಾಯಿ ರಾಜವಾಡೆಯವರ ಅವಳ ಉದ್ಧಾರ ಕತೆಯನ್ನೂ ಗಮನಿಸಬಹುದು. ಇಲ್ಲಿಯ ಕಥಾ ನಾಯಕಿಗೆ ಹೆಸರೇ ಇಲ್ಲದಿರುವುದು ಸಾಂಕೇತಿಕವಾಗಿದೆ. ಇಲ್ಲಿ ಹೆಣ್ಣು ತನ್ನ ಸ್ವಂತ ವ್ಯಕ್ತಿತ್ವವನ್ನು ಹೊಂದಲಾಗದ ಸಾಮಾಜಿಕ ವ್ಯವಸ್ಥೆಯ ವಿಡಂಬನೆಯಿದೆ. ಬಾಲ ವಿಧವೆಯೊಬ್ಬಳು ತನ್ನ ಭಾವನಿಂದ ಗರ್ಭಿಣಿಯಾಗಿ ಮನೆಯಿಂದ ಹೊರದೂಡಲ್ಪಡುತ್ತಾಳೆ. ವಿಧವಾಶ್ರಮದಲ್ಲಿ ಆಶ್ರಯ ಹುಡುಕಿಕೊಂಡು ಬರುತ್ತಾಳೆ. ಆದರೆ ಆ ಆಶ್ರಮ ಒಂದು ವ್ಯಾಪಾರ ಕೇಂದ್ರವಾಗಿದ್ದು ಅವಳನ್ನು ವಿಧುರ ನೊಬ್ಬನಿಗೆ ಮಾರಲಾಗುತ್ತದೆ. ಸಾಕಷ್ಟು ಆಸ್ತಿಯಿದ್ದ ಇವನು ತನ್ನ ಆಸ್ತಿಗೆ ವಾರಸುದಾರನನ್ನು ಪಡೆಯುವ ಸಲುವಾಗಿ ಇವಳನ್ನು ಮದುವೆಯಾಗುತ್ತಾನೆ. ಆದರೆ ವಯಸ್ಸಾದ ಆ ವಿಧುರನಿಗೆ ಮಕ್ಕಳನ್ನು ಪಡೆಯುವ ಯೋಗ್ಯತೆ ಇಲ್ಲದಿದ್ದರೂ ಇವಳನ್ನು ಬಂಜೆ ಎಂದು ನಿಂದಿಸಿದಾಗ ಇವಳು ಅನಿವಾರ್ಯವಾಗಿ ತನಗೆ ಈ ಮುಂಚೆಯೇ ಒಂದು ಮಗುವಿದ್ದ ವಿಚಾರವನ್ನು ಹೇಳುತ್ತಾಳೆ. ಈ ವಿಚಾರವನ್ನು ತಿಳಿದು ಇವಳನ್ನು ಹೊರದೂಡುತ್ತಾನೆ. ಕೊನೆಗೆ ಇವಳು ವೇಶ್ಯೆಯಾಗುತ್ತಾಳೆ. ಈ ಕತೆಯಲ್ಲಿ ಆಶ್ರಯ ಕೊಡಬೇಕಾದ ಆಶ್ರಮಗಳು ವ್ಯಾಪಾರಿ ಕೇಂದ್ರಗಳಾಗಿರುವ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತದೆ. ಜೊತೆಗೆ ಹೆಣ್ಣು ತನ್ನ ಅವಲಂಬಿತ ಅವಸ್ಥೆಯಲ್ಲೂ ತನ್ನ ಸ್ವಾಭಿಮಾನವನ್ನು ಬಿಡದಿರುವುದು ಮುಖ್ಯವಾಗುತ್ತದೆ. ಇಲ್ಲೆಲ್ಲ ಪುರುಷ ನಿರ್ಮಿತ ವ್ಯವಸ್ಥೆಯ ಅಮಾನವೀಯ ತೆಯನ್ನು ಚಿತ್ರಿಸುವ ಪ್ರಯತ್ನವಿದೆ ಆದರೆ ಅದರ ವಿರುದ್ಧ ಬಂಡೇಳುವ ಧ್ವನಿ ಇಲ್ಲ.

ತಿರುಮಲಾಂಬ ಅವರು ಹೆಣ್ಣನ್ನು ವಸ್ತುವೆಂದು ಪರಿಗಣಿಸಿರುವ ಪಿತೃ ವ್ಯವಸ್ಥೆಯ ಮೌಲ್ಯಗಳನ್ನು ಅನುಮೋದಿಸುತ್ತಾ ಅವಳು ದಾನಕ್ಕೆ ಅರ್ಹಳಾದವಳು, ವಿಧವೆಯಾದ ಮೇಲೆ ಅವಳಿಗೆ ಜೈವಿಕ ನೆಲೆಯ ಬಯಕೆಗಳು ಹುಟ್ಟಬಾರದು ಎಂಬ ನೆಲೆಯಲ್ಲಿ ಸ್ತ್ರೀ

ಪಾತ್ರವನ್ನು ಚಿತ್ರಿಸಿದ್ದರೆ ಗೌರಮ್ಮ ಹೆಣ್ಣನ್ನು ವಸ್ತುವೆಂದು ಪರಿಗಣಿಸುವುದಿಲ್ಲ. ಅವಳನ್ನು ದೇಹ ಮಾತ್ರವಾಗಿ ನೋಡುವ ಸಮಾಜದ ದೃಷ್ಟಿಕೋನಕ್ಕಿಂತ ಭಿನ್ನವಾಗಿ ದೇಹವನ್ನು ಮೀರಿದ ವ್ಯಕ್ತಿತ್ವವೊಂದು ಹೆಣ್ಣಿಗಿದೆ ಎಂದು ಹೇಳುವ ಪ್ರಯತ್ನ ಇವರ ಮನುವಿನ ರಾಣಿ ಕತೆಯಲ್ಲಿದೆ. ಮಹಿಳೆಯ ಅಸ್ಮಿತೆಯ ಚರಿತ್ರೆಯಲ್ಲಿ ಈ ಕತೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕುಟುಂಬ ಜೀವನಕ್ಕೆ ಹೊರತಾದ ಹಾಗೂ ಪ್ರತ್ಯೇಕವಾದ ವ್ಯಕ್ತಿತ್ವವೊಂದು ಹೆಣ್ಣಿಗೆ ಇರದಿದ್ದ ಸಂದರ್ಭದಲ್ಲಿ ಅವಳ ವ್ಯಕ್ತಿತ್ವವನ್ನು ಕಟ್ಟುವ, ದೇಹದಿಂದ ಅದನ್ನು ಪ್ರತ್ಯೇಕಿಸಿ ನೋಡುವ ಮಾನವೀಯ ಮುಖವೊಂದನ್ನು ಪರಿಚಯಿಸುವ ಕಥೆ ಇದು.

ಸಮಾರೋಪ

ತಿರುಮಲಾಂಬ ಅವರಿಂದ ಗೌರಮ್ಮನವರೆಗೆ ನವೋದಯ ಕಾಲಘಟ್ಟ ಎಂದು ಗುರುತಿಸಿದರೂ ಈ ಕಾಲಘಟ್ಟದಲ್ಲಿ ಹಲವು ಸ್ಥಿತ್ಯಂತರಗಳನ್ನು ಕಾಣಬಹುದು. ತಿರುಮಲಾಂಬ ಅವರಿಗೆ ಹೋಲಿಸಿದರೆ ರಾಜವಾಡೆ, ಗೌರಮ್ಮ, ಶ್ಯಾಮಲಾ ಬೆಳಗಾಂಕರ್ ಮುಂತಾದ ಲೇಖಕಿಯರು ಆಧುನಿಕರಂತೆ ಕಾಣುತ್ತಾರೆ. ಅವರು ಆಯ್ದುಕೊಂಡ ವಸ್ತು, ವಸ್ತುವನ್ನು ನಿರ್ವಹಿಸಿದ ರೀತಿ, ಕಥನ ತಂತ್ರ ಎಲ್ಲ ವಿಷಯಗಳಿಗೂ ಈ ಮಾತು ಅನ್ವಯಿಸುತ್ತದೆ.

ಮೊದಲ ಘಟ್ಟದ ಮಹಿಳಾ ಸಾಹಿತ್ಯ ಮುಂದೆ ಬಂದ ತ್ರಿವೇಣಿ, ಎಚ್.ವಿ. ಸಾವಿತ್ರಮ್ಮ, ಅನುಪಮಾ ನಿರಂಜನ ಮುಂತಾದವರನ್ನೊಳಗೊಂಡ ಮುಂದಿನ ಘಟ್ಟದ ಸಾಹಿತ್ಯಕ್ಕೆ ಒಂದು ಭದ್ರವಾದ ಬುನಾದಿಯನ್ನು ಹಾಕಿದೆ.

ಟಿಪ್ಪಣಿಗಳು

೧. ವಿಜಯಾ ದಬ್ಬೆ-ನಾರಿ: ದಾರಿ-ದಿಗಂತ, ಮುನ್ನುಡಿ.

೨. ಡಾ. ಎಂ. ಉಷಾ-ಆಧುನಿಕ ಮಹಿಳಾ ಸಾಹಿತ್ಯ-ಇನ್ನಷ್ಟು ಪುಟಗಳು, ಪ್ರ ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ- ಪ್ರವರ್ಷ ೨೦೦೭.

೩. ಡಾ. ಅನುಪಮಾ ನಿರಂಜನ-ಲೇಖನ- ವಿದ್ಯಲ್ಲತಾ ಒಂದು ವಿಶ್ಲೇಷಣೆ. ಕೃತಿ-ಶ್ರೀಮತಿ ನಂಜನಗೂಡು ತಿರುಮಲಾಂಬಾ ಜೀವನ ಮತ್ತು ಸಾಹಿತ್ಯ-ಪ್ರ.ಸಂ. ಪ್ರೊ. ಎಲ್.ಎಸ್. ಶೇಷಗಿರಿರಾವ್ ಪುಟ ೯೭, ಪ್ರ. ಐಬಿಎಚ್ ಪ್ರಕಾಶನ, ಬೆಂಗಳೂರು. ಪ್ರವರ್ಷ ೧೯೮೭.

೪. ಜಿ.ಎಸ್. ಆಮೂರ- ಅವಳ ಕತೆಗಳು, ಪ್ರಸ್ತಾವನೆ ಪ್ರ. ಪ್ರಿಸಂ, ಪ್ರವರ್ಷ ೧೯೯೯.

೫. ವೈದೇಹಿ- ಮರೆಯಲಾಗದ ಕತೆಗಳು-ಸಂಪುಟ ೨.

೬ ಡಾ. ಎಚ್.ಎಸ್. ಪಾರ್ವತಿ-ಲೇಖನ ಅಬಲಾ ದೌರ್ಜನ್ಯಂ-ಒಂದು ವಿವೇಚನೆ. ಕೃತಿ-ಶ್ರೀಮತಿ ನಂಜನಗೂಡು ತಿರುಮಲಾಂಬಾ ಜೀವನ ಮತ್ತು ಸಾಹಿತ್ಯ- ಪ್ರ. ಸಂ. ಪ್ರೊ. ಎಲ್.ಎಸ್. ಶೇಷಗಿರಿರಾವ್ ಪುಟ ೧೩೫

ಆಧಾರ ಗ್ರಂಥಗಳು

೧. ನಂಜನಗೂಡು ತಿರುಮಲಾಂಬ- ಬಿ.ಎನ್. ಸುಮಿತ್ರಾಬಾಯಿ

೨. ಶ್ರೀಮತಿ ನಂಜನಗೂಡು ತಿರುಮಲಾಂಬಾ ಜೀವನ ಮತ್ತು ಸಾಹಿತ್ಯ- ಸಂ. ಪ್ರೊ. ಎಲ್.ಎಸ್. ಶೇಷಗಿರಿರಾವ್.

೩. ಕನ್ನಡದ ಕತೆಗಾರ್ತಿ ಗೌರಮ್ಮ- ಡಾ.ಎಚ್. ನಾಗವೇಣಿ.

೪. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ- ಸಂ. ಡಾ. ಎಚ್.ಎಸ್. ಶ್ರೀಮತಿ.

೫. ಮುಂತಾದ ಕೆಲ ಪುಟಗಳು-ಸರಸ್ವತಿಬಾಯಿ ರಾಜವಾಡೆ ಅವರ ಬದುಕು ಮತ್ತು ಬರಹ- ವೈದೇಹಿ.

೬ ಲೇಖನ ಕನ್ನಡದ ಆರಂಭದ ಲೇಖಕಿಯರಲ್ಲಿ ಶಿಕ್ಷಣದ ಚಿಂತನೆಗಳು-ಲೇ. ಡಾ.ಆರ್. ತಾರಿಣಿ ಶುಭದಾಯಿನಿ- ಕೃತಿ- ಮಹಿಳಾ ಅಧ್ಯಯನ ಸಂ.೧೨, ಸಂಚಿಕೆ ೨.

೭. ಲೇಖಕಿಯರ ಸಾಹಿತ್ಯ ೭೫ ವರ್ಷಗಳಲ್ಲಿ-ಕರ್ನಾಟಕ ಲೇಖಕಿಯರ ಸಂಘ.

೮. ತ್ರಿವೇಣಿ- ಲೇ. ಸಿ.ಎನ್. ರಾಮಚಂದ್ರನ್.

ಬೆಂಗಳೂರಿನ ಬಿಸಿಲು ಮಾರಮ್ಮ ಉತ್ಸವದ ಒಳನೋಟಗಳು

◆

ಕೆ.ಜಿ. ರೇಖಾ

ಜಗತ್ತಿನಲ್ಲಿ ನಡೆಯುವ ಎಲ್ಲ ಘಟನೆಗಳಿಗೆ ಯಾವುದೋ ಒಂದು ಅವ್ಯಕ್ತ ಶಕ್ತಿಯೇ ಕಾರಣವಿರಬೇಕೆಂದು ನಂಬಿದ ಮನುಷ್ಯ ಆ ಶಕ್ತಿಯನ್ನು ದೇವತೆಯೆಂದು ತಿಳಿದು ಪೂಜಿಸತೊಡಗಿದ. ಹೀಗೆ ವ್ಯಕ್ತಿಯಿಂದ ವ್ಯಕ್ತಿಗೆ ಸಮುದಾಯದಿಂದ ಸಮುದಾಯಕ್ಕೆ ದೇವತೆಗಳ ಗ್ರಹಿಕೆಯಲ್ಲಿ ಭಿನ್ನತೆ ಕಾಣಿಸಿಕೊಂಡಿದ್ದರಿಂದ ಭಿನ್ನ ಭಿನ್ನ ದೇವತೆಗಳು ಹುಟ್ಟಲು ಕಾರಣವಾಯಿತು. ಮಾತೃ ದೇವತಾ ಪಂಥದ ಜನಪದ ರೂಪಗಳೇ ಗ್ರಾಮ ದೇವತೆಗಳು. ಡಾ. ಚಿದಾನಂದ ಮೂರ್ತಿಯವರು ಕರ್ನಾಟಕದ ಜನಪದ ದೇವತೆಗಳನ್ನು ೧. ಗ್ರಾಮ ದೇವತೆಗಳು ಮತ್ತು ೨. ಗ್ರಾಮ್ಯ ದೇವತೆಗಳು ಎಂದು ವರ್ಗೀಕರಣಕ್ಕೆ ಒಳಪಡಿಸಿರುತ್ತಾರೆ. ಗ್ರಾಮದ ಎಲ್ಲ ಕೆಳವರ್ಗದ ಅಪೌರಾಣಿಕ ದೇವತೆಗಳೆಲ್ಲವೂ ಗ್ರಾಮ್ಯ ದೇವತೆಗಳೆಂದೂ, ಇಡೀ ಗ್ರಾಮಕ್ಕೆ ಗ್ರಾಮವೇ ಪೂಜೆಮಾಡುವ ದೇವತೆಯನ್ನು ಗ್ರಾಮ ದೇವತೆಯೆಂದು ಅವರು ಗುರುತಿಸಿದ್ದಾರೆ. ಅಂದರೆ ಒಂದು ಗ್ರಾಮದಲ್ಲಿ ಅನೇಕ ದೇವತೆಗಳಿರಬಹುದು, ಆದರೆ ಗ್ರಾಮ ದೇವತೆ ಮಾತ್ರ ಒಂದೇ ಇರುತ್ತದೆ. ಈ ಗ್ರಾಮ ದೇವತೆಯೇ ಆ ಗ್ರಾಮದ ಅಧಿ ದೇವತೆಯಾಗಿರುತ್ತದೆ. ಆರ್ಯ ಸಂಸ್ಕೃತಿಯ ಪ್ರಭಾವ ಕಡಿಮೆ ಇರುವ ದಕ್ಷಿಣ ಭಾರತದಲ್ಲಿ ಈ ಬಗೆಯ ಅನೇಕ ಮಾತೃ ದೇವತೆಗಳನ್ನು ಪ್ರತೀ ಗ್ರಾಮದಲ್ಲಿಯೂ ನೋಡಬಹುದು. ದೊಡ್ಡ ನಗರಗಳಲ್ಲಿ ಶಿವ ಮತ್ತು ವಿಷ್ಣುವಿನ ದೇವಾಲಯಗಳಿದ್ದರೂ ಕೂಡಾ ಅವಕ್ಕೆ ಅಷ್ಟು ಪ್ರಾಮುಖ್ಯತೆ ಇಲ್ಲ.

ಗ್ರಾಮ ದೇವತೆಯು ಕೆಲವೊಮ್ಮೆ ಪ್ರಕೃತಿಯ ಸೃಷ್ಟಿಯಾಗಿದ್ದರೆ, ಕೆಲವೊಮ್ಮೆ ಪುರಾಣಗಳ ಸೃಷ್ಟಿಯೂ ಆಗಿರುತ್ತಾಳೆ. ನಿರ್ದಿಷ್ಟ ದೇವತೆ ಇಲ್ಲದಿದ್ದರೆ ಅದಕ್ಕೆ ಸಂಬಂಧಿಸಿದ ಪುರಾಣ ಸೃಷ್ಟಿ ಆಗುವುದಿಲ್ಲ. ಸ್ಥಳೀಯ ಗುಣ, ಮಾಹಿತಿ ಆಧರಿಸಿ ಈ ಪುರಾಣಗಳನ್ನು ಹುಡುಕಿದಾಗ ಗ್ರಾಮ ದೇವತೆಗಳು ಜನಪದರ ಜನಮಾನಸದಲ್ಲಿ ಹಾಗೂ ಗ್ರಾಮಗಳಲ್ಲಿ ಬೇರೂರಿರುವ ಬಗೆಯು ವಿಸ್ಮಯವನ್ನು ಮೂಡಿಸುತ್ತದೆ. ಕೆಲವೊಮ್ಮೆ ವಿವಿಧ ಬಗೆಯ ಹೆಸರುಗಳೂ ಬಗೆಬಗೆಯ ಗುಣಲಕ್ಷಣಗಳೂ ಇದ್ದರೂ ಮೂಲದಲ್ಲಿ ಒಂದೇ

ಕಾಣುವುದು. ಈ ಕಾರಣದಿಂದಲೇ ದೈವದ ನಂಬಿಕೆಗಳಿಗೂ, ಸಮುದಾಯಗಳಿಗೂ ಎಲ್ಲೆಡೆ ಸಾಮ್ಯತೆಗಳಿರುವುದು. ಪರಿಸರದ ಒಳಗೇ ಇನ್ನೊಂದು ಕಾಣದ ಜಗತ್ತು ಮತ್ತು ಅದರ ಶಕ್ತಿ ಇದೆ ಎಂದು ಭಾವಿಸಿದ್ದರಿಂದಲೇ ಮಾನವ ಏಕಕಾಲಕ್ಕೆ ಎರಡು ಭಿನ್ನ ಜಗತ್ತುಗಳ ಮುಂದೆ ನಿಂತು ನಿಸರ್ಗವನ್ನೂ, ಸ್ತ್ರೀಯನ್ನೂ ಒಂದರೊಳಗೊಂದು ಐಕ್ಯತೆಗೊಳಿಸಿಕೊಂಡು ತನ್ನ ಅಸ್ತಿತ್ವದ ಭಾಗವಾಗಿಸಿಕೊಂಡಿರುವುದನ್ನೂ ಕಾಣಬಹುದಾಗಿದೆ.

ಇದೇ ರೀತಿ ಬೆಂಗಳೂರಿನ ನಗರ ದೇವತೆ ಅಣ್ಣಮ್ಮ ಇಡೀ ನಗರವನ್ನಾವರಿಸಿದ್ದಾಳೆ. ನಗರದ ಪ್ರತಿಯೊಂದು ಬಡಾವಣೆಗೂ ಅಣ್ಣಮ್ಮನ ಉತ್ಸವ ವಿಗ್ರಹವನ್ನು ಕೊಂಡೊಯ್ದು ದಾರಿ ಬದಿಯಲ್ಲಿ ದೊಡ್ಡ ಚಪ್ಪರ ಹಾಕಿ ಅಲ್ಲೇ ಗದ್ದಿಗೆ ಮಾಡಿ ಪ್ರತಿಷ್ಠಾಪಿಸುವುದು ಕುರಿ ಕೋಳಿ ಬಲಿ, ತಂಬಿಟ್ಟಿನ ಆರತಿ, ಮೊಸರನ್ನ ತಂಪು ಮಾಡುವುದು ಇತ್ಯಾದಿ. ಗ್ರಾಮೀಣ ಸಂಸ್ಕೃತಿ, ಜೀವನ ವಿಧಾನವನ್ನು ಹೊಂದಿರುವ ಅನೇಕ ಬಡಾವಣೆಗಳು, ಕೊಪ್ಪಲುಗಳು ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ಇಂದಿಗೂ ಕಂಡು ಬರುತ್ತದೆ.

ಬೆಂಗಳೂರಿನ ಮಾವಳ್ಳಿ ಪ್ರದೇಶದ ಚಿಕ್ಕ ಮಾವಳ್ಳಿ ಮತ್ತು ದೊಡ್ಡ ಮಾವಳ್ಳಿ ಪ್ರದೇಶದ ಬಿಸಿಲು ಮಾರಮ್ಮನ ಉತ್ಸವ ಜಾತ್ರೆ ಬೆಂಗಳೂರಿನ ಪ್ರಾಚೀನ ಕಾಲದ ಜನಪದ ಉತ್ಸವ. ಮುಂಚೆ ಕೆಂಪೇಗೌಡನ ಕಾಲದಲ್ಲಿ ೭ ವರ್ಷಕ್ಕೊಮ್ಮೆ ನಡೆಯುತ್ತಿದ್ದ ಈ ಆಚರಣೆ ಈಗ ಕೇವಲ ೩ ವರ್ಷಕ್ಕೊಮ್ಮೆ ಸೀಮಿತವಾಗಿದೆ. ಒಟ್ಟು ನಾಲ್ಕು ದಿನ ನಡೆಯುವ ಆಚರಣೆಗಳು ಮತ್ತು ಉತ್ಸವದ ವಿವರ ಹೀಗಿದೆ:-

೧ನೇ ದಿನ –ಬೆಳಿಗ್ಗೆ – ಪ್ರಸನ್ನ ಆಂಜನೇಯ ಸ್ವಾಮಿಗೆ ಅಭಿಷೇಕ, ಮಧ್ಯಾಹ್ನ ಹಾಗೂ ಸಂಜೆ – ಶ್ರೀ ಆಂಜನೇಯ ಸ್ವಾಮಿಗೆ ಮಂಗಳಾರತಿ, ಬೆಲ್ಲದ ಆರತಿಗಳು, ಸಂಜೆ – ಸಾಂಸ್ಕೃತಿಕ ಕಾರ್ಯಕ್ರಮಗಳು

ಮೊದಲ ದಿನದ ಈ ವಿವರವನ್ನು ಗಮನಿಸಿದಾಗ ಇದು ಬಿಸಿಲು ಮಾರಮ್ಮನ ಉತ್ಸವವಾದರೂ ಜನಪದ ದೈವ ಹಾಗೂ ಶಿಷ್ಟ ದೈವ ಎರಡೂ ವರ್ಗದವರಿಗೆ ಬೇಕಾದ ಆಂಜನೇಯ ಸ್ವಾಮಿಯ ಪೂಜೆಯಿಂದ ಉತ್ಸವ ಆರಂಭವಾಗುವುದು ಕುತೂಹಲಕರವಾದ ಸಂಗತಿಯಾಗಿದೆ. ಯಾವುದೇ ಗ್ರಾಮದೇವತೆಯ ಹಬ್ಬವು ಸಾರುವಿಕೆಯಿಂದ ಪ್ರಾರಂಭವಾಗುತ್ತದೆ. ಸಾರಣಿ ಎಂತಲೂ ಇದನ್ನು ಕರೆಯುವರು. ಗ್ರಾಮ ದೇವತೆಯ ಹಬ್ಬಕ್ಕೆ ಗ್ರಾಮದ ಜನರನ್ನು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸಿದ್ಧಗೊಳಿಸುವ ಆರಂಭದ ಆಚರಣೆಯು ಇದಾಗಿದೆ. ಹೀಗೆ ಸಾರುವ ವ್ಯಕ್ತಿಯನ್ನು ಗುರಿಕಾರ ಎಂದೂ ಕರೆಯುತ್ತಾರೆ. ಕೆಲವು ಕಡೆ ಪೂಜಾರಿಯೇ ಸಾರುವವನೂ ಆಗಿರುತ್ತಾನೆ. ಗ್ರಾಮವು ಸಮೃದ್ಧವಾಗುವ ಸಂತೋಷವೂ ಗ್ರಾಮದೇವತೆಯ ಹಬ್ಬಕ್ಕೆ ನಾಂದಿ ಹಾಡುವುದು. ಕೆಲವು ಗ್ರಾಮಗಳಲ್ಲಿ ಸಾರುವಿಕೆಯನ್ನು ಕಂಬ ನೆಡುವುದರ ಮೂಲಕ ಸೂಚಿಸಲಾಗುತ್ತದೆ. ಇಲ್ಲಿಯೂ ಸಹಾ ಬಿಸಿಲು ಮಾರಮ್ಮನ ದೇವಾಲಯದ ಮುಂದೆ ಸಾರಿದ ದಿನ ಕಂಬ ನೆಡುತ್ತಾರೆ. ಕಂಬವಿಲ್ಲದ ಗ್ರಾಮದೇವತೆಗೆ ಅಸ್ತಿತ್ವವಿಲ್ಲ. ಕಂಬವನ್ನು ಗ್ರಾಮದೇವತೆಯ ಗಂಡನೆಂದೂ ಕೆಲವೆಡೆ ಪರಿಗಣಿಸುತ್ತಾರೆ. ನಿರ್ದಿಷ್ಟ ದಿನ ನಿರ್ದಿಷ್ಟ ವ್ಯಕ್ತಿಯೊಬ್ಬ ಸ್ನಾನ ಮಾಡಿ ಮರದ ಮೂರು ಕವಲಿರುವ ಕೊಂಬೆಯನ್ನು

ಒಂದೇ ಏಟಿಗೆ ಹೊಡೆದು ತರುತ್ತಾನೆ. ಆ ಕಂಬವನ್ನು ಸಕಲ ಗೌರವಗಳೊಂದಿಗೆ ಹೂಳುತ್ತಾರೆ. ಹೂಳಿದ ನಂತರ ಹಬ್ಬ ಶುರುವಾಗುತ್ತದೆ.

ಇಲ್ಲಿ ಚಿಕ್ಕ ಮಾವಳ್ಳಿ ಮತ್ತು ದೊಡ್ಡ ಮಾವಳ್ಳಿ ಎರಡೂ ಕಡೆ ಮಾರಮ್ಮನ ದೇವಸ್ಥಾನವಿದೆ. ಒಂದು ಬಿಸಿಲು ಮಾರಮ್ಮ, ಮತ್ತೊಂದು ದೊಡ್ಡ ಮಾರಮ್ಮ. ಇವಳನ್ನು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬಿಸಿಲಮ್ಮ ಎಂದೂ ಕರೆಯುವುದುಂಟು. ಬಿಸಿಲು ಕಾಲದಲ್ಲಿ ಪೂಜೆ ಮಾಡುವುದರಿಂದ ಎಂದು ಒಂದು ಅರ್ಥ ಬಂದರೆ, ಊರನ್ನು ಬಿಸಿಲಿನಿಂದ ಬರುವ ಸಾಂಕ್ರಾಮಿಕ ರೋಗಗಳಿಂದ ಕಾಪಾಡಲು ನೆಲೆನಿಂತಿರುವುದರಿಂದ ಬಿಸಿಲು ಮಾರಮ್ಮ ಎಂದು ಕರೆಯುವ ವಾಡಿಕೆಯಿದೆ, ಎಂದೂ ಹೇಳಬಹುದು.

ಎರಡನೆಯ ದಿನ ಬೆಳಿಗ್ಗೆ-ಊರಿನ ಸುಮಂಗಲಿಯರು ಬಿಸಿಲು ಮಾರಮ್ಮ ದೇವಿಗೆ ಕೊಡಗಳಲ್ಲಿ ಅರಿಶಿನ ನೀರನ್ನು ಹೊತ್ತು ತಂದು ಅಭಿಷೇಕ ಮಾಡುತ್ತಾರೆ ಹಾಗೂ ಪಂಚಾಮೃತ ಅಭಿಷೇಕ ಮಾಡುತ್ತಾರೆ. ಗ್ರಾಮದೇವತೆಗಳು ಸ್ತ್ರೀ ಚೈತನ್ಯ ಶಕ್ತಿಯ ಆರಾಧನೆಯಾಗಿರುವುದರಿಂದ ಬಹುಶಃ ಸುಮಂಗಲಿಯರಿಂದಲೇ ಅರಿಶಿನದ ನೀರನ್ನು ಹೊತ್ತು ತರುವ ಪರಿಪಾಠ ಆರಂಭವಾಗಿರಬೇಕು. ಮಹಿಳೆ ಮತ್ತು ಗ್ರಾಮ ದೇವತೆಯ ನಡುವಿನ ಭಾವ ಸಂಬಂಧವನ್ನು ಗಟ್ಟಿಗೊಳಿಸುವ ನೆಲೆಯಲ್ಲಿಯೂ ಸಹಾ ಈ ಕ್ರಿಯೆ ಕೆಲಸಮಾಡುತ್ತದೆ. ಪ್ರತಿ ಮನೆಯವರೂ ತಮ್ಮ ಮನೆಯಿಂದಲೇ ಅರಿಶಿನದ ನೀರನ್ನು ಹೊತ್ತು ತರುವುದರಿಂದ ದೇವತೆಗೂ ಮನೆಗೂ ನಡುವಿನ ಸಂಬಂಧ ಗಟ್ಟಿಯಾಗಿ ಅವಳು ಕಾಯುತ್ತಾಳೆ ಎಂಬ ಅಚಲವಾದ ನಂಬಿಕೆ ಇಲ್ಲಿ ಕೆಲಸ ಮಾಡುವುದನ್ನು ಕಾಣಬಹುದು. ಇನ್ನು ಪಂಚಾಮೃತ ಅಭಿಷೇಕ-ವೈದಿಕೀಕರಣಗೊಂಡ ಸಾಂಸ್ಕೃತಿಕ ಸಂಘರ್ಷದ ಫಲ. ಅರಿಶಿನದ ನೀರು ಸಾಮಾನ್ಯವಾಗಿ ಎಲ್ಲ ವೈದಿಕ ದೈವಗಳಿಗೆ ಪಂಚಾಮೃತ ನಂತರ ಮಾಡಿದರೆ, ಗ್ರಾಮ ದೇವತೆಗಳ ಆಚರಣೆಗಳಲ್ಲಿ ಮೊದಲು ಅರಿಶಿನದ ನೀರಿನ ಅಭಿಷೇಕ ಮಾಡಿಸಿ ನಂತರ ಪಂಚಾಮೃತ ಅಭಿಷೇಕ ಮಾಡುವುದನ್ನು ಕಾಣಬಹುದು. ಸಂಸ್ಕೃತಿಯ ಪ್ರಸರಣ ಕ್ರಿಯೆಯಲ್ಲಿ ಇಂತಹ ಆಚರಣೆಗಳು ಪ್ರಧಾನ ಪಾತ್ರ ವಹಿಸುತ್ತವೆ.

ಎರಡನೆಯ ಮಧ್ಯಾಹ್ನ ಬಿಸಿಲು ಮಾರಮ್ಮ ದೇವಿಯ ಉಯ್ಯಾಲೆ ಪೂಜೆಯಿಂದ ಜಾತ್ರೆ ಆರಂಭವಾಗುತ್ತದೆ. ಮೊದಲು ದೇವಿಯನ್ನು ಉಯ್ಯಾಲೆಯಲ್ಲಿ ಕೂರಿಸಿ ಎಷ್ಟು ಎತ್ತರಕ್ಕೆ ಸಾಧ್ಯವೋ ಅಷ್ಟು ಎತ್ತರವಾಗಿ ತೂಗುತ್ತಾರೆ. ನಂತರ ಹರಕೆ ಹೊತ್ತ ಯಾರು ಬೇಕಾದರೂ ಉಯ್ಯಾಲೆ ಸೇವೆಯನ್ನು ಮುಂದುವರೆಸಬಹುದು. ನಿಯಮವೆಂದರೆ ಉಯ್ಯಾಲೆಸೇವೆ ಸಲ್ಲಿಸುವವರು ಮೊದಲು ಸಿಡೀರಣ್ಣನನ್ನು ಬೆನ್ನ ಮೇಲೆ ಹೊತ್ತು ೩ ರಿಂದ ೪ ನಿಮಿಷ ಉಯ್ಯಾಲೆಯ ಮುಂದೆ ಕುಣಿದು ನೃತ್ಯ ಸೇವೆಯನ್ನು ಸಲ್ಲಿಸಿ, ಸಿಡೀರಣ್ಣನನ್ನು ಇಳಿಸಿ ಉಯ್ಯಾಲೆ ಏರುತ್ತಾರೆ. ಪೈಪೋಟಿಯ ಮೇರೆಗೆ ಉಯ್ಯಾಲೆ ಸೇವೆ ನಡೆಸುತ್ತಾರೆ. ನಂತರ ಅದೇ ದಿನ ಸಂಜೆ ಹರಕೆ ಹೊತ್ತವರಿಂದ ಬಾಯಿ ಬೀಗ ಚುಚ್ಚಿಸಿಕೊಳ್ಳುವ ಸಂಪ್ರದಾಯವೂ ಸಹಾ ನಡೆಯುತ್ತದೆ. ಹರಸಿಕೊಂಡವರು ತಾಮ್ರದ ತಂತಿಯಿಂದ ಎರಡೂ ಕೆನ್ನೆಯನ್ನು ತೂತು ಮಾಡಿಸಿಕೊಂಡು ಬಾಯಿಗೆ ಬೀಗ

ಹಾಕಿಸಿಕೊಳ್ಳುವರು. ಈ ಸಂದರ್ಭದಲ್ಲಿ ಅವರು ಮಾತನಾಡಲು ಸಾಧ್ಯವಾಗುವುದಿಲ್ಲ. ನಿರ್ದಿಷ್ಟ ಕುಟುಂಬದವರೇ ಬಾಯಿ ಬೀಗ ಹಾಕಿ ತೆಗೆಯುವ ಹಕ್ಕನ್ನುಳ್ಳವರಾಗಿರುತ್ತಾರೆ. ಇದಕ್ಕೆ ಕಾಣಿಕೆ ತೆಗೆದುಕೊಳ್ಳುವರು. ಹೆಂಗಸರು ಗಂಡಸರು ಎಂಬ ಭೇದವಿಲ್ಲದೆ ಯಾರು ಬೇಕಾದರೂ ಬಾಯಿ ಬೀಗವನ್ನು ಚುಚ್ಚಿಸಿಕೊಳ್ಳಬಹುದು. ಕೆಲವು ಕಡೆ ಕೊಂಡದ ನಂತರ ಬಾಯಿ ಬೀಗ ತೆರೆದರೆ, ಇನ್ನು ಹಲವೆಡೆ ಜಾತ್ರೆಯ ಕಡೆಯ ದಿನ ಹಾಕಿದ ಬಾಯಿಬೀಗವನ್ನು ತೆಗೆಯುತ್ತಾರೆ.

ಮಧ್ಯರಾತ್ರಿ ೧–೩೦ಕ್ಕೆ ಗ್ರಾಮದ ಒಳಿತಿಗಾಗಿ ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಬಲಿಚೆಲ್ಲುವ ಸಂಪ್ರದಾಯ ನಡೆಯುತ್ತದೆ. ಬಲಿ ಚೆಲ್ಲುವ ಮುನ್ನ ಸುತ್ತಮುತ್ತಲೂ ಯಾರೂ ಓಡಾಡಬಾರದು ಎಂಬ ನಿಯಮವನ್ನು ಅನುಸರಿಸುತ್ತಾರೆ. ಆದರೆ ಈಗ ಮೂಢನಂಬಿಕೆಗಳ ಪ್ರತಿಬಂಧಕ ಕಾಯ್ದೆ ಇರುವುದರಿಂದ ಬಲಿಯನ್ನು ಚೆಲ್ಲದೆ ಸಾಂಕೇತಿಕವಾಗಿ ಈ ಕಾರ್ಯಕ್ರಮವನ್ನು ನಡೆಸುತ್ತಾರೆ. ಇದಕ್ಕೆ ಮುನ್ನ ರಾತ್ರಿ ಹನ್ನೆರಡು ಗಂಟೆಗೆ ದೇವತೆಗೆ ಬಲಿಕೊಡುವರು. ಮಡಿವಾಳರು ದೇವತೆಯ ಎದುರಿಗೆ ನಾಲ್ಕು ಕಂಬ ನೆಟ್ಟು ದುಪ್ಪಟಿಯಿಂದ ಗೂಡು ನಿರ್ಮಿಸಿ, ಕುಂಕುಮವನ್ನು, ಬಳೆಯನ್ನು, ಮೊಸರನ್ನದ ರಾಶಿ ಹಾಕುವರು. ಎಲ್ಲಾ ಭಾಗದಲ್ಲಿಯೂ ಬಲಿ ಚೆಲ್ಲಿ ಮೂರು ರಸ್ತೆ ಕೂಡುವ ಜಾಗದಲ್ಲಿ ಈ ಮೂರು ಅನ್ನವನ್ನಿಟ್ಟು ಒಂದು ದೀಪ ಹಚ್ಚಿಡುತ್ತಾನೆ. ಊರ ತಳವಾರರು ಬಲಿಯೋಬಲಿ ಎಂದು ಕೂಗುತ್ತಾ ಬರುತ್ತಾರೆ. ಇದರಿಂದ ಊರಿಗೆ ದುಷ್ಟ ಶಕ್ತಿಗಳು ಪ್ರವೇಶಿಸುವುದಿಲ್ಲ ಎಂಬ ನಂಬಿಕೆಯಿದೆ. ಮಳೆ ಬೆಳೆ ಸಮೃದ್ಧಿಯಾಗಿ ಆಗುತ್ತದೆಂಬ ಭರವಸೆ ಜನರಿಗೆ ಮೂಡುತ್ತದೆ.

ಮೂರನೆಯ ದಿನ ಬೆಳಿಗ್ಗೆ ಕೊಂಡ ಹಾಯುವ ಕಾರ್ಯಕ್ರಮ. ಕೆಂಡದ ಸೇವೆ ವಂಶಸ್ಥರಿಂದ ಅಗ್ನಿ ಕೊಂಡಕ್ಕೆ ಪೂಜೆ ಹಾಗೂ ಅಗ್ನಿ ಸ್ಪರ್ಶ ಕಾರ್ಯಕ್ರಮ ನಡೆಯುತ್ತದೆ. ಆರತಿ ಹೊತ್ತು ಕೊಂಡ ಹಾಯುವ ಸಂಪ್ರದಾಯ ಕೆಲವೆಡೆ ಕಂಡು ಬರುತ್ತದೆ. ಕೆಲವು ಕಡೆ ಇದನ್ನು ಅಗ್ನಿಕೊಂಡ ಎಂದೇ ಕರೆಯುತ್ತಾರೆ. ಕೊಂಡ ಹಾಯುವ ಆಚರಣೆ ಅಗ್ನಿ ಪ್ರವೇಶವಲ್ಲದಿದ್ದರೂ ಅಗ್ನಿ ಸಂಬಂಧವಾದುದು. ಇಲ್ಲಿ ಭಕ್ತರು ಉರಿಯುವ ಕೆಂಡವನ್ನು ತುಳಿದುಕೊಂಡು ಓಡುವುದನ್ನು ಕಾಣಬಹುದು. ಈ ಸಂಧರ್ಭದಲ್ಲಿ ಅವರಿಗೆ ಕಾಲು ಸುಡುವುದಿಲ್ಲ ಎಂದೂ ಹೇಳುತ್ತಾರೆ. ಅದು ಅವರವರ ನಂಬಿಕೆಯ ಪ್ರತೀಕ.

ನಂತರ ಆರತಿ ಸೇವೆ – ಒಂದು ಬುಟ್ಟಿ ಅಥವಾ ತಣಿಗೆ, ತಪ್ಪಲೆಯಲ್ಲಿ ತಂಬಿಟ್ಟನ್ನು ಮಾಡಿಟ್ಟು ಅದರ ಮೇಲೆ ದೀಪ ಹಚ್ಚಿ ಹೆಣ್ಣು ಮಕ್ಕಳು ಮೆರವಣಿಗೆಯಲ್ಲಿ ಹೊತ್ತು ತರುವರು. ಬರೀ ತಂಬಿಟ್ಟಿದ್ದಾಗ ಅದನ್ನು ತಂಬಿಟ್ಟಿನಾರತಿ ಎಂದೂ, ಬೆಲ್ಲ ಇದ್ದರೆ ಬೆಲ್ಲದಾರತಿ ಎಂದೂ, ದೀಪಗಳು ಮಾತ್ರ ಇದ್ದಾಗ ದೀಪದಾರತಿ ಎಂದೂ ಕರೆಯುವರು. ಆರತಿಯಲ್ಲಿ ಹೊಂಬಾಳೆ, ಬೇವಿನಸೊಪ್ಪು ಇರುತ್ತದೆ. ಇದನ್ನು ಮೆರವಣಿಗೆಯಲ್ಲಿ ತಂದು ದೇವತೆಗೆ ಬೆಳಗಿ ಹಿಂದಕ್ಕೆ ತೆಗೆದುಕೊಂಡು ಹೋಗುವರು. ಕರ್ನಾಟಕದ ಹಲವು ಭಾಗಗಳಲ್ಲಿ ಪುರುಷರು ಮತ್ತು ಊರ ಯಜಮಾನರೇ ಆರತಿ ಹೊರುತ್ತಿದ್ದರೆಂಬ ಅಂಶವನ್ನು ವೈಟ್ ಹೆಡ್‌ರವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

ದೇವತೆಗೆ ಆರತಿ ತರುವಾಗ ಸಾಮಾಜಿಕ ಅಂತಸ್ತಿನ ಪರಿಪಾಲನೆಯನ್ನು ಕಾಣಬಹುದು. ಮೊದಲು ಊರ ಮುಖಂಡನ ಆರತಿ, ನಂತರ ಮೇಲು ವರ್ಗದವರು, ಮಧ್ಯಮ ಜಾತಿಯವರ ಆರತಿ ಕೊನೆಗೆ ಕೆಳ ಜಾತಿಯವರ ಆರತಿಗಳು ಬರುತ್ತವೆ. ಇಲ್ಲಿ ಗ್ರಾಮದ ಮಡಿವಾಳ ಜನಾಂಗದವರಿಂದ ಗ್ರಾಮ ದೇವತೆಗೆ ಮೊದಲ ಆರತಿ ಸೇವೆ ನಡೆಯುತ್ತದೆ. ನಂತರ ಉಳಿದ ಗ್ರಾಮದ ಹೆಂಗೆಳೆಯರು ಆರತಿ ಹೊರುವ ಸಂಪ್ರದಾಯವನ್ನು ನಡೆಸುತ್ತಾರೆ. ಪ್ರತಿ ಮನೆಯಿಂದಲೂ ಗ್ರಾಮ ದೇವತೆ, ಕುಲ ದೇವತೆ, ಇಷ್ಟದೇವತೆಗೆ ಇಚ್ಛಾನುಸಾರ ಆರತಿ ತಟ್ಟೆ ಹೊತ್ತು ತರುತ್ತಾರೆ. ಅಕ್ಕಿಯನ್ನು ತೊಳೆದು ಒಣಹಾಕಿ ಕೈಯಿಂದ ಕುಟ್ಟಿ ಹಿಟ್ಟು ಮಾಡಿ ಅದಕ್ಕೆ ಬೆಲ್ಲದ ಪಾಕದ ಮಿಶ್ರಣವನ್ನು ಬೆರೆಸಿ ತಯಾರಿಸಿದ ತಂಬಿಟ್ಟಿನ ಮಧ್ಯೆ ತುಪ್ಪದ ಬತ್ತಿಯನ್ನು ಬೆಳಗಿ ಆರತಿ ಹೊತ್ತು ತರುತ್ತಾರೆ. ಕೆಲವರು ತಟ್ಟೆಯಲ್ಲಿ ಆರತಿ ಹೊತ್ತು ತಂದರೆ, ಕೆಲವು ಮನೆತನದವರು ಹೂವಿನಿಂದ ಸಿಂಗರಿಸಿದ ನೀರಿನ ಕೊಡಪಾನದ ಮೇಲೆ ಆರತಿ ತಟ್ಟೆಯನ್ನು ಹಿಡಿದು ಬಂದು ದೇವಿಗೆ ಭಯಭಕ್ತಿಯಿಂದ ಆರತಿ ಮಾಡುತ್ತಾರೆ. ಪ್ರತಿ ಮನೆಯವರೂ ಅಡಿಕೆ, ಹೊಂಬಾಳೆ, ತಾಳೆಗರಿ– ಹೀಗೆ ವಿವಿಧ ಸಸ್ಯ, ಹೂವುಗಳಿಂದ ಅಲಂಕೃತಗೊಂಡ ಆರತಿ ತಟ್ಟೆಯನ್ನು ಅವರವರು ಪಾಲಿಸಿಕೊಂಡು ಬಂದ ಸಂಪ್ರದಾಯಕ್ಕನುಗುಣವಾಗಿ ಆರತಿಯನ್ನು ಹೊತ್ತು ತರುತ್ತಾರೆ.

ನಾಲ್ಕನೆಯ ಹಾಗೂ ಕೊನೆಯ ದಿನ ಮಧ್ಯಾಹ್ನ ಗ್ರಾಮದ ಹೆಣ್ಣುಮಕ್ಕಳು ಓಕುಳಿ ನೀರನ್ನು ಸ್ಪರ್ಧೆ ನಡೆಯುವ ಸ್ಥಳಕ್ಕೆ ತರುತ್ತಾರೆ. ಯುವಕರ ತಂಡದಿಂದ ಮಲ್ಲ ಕಂಬ ಹತ್ತುವ ಸ್ಪರ್ಧೆ ನಡೆಯುತ್ತದೆ. ಇದಕ್ಕೆ ಗ್ರೀಸ್ ಕಂಬ ಹತ್ತುವುದು ಎಂದೂ ಕರೆಯುತ್ತಾರೆ. ಯುವಕರು ಎಣ್ಣೆ ಹಚ್ಚಿದ ಕಂಬವನ್ನು ಹತ್ತುವಾಗ ಸಮಯವನ್ನು ನಿಗದಿಪಡಿಸುತ್ತಾರೆ. ಅವರು ಹತ್ತಲಾಗದಂತೆ ಅಡ್ಡಿಪಡಿಸಿ ಸುತ್ತಲೂ ಇರುವವರು ಅವರ ಮೇಲೆ ಓಕುಳಿ ನೀರನ್ನು ಎರಚುತ್ತಾರೆ. ಕಾಲಮಾನಕ್ಕೆ ತಕ್ಕಂತೆ ಈ ಕ್ರೀಡೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. ಯುವಕರು ಹಿಂದೆ ಒಬ್ಬರೇ ಹತ್ತುತ್ತಿದ್ದವರು ಈಗ ಸಮೂಹ ಕ್ರೀಡೆಯಾಗಿ ಬದಲಾಗಿ ಪಿರಮಿಡ್ ರಚಿಸಿ ಒಬ್ಬರ ಮೇಲೊಬ್ಬರು ಹತ್ತಿ ತುದಿಯಲ್ಲಿ ಕಟ್ಟಿರುವ ಕಾಯಿ/ ಮಡಕೆಯನ್ನು ಕೋಲಿನಿಂದ ಹೊಡೆಯುತ್ತಾರೆ. ಇದು ಅವರ ಏಕಾಗ್ರತೆ, ಏಕತೆ ಎರಡನ್ನೂ ಇಮ್ಮಡಿಗೊಳಿಸುತ್ತದೆ. ಇದರ ನಂತರ ಉಟ್ಲುಕಾಯಿ ಹೊಡೆಯುವ ಕ್ರೀಡೆಯೂ ನಡೆಯುತ್ತದೆ. ಪುರಾಣ ಪ್ರಸಂಗವೊಂದರ ಅಭಿನಯ ಆಚರಣೆ ಎನ್ನುವುದಕ್ಕೆ ಈ ಆಚರಣೆ ಉತ್ತಮ ಉದಾಹರಣೆ. ಮರಕ್ಕೆ ಒಂದು ತೊಲೆ ಹಾಕಿ ಅದರ ಮೇಲೆ ಉಟ್ಲುಕಾಯಿಯನ್ನು ತೂಗಿ ಬಿಡುತ್ತಾರೆ. ಅದಕ್ಕೆ ದೊಣ್ಣೆಯಿಂದ ಸುತ್ತುಗಟ್ಟಿ ಒಡೆಯುತ್ತಾರೆ. ಪ್ರಾರಂಭದಲ್ಲಿ ಕರಗ ಹೊತ್ತ ವ್ಯಕ್ತಿ ಗಟಿಯನ್ನು ಹೊಡೆದಾಗ ಜನ ಅವನ ಕೈ ಬಳೆಗಳನ್ನು ಒಡೆದು ಹಾಕುವರು. ಹೊಡೆಯುವವನಿಗೆ ಅರಿಸಿನದ ನೀರನ್ನು ಎರಚಿ ಪ್ರೋತ್ಸಾಹಿಸುತ್ತಾರೆ. ಈ ಉಟ್ಲು ಕಾಯನ್ನು ಕೀಚಕ ಎನ್ನುವರು. ಕೀಚಕ ವಧೆಯ ಆಚರಣೆಯೇ ಈ ಉಟ್ಲು ಕಾಯಿಯ ಆಚರಣೆ ಎಂದೂ ಹೇಳುವುದುಂಟು. ಚಿಕ್ಕ ಮಾವಳ್ಳಿ ಮತ್ತು ದೊಡ್ಡ ಮಾವಳ್ಳಿ ಯುವಕರ ತಂಡದವರ

ನಡುವೆ ತೀವ್ರವಾದ ಪೈಪೋಟಿ ಏರ್ಪಟ್ಟು ಕ್ರೀಡೆಯಲ್ಲಿ ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿಯೂ ಸಹಾ ರೂಪಾಂತರಗೊಂಡಿತು.

ಸಂಜೆ ಹೂವಿನ ಪಲ್ಲಕಿ ಮೆರವಣಿಗೆ, ಅಲಂಕಾರ, ಬಾಣ ಬಿರುಸು ಹಾಗೂ ತಮಟೆವಾದ್ಯಗಳೊಂದಿಗೆ ಮುಖ್ಯಬೀದಿಗಳಲ್ಲಿ ಮೆರವಣಿಗೆಯೊಂದಿಗೆ ದೇವಿ ಪುನಃ ದೇವಸ್ಥಾನ ಸೇರುತ್ತಾಳೆ. "ಆಧುನಿಕ ನಾಗರಿಕತೆಯ ತರ್ಕ ಒಂದು ಏಕರೂಪೀ ಜೀವನ ಕ್ರಮವನ್ನು ರೂಪಿಸುವುದಾಗಿದೆ. ಹಳೆಯ ಜ್ಞಾನ ವ್ಯವಸ್ಥೆಗಳು ಭಾವನಾಲಯಗಳ ತೀವ್ರ ರೀತಿಯ ಹಿಂಸೆಯನ್ನು ಅನುಭವಿಸಿ ಕಣ್ಮರೆಯಾಗುತ್ತಿವೆ. ೧೭ ಗ್ರಾಮದೇವತೆಗಳು ಆಧುನೀಕರಣದ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಹಲವಾರು ನೆಲೆಗಳಲ್ಲಿ ಕಾಣಬಹುದಾಗಿದೆ.

೧. ಮನುಷ್ಯ ಮತ್ತು ನಿಸರ್ಗದ ನೆಲೆ
೨. ಮನುಷ್ಯ ಮನುಷ್ಯರ ಭಾವ ಸಂಬಂಧದ ನೆಲೆ
೩. ಮನುಷ್ಯ ಮತ್ತು ಸಮಾಜದ ನೆಲೆ

ಈ ಮೂರೂ ನೆಲೆಗಳಲ್ಲಿ ಗ್ರಾಮ ದೇವತೆಯ ಹಬ್ಬ, ಉತ್ಸವ ಮತ್ತು ಆಚರಣೆಗಳನ್ನು ಕಾಯ್ದುಕೊಳ್ಳಬೇಕಾದ ತುರ್ತಿದೆ. ವೈದಿಕೀಕರಣ ಮತ್ತು ಆಧುನೀಕರಣದ ಪ್ರಭಾವದ ಪರಿಣಾಮವಾಗಿ ಪಿತೃ ಪ್ರಧಾನ ಮತ್ತು ಮಾತೃ ಪ್ರಧಾನ ಆಚರಣೆಗಳು ಪರಸ್ಪರ ಸ್ಪರ್ಧೆ ಗಿಳಿಯುವುದೂ ಉಂಟು. ಜನಪದ ದೇವತೆಗಳು ಮಾತೃಪ್ರಧಾನದ ಮೂಲ ಮಾತೃಕೆ ಗಳಾದರೆ ವೈದಿಕ ಸಂಸ್ಕೃತಿಯ ದೇವತೆಗಳು ಪಿತೃ ಪ್ರಧಾನ ಮೂಲದವು. ಅದೇನೇ ಇರಲಿ ನಾಗರೀಕತೆಯ ದಾಳಿಗೆ ಈ ಎರಡೂ ಇಂದು ತಮ್ಮ ಅಸ್ಮಿತೆಯನ್ನು ಉಳಿಸಿ ಕೊಳ್ಳಲು ಹೆಣಗಾಡಲೇಬೇಕಾಗಿದೆ. ಇದರ ಪರಿಣಾಮವಾಗಿ ಬೆಂಗಳೂರಿನ ಬಿಸಿಲು ಮಾರಮ್ಮನ ದೇವಾಲಯದ ಆಚರಣೆಗಳಲ್ಲೂ ಆಧುನೀಕರಣ ಎದ್ದು ಕಾಣುತ್ತಿದೆ. ಈ ಶತಕದಲ್ಲಿ ರೂಪುಗೊಂಡ ದೇವಾಲಯಗಳ ಕಾರ್ಯಾಚರಣೆಯಲ್ಲಿ ಇಂದಿನ ನವ ನಾಗರಿಕತೆಗೆ ತಕ್ಕಂತೆ ಹಲವು ಬದಲಾವಣೆಗಳು ಕಾಣ ಬರುತ್ತವೆ. ಇದರಂತೆ ಸಾಮಾನ್ಯ ಜನರ ಧಾರ್ಮಿಕ ಮನೋಭಾವದಲ್ಲಾಗಿರುವ ಪರಿಣಾಮಗಳು ಗಮನಾರ್ಹವಾಗಿದೆ.

ಪರಾಮರ್ಶನ ಗ್ರಂಥಗಳು

೧. ಭಾರತೀಯ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ.
೨. ಗ್ರಾಮ ದೇವತೆಗಳು ಡಾ. ಸಿದ್ದಲಿಂಗಯ್ಯ.
೩. ಶಕ್ತಿ ಶಾರದೆಯ ಮೇಳ– ಡಾ. ಡಿ.ಆರ್. ನಾಗರಾಜ್.
೪. ಇತಿಹಾಸ ದರ್ಶನ ಸಂಪುಟ ೪.
೫. Village Gods of South India – White Head.
೬ Egyptian Myth - Donald Makanize.

ಈ ಸಂಚಿಕೆಯ ಲೇಖಕರು

* **ಪ್ರೊ. ಜಿ. ಅಶ್ವತ್ಥನಾರಾಯಣ,** ೯೫, ೩೪ಬಿ ಕ್ರಾಸ್, ೧೬ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-೫೬೦೦೧೧. ದೂ : ೦೮೦-೨೬೬೧೫೮೭೭

* **ಡಾ. ಕೃಷ್ಣ ಪರಮೇಶ್ವರ ಭಟ್ಟ,** ೧೮, 'ಮುತ್ತಿಗೆ', ೮ನೇ ಮುಖ್ಯರಸ್ತೆ, ೪ನೇ ಬ್ಲಾಕ್, ಬನಶಂಕರಿ ೩ನೇ ಸ್ಟೇಜ್, ೨ನೇ ಫೇಸ್, ಬೆಂಗಳೂರು-೫೬೦೦೮೫. ದೂ: ೯೯೮೦೧೮೮೨೮೮

* **ಡಾ. ಎಂ.ಜಿ. ವಾರಿ,** ಚಾಲುಕ್ಯನಗರ, ೫ನೇ ತಿರುವು, ಬಾದಾಮಿ-೫೮೭೨೦೧. ಜಿ. ಬಾಗಲಕೋಟೆ. ದೂ: ೯೮೪೪೬೬೨೪೨೯

* **ಸಂಜಯ ಎನ್. ಹಂಜೆ,** ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩. ದೂ: ೯೫೩೫೧೭೨೪೩೩

* **ಡಾ. ಆರ್. ಶೇಷಶಾಸ್ತ್ರಿ,** ೧೩-೧೩-೬೪೯, ಶ್ರೀನಿವಾಸನಗರ, ಅನಂತಪುರಂ-೫೧೫೦೦೧. ದೂ: ೦೯೪೪೦೪೬೬೫೯೯

* **ಡಾ. ಕೆಳದಿ ಗುಂಡಾಜೋಯಿಸ್,** ಹಿರಿಯ ಹಸ್ತಪ್ರತಿ ಶಾಸ್ತ್ರಜ್ಞರು ಮತ್ತು ಸಂಯೋಜಕರು, ಕೆಳದಿ ಹಸ್ತಪ್ರತಿ ಸಂಪನ್ಮೂಲ ಕೇಂದ್ರ, ಕೆಳದಿ. ದೂ: ೯೪೪೮೮೩೯೭೩೯

* **ಡಾ. ಎಚ್.ಎನ್. ಮುರಳೀಧರ,** ೯೯೨, 'ಶ್ರೀಪದ', ೧೫ನೇ ಕ್ರಾಸ್, ಮೊದಲನೇ ಸ್ಟೇಜ್, ಕುಮಾರಸ್ವಾಮಿ ಲೇಔಟ್, ಬೆಂಗಳೂರು-೫೬೦೧೧೧. ದೂ: ೯೪೪೯೩೫೩೮೩೦

* **ಡಾ. ಎನ್.ಆರ್. ಲಲಿತಾಂಬ,** ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು-೫೬೦೧೦೪. ದೂ: ೯೮೪೫೪೨೭೫೮೧

* **ವಿ. ಸಂಧ್ಯಾ,** ೧೫೩, ಮೊದಲನೇ ಹಂತ, ೫ನೇ ಅಡ್ಡರಸ್ತೆ, ಆರ್.ಕೆ. ಬಡಾವಣೆ, ಪದ್ಮನಾಭನಗರ, ಬೆಂಗಳೂರು-೫೬೦೦೭೦.

* **ಪಿ. ವನಜ,** ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದೂ: ೯೪೮೦೦೯೦೫೯೫

* **ಕೆ.ಜಿ. ರೇಖಾ,** ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊ. ೯೨೪೨೧೦೯೦೯

ಲಭ್ಯವಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಪ್ರಕಟಣೆಗಳು

೧ ಸಾಹಿತ್ಯೋಪಾಸಕರು ಮಾಲೆ–೩/ವಿವಿಧ ಲೇಖಕರು/೯೦
೨ ಪರಿಷ್ಕೃತ ಹೊಸಗನ್ನಡದ ವ್ಯಾಕರಣ/ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ/೧೨೦
೩ ವೈಚಾರಿಕ ಜಾಗೃತಿ (ಹೊಸ ಆವೃತ್ತಿ)/ಡಾ. ಜಿ. ರಾಮಕೃಷ್ಣ/೧೦೦
೪ ಕವಿಗಳು ಕಂಡ ಬಿ.ಎಂ.ಶ್ರೀ./ಹೊ.ರಾ.ಸತ್ಯನಾರಾಯಣ ರಾವ್/೮೦
೫ ಶ್ರೀ ಕೃಷ್ಣದೇವರಾಯನ ದಿನಚರಿ/ಪ್ರೊ. ಎಂ.ವಿ.ಸೀತಾರಾಮಯ್ಯ/೮೦
೬ ಕನ್ನಡ ಮಾತು ತಲೆಯೆತ್ತುವ ಬಗೆ/ಬಿ.ಎಂ.ಶ್ರೀಕಂಠಯ್ಯ/೧೦
೭ ಬೆಟಗೇರಿ ಕೃಷ್ಣಶರ್ಮ/ಎಸ್.ವಿ. ಶ್ರೀನಿವಾಸರಾವ್/೨೦
೮ ಬರಡು ಬರಹಗಳು/ಎಚ್.ವಿ.ಸಾವಿತ್ರಮ್ಮರಾಮಸ್ವಾಮಿ/೪೦
೯ ಕನ್ನಡ ನವೋದಯ ಪ್ರವರ್ತಕ ಬಿ.ಎಂ.ಶ್ರೀಕಂಠಯ್ಯ ವ್ಯಕ್ತಿಪರಿಚಯ ಮತ್ತು ಸೂಕ್ತಿಗಳು/ಪ್ರೊ. ಡಿ. ಲಿಂಗಯ್ಯ/೩೦
೧೦ ಸಿರಿಕಂಟ/ಎನ್.ಬಸವಾರಾಧ್ಯ, ನಾ.ಗೀತಾಚಾರ್ಯ/೩೫೦
೧೧ ಎಂ.ವಿ.ಸೀ ವಾಚಿಕೆ–೧ ಸೃಜನ ಸಾಹಿತ್ಯ/ಎನ್.ಎಸ್. ಶ್ರೀಧರಮೂರ್ತಿ/೧೫೦
೧೨ ಸುದ್ದಿ ಸಂಕಮ್ಮ/ಎಚ್.ವಿ. ಸಾವಿತ್ರಮ್ಮ ರಾಮಸ್ವಾಮಿ/೫೦
೧೩ ಬಿ.ಎಂ.ಶ್ರೀಕಂಠಯ್ಯ ಜೀವನ–ಸಾಧನೆ/ನಾ. ಗೀತಾಚಾರ್ಯ/೧೦೦
೧೪ ಪರಿಹಾರ ಮತ್ತು ಇತರ ಕಥೆಗಳು/ಪ್ರೊ. ಎಂ.ವಿ. ಸೀತಾರಾಮಯ್ಯ/೩೦
೧೪ ಇಂಗ್ಲೀಷ್ ಗೀತಗಳು/ಬಿ.ಎಂ.ಶ್ರೀಕಂಠಯ್ಯ/೧೦೦
೧೬ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ/ಡಾ. ನಾ. ಗೀತಾಚಾರ್ಯ/೧೦೦
೧೭ ಕಾವ್ಯದ ಒಂದು ಚುಂಗನ್ನು ಹಿಡಿದು/ಎಚ್.ವಿ. ಸಾವಿತ್ರಮ್ಮ ರಾಮಸ್ವಾಮಿ/೬೦
೧೮ ಆಯ್ದ ಕವನಗಳು/ಬಿ.ಎಂ. ಶ್ರೀಕಂಠಯ್ಯ/೧೦
೧೯ ಕೆಲವು ಕನ್ನಡ ನಿಘಂಟುಗಳು,ಸಮಸ್ಯೆಗಳು,ಪರಿಹಾರಗಳು/ಎಸ್. ಕಾರ್ತಿಕ್/೧೮೦
೨೦ ಧೀಮಂತ ಮಹಿಳೆ ದಿ. ನಂಜಮ್ಮ (ವ್ಯಕ್ತಿ ಪರಿಚಯ) ಶ್ರೀಮತಿ ಲಕ್ಷ್ಮೀ ಎನ್.ಮೂರ್ತಿ/೫೦
೨೧ ಪ್ರೊ. ಡಿ. ಲಿಂಗಯ್ಯ: ಜೀವನ ಮತ್ತು ಸಾಹಿತ್ಯ ಸಾಧನೆ/ವಿವಿಧ ಲೇಖಕರು/೬೦
೨೨ ಶ್ರೀ ಕೈವಾರ ರಾಜಾರಾವ್/ಜಗನ್ನಾಥ ಹೇಮಾದ್ರಿ/೫೦
೨೩ ಪ್ರಾಚೀನ ಕನ್ನಡ ಕಾವ್ಯ ಸಂಗ್ರಹ/ಡಾ. ಮುಳುಕುಂಟೆ ರಮೇಶ್/೨೦
೨೪ ಸಾರ್ಥಕ ಬದುಕಿನ ಶತಾಯುಷಿ ಪ್ರೊ. ಸೇತುರಾಮ ರಾಘವೇಂದ್ರಮಳಗಿ/ ಡಾ. ವಿಜಯಾ ಸುಬ್ಬರಾಜ್/೭೦
೨೫ ಹಸ್ತಪ್ರತಿ ಶಾಸ್ತ್ರಜ್ಞ ಎಸ್. ಶಿವಣ್ಣ/ಡಾ. ಬಿ.ಎಸ್. ಸ್ವಾಮಿ/೩೦
೨೬ ಎಂ.ವಿ.ಸೀತಾರಾಮಯ್ಯ ಜೀವನ ಮತ್ತು ಸಾಹಿತ್ಯ ಸಾಧನೆ/ಎಂ.ಎಸ್.ಭಾಸ್ಕರ್/೫೦
೨೭ ಮಕ್ಕಳ ಎಂ.ವಿ.ಸೀ/ಬೆ.ಗೋ.ರಮೇಶ್/೨೦
೨೮ ಕರ್ಣಾಟಕ ಶಬ್ದಾನುಶಾಸನಂ/ಡಾ. ಉಪ್ಪಂಗಳರಾಮಭಟ್ಟ/೪೦೦
೨೯ ಸೌಂದರ್ಯಲಹರೀ ಸ್ತೋತ್ರ ದೀಪಿಕೆ/ಪ್ರೊ. ಜಿ. ಅಶ್ವತ್ಥನಾರಾಯಣ/೪೦೦

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

'ಕನ್ನಡದ ಕಣ್ವ' ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ಹೊಸಗನ್ನಡದ ಯುಗಪುರುಷರು; ಇಂತಹ ಆಚಾರ್ಯಪುರುಷರ ಹೆಸರಿನ ಈ ಸಂಸ್ಥೆ ಸೃಜನ ಮತ್ತು ಸಂಶೋಧನ ಎರಡೂ ಸಾಹಿತ್ಯ ಕ್ಷೇತ್ರಗಳಲ್ಲಿ ದುಡಿಯುತ್ತಿದೆ. ಒಂದು, ಪ್ರಾಚೀನ ಸಾಹಿತ್ಯದ ಪರಿಷ್ಕರಣ; ಇನ್ನೊಂದು, ಆಧುನಿಕ ಸಾಹಿತ್ಯದ ಪುರಸ್ಕರಣ. ಈ ಸಂಸ್ಥೆಯನ್ನು ೧೯೭೯ರಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಸ್ಥಾಪಿಸಿದ್ದು, ಇದು ಯಶಸ್ವೀ ಮೂವತ್ತನಾಲ್ಕು ವರ್ಷಗಳನ್ನು ಪೂರೈಸಿ ೨೦೦೪ರಲ್ಲಿ ರಜತೋತ್ಸವವನ್ನು ಆಚರಿಸಿದೆ.

ಈಗಾಗಲೇ ಈ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದೆ. ಕರ್ನಾಟಕದಲ್ಲಿ ಸಂಶೋಧನೆ ಮತ್ತು ಪಾಂಡಿತ್ಯ ಸಂವರ್ಧನೆಗಳಿಗೆ ಮೀಸಲಾದ ಪ್ರತಿಷ್ಠಿತ ಸಂಶೋಧನಾ ಕೇಂದ್ರವಾಗಿದೆ. ಈವರೆಗೆ ಸುಮಾರು ೧೮೫ ಗ್ರಂಥಗಳನ್ನು ಹೊರತಂದಿದೆ. ಸಂಶೋಧನ ಕಾರ್ಯಕ್ಕೆ ಅನುಕೂಲವಾಗುವಂತೆ ಹದಿನೈದು ಸಾವಿರಕ್ಕೂ ಅಧಿಕ ಅಮೂಲ್ಯ ಗ್ರಂಥಗಳ ಆಕರಗ್ರಂಥಾಲಯವನ್ನೂ ಸುಮಾರು ಒಂದು ಸಾವಿರಕ್ಕೂ ಅಧಿಕ ಪ್ರಾಚೀನ ಓಲೆಗರಿ ಗ್ರಂಥಗಳ ಹಸ್ತಪ್ರತಿ ಭಂಡಾರವನ್ನೂ ಹೊಂದಿರುವ ಪ್ರತಿಷ್ಠಾನ, ಸದಸ್ಯರು, ಉದಾರ ದಾನಿಗಳು ಮತ್ತು ಅಭಿಮಾನಿಗಳಿಂದಲೇ ಬೆಳೆಯುತ್ತಿದೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಸ್ನಾತಕೋತ್ತರ ಸಂಶೋಧನ ಕೇಂದ್ರವಾಗಿರುವ ಪ್ರತಿಷ್ಠಾನದಲ್ಲಿ ಗಣ್ಯ ವಿದ್ವಾಂಸರ ಮಾರ್ಗದರ್ಶನದಲ್ಲಿ ಅನೇಕರು ಪಿಎಚ್.ಡಿ. ಪದವಿ ಮತ್ತು ಎಂ.ಫಿಲ್. ಪದವಿ ಪಡೆದಿರುತ್ತಾರೆ. ನುರಿತ ಮಾರ್ಗದರ್ಶಕರ ಸಹಕಾರದಿಂದ ಈ ಅಧ್ಯಯನ ಕೇಂದ್ರವನ್ನು ನಡೆಸಲಾಗುತ್ತಿದೆ.

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನ ಮಾನ್ಯತೆಯ ಕೇಂದ್ರ

ರಾಷ್ಟ್ರೀಯ ಹಸ್ತಪ್ರತಿ ಮಿಷನ್‌ನಿಂದ ಮಾನ್ಯತೆ ಪಡೆದಿರುವ ಪ್ರತಿಷ್ಠಾನವು ರಾಷ್ಟ್ರದ ಪ್ರತಿಷ್ಠಿತ ಹಸ್ತಪ್ರತಿ ಅಧ್ಯಯನ ಕೇಂದ್ರವಾಗಿದ್ದು ಅಮೂಲ್ಯ ಓಲೆಗರಿ ಗ್ರಂಥಗಳು, ಕಾಗದಪತ್ರಗಳು, ನಮ್ಮ ತಲೆಮಾರಿನ ಸಾಹಿತಿ-ಗಣ್ಯರ ಪತ್ರಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುತ್ತ ನಾಡಿನ ಆಸ್ತಿಯನ್ನು ಉಳಿಸಲು ಶ್ರಮಿಸುತ್ತಿರುವ ಸೇವಾಸಂಸ್ಥೆಯಾಗಿದೆ.

ಬಿ.ಎಂ.ಶ್ರೀ. ಕಲಾಭವನ

ಮೂರು ಮಹಡಿಗಳ ಭವ್ಯ ಬಿ.ಎಂ.ಶ್ರೀ. ಕಲಾಭವನವನ್ನು ಸಂಸದರ ನಿಧಿ ಮತ್ತು ದಾನಿಗಳ ನೆರವಿನಿಂದ ಕಟ್ಟಲಾಗಿದೆ. 'ಎಂ.ವಿ.ಸೀ. ಸಭಾಂಗಣ', ಗ್ರಂಥಾಲಯ, ವಸ್ತು-ಹಸ್ತಪ್ರತಿ ಸಂಗ್ರಹಾಲಯ, ಉಪನ್ಯಾಸ ಕೊಠಡಿಗಳು ನಿರ್ಮಾಣವಾಗಿವೆ.

ಚಟುವಟಿಕೆಗಳು

'ಕರ್ನಾಟಕ ಲೋಚನ' ವಿದ್ವತ್ ಪತ್ರಿಕೆ ಹಾಗೂ 'ಹೊಂಗನಸು' ವಾರ್ತಾಪತ್ರದ ಪ್ರಕಟಣೆ, ಸಹೃದಯ ಗೋಷ್ಠಿಯ ಆಯೋಜನೆ, ಹಸ್ತಪ್ರತಿ ಶಾಸ್ತ್ರ ಮತ್ತು ಹಸ್ತಪ್ರತಿ ಅಧ್ಯಯನ ತರಗತಿಗಳು, ಹಸ್ತಪ್ರತಿ ಸಮಾವೇಶ, 'ಸಿರಿಕಂಟ' ವಿದ್ಯಾರ್ಥಿಗೋಷ್ಠಿ, ಹಳಗನ್ನಡ ಕಾವ್ಯಾಭ್ಯಾಸ ಶಿಬಿರ ಮೊದಲಾದುವು ಪ್ರತಿಷ್ಠಾನದ ಮುಖ್ಯ ಚಟುವಟಿಕೆಗಳಾಗಿವೆ.